ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಪಟ
ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ಶನಿವಾರ ಅಲಹಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯದ ವಿದ್ಯಾರ್ಥಿನಿಯೊಬ್ಬರು ಮುಖದಲ್ಲಿ ಭಾರತದ ಭೂಪಟ ಬಿಡಿಸಿಕೊಂಡಿರುವುದು

STORES OPEN AT 9 AM

ಸುರಕ್ಷೆಯ ಮುದ್ರೆ Reliance digital ಸುರಕ್ಷಿತ

NOW OPEN AT:
• BELATHUR-HOSKOTE WHITEFIELD ROAD
FOR AN ENHANCED SHOPPING EXPERIENCE, VISIT
• R T NAGAR MAIN ROAD, OPP. R T NAGAR POLICE STATION

ಭಾರತದ ಅತಿ ದೊಡ್ಡ ಎಲೆಕ್ಟ್ರಾನಿಕ್ ಸೇಲ್

ಡಿಜಿಟಲ್ ಇಂಡಿಯಾ ಸೇಲ್

10% ತಕ್ಷಣ ಡಿಸ್ಕೌಂಟ್*

HDFC BANK
ಡೆಬಿಟ್ ಕಾರ್ಡ್ಸ್ | ಕ್ರೆಡಿಟ್ ಕಾರ್ಡ್ಸ್ | ಸುಲಭ EMI
₹3000ದ ವರೆಗೆ ಡಿಸ್ಕೌಂಟ್*
(ಕೊನೆಯ 2 ದಿನಗಳು ಮಾತ್ರ)

ALL OUR STORE STAFF HAVE BEEN VACCINATED

3 ಇನ್‌ಸ್ಟಾ ಡೆಲಿವರಿ 3 ಗಂಟೆಗಳ ಕಡಿಮೆ ಸಮಯ (ನಿಮ್ಮ ಸಮೀಪದ ಸ್ಟೋರ್‌ನಿಂದ)

Reliance digital
PERSONALISING TECHNOLOGY

SHOP ANY ELECTRONICS AT MY JIO STORE | Jio DIGITAL LIFE

BEST EVER DEAL
32 (80 cm) Smart TV — 2 Year Warranty
Starting from ₹13 990/-
SAMSUNG, LG, SONY, SANSUI, BPL, TOSHIBA, 1+TV, TCL, iFFALCON, realme

BEST EVER DEAL
LAPTOPS
Starting from ₹16 999/-
BENEFITS: Brand warranty starting @₹99* + Get Benefits worth Upto ₹17990/-*
hp, Lenovo, Dell, ASUS, acer, AVITA

GREAT DEAL
OnePlus 9 Series 5G
• 16.6 cm (6.55) 120Hz Fluid Display
• Qualcomm Snapdragon processor with 5G
• 4500 mAh Battery with Warp Charge 65
Starting from ₹37 999/-*
BENEFITS: Price Inclusive of ₹2000 Instant Cashback With HDFC Bank Credit Cards & Emi. Also Get Upto 9 Months No Cost EMI.

ಇಲ್ಲಿ ಕೂಡ ಶಾಪಿಂಗ್ ಮಾಡಬಲ್ಲಿರಿ: reliancedigital.in

NEVER BEFORE PRICE
SANSUI UHD Android TV JSW50ASUHD 50 (127cm) — 2 Year Warranty
~~₹36 990/-~~ ₹29 990/-

TCL 55 (139cm) UHD Android TV 55P715 — 3 Year Warranty — HDR, Hands-free voice control, Dolby Audio, Full screen
Starting at ₹48 990/-
BENEFITS: Get JBL Sound-Bar worth ₹17,990/-

LG UHD TV 65UN7350 65 (165cm) — 2 Year Warranty
₹89 990/-*
UPTO 15% ADDITIONAL CASHBACK*
ICICI Bank, HDFC BANK, FEDERAL BANK, Bank of Baroda, AXIS BANK, YES BANK

Only at Reliance Digital
ASUS HN256T
• 10th Gen Core i5
• 512GB SSD • FHD screen
• 4 GB GTX 1650 Graphics
• Windows 10
16GB RAM | GAMING
₹64 999/-* EMIs of ₹7222/-*
BENEFITS: Get warranty extension starting @₹99*

Apple MacBook Pro M1
Supercharged by the Apple M1 chip • 8 GB RAM • 256 GB SSD
Back To School Offer ₹102599/-* EMIs of ₹4274/-* Price Inclusive HDFC Cashback*

OPPO F19 SERIES
• 16.33 cm (6.43) FHD+ AMOLED Display
• 6GB / 8GB RAM
• 5000 mAh Battery with 33W Flash Charge
Starting from ₹18 990/-* EMIs Starting At ₹1055/-*
BENEFITS: Get Wireless Sporty Earphone OR Wireless Speaker Worth ₹2499 @₹49

VIVO V21E
• 16.35 cm (6.44) FHD+ AMOLED Display
• 8GB RAM + 128GB ROM
• 64MP Rear Camera
• 4000 mAh Battery with 44W Flash Charge Support
₹24 990/-* EMIs Starting At ₹1666/-*
BENEFITS: Get Wireless Sporty Earphone OR Wireless Speaker Worth ₹2499 @₹49 +1 Time Screen Replacement

BEST DEAL
APPLE iPhone 11
Starting from ₹38 090/-*
Price Inclusive of Instant Discount, HDFC Cashback and Buyback Bonus*

APPLE iPad Air 4th Gen 64gb Wi-Fi
• 10.9" Retina Display
• A14 Bionic Chip
• USB-C Charging
~~₹54900~~ ₹47 900/-
Price Inclusive HDFC Cashback*

SOUNDBAR
boAt A1198 ~~₹14990~~ ₹3990/-
JBL SB130 ~~₹17990~~ ₹7990/-
boAt A1580 ~~₹16990~~ ₹5499/-

DIRECT COOL
Range Starting ₹11 990/-* EMIs of ₹999/-
HAIER 195 L ₹13 490/-* EMIs of ₹1124/-
LG 190L ₹13 990/-* EMIs of ₹1166/-
SAMSUNG 192 L ₹15 990/-* EMIs of ₹1333/-
BENEFITS: SANDWHICH MAKER WORTH RS.1499/-

FROST-FREE
Range Starting ₹19 990/-* EMIs of ₹1666/-
WHIRLPOOL 265L ₹23 490/-* EMIs of ₹1958/-
SAMSUNG 253L ₹23 990/-* EMIs of ₹1999/-
PANASONIC 307L ₹31 490/-* EMIs of ₹2624/-
BENEFITS: MORPHY MIXER WORTH RS.3870/-

TOP LOAD
Range Starting ₹12 990/-* EMIs of ₹1083/-
SAMSUNG 6.5 KG ₹14 990/-* EMIs of ₹1249/-
WHIRLPOOL 7 KG ₹16 390/-* EMIs of ₹1366/-
KELVINATOR 8 KG ₹17 490/-* EMIs of ₹1458/-
BENEFITS: GET ELECTRIC KETTLE WORTH RS. 1999/-FREE

FRONT LOAD
Range Starting ₹18 990/-* EMIs of ₹1583/-
IFB 6KG ₹24 990/-* EMIs of ₹2083/-
SAMSUNG 6.5KG ₹28 990/-* EMIs of ₹2416/- Under Exchange
LG 8 KG ₹38 990/-* EMIs of ₹3249/-
BENEFITS: GET PANASONIC RICE COOKER 1.8L RS. 2425/-FREE

TRUE WIRELESS
boAt Airdopes 138 ~~₹2990~~ ₹999/-
boAt Airdopes 173 ~~₹5999~~ ₹1499/-
Realme Buds Air Neo ~~₹3999~~ ₹1999/-
JBL TWS C100 ~~₹7999~~ ₹2499/-

APPLE
Airpods 2nd Gen ~~₹14990~~ ₹11 990/-*
Airpods Pro ~~₹24900~~ ₹18 490/-*
*Price inclusive of HDFC Cashback

BREAKFAST COMBO
Sandwich Maker + Electric Kettle + Hot & Cold Water Bottle
~~₹5093/-~~ ₹1599/-

WATER PURIFIER
Starting at ₹8899/-* EMIs Starting at ₹1399*
Aquaguard, AO Smith, LG
BENEFITS: Electric Kettle Worth ₹1999/- | Morphy Richards Mixer Grinder Worth ₹3870/- @ ₹599/-

MIXER GRINDER
Get Havells Mini Chopper Free worth ₹ 749/-
Starting from ₹1499/-
Preethi, PHILIPS, Butterfly, Prestige

EMI STARTS AT 999 AND ATTRACTIVE CASH BACK UPTO 15%
ICICI Bank Credit Cards, HDFC BANK, AXIS BANK, Bank of Baroda, FEDERAL BANK, SBI, citibank

Reliance resQ
▶ ಪರ್ಸನಲೈಜ್ಡ್ ಗೈಡೆನ್ಸ್
▶ ಸರ್ವಿಸಸ್
▶ ಮೇಂಟೆನೆನ್ಸ್
1800 889 1044
Download the resQ app on Google Play | App Store

Paytm ಫ್ಲಾಟ್ ₹500 ಕ್ಯಾಶ್‌ಬ್ಯಾಕ್#
zest EMI FOR EVERYONE 10% CASHBACK*

VISIT US AT: BANGALORE: CUNNINGHAM ROAD • BANASWADI • MARATHALLI • SAMPIGE ROAD • KORAMANGALA • WHITEFIELD- INORBIT MALL/ PHOENIX MARKET CITY/ PRESTIGE SHANTINIKETAN FORUM MALL • BROOKEFIELD • KAMMANAHALLI • SAHAKARA NAGAR • CV RAMAN NAGAR • NAGARBHAVI • NEW BEL ROAD • VIJAYANAGAR • RT NAGAR • VIDYARANYAPURA • RAJARAJESHWARI NAGAR • THANNISANDRA MAIN ROAD • RAJAJINAGAR • BASAWESHWARNAGAR • JAYANAGAR • JP NAGAR • BANNERGHATTA ROAD • BULL TEMPLE ROAD• HSR LAYOUT • HOSUR ROAD • KANAKAPURA ROAD • UTTHARAHALLI MAIN ROAD- HOBLI • T DASARAHALLI • NEELADRI ROAD- BEGUR HOBLI • YELAHANKA NEW TOWN • BOMMANAHALLI • INDIRANAGAR (12TH MAIN RD SIGNAL) • SARJAPUR ROAD • ORION UPTOWN- KATAMMNALLUR GATE • TUMKUR: B H ROAD

Terms & Conditions Apply: General: Offers are on selected brands & models only. Valid on purchases made at Reliance Digital, My JIO Stores & www.reliancedigital.in>. Product visuals are for representational purpose only. Exchange offer at the sole discretion of the company. *10% Instant Discount on HDFC Bank – In-store: 10% instant discount on Non EMI & EMI transactions through HDFC Bank Credit Cards. Offer is also applicable on Debit Card EMI & Consumer Loan transactions. Offer valid from 6th August 2021 to 16th August 2021 on a minimum transaction of Rs. 10,000. Benefit for Consumer Loan transactions to be posted as cashback after 3 successful EMI payments. Maximum discount is capped at Rs. 1,500 for Non EMI & Rs. 3,000 for EMI transactions. Online Website: 10% instant discount on Non EMI & EMI transactions through Credit Cards. Offer valid from 6th August 2021 to 16th August 2021 on a minimum transaction of Rs. 10,000. Maximum discount is capped at Rs. 1,500 for Non EMI & Rs. 3,000 for EMI transactions. Flat Rs. 1,000 instant discount on minimum purchase of Rs. 10,000 (website purchases only) through Debit Card Non EMI transactions between 6th August 2021 & 12th August 2021. Customer can avail the offer twice per card (limited to once for EMI & once for Non EMI) & once for Consumer loans across the stores & website. EMI Facility are at sole discretion and approval of the Bank. Please visit the website and read the detailed T&Cs. Paytm Offer: Flat Rs. 500 wallet cashback on minimum payment of Rs. 9,999 via Paytm. Offer applicable only once per customer across Reliance Digital & My Jio Stores from 26th July to 31st August. EMI Facility are at sole discretion and approval of the Bank. Please visit the store or website to read the detailed T&Cs. Offer cannot be clubbed with any other offer. Prices mentioned above are including all taxes. *Some products are under exchange. Reliance retail reserves its right to withdraw/modify the offers at any point of time without any notice. Finance: Offer wherever applicable is at the sole discretion of the financing company. Brand Offers: Offers applicable on brands are sole discretion of the respective brands. **GST will be applicable on all the FREE products.

ಭಾನುವಾರ, ಆಗಸ್ಟ್ 15, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 227 | ಪುಟ 28
www.prajavani.net /prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

75ನೇ ಸ್ವಾತಂತ್ರ್ಯೋತ್ಸವದ ಶುಭಾಶಯಗಳು

ಭಾನುವಾರದ ಪುರವಣಿ
ಕಾಡಿನೂರಿನ, ಬೆಳಕಿಲ್ಲದ ಗ್ರಾಮ ಭಾರತದಲ್ಲಿ ಸ್ವಾತಂತ್ರ್ಯದ ಚಳವಳಿಯ ಮಾರ್ಗದ ಅಮರ ಕಥೆಗಳ ನೆನಪು.

ಆರೋಗ್ಯಕ್ಕಾಗಿ
ಅಡ್ಡ ಪರಿಣಾಮಗಳ ಬಗ್ಗೆ ಚಿಂತೆಯೇ?
ಮಧುಮೇಹ -ಎನ್
ಆರೋಗ್ಯಕ್ಕಾಗಿ ಜೊತೆಯಾಗಿ ಹೋರಾಡೋಣ
ಆರೋಗ್ಯಕ್ಕಾಗಿ ಅಡ್ಡ ಪರಿಣಾಮಗಳಿಂದ ಸರ್ವಾಂಗಗಳನ್ನು ಕಾಪಾಡುವ ಆಯುರ್ವೇದಿಕ್ ಔಷಧಿ ಮಧುಮೇಹ-ಎನ್ ಸದಾ ಉಪಯೋಗಿಸಿರಿ ಮತ್ತು ಆರೋಗ್ಯಕರ ಜೀವನ ಸಾಗಿಸಿ

ಆರೋಗ್ಯದ ಕಾಳಜಿಯೊಂದಿಗೆ ಜೀವನದ ಕ್ಷಣ ಕ್ಷಣವನ್ನು ಆನಂದಿಸಿ!
ಜೀವನದ ಪ್ರತಿ ನಿಮಿಷದಲ್ಲೂ ಹರ್ಷೋಲ್ಲಾಸ ನಿಮ್ಮದಾಗಲಿ!
ಕೊನೆ ಗಳಿಗೆಯಲ್ಲಿ ಕುರುಹು ಕಂಡು ಆಸ್ಪತ್ರೆಗೆ ಹೋಗುವುದನ್ನು ಕಾಯಬೇಡಿ
ದೇಹದಲ್ಲಿ ಊತ • ಹಸಿವಿನ ಕೊರತೆ • ದಣಿವು • ಕಡಿಮೆ ರೋಗನಿರೋಧಕ ಶಕ್ತಿ
ನಿಮಗೆ ಮೇಲಿನ ಯಾವುದೇ ಒಂದು ಕುರುಹು ಕಂಡುಬಂದಲ್ಲಿ ಕೂಡಲೇ ನಿಮ್ಮ ವೈದ್ಯರನ್ನು ಭೇಟಿ ಮಾಡಿ.
ಆಯುರೋಲಿವ್
ಪ್ರತಿದಿನ ಆರೋಗ್ಯ ಕಾಳಜಿ ವಹಿಸಿ
ಎಚ್ಚರಿಕೆ ⚠ ನಿಮ್ಮ ಯಕೃತ್ತಿನ ಆರೋಗ್ಯ

ಹೆಚ್ಚಿನ ವಿವರಗಳಿಗೆ ವಿಚಾರಿಸಿರಿ: From the house of A & J Health Care, Bangalore
For a Healthy Society
Ph: 8762226000, 9243112373.

ಪೌಷ್ಟಿಕ ಆಹಾರ ಪೂರೈಕೆಗೆ ಕೋವಿಡ್ ಅಡ್ಡಿ ●ಕಾಡಲಾರಂಭಿಸಿದ ರಕ್ತ ಹೀನತೆ

ಅಪೌಷ್ಟಿಕ 'ಕರ್ನಾಟಕ'

• ವರುಣ ಹೆಗಡೆ

ಬೆಂಗಳೂರು: ಮಕ್ಕಳಲ್ಲಿ ಅಪೌಷ್ಟಿಕತೆ ನಿವಾರಣೆಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರವು ಪ್ರತಿ ವರ್ಷ ಸಾವಿರಾರು ಕೋಟಿ ರೂಪಾಯಿಗಳನ್ನು ಮೀಸಲಿಡುತ್ತಿವೆ. ಆದರೆ, ಮಕ್ಕಳ ದೈಹಿಕ ಬೆಳವಣಿಗೆಯಲ್ಲಿ ಮಾತ್ರ ನಿರೀಕ್ಷಿತ ಮಟ್ಟದ ಸುಧಾರಣೆಯ ಲವಲೇಶವೂ ಕಾಣಿಸುತ್ತಿಲ್ಲ.

ಕೋವಿಡ್ ಕಾಣಿಸಿಕೊಂಡ ಬಳಿಕವಂತೂ ಮಕ್ಕಳಲ್ಲಿನ ಅಪೌಷ್ಟಿಕತೆ ಸಮಸ್ಯೆ ಉಲ್ಬಣಗೊಳ್ಳುತ್ತಿರುವುದರಿಂದ 'ಪೌಷ್ಟಿಕ ಕರ್ನಾಟಕ' ನಿರ್ಮಾಣದ ಸದಾಶಯಕ್ಕೆ ದೊಡ್ಡ ಮಟ್ಟದ ಪೆಟ್ಟು ಬಿದ್ದಿದೆ. ರಾಜ್ಯದಲ್ಲಿ 6 ವರ್ಷದೊಳಗಿನ 4 ಲಕ್ಷಕ್ಕೂ ಅಧಿಕ ಮಕ್ಕಳು ಅಪೌಷ್ಟಿಕತೆ ಸಮಸ್ಯೆ ಎದುರಿಸುತ್ತಿದ್ದಾರೆ.

ಕೋವಿಡ್ ಪಿಡುಗು ಆರಂಭವಾದ ಮೇಲೆ ರಾಜ್ಯದಲ್ಲಿ ಅಂಗನವಾಡಿಗಳು ಬಾಗಿಲು ಮುಚ್ಚಿವೆ. ಒಂದೂವರೆ ವರ್ಷದಿಂದ ಮಕ್ಕಳು ಮನೆಯಲ್ಲಿಯೇ ಇದ್ದಾರೆ. ಕೋವಿಡ್‌ನ ಸಂಭಾವ್ಯ ಮೂರನೇ ಅಲೆಯ ಕಾರಣಕ್ಕೆ ಅಂಗನವಾಡಿಗಳನ್ನು ಸದ್ಯಕ್ಕೆ ಪ್ರಾರಂಭಿಸದಿರಲು ಸರ್ಕಾರ ನಿರ್ಧರಿಸಿದೆ. ನಿರಂತರವಾಗಿ ಪೌಷ್ಟಿಕ ಆಹಾರ ಕೊರತೆಯಿಂದಾಗಿ ಮಕ್ಕಳ ಆರೋಗ್ಯ, ವ್ಯಕ್ತಿತ್ವ ಬೆಳವಣಿಗೆಯ ಮೇಲೆ ದೀರ್ಘಾವಧಿ ದುಷ್ಪರಿಣಾಮದ ಆತಂಕ ಕಾಡಲಾರಂಭಿಸಿದೆ.

ಕಡಿಮೆ ತೂಕ: ದಕ್ಷಿಣದ ಇತರ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಅಪೌಷ್ಟಿಕತೆ ಪ್ರಮಾಣ ಅಧಿಕವಾಗಿದೆ. ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ ಪ್ರಕಾರ ರಾಜ್ಯದಲ್ಲಿ 5 ವರ್ಷದೊಳಗಿನ ಶೇ 35.8ರಷ್ಟು ಮಕ್ಕಳು ವಯಸ್ಸಿಗೆ ಇರಬೇಕಾದ ತೂಕಕ್ಕಿಂತ ಕಡಿಮೆ ತೂಕವನ್ನು ಹೊಂದಿದ್ದಾರೆ.

ಮಕ್ಕಳಲ್ಲಿನ ಅಪೌಷ್ಟಿಕತೆ ನಿವಾರಣೆಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು 'ಸಮಗ್ರ ಶಿಶು ಅಭಿವೃದ್ಧಿ ಯೋಜನೆ'ಯನ್ನು ಹಮ್ಮಿಕೊಂಡಿದೆ.

6ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 6

ಒಳನೋಟ
ಶಕ್ತರಾಗಲಿ ಚಿಣ್ಣರು
ಪ್ರತಿಕ್ರಿಯಿಸಿ: 9606038256
feedback@prajavani.co.in

ತೀವ್ರ ಅಪೌಷ್ಟಿಕತೆ ಇರುವ ಮಕ್ಕಳು

ವರ್ಷ	ತೂಕಕ್ಕೆ ಒಳಪಟ್ಟವರು	ತೀವ್ರ ಅಪೌಷ್ಟಿಕ ಮಕ್ಕಳು
2015-16	42.18 ಲಕ್ಷ	21,652
2016-17	41.88 ಲಕ್ಷ	19,227
2017-18	40.12 ಲಕ್ಷ	16,151
2018-19	39.24 ಲಕ್ಷ	13,092
2019-20	37.67 ಲಕ್ಷ	11,265
2020–21	39.18 ಲಕ್ಷ	7,451

ದಕ್ಷಿಣದ ರಾಜ್ಯಗಳಲ್ಲಿ ಅಪೌಷ್ಟಿಕತೆ ಪ್ರಮಾಣ (%)



39.18 ಲಕ್ಷ ಅಂಗನವಾಡಿಗಳಲ್ಲಿ ದಾಖಲಾತಿ ಪಡೆದ ಮಕ್ಕಳು
34.47 ಲಕ್ಷ ಆರೋಗ್ಯವಂತ ಮಕ್ಕಳು
4.43 ಲಕ್ಷ ಅಪೌಷ್ಟಿಕತೆ ಸಮಸ್ಯೆಯ ಮಕ್ಕಳು
62,580 ರಾಜ್ಯದ ಅಂಗನವಾಡಿ ಕೇಂದ್ರಗಳು

ಕೋವಿಡ್ ಹೆಚ್ಚಿದ್ದರೆ ತರಗತಿ ಬಂದ್

ಸೋಂಕು ಶೇ 2ಕ್ಕಿಂತ ಕಡಿಮೆ ಇದ್ದರಷ್ಟೇ ಶಾಲೆ–ಕಾಲೇಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಪ್ರಕರಣಗಳ ದೃಢಪ್ರಮಾಣ ದರ ಶೇಕಡ 2ಕ್ಕಿಂತ ಕಡಿಮೆ ಇರುವ ಜಿಲ್ಲೆಗಳಲ್ಲಿ ಮಾತ್ರ ಒಂಬತ್ತನೇ ತರಗತಿಯಿಂದ ದ್ವಿತೀಯ ಪಿಯುಸಿವರೆಗಿನ ವಿದ್ಯಾರ್ಥಿಗಳಿಗೆ ಇದೇ 23ರಿಂದ ಭೌತಿಕ ತರಗತಿಗಳನ್ನು ಆರಂಭಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಕೋವಿಡ್ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆಯಲ್ಲಿ ಶನಿವಾರ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ. ಕೋವಿಡ್ ದೃಢಪ್ರಮಾಣ ದರ ಶೇ 2ಕ್ಕಿಂತ ಹೆಚ್ಚಿರುವ ಜಿಲ್ಲೆಗಳಲ್ಲಿ ವಿದ್ಯಾರ್ಥಿಗಳಿಗೆ ಭೌತಿಕ ತರಗತಿ ಆರಂಭಿಸದೇ ಇರಲು ಸರ್ಕಾರ ನಿರ್ಣಯಿಸಿದೆ.

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಬೊಮ್ಮಾಯಿ, 'ಒಂಬತ್ತನೇ ತರಗತಿಯಿಂದ ದ್ವಿತೀಯ ಪಿಯುಸಿವರೆಗಿನ ವಿದ್ಯಾರ್ಥಿಗಳಿಗೆ ಇದೇ 23ರಿಂದ ಭೌತಿಕ ತರಗತಿ ಆರಂಭಿಸುವ ನಿರ್ಧಾರದಲ್ಲಿ ಬದಲಾವಣೆ ಇಲ್ಲ. ತರಗತಿ ಆರಂಭದಲ್ಲಿ ಶೇ 2ಕ್ಕಿಂತ ಹೆಚ್ಚಿನ ಮಕ್ಕಳಲ್ಲಿ ಸೋಂಕು ಪತ್ತೆಯಾದರೆ ಒಂದು ವಾರದವರೆಗೆ ಅಂತಹ ಶಾಲೆ–ಕಾಲೇಜುಗಳನ್ನು ಬಂದ್ ಮಾಡಿ, ಕೊಠಡಿಗಳನ್ನು ಸ್ಯಾನಿಟೈಸ್ ಮಾಡಲಾಗುವುದು' ಎಂದರು.

ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಕೋವಿಡ್ ಲಸಿಕೆ ಹಾಕಿಸಿಕೊಂಡಿರುವುದು ಕಡ್ಡಾಯ. ತರಗತಿಗಳಿಗೆ ಹಾಜರಾಗುವ ವಿದ್ಯಾರ್ಥಿಗಳ ಪೋಷಕರೂ ಲಸಿಕೆ ಪಡೆದಿರಬೇಕು. ಗಡಿ ಜಿಲ್ಲೆಗಳಲ್ಲಿ ಗಡಿ ಭಾಗದ ತಾಲ್ಲೂಕುಗಳಲ್ಲಿನ ಕೋವಿಡ್ ದೃಢಪ್ರಮಾಣ ದರ ಶೇ 2ಕ್ಕಿಂತ ಹೆಚ್ಚು ಇದ್ದಲ್ಲಿ ತಾಲ್ಲೂಕಿಗೆ ಸೀಮಿತವಾಗಿ ನಿರ್ಧಾರ ಕೈಗೊಳ್ಳಲಾಗುವುದು ಎಂದು ಹೇಳಿದರು.

ಡಾ.ದೇವಿಪ್ರಸಾದ್ ಶೆಟ್ಟಿ, ಡಾ.ಸುದರ್ಶನ್ ಸೇರಿದಂತೆ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಹಾಗೂ ಕೋವಿಡ್ ನಿಯಂತ್ರಣ ಕಾರ್ಯಪಡೆಯಲ್ಲಿರುವ ತಜ್ಞರು ಉತ್ತಮವಾದ ಸಲಹೆಗಳನ್ನು ನೀಡಿದ್ದಾರೆ. ಅವರ ವರದಿಗಳು ಮತ್ತು ಅಭಿಪ್ರಾಯಗಳ ಕುರಿತು ಕೂಲಂಕಷವಾಗಿ ಚರ್ಚಿಸಿ ತೀರ್ಮಾನಕ್ಕೆ ಬರಲಾಗಿದೆ. ರಾಜ್ಯದಲ್ಲಿ ಕೋವಿಡ್ ಎರಡನೇ ಅಲೆ ಇನ್ನೂ ಕೊನೆಯ ಹಂತದಲ್ಲಿ ಇದೆ ಎಂಬ ಅಭಿಪ್ರಾಯವನ್ನು ತಜ್ಞರು ನೀಡಿದ್ದಾರೆ ಎಂದರು.

8ನೇ ಪುಟ ನೋಡಿ



ಕೇರಳದಿಂದ ರಾಜ್ಯಕ್ಕೆ ಕೋವಿಡ್ ಹರಡುವುದನ್ನು ತಪ್ಪಿಸಲು ನಿರ್ಬಂಧ ವಿಧಿಸಲಾಗಿದೆ. ನ್ಯಾಯಾಲಯದಲ್ಲಿ ಪ್ರಕರಣ ಎದುರಿಸಲು ಸಿದ್ಧ
ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಕೋವಿಡ್: ಶೇ 2ಕ್ಕಿಂತ ಹೆಚ್ಚಿರುವ ಜಿಲ್ಲೆಗಳು

ಜಿಲ್ಲೆ	ದೃಢಪ್ರಮಾಣ (ಶೇ)
ದಕ್ಷಿಣ ಕನ್ನಡ	4.08
ಚಿಕ್ಕಮಗಳೂರು	3.48
ಕೊಡಗು	3.06
ಉಡುಪಿ	2.68
ಹಾಸನ	2.31

*ಒಂದು ವಾರದ ಪ್ರಕರಣಗಳನ್ನು ಆಧರಿಸಿ

'ಮನೆಯೊಳಗೆ ಗೋಹತ್ಯೆ: ಸಾರ್ವಜನಿಕ ಆದೇಶ ಉಲ್ಲಂಘನೆಯಲ್ಲ'

ಲಖನೌ: ಮನೆಯೊಳಗೆ ಗೋವಧೆ ಮಾಡುವುದನ್ನು ಸಾರ್ವಜನಿಕ ಆದೇಶದ ಉಲ್ಲಂಘನೆ ಎಂದು ಪರಿಗಣಿಸಲಾಗದು ಎಂದು ಅಲಹಾಬಾದ್ ಹೈಕೋರ್ಟ್‌ನ ಲಖನೌ ಪೀಠವು ಮಹತ್ವದ ತೀರ್ಪು ನೀಡಿದೆ.

ನ್ಯಾಯಮೂರ್ತಿಗಳಾದ ರಮೇಶ್ ಸಿನ್ಹಾ ಮತ್ತು ಸರೋಜ್ ಯಾದವ್ ಅವರನ್ನೊಳಗೊಂಡ ವಿಭಾಗೀಯ ಪೀಠವು, ಗೋಹತ್ಯೆ ಆರೋಪದ ಮೇಲೆ ರಾಷ್ಟ್ರೀಯ ಭದ್ರತಾ ಕಾಯ್ದೆ (ಎನ್‌ಎಸ್‌ಎ) ಅಡಿ ಮೂವರನ್ನು ಬಂಧಿಸಿದ್ದ ಆದೇಶವನ್ನು ರದ್ದುಗೊಳಿಸಿ, ಈ ಅಭಿಪ್ರಾಯ ವ್ಯಕ್ತಪಡಿಸಿದೆ.

'ಅರ್ಜಿದಾರರ ಮನೆಯಲ್ಲಿ ಬೆಳಗಿನ ಜಾವ ಗೋಮಾಂಸ ಕತ್ತರಿಸುತ್ತಿರುವ ಪ್ರಕರಣಕ್ಕೆ ಸಂಬಂಧಿಸಿ ಆರೋಪಿಗಳನ್ನು ಬಂಧಿಸಲಾಗಿದೆ. ಅವರು ಈ ಕೆಲಸಕ್ಕೆ ಮುಂದಾಗಬೇಕಾದರೆ ಅದಕ್ಕೆ ಬಡತನ, ನಿರುದ್ಯೋಗ ಅಥವಾ ಹಸಿವು ಕಾರಣವೇ ಎಂಬುದು ನಮಗೆ ಗೊತ್ತಿಲ್ಲ' ಎಂದು ಕೋರ್ಟ್ ಹೇಳಿದೆ.

7ನೇ ಪುಟ ನೋಡಿ

'ಆಗಸ್ಟ್ 14- ವಿಭಜನೆಯ ಕರಾಳ ನೆನಪಿನ ದಿನ'

ನವದೆಹಲಿ (ಪಿಟಿಐ): ದೇಶ ವಿಭಜನೆಯ ದಿನವಾದ ಆಗಸ್ಟ್ 14 ಅನ್ನು, ಇನ್ನು ಮುಂದೆ 'ವಿಭಜನೆಯ ಕರಾಳ ನೆನಪಿನ ದಿನ'ವನ್ನಾಗಿ ಆಚರಿಸಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ಶನಿವಾರ ಟ್ವೀಟ್ ಮೂಲಕ ಘೋಷಿಸಿದ್ದಾರೆ.

ಪ್ರಧಾನಿ ಮೋದಿ ಘೋಷಣೆ ಮಾಡಿದ ಕೆಲ ಗಂಟೆಗಳಲ್ಲೇ, ಕೇಂದ್ರ ಗೃಹ ಸಚಿವಾಲಯವು ಈ ಬಗ್ಗೆ ಅಧಿಸೂಚನೆ ಹೊರಡಿಸಿದೆ.

ದೇಶವು ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಿಸುತ್ತಿರುವ ಸಂದರ್ಭದಲ್ಲಿ, ವಿಭಜನೆಯ ಸಂದರ್ಭವನ್ನು ನೆನಪಿಸಿಕೊಂಡಿರುವ ಪ್ರಧಾನಿ, 'ವಿಭಜನೆಯ ನೋವನ್ನು ಎಂದಿಗೂ ಮರೆಯಲಾಗದು. ತಿಳಿಗೇಡಿಗಳಿಂದ ಭುಗಿಲೆದ್ದ ದ್ವೇಷ-ಹಿಂಸಾಚಾರದಲ್ಲಿ ನಮ್ಮ ಲಕ್ಷಾಂತರ ಸೋದರ ಸೋದರಿಯರು ಸ್ಥಳಾಂತರ ಗೊಳ್ಳಬೇಕಾಯಿತು; ಆ ಸಂದರ್ಭದಲ್ಲಿ ಅನೇಕರು ಪ್ರಾಣ ಕಳೆದುಕೊಂಡರು' ಎಂದು ಹೇಳಿದ್ದಾರೆ.

8ನೇ ಪುಟ ನೋಡಿ

ಒಳ ಪುಟಗಳು

ಕಾಬೂಲ್ ಸುತ್ತುವರಿದಿರುವ ತಾಲಿಬಾನ್ 7

ರಾಜ್ಯ ಕೋವಿಡ್ ಅಂಕಿ–ಅಂಶ

29,28,033 ▲ ಒಟ್ಟು ಸೋಂಕಿತರು
(29,26,401 ನಿನ್ನೆಯ ವಿವರ)
22,698 ▼ ಸಕ್ರಿಯ ಪ್ರಕರಣಗಳು
28,68,351 ▲ ಗುಣಮುಖರಾದವರು
36,958 ▲ ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	1,632	▼
ಗುಣಮುಖ	1,612	▼
ಸಾವು	25	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಚಿನಕುರಳಿ

ಪ್ರಕಾಶ್ ಶೆಟ್ಟಿ



ನಿಮ್ಮ ಪರಿಪೂರ್ಣ ಸಂಗಾತಿಯ ಜೊತೆ
ಹೊಸ ಕುಟುಂಬವನ್ನು
m4marry.com ನೊಂದಿಗೆ ಹುಡುಕಿ.

Register for free
m4marry.com
Where families find each other
Call: 79949 10999 9048112340

ಸಂಭ್ರಮದಿಂದ ಆಚರಿಸುತ್ತಿದ್ದೇವೆ
75ನೇ
ಸ್ವಾತಂತ್ರ್ಯ ದಿವಸ
Azadi Ka अमृत महोत्सव
ಎಲ್‌ಐಸಿ ಕಡೆಯಿಂದ ಸಮಸ್ತ ಭಾರತೀಯರಿಗೆ ಸ್ವಾತಂತ್ರ್ಯ ದಿನಾಚರಣೆಯ ಶುಭಾಶಯಗಳು.
ನಿಮ್ಮ ನಗರದ ಹೆಸರನ್ನು SMS ಮಾಡಿ 56767474ಗೆ | ಕಾಲ್ ಸೆಂಟರ್ ಸೇವೆಗಳು (022) 6827 6827 | ಡೌನ್‌ಲೋಡ್ ಮಾಡಿ ಎಲ್‌ಐಸಿಯ ಮೊಬೈಲ್ ಆಪ್ "MyLIC"
ನಮ್ಮೊಂದಿಗೆ ಸೇರಿಕೊಳ್ಳಿ: LIC India Forever
IRDAI Regn No.: 512
ಮೋಸದ ದೂರವಾಣಿ ಕರೆಗಳು ಮತ್ತು ಕಾಲ್ಪನಿಕ/ಕೃತ್ರಿಮ ಆಫರ್‌ಗಳಿಂದ ಜಾಗರೂಕರಾಗಿರಿ!
ಐಆರ್‌ಡಿಎಐ ಯಾವತ್ತೂ ವಿಮಾ ಪಾಲಿಸಿಗಳ ಮಾರಾಟ, ಬೋನಸ್‌ಗಳ ಘೋಷಣೆ ಅಥವಾ ಪ್ರೀಮಿಯಮ್‌ಗಳ ಹೂಡಿಕೆ ಮುಂತಾದ ಚಟುವಟಿಕೆಗಳಲ್ಲಿ ತೊಡಗುವುದಿಲ್ಲ. ಈ ಬಗೆಯ ಫೋನ್ ಕರೆಗಳನ್ನು ಪಡೆಯುವ ಸಾರ್ವಜನಿಕರು ಪೊಲೀಸರಲ್ಲಿ ದೂರು ಸಲ್ಲಿಸಬೇಕೆಂದು ಕೋರಿಕೊಳ್ಳುತ್ತೇವೆ.
ಲೈಫ್ ಇನ್‌ಶೂರೆನ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ
LIFE INSURANCE CORPORATION OF INDIA
ಜೀವನದ ಜೊತೆಗೂ, ಜೀವನದ ಬಳಿಕವೂ.
LIC/ MUD / 2021 - 22 / 23 / Kan

ರಸಪ್ರಶ್ನೆ ಸ್ಪರ್ಧೆ: ಎಂ. ಜಟ್ಟಪ್ಪಗೆ ಮೊದಲ ಸ್ಥಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆನರಾ ಬ್ಯಾಂಕ್ ಮಾಹಿತಿ ತಂತ್ರಜ್ಞಾನ ತರಬೇತಿ ಸಂಸ್ಥೆಯು ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ರಸಪ್ರಶ್ನೆ ಸ್ಪರ್ಧೆಯಲ್ಲಿ ಎಂ.ಜಟ್ಟಪ್ಪ ಪ್ರಥಮ ಬಹುಮಾನ ಗಳಿಸಿದ್ದಾರೆ.

ರಾಷ್ಟ್ರೀಯ ಭಾವೈಕ್ಯ ಮತ್ತು ಸೌಹಾರ್ದವನ್ನು ಸಾರುವ ಮತ್ತು ಜನರಲ್ಲಿ ಈ ಭಾವನೆಗಳನ್ನು ಬಿತ್ತುವ ಉದ್ದೇಶದಿಂದ ಏರ್ಪಡಿಸಲಾಗಿದ್ದ ಸ್ಪರ್ಧೆಯಲ್ಲಿ 40ಕ್ಕೂ ಹೆಚ್ಚು ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು.

ದ್ವಿತೀಯ ಬಹುಮಾನ ಎಚ್.ಶಿವಶಂಕರ್ ಅವರ ಪಾಲಾಯಿತು. ಎನ್.ಚಂದ್ರಕಾಂತ್, ಜಿ.ಅಜಿತ್‌ಕುಮಾರ್, ಆದಿತ್ಯ ಗೌಡ ಮತ್ತು ಆರ್. ರಮ್ಯಾ ಅವರು ತೃತೀಯ ಬಹುಮಾನ ಪಡೆದರು.

ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ ಅವರ 'ಬ್ರಹ್ಮಯಾನ' ಪುಸ್ತಕ ಬಿಡುಗಡೆ

'ಕನ್ನಡ ಆಧ್ಯಾತ್ಮ ಸಾಹಿತ್ಯದ ಅಮೂಲ್ಯ ಕೃತಿ'

ಪ್ರಜಾವಾಣಿ ವಾರ್ತೆ

ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರು 'ಬ್ರಹ್ಮಯಾನ' ಕೃತಿ ಬಿಡುಗಡೆಗೊಳಿಸಿದರು. (ಎಡದಿಂದ) ಭಾರತೀಯ ವಿದ್ಯಾಭವನದ ಅಧ್ಯಕ್ಷ ಎಚ್.ಎನ್.ಸುರೇಶ್, ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಬಿ.ವಿ.ವಸಂತಕುಮಾರ್, ಲೇಖಕ ಮಲ್ಲೇಪುರಂ ಜಿ.ವೆಂಕಟೇಶ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮನು ಬಳಿಗಾರ್, ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ.ಸೋಮಶೇಖರ್, ಕರ್ನಾಟಕ ಗಾಂಧೀಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ.ಕೃಷ್ಣ ಇದ್ದರು– ಪ್ರಜಾವಾಣಿ ಚಿತ್ರ

ಬೆಂಗಳೂರು: 'ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ ಅವರ 'ಬ್ರಹ್ಮಯಾನ' ಪುಸ್ತಕವು ಕನ್ನಡ ಆಧ್ಯಾತ್ಮ ಸಾಹಿತ್ಯದ ಅಮೂಲ್ಯ ಕೃತಿ. ಇದು ಮಹಾಲಿಂಗರಂಗ ಕವಿಯ ಅನುಭವಾಮೃತ ಶಾಸ್ತ್ರ ಗ್ರಂಥ ಮಾತ್ರವಲ್ಲ, ಉತ್ತಮ ಕಾವ್ಯವೂ ಆಗಿದೆ' ಎಂದು ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ.ಸೋಮಶೇಖರ್ ತಿಳಿಸಿದರು.

ಪ್ರೊ. ಮಲ್ಲೇಪುರಂ ಸಾಂಸ್ಕೃತಿಕ ಪ್ರತಿಷ್ಠಾನ, ಭಾರತೀಯ ವಿದ್ಯಾಭವನ ಮತ್ತು ಉದಯ ಪ್ರಕಾಶನ ಸಹಯೋಗದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅವರು ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿದರು.

'ಲೇಖಕರು ಮಹಾಲಿಂಗರಂಗನೊಂದಿಗೆ ಮುಖಾಮುಖಿಯಾಗಿ, ಅವರ ರೂಪಕ ಭಾಷೆಯಲ್ಲೇ ಅನುಕ್ತವಾದ ಆತ್ಮಾನುಸಂಧಾನದ ಪರಿಯನ್ನು ಸರಳವಾಗಿ ದಾಟಿಸುವ ಪ್ರಯತ್ನದಂತೆ ಈ ಕೃತಿ ರಚಿತವಾಗಿದೆ' ಎಂದು ಹೇಳಿದರು.

ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, 'ವಿದ್ವತ್ತು, ವಿನಯ ಹಾಗೂ ವಿವೇಕಗಳ ಆಕೃತಿಯೇ ಈ ಕೃತಿಯಲ್ಲಿ ಗರ್ಭೀಕರಿಸಿಕೊಂಡಿದೆ. ಈಗ ಜನರು ಲೌಕಿಕ ಜಗತ್ತಿನಲ್ಲಿ ಜೀವಿಸುತ್ತಿದ್ದಾರೆ. ಅವರಿಗೆ ಲೌಕಿಕತೆ ಮತ್ತು ಆಧ್ಯಾತ್ಮವನ್ನು ಸಮನ್ವಯಿಕರಿಸಿಕೊಂಡು ಹೋಗುವುದು ಹೇಗೆ ಎಂಬುದನ್ನು ಈ ಕೃತಿ ತಿಳಿಸುತ್ತದೆ. ಈ ಹಾದಿಯಲ್ಲಿ ಸಾಗುವುದೇ ಜನರ ಜೀವನ ಕ್ರಮವಾಗಬೇಕು' ಎಂದು ಕಿವಿಮಾತು ಹೇಳಿದರು.

'ಅಂತರಂಗದ ಪ್ರಪಂಚ ತೆರೆದುಕೊಳ್ಳುವುದೇ ಆಧ್ಯಾತ್ಮ. ಆಧ್ಯಾತ್ಮದೆಡೆಗೆ ಸಾಗಲು ಅಗತ್ಯವಿರುವ ಶುದ್ಧೀಕರಣ ಪ್ರಕ್ರಿಯೆಯನ್ನು ಬ್ರಹ್ಮಯಾನ ಕೃತಿ ತಿಳಿಸಿಕೊಡುತ್ತದೆ. ವ್ಯವಹಾರಿಕ ಪ್ರಪಂಚ ಮನುಷ್ಯನನ್ನು ಸದಾ ಆಕರ್ಷಿಸುತ್ತಿರುತ್ತದೆ. ಅದರಿಂದ ಆಚೆ ಬಂದು ಪಾರಮಾರ್ಥಿಕದೆಡೆ ಸಾಗುವ ದಾರಿಯ ಬಗ್ಗೆ ಕವಿ ಮಹಾಲಿಂಗರಂಗ ಅವರು 11 ಅಧ್ಯಾಯಗಳಲ್ಲಿ ತಿಳಿಸಿದ್ದಾರೆ. ಅದನ್ನು ಈ ಕೃತಿಯಲ್ಲಿ ವಿವರಿಸಲಾಗಿದೆ' ಎಂದು ಲೇಖಕ ಮಲ್ಲೇಪುರಂ ಜಿ.ವೆಂಕಟೇಶ ತಿಳಿಸಿದರು.

'ಜಗತ್ತು, ಜೀವ ಮತ್ತು ಈಶ್ವರ, ಈ ಮೂರರ ನಡುವಣ ಸಂಬಂಧ ಎಂತಹದ್ದು. ಈ ಜೀವ ಜಗತ್ತಿನಲ್ಲಿ ಎದುರಾಗುವ ಸಮಸ್ಯೆಗಳಿಂದ ಪಾರಾಗುವುದು ಹೇಗೆ? ಇಂತಹ ಅನೇಕ ಸ್ವಾರಸ್ಯಗಳನ್ನು ಕೃತಿ ಒಳಗೊಂಡಿದೆ' ಎಂದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಬಿ.ವಿ. ವಸಂತಕುಮಾರ್ ಅವರಿಗೆ 'ಪ್ರೊ.ಮಲ್ಲೇಪುರಂ ಸಾಹಿತ್ಯ ಪ್ರಶಸ್ತಿ' ನೀಡಿ ಗೌರವಿಸಲಾಯಿತು.

ಸುದ್ದಿ 2 ನಿಮಿಷ

'ಡಿ' ದರ್ಜೆ ನೌಕರರನ್ನು ಗೌರವದಿಂದ ಕಾಣಬೇಕು'

ಬೆಂಗಳೂರು: 'ಆಸ್ಪತ್ರೆಗಳನ್ನು ಸ್ವಚ್ಛವಾಗಿಡುವಲ್ಲಿ 'ಡಿ' ದರ್ಜೆ ನೌಕರರ ಪಾತ್ರ ಮಹತ್ವದ್ದು. ಹೀಗಾಗಿ ಅವರನ್ನು ಎಲ್ಲರೂ ಗೌರವ ಭಾವದಿಂದ ಕಾಣಬೇಕು' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ತಿಳಿಸಿದರು.

ಆಕ್ಸಾ ಮತ್ತು ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಹೆಲ್ತ್ ಸಂಸ್ಥೆ ವತಿಯಿಂದ ಕೆ.ಸಿ.ಜನರಲ್ ಆಸ್ಪತ್ರೆಯಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅವರು 'ಡಿ' ದರ್ಜೆ ನೌಕರರಿಗೆ ಆಹಾರದ ಕಿಟ್ ವಿತರಿಸಿದರು.

'ಸ್ವಚ್ಛತೆಯ ಕಾರ್ಯದಲ್ಲಿ ತೊಡಗಿರುವ, ರೋಗಿಗಳ ಹಾಸಿಗೆಗಳ ಬಟ್ಟೆಗಳನ್ನು ಬದಲಿಸುವ, ನೆಲ ಗುಡಿಸುವ ಹಾಗೂ ಒರೆಸುವ ಸಿಬ್ಬಂದಿಯ ಕಾರ್ಯ ಮೆಚ್ಚುವಂತಹದ್ದು. ಕೋವಿಡ್ ಸಮಯದಲ್ಲಿ ಅವರೆಲ್ಲಾ ಜೀವದ ಹಂಗು ತೊರೆದು ಕೆಲಸ ಮಾಡಿದ್ದಾರೆ. ಅವರು ಗೌರವಯುತ ಬದುಕು ಕಟ್ಟಿಕೊಳ್ಳಲು ಬೇಕಿರುವ ಅಗತ್ಯ ಸೌಕರ್ಯಗಳನ್ನು ಸರ್ಕಾರ ಕಲ್ಪಿಸಿದೆ. ವೈದ್ಯರು, ಶುಶ್ರೂಷಕಿಯರು, ಅರೆ ವೈದ್ಯ ಸಿಬ್ಬಂದಿ ಮತ್ತು 'ಡಿ' ದರ್ಜೆ ನೌಕರರ ವೇತನ ಹಾಗೂ ಭತ್ಯೆಗಳನ್ನೂ ಹೆಚ್ಚಿಸಲಾಗಿದೆ' ಎಂದರು.

ಒಟ್ಟು 130 ಸಿಬ್ಬಂದಿಗೆ ಕಿಟ್ ವಿತರಿಸಲಾಯಿತು. ಆಕ್ಸಾ ಸಂಸ್ಥೆಯ ಹಿರಿಯ ಉಪಾಧ್ಯಕ್ಷ ಶ್ರೀಕೃಷ್ಣ, ರಾಜ್ಯ ಸರ್ಕಾರದ ಸಿಎಸ್‌ಆರ್ ಸಂಯೋಜಕ ಕೆ.ವಿ. ಮಹೇಶ್, ಕೆ.ಸಿ ಜನರಲ್ ಆಸ್ಪತ್ರೆಯ ಅಧೀಕ್ಷಕ ಡಾ.ವೆಂಕಟೇಶಯ್ಯ ಇದ್ದರು.

'ಲೋಕ ಅದಾಲತ್‌ನಲ್ಲಿ ವಾಣಿಜ್ಯ ವ್ಯಾಜ್ಯ ಕೂಡ ಬಗೆಹರಿಸಬಹುದು'

ಬೆಂಗಳೂರು: ವಾಣಿಜ್ಯ ವ್ಯಾಜ್ಯಗಳನ್ನು ಲೋಕ ಅದಾಲತ್ ಮೂಲಕ ಬಗೆಹರಿಸಿಕೊಳ್ಳಲು ಸಾಕಷ್ಟು ಅವಕಾಶ ಇದೆ ಎಂದು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ಅಭಿಪ್ರಾಯಪಟ್ಟರು.

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಆಯೋಜಿಸಿದ್ದ ಮೆಗಾ ಲೋಕ ಅದಾಲತ್ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಲೋಕ ಅದಾಲತ್ ಮೂಲಕ ಈ ವ್ಯಾಜ್ಯಗಳನ್ನು ಬಗೆಹರಿಸಲು ಲೆಕ್ಕ ಪರಿಶೋಧಕರು, ತಜ್ಞರ ಸಹಭಾಗಿತ್ವ ಅಗತ್ಯ. ಅಪಘಾತ ಪರಿಹಾರ ಪ್ರಕರಣಗಳನ್ನು ಸಹ ವಿಚಾರಣೆಗೆ ಬರುವ ಮೊದಲೇ ಲೋಕ ಅದಾಲತ್‌ಗೆ ವರ್ಗಾಯಿಸಿ ಬಗೆಹರಿಸಬಹುದು. ಹೀಗೆ ಹೊಸ ಸಾಧ್ಯತೆಗಳು ಮತ್ತು ಆಲೋಚನೆಗಳ ಕಡೆಗೆ ಮುಖಮಾಡುವ ಅವಶ್ಯಕತೆ ಇದೆ' ಎಂದು ಹೇಳಿದರು.

ನಿವೃತ್ತ ನ್ಯಾಯಮೂರ್ತಿ ಎ.ಜೆ. ಸದಾಶಿವ ಮಾತನಾಡಿ, 'ರಾಜ್ಯ ಕಾನೂನು ಸೇವಾ ಪ್ರಾಧಿಕಾರವು ತಮ್ಮ ಹಕ್ಕು ಮತ್ತು ಹೊಣೆಗಾರಿಕೆಗಳ ಅರಿವೇ ಇರದ ಮಹಿಳೆಯರು ಮತ್ತು ಕಾರ್ಮಿಕರಿಗೆ ತಿಂಗಳಿಗೆ ಒಮ್ಮೆಯಾದರೂ ವಿಚಾರ ಸಂಕಿರಣಗಳನ್ನು ಏರ್ಪಡಿಸಬೇಕು ಎಂದು ಹೇಳಿದರು.

ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಕಾರ್ಯನಿರ್ವಹಣಾ ಅಧ್ಯಕ್ಷ ನ್ಯಾಯಮೂರ್ತಿ ಅರವಿಂದ್ ಕುಮಾರ್ ಮಾತನಾಡಿ, 'ಕೋವಿಡ್ ಎರಡೂ ಅಲೆಗಳ ನಡುವೆಯೂ ಮೂರು ಬಾರಿ ಇ-ಲೋಕ ಅದಾಲತ್ ಅತ್ಯಂತ ಯಶಸ್ವಿಯಾಗಿ ನಡೆದಿದೆ. 2020ರ ಸೆಪ್ಟೆಂಬರ್‌ನಲ್ಲಿ 2.31 ಲಕ್ಷ ಪ್ರಕರಣಗಳನ್ನು ಗುರುತಿಸಿದ್ದು, ಇದರಲ್ಲಿ 1.15 ಲಕ್ಷ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ. ಅದೇ ರೀತಿ, 2020ರ ಡಿಸೆಂಬರ್‌ನಲ್ಲಿ ನಡೆದ ಅದಾಲತ್‌ನಲ್ಲಿ 4.64 ಲಕ್ಷ ಪ್ರಕರಣಗಳ ಪೈಕಿ 2.63 ಲಕ್ಷ ಪ್ರಕರಣ ಬಗೆಹರಿಸಲಾಗಿದೆ. ಇನ್ನು 2021ರ ಮಾರ್ಚ್‌ನಲ್ಲಿ ಅತಿ ಹೆಚ್ಚು 5.44 ಲಕ್ಷ ಪ್ರಕರಣಗಳನ್ನು ಪತ್ತೆ ಮಾಡಿ, 3.32 ಲಕ್ಷ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ ಎಂದು ವಿವರಿಸಿದರು.

ನಗರದಲ್ಲಿ ಇಂದು

ಸ್ವಾತಂತ್ರ್ಯೋತ್ಸವ ಕಾರ್ಯಕ್ರಮ: ಅಧ್ಯಕ್ಷತೆ: ಎಸ್.ಟಿ. ಸೋಮಶೇಖರ್, ಗೌರವ ಸಮರ್ಪಣೆ: ಸೋಗಿ ಮಹಾದೇವಪ್ಪ, ಆಯೋಜನೆ: ಗಾಂಧಿ ಪಾರ್ಕ್ ನಡಿಗೆದಾರರ ಕೂಟ, ಸ್ಥಳ: ಗಾಂಧಿ ಪುತ್ಥಳಿ ಬಳಿ, ಗಾಂಧಿ ಪಾರ್ಕ್, ಭಾರತ್ ನಗರ 2ನೇ ಹಂತ, ಬೆಳಿಗ್ಗೆ 7.30

ಬಿಬಿಎಂಪಿ: ಧ್ವಜಾರೋಹಣ: ರಾಕೇಶ್ ಸಿಂಗ್, ಗೌರವ್ ಗುಪ್ತ, ಸ್ಥಳ: ಬಿಬಿಎಂಪಿ ಕೇಂದ್ರ ಕಚೇರಿ ಆವರಣ, ಬೆಳಿಗ್ಗೆ 7.30

ಅಖಿಲ ಕರ್ನಾಟಕ ಮಕ್ಕಳ ಕೂಟ: ಧ್ವಜಾರೋಹಣ: ಟಿ.ವಿ. ಮಾರುತಿ, ಮುಖ್ಯ ಅತಿಥಿಗಳು: ಕೆ. ಮೋಹನ್‌ದೇವ್ ಆಳ್ವ, ಎಂ.ಕೆ. ಶೈಲಜಾ ಆಳ್ವ, ಸ್ಥಳ: ಮಕ್ಕಳ ಕೂಟದ ಹೊರಾಂಗಣ ಸಭಾಂಗಣ, ಚಾಮರಾಜಪೇಟೆ, ಬೆಳಿಗ್ಗೆ 8

ಬಿಜೆಪಿ ರಾಜ್ಯ ಘಟಕದಿಂದ ಸ್ವಾತಂತ್ರ್ಯೋತ್ಸವ: ಭಾಗವಹಿಸುವವರು: ನಳಿನ್ ಕುಮಾರ್ ಕಟೀಲ್, ಡಿ.ವಿ. ಸದಾನಂದಗೌಡ, ನಿರ್ಮಲ್ ಕುಮಾರ್ ಸುರಾನಾ, ಸಿದ್ದರಾಜು, ಸ್ಥಳ: ಜಗನ್ನಾಥ ಭವನ, ಮಲ್ಲೇಶ್ವರ, ಬೆಳಿಗ್ಗೆ 8.15

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ): ಧ್ವಜಾರೋಹಣ: ಡಿ.ಕೆ. ಶಿವಕುಮಾರ್, ಉಪಸ್ಥಿತಿ: ಸಿದ್ದರಾಮಯ್ಯ, ಮಲ್ಲಿಕಾರ್ಜುನ ಖರ್ಗೆ, ಎಸ್.ಆರ್.

ಪಾಟೀಲ, ರಾಮಲಿಂಗಾರೆಡ್ಡಿ, ಸಲೀಂ ಅಹಮದ್, ಸ್ಥಳ: ಕಾಂಗ್ರೆಸ್ ಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 9

ಕನ್ನಡ ಸಾಹಿತ್ಯ ಪರಿಷತ್ತು: ಧ್ವಜಾರೋಹಣ: ಮನು ಬಳಿಗಾರ್, ಸ್ಥಳ: ಶ್ರೀಕೃಷ್ಣರಾಜ ಪರಿಷನ್ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 9

ಮಣಿಪಾಲ್ ಆಸ್ಪತ್ರೆಯಿಂದ ಸ್ವಾತಂತ್ರ್ಯೋತ್ಸವ: ಮುಖ್ಯ ಅತಿಥಿಗಳು: ಆ್ಯಡಮ್ ಪಾಷಾ, ಡಾ. ಮನೀಶ್ ರೈ, ಸ್ಥಳ: ಮಣಿಪಾಲ್ ಆಸ್ಪತ್ರೆ, ಹಳೆ ವಿಮಾನ ನಿಲ್ದಾಣ ರಸ್ತೆ, ಬೆಳಿಗ್ಗೆ 9

ಸ್ವಾತಂತ್ರ್ಯೋತ್ಸವ ಕಾರ್ಯಕ್ರಮ: ಧ್ವಜಾರೋಹಣ: ಬಸವರಾಜ ಹೊರಟ್ಟಿ, ವಿಶ್ವೇಶ್ವರ ಹೆಗಡೆ ಕಾಗೇರಿ, ಸ್ಥಳ: ವಿಧಾನಸೌಧದ ಆವರಣ, ಬೆಳಿಗ್ಗೆ 9

ಸ್ವಾತಂತ್ರ್ಯೋತ್ಸವ ಕಾರ್ಯಕ್ರಮ: ಧ್ವಜಾರೋಹಣ: ಬಸವರಾಜ ಬೊಮ್ಮಾಯಿ, ಆಯೋಜನೆ: ಬಿಬಿಎಂಪಿ ಹಾಗೂ ಬೆಂಗಳೂರು ನಗರ ಜಿಲ್ಲಾಡಳಿತ, ಪೊಲೀಸ್ ಇಲಾಖೆ, ಸ್ಥಳ: ಮಾಣೆಕ್ ಷಾ ಪರೇಡ್ ಮೈದಾನ, ಬೆಳಿಗ್ಗೆ 9

ನಗರ ಕೇಂದ್ರ ಗ್ರಂಥಾಲಯ: ಧ್ವಜಾರೋಹಣ: ಆರ್. ಅಶೋಕ, ಉದ್ಘಾಟನೆ: ಎಲ್. ಶ್ರೀನಿವಾಸ್, ಎಚ್. ಸುರೇಶ್, ಸತೀಶ್ ಕುಮಾರ್ ಹೊಸಮನಿ, ಮುಖ್ಯ ಅತಿಥಿಗಳು: ವೆಂಕಟನಾರಾಯಣ, ಶೃತಿರಾಜಶೇಖರ, ಬಸವರಾಜ್, ರಾಜಶೇಖರ್, ಸ್ಥಳ: ನಗರ ಕೇಂದ್ರ ಗ್ರಂಥಾಲಯದ ಆವರಣ, ಕುಮಾರಸ್ವಾಮಿ ಬಡಾವಣೆ, ಬೆಳಿಗ್ಗೆ 9.15

ಸೈಕಲ್ ಜಾಥಾ: ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಫಿಟ್ ಇಂಡಿಯಾ ಓಟದ ಮಾದರಿ ಸೈಕಲ್ ಜಾಥಾಕ್ಕೆ ಚಾಲನೆ: ಬಸವರಾಜ ಬೊಮ್ಮಾಯಿ, ಆಯೋಜನೆ: ರಾಷ್ಟ್ರೀಯ ಸೇವಾಕೋಶ, ಸ್ಥಳ: ವಿಧಾನಸೌಧ, ಬೆಳಿಗ್ಗೆ 10.30

ವಿಚಾರ ಸಂಕಿರಣ: ಸ್ವಾತಂತ್ರ್ಯ ದಿನಾಚರಣೆ ಕುರಿತು: ಪ್ರೊ. ನಗರಗೆರೆ ರಮೇಶ, 'ಮೊಬೈಲ್ ಅಪ್ಲಿಕೇಶನ್‌ಗಳು ಮತ್ತು ಸಮಾಜ ಮತ್ತು ಸಮುದಾಯಕ್ಕೆ ಅವುಗಳ ಅವಶ್ಯಕತೆ ಹಾಗೂ ಉಪಯೋಗ': ವಿಷಯ ಮಂಡನೆ: ರಿಷಿ ಶಿವಪ್ರಸನ್ನ, ಅಧ್ಯಕ್ಷತೆ: ಪ್ರೊ.ಎಸ್. ನಟರಾಜ್, ಆಯೋಜನೆ: ಅಖಿಲ ಕರ್ನಾಟಕ ವಿಚಾರವಾದಿ ಟ್ರಸ್ಟ್, ಬೆಳಿಗ್ಗೆ 11 (ಆನ್‌ಲೈನ್ ಕಾರ್ಯಕ್ರಮ)

ಉದಯ ಕಲಾನಿಕೇತನ: ನೃತ್ಯ, ಗಾಯನ ಹಾಗೂ ರಂಗ ದೃಶ್ಯಾವಳಿ, ಮುಖ್ಯ ಅತಿಥಿ: ಸಿ.ವಿ. ಶಿವಶಂಕರ್, ಕೆ.ವಿ. ರಾಧಾಕೃಷ್ಣ, ಉಪಸ್ಥಿತಿ: ಸುಶೀಲಾ ದೇವಿ ಉದಯಕುಮಾರ್, ಸ್ಥಳ: ಉದಯ ಕಲಾನಿಕೇತನ ರಂಗಮಂದಿರ, ಸಂಜೆ 5

ಯು.ಭೂಪತಿ ಸ್ಮಾರಕ ಟ್ರಸ್ಟ್: 'ಸ್ವಾತಂತ್ರ್ಯದ ಪರಿಕಲ್ಪನೆ' ಮಾತು–ಕವಿತೆ, ಉದ್ಘಾಟನೆ: ಬಿ.ಟಿ. ಲಲಿತಾನಾಯಕ್, ಅಧ್ಯಕ್ಷತೆ: ಪ್ರೊ.ಎಸ್.ಜಿ. ಸಿದ್ಧರಾಮಯ್ಯ, ಮುಖ್ಯ ಅತಿಥಿಗಳು: ಸಿದ್ಧನಗೌಡ ಪಾಟೀಲ, ಅಶೋಕ ನರೋಡೆ, ಸುರೇಶ್ ಸಗರದ, ಲಲಿತಾ ಹೊಸಪ್ಯಾಟಿ, ಎನ್.ಡಿ. ವೆಂಕಮ್ಮ, ಪ್ರೊ.ಜಿ. ಶರಣಪ್ಪ, ಅಬ್ದುಲ್ ಹೈ ತೋರಣಗಲ್ಲು, ತಿಪ್ಪೇರುದ್ರ ಸಂಡೂರು, ಎನ್.ಕೆ. ಇಬ್ಬನಿ, ಉಪಸ್ಥಿತಿ: ವಸುಂಧರಾ ಭೂಪತಿ, ಅಭಿಮನ್ಯು ಭೂಪತಿ, ಸಂಜೆ 5.30 (ಆನ್‌ಲೈನ್ ಕಾರ್ಯಕ್ರಮ)

ಸ್ವಾತಂತ್ರ್ಯೋತ್ಸವ ಪ್ರಯುಕ್ತ ಉಪನ್ಯಾಸ: ಹಲಗಲಿಯ ಬೇಡರ ಹೋರಾಟ ಕುರಿತು: ಬಿ.ಆರ್. ಪೊಲೀಸ್ ಪಾಟೀಲ, ಆಯೋಜನೆ: ಕರ್ನಾಟಕ ಸಾಹಿತ್ಯ ಅಕಾಡೆಮಿ, ಸಂಜೆ 5.30 (ಆನ್‌ಲೈನ್ ಕಾರ್ಯಕ್ರಮ)

ಬಳ್ಳಾರಿ ರಸ್ತೆಯಲ್ಲಿ ಕಾಮಗಾರಿ: ಇನ್ನೂ ಟೆಂಡರ್ ಆಹ್ವಾನಿಸಿಯೇ ಇಲ್ಲ– ಟಿಇಸಿ

ಬೆಂಗಳೂರು: '15ನೇ ಹಣಕಾಸಿನ ಅಡಿಯಲ್ಲಿ ರಸ್ತೆ ದುರಸ್ತಿಗೆ ₹13 ಕೋಟಿ ವೆಚ್ಚವಾಗುವ ಕಾಮಗಾರಿ ಇನ್ನೂ ಟೆಂಡರ್ ಕರೆಯುವ ಹಂತದಲ್ಲಿದೆ. ಸಕ್ಷಮ ಪ್ರಾಧಿಕಾರದಿಂದ ಇದಕ್ಕೆ ಅನುಮೋದನೆ ಮಾತ್ರ ಪಡೆದುಕೊಳ್ಳಲಾಗಿದೆ' ಎಂದು ಬಿಬಿಎಂಪಿ ರಸ್ತೆ ಮೂಲಸೌಕರ್ಯದ ಸಂಚಾರಿ ಎಂಜಿನಿಯರಿಂಗ್ ಕೋಶದ (ಟಿಇಸಿ) ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ಟೆಂಡರ್ ಕರೆಯದೇ ಪೂರ್ವ ನಿಗದಿತ ಗುತ್ತಿಗೆದಾರರಿಗೆ ಈ ಕಾಮಗಾರಿ ವಹಿಸಲಾಗಿದೆ ಎಂಬ ಆರೋಪಗಳ ಹಿನ್ನೆಲೆಯಲ್ಲಿ ಟಿಇಸಿಯ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಅಶೋಕ್ ಬಾಗಿ ಅವರು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ.

'₹13 ಕೋಟಿಯ ಕಾಮಗಾರಿಯನ್ನು ಇನ್ನೂ ಕೈಗೆತ್ತಿಕೊಂಡಿಲ್ಲವೆಂದ ಮೇಲೆ ಕಳಪೆ ಕಾಮಗಾರಿಯ ಪ್ರಶ್ನೆಯೇ ಉದ್ಭವಿಸುವುದಿಲ್ಲ' ಎಂದೂ ಹೇಳಿದ್ದಾರೆ.

'ಈ ಮೊತ್ತದಲ್ಲಿ ಬಳ್ಳಾರಿ ರಸ್ತೆಯಲ್ಲಿ ದುರಸ್ತಿ ಕಾಮಗಾರಿ ಕೈಗೊಳ್ಳಲಾಗಿದೆ ಎಂದು ಹೇಳಲಾಗಿದೆ. ಆದರೆ, ಐಟಿಸಿ ಮತ್ತು ಬೆಳ್ಳಂದೂರು ಮೇಲ್ಸೇತುವೆ ನಿರ್ವಹಣೆ ಕಾಮಗಾರಿಯ ಅನುದಾನದಲ್ಲಿ ಉಳಿದಿರುವ ಹಣದಿಂದ ಬಳ್ಳಾರಿ ರಸ್ತೆ ದುರಸ್ತಿ ಕಾಮಗಾರಿ ನಡೆಸಲಾಗಿದೆ. ಇದಕ್ಕೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದುಕೊಂಡು, ಕೆಆರ್‌ಐಡಿಎಲ್ ಸಂಸ್ಥೆಯ ವತಿಯಿಂದಲೇ ನಿರ್ವಹಿಸಲಾಗಿದೆ' ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಟೆಂಡರ್ ಕರೆಯದೇ ಪೂರ್ವನಿಗದಿತ ಗುತ್ತಿಗೆದಾರರಿಂದ ಕಾಮಗಾರಿ ನಡೆಸಿ, ಕೋಟ್ಯಂತರ ರೂಪಾಯಿ ವಂಚಿಸಲಾಗಿದೆ ಎಂದು ಆರೋಪಿಸಿ, ಬಿಜೆಪಿಯ ಬೆಂಗಳೂರು ದಕ್ಷಿಣ ಜಿಲ್ಲಾ ಘಟಕದ ಅಧ್ಯಕ್ಷ ಎನ್.ಆರ್. ರಮೇಶ್ ಅವರು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದ್ದರು.

'ಬಡವರಿಗೆ ಬೇಗನೆ ಮನೆ ಹಸ್ತಾಂತರಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೊಳೆಗೇರಿಗಳಲ್ಲಿ ವಾಸಿಸುತ್ತಿರುವ ಬಡವರಿಗೆ ಇನ್ನೊಂದು ತಿಂಗಳಲ್ಲಿ ಮನೆಗಳನ್ನು ಹಸ್ತಾಂತರಿಸಬೇಕು' ಎಂದು ದಾಸರಹಳ್ಳಿ ಶಾಸಕ ಆರ್.ಮಂಜುನಾಥ್ ಅವರು ಕೊಳಚೆ ನಿರ್ಮೂಲನಾ ಮಂಡಳಿ ಅಧಿಕಾರಿಗಳಿಗೆ ಸೂಚಿಸಿದರು.

ಶೆಟ್ಟಿಹಳ್ಳಿ ವಾರ್ಡ್‌ನ ಕಮ್ಮಗೊಂಡನಹಳ್ಳಿಗೆ ಶನಿವಾರ ಭೇಟಿ ನೀಡಿದ್ದ ಅವರು ಅಲ್ಲಿ ನಿರ್ಮಾಣವಾಗುತ್ತಿರುವ ಮನೆ ಗಳನ್ನು ಪರಿಶೀಲಿಸಿದರು. ಫಲಾನುಭವಿಗಳ ಸಮಸ್ಯೆಗಳನ್ನೂ ಆಲಿಸಿದ ಅವರು ಆದಷ್ಟು ಬೇಗ ಪರಿಹಾರ ಕ್ರಮ ಕೈಗೊಳ್ಳುವ ಭರವಸೆ ನೀಡಿದರು. ಜೊತೆಗೆ ಬಾಕಿ ಇರುವ ಮೊತ್ತವನ್ನು ಶೀಘ್ರವೇ ಬಿಡುಗಡೆಗೊಳಿಸುವಂತೆ ಅಧಿಕಾರಿಗಳಿಗೆ ತಾಕೀತು ಮಾಡಿದರು.

ಆರ್. ಮಂಜುನಾಥ್

'ಬಡವರಿಗಾಗಿ ನಿರ್ಮಾಣವಾಗುತ್ತಿರುವ ಈ ಮನೆಗಳು ಗುಣಮಟ್ಟದಿಂದ ಕೂಡಿರಬೇಕು. ಗುಣಮಟ್ಟದ ವಿಚಾರದಲ್ಲಿ ರಾಜಿ ಆಗುವಂತೆಯೇ ಇಲ್ಲ. ಒಂದೊಮ್ಮೆ ಲೋಪ ಆಗಿರುವುದು ಗಮನಕ್ಕೆ ಬಂದರೆ ಸಂಬಂಧಪಟ್ಟವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದು ಅನಿವಾರ್ಯ' ಎಂದು ಅಧಿಕಾರಿಗಳಿಗೆ ತಿಳಿಸಿದರು.

ಮುಖಂಡರಾದ ಕೆ.ಸಿ. ವೆಂಕಟೇಶ್, ಕೆಂಪಹೋಬಳಯ್ಯ, ರಮೇಶ್ ಹಾಗೂ ಅಧಿಕಾರಿಗಳು ಇದ್ದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣರವರ 224ನೇ ಜಯಂತೋತ್ಸವ ಅಂಗವಾಗಿ

ರಾಯಣ್ಣರವರ ಪುತ್ಥಳಿಗೆ ಮಾಲಾರ್ಪಣೆ ಹಾಗೂ ಗೌರವ ಸಮರ್ಪಣೆ

ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಬಸವರಾಜ ಬೊಮ್ಮಾಯಿ ರವರಿಂದ

ದಿನಾಂಕ: 15-08-2021, ಭಾನುವಾರ - ಬೆಳಿಗ್ಗೆ 9:45ಕ್ಕೆ

ಕಾರ್ಯಕ್ರಮದ ಸ್ಥಳ: ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪುತ್ಥಳಿ ಆವರಣ, ದೇವರಾಜ ಅರಸು ವೃತ್ತ (ಖೋಡೆ ಸರ್ಕಲ್), ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣದ ಎದುರು, ಬೆಂಗಳೂರು.

ರಾಕೇಶ್ ಸಿಂಗ್, ಭಾ.ಆ.ಸೇ., ಆಡಳಿತಗಾರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಗೌರವ ಗುಪ್ತ, ಭಾ.ಆ.ಸೇ., ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಾಸಾಸಂಇ/ಬಿಬಿಎಂಪಿ/58/2021-22



JOCKEY
FACTORY SECONDS
UPTO 50% OFF*
INNERWEAR | LEISUREWEAR | ACTIVEWEAR
KIDSWEAR | SOCKS
• 10 am to 8 pm • Open on Sundays • Master/Visa Card Accepted
* T & C apply

Venues in Bangalore

- Jayanagar: Srinivasa Sagar Kalyana Mahal, T.Mariyappa Road, 2nd Block, (Near Ashoka Pillar) - 560 011
- Banashankari: Nagalakshmi Kalyana Mantapa, No.5, II Stage, Near Post Office - 560 070
- Infantry Road: Safina Plaza, No.84/85 - 560 001
- Malleswaram: The Canara Union, No.42, 8th Main, Canara Union Road - 560 003
- Vijay Nagar: Five O Gallery, No.50, 17th Cross, M.C. Road, Near Vijay Nagar Bus Stop - 560 040
- Rajajinagar: Raja Rajeshwari Kalyana Mantapa, 2nd Block, Dr. Rajkumar Road - 560 010
- Rajarajeswari Nagar: Vasavi Mahal Kalyana Mantapa, No.606, Next To Reliance Digital, Ideal Homes I Phase - 560 098
- Bannerghatta Road: Santhome Parish Church Hall, Hulimavu, Near Meenakshi Mall - 560 076
- Kundalahalli Gate: S K R Convention Hall, #68, Thubarahalli, Varthur Main Road - 560 066
- Koramangala: Apoorva International, #35A, Raheja Arcade, Opp Star Box - 560 095
- Basavanagudi: Amolak Apparels, #104, Bull Temple Road, Near Ramakrishna Ashram - 560 019

Org. by: Surya Agency Pvt. Ltd.

SOBHA LIMITED

SOBHA — PASSION AT WORK

CIN : L45201KA1995PLC018475
Regd. Office: 'SOBHA', Sarjapur – Marathahalli Outer Ring Road (ORR), Devarabisanahalli, Bellandur Post, Bangalore - 560 103.
Ph: +91-80-49320000, Fax: +91-80-49320444
email: investors@sobha.com
website: www.sobha.com

EXTRACT OF THE UNAUDITED CONSOLIDATED FINANCIAL RESULTS FOR THE QUARTER ENDED 30 JUNE 2021

(₹ in Million)

Particulars	3 months ended 30.06.2021 [Unaudited]	Corresponding 3 months ended 30.06.2020 [Unaudited]	Previous year ended 31.03.2021 [Audited]
Total income from operations	5,250	3,593	21,904
Profit before tax	126	54	752
Profit after tax	108	66	623
Total comprehensive income for the period (comprising profit for the period (after tax) and other comprehensive income (after tax))	114	66	630
Paid-up Equity Share Capital	948	948	948
Reserves (excluding revaluation reserve)	-	-	23,329
Earnings per Share (of ₹10/- each) (for continuing and discontinued operations)			
Basic and diluted EPS	1.14	0.70	6.57

Notes:

1) The key data of standalone financial results is as under:

Particulars	3 months ended 30.06.2021 [Unaudited]	Corresponding 3 months ended 30.06.2020 [Unaudited]	Previous year ended 31.03.2021 [Audited]
Income from operations	5,250	3,591	21,912
Profit before tax	153	72	746
Profit after tax	126	73	655
Total comprehensive income	132	73	662

2) The above is an extract of the detailed format of quarterly financial results filed with the Stock Exchanges under Regulation 33 of the SEBI (Listing Obligations and Disclosure Requirements) Regulations, 2015. The full format of the quarterly financial results are available on the website of the Stock Exchange(s) and the listed entity. (www.bseindia.com, www.nseindia.com and www.sobha.com)

Bengaluru, India
14 August 2021

J. C. Sharma
Vice Chairman and Managing Director

ಬಿ.ಎಂ.ಶ್ರೀ. ಪ್ರತಿಷ್ಠಾನ ಆಯೋಜಿಸಿದ ಕಾರ್ಯಕ್ರಮದಲ್ಲಿ ಚಿದಾನಂದ ಸಾಲಿ ಅವರಿಗೆ 'ಪ್ರೊ.ಸೂ.ವೆಂ. ಅರಗ ವಿಮರ್ಶಾ ಪ್ರಶಸ್ತಿ' ಹಾಗೂ ಪ್ರೇಮಾ ಭಟ್ ಅವರಿಗೆ 'ಡಾ. ವಿಜಯಾ ಸುಬ್ಬರಾಜ್ ಗಣ್ಯ ಲೇಖಕಿ ಪ್ರಶಸ್ತಿ'ಯನ್ನು ಆರ್.ಕೆ. ನಲ್ಲೂರ್ ಪ್ರಸಾದ್ ಅವರು ಪ್ರದಾನ ಮಾಡಿದರು. ಲೇಖಕಿ ವಿಜಯಾ ಸುಬ್ಬರಾಜ್, ಪ್ರತಿಷ್ಠಾನದ ಅಧ್ಯಕ್ಷ ಆರ್. ಲಕ್ಷ್ಮೀನಾರಾಯಣ, ಗೌರವ ಕಾರ್ಯದರ್ಶಿ ಬಿ.ಸಿ. ರಾಜಕುಮಾರ್ ಹಾಗೂ ನಿವೃತ್ತ ಪ್ರಾಧ್ಯಾಪಕಿ ಡಿ. ಮಂಗಳಾ ಪ್ರಿಯದರ್ಶಿನಿ ಇದ್ದರು —ಪ್ರಜಾವಾಣಿ ಚಿತ್ರ

ಹೂಗುಚ್ಛ ನಿಷೇಧ ಮೂರ್ಖತನದ ಪರಮಾವಧಿ: ನಲ್ಲೂರು ಪ್ರಸಾದ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಭೆ, ಸಮಾರಂಭಗಳಲ್ಲಿ ಹೂಗುಚ್ಛ–ಹೂವಿನ ಹಾರಗಳನ್ನು ಬಳಸಬಾರದೆಂಬ ಸರ್ಕಾರದ ಆದೇಶ ಮೂರ್ಖತನದ ಪರಮಾವಧಿ' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಆರ್.ಕೆ. ನಲ್ಲೂರು ಪ್ರಸಾದ್ ಆಕ್ರೋಶ ವ್ಯಕ್ತಪಡಿಸಿದರು.

ಬಿ.ಎಂ.ಶ್ರೀ. ಪ್ರತಿಷ್ಠಾನ ನಗರದಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಲೇಖಕಿ ಪ್ರೇಮಾ ಭಟ್ ಅವರಿಗೆ 'ಡಾ. ವಿಜಯಾ ಸುಬ್ಬರಾಜ್ ಗಣ್ಯ ಲೇಖಕಿ ಪ್ರಶಸ್ತಿ' ಹಾಗೂ ಸಾಹಿತಿ ಚಿದಾನಂದ ಸಾಲಿ ಅವರಿಗೆ 'ಪ್ರೊ.ಸೂ.ವೆಂ. ಅರಗ ವಿಮರ್ಶಾ ಪ್ರಶಸ್ತಿ'ಯನ್ನು ಪ್ರದಾನ ಮಾಡಿದರು. ಈ ಪ್ರಶಸ್ತಿಗಳು ತಲಾ ₹ 10 ಸಾವಿರ ನಗದು ಒಳಗೊಂಡಿವೆ.

'ನಾವು ಪುಸ್ತಕಗಳ ವಿರೋಧಿಗಳಲ್ಲ. ಸಭೆ–ಸಮಾರಂಭಗಳಲ್ಲಿ ಎರಡೆರಡು ಪುಸ್ತಕಗಳನ್ನು ಬೇಕಾದರೂ ನೀಡಲಿ. ಆದರೆ, ಹೂಗುಚ್ಛ–ಹೂವಿನ ಹಾರಗಳನ್ನು ಸರ್ಕಾರಿ ಕಾರ್ಯಕ್ರಮಗಳಲ್ಲಿ ನೀಡಬಾರದು ಎನ್ನುವುದು ಸರಿಯಲ್ಲ. ಈ ನೆಲವನ್ನೇ ನಂಬಿ ರೈತರು ಬೆಳೆಯುವ ಹೂವು ಕೂಡ ಪುಸ್ತಕದಷ್ಟೇ ಮುಖ್ಯ. ಹೂವಿನ ಹಾರ–ಹೂಗುಚ್ಛ ನಿಷೇಧಿಸಲು ರೈತರು ಸರ್ಕಾರಕ್ಕೆ ಕಂದಾಯ ಕಟ್ಟುತ್ತಿಲ್ಲವೇ' ಎಂದು ಪ್ರಶ್ನಿಸಿದರು.

'ಚಿಕ್ಕ ವಯಸ್ಸಿನಿಂದಲೂ ನನಗೆ ಕನ್ನಡ ಭಾಷೆಯ ಬಗ್ಗೆ ಅಪಾರ ಪ್ರೀತಿ. ವಿಜ್ಞಾನ ವಿಷಯ ವ್ಯಾಸಂಗ ಮಾಡುವುದಿಲ್ಲವೆಂದು ಹೇಳಿ, ನಾಲ್ಕು ವರ್ಷಗಳು ದನ ಕಾಯುವ ಕೆಲಸ ಮಾಡಿದೆ. ಆ ವೇಳೆಯಲ್ಲೇ ನಾನು ಸಣ್ಣ ಕವಿತೆಗಳನ್ನು ಬರೆದೆ. ಕನ್ನಡದ ಮೇಲಿನ ಒಲವು ನನ್ನನ್ನು ಸಾಹಿತ್ಯ ಕ್ಷೇತ್ರದಲ್ಲಿ ಗುರುತಿಸಿಕೊಳ್ಳುವಂತೆ ಮಾಡಿತು' ಎಂದು ಹೇಳಿದರು.

ನಿವೃತ್ತ ಪ್ರಾಧ್ಯಾಪಕಿ ಡಿ. ಮಂಗಳಾ ಪ್ರಿಯದರ್ಶಿನಿ ಮಾತನಾಡಿ, 'ಬೃಹತ್ ಕೃತಿಗಳನ್ನು ಬರೆಯುವುದಕ್ಕಿಂತ ಸಣ್ಣ ಕತೆಗಳನ್ನು ರಚಿಸುವುದು ಕಷ್ಟದ ಕೆಲಸ. ಆದರೆ, ಪ್ರೇಮಾ ಭಟ್ ಅವರು ಕತೆಗಳನ್ನು ಕಲಾತ್ಮಕವಾಗಿ ಬರೆಯುವಲ್ಲಿ ಯಶಸ್ವಿಯಾಗಿದ್ದಾರೆ. ಚಿದಾನಂದ ಸಾಲಿ ಅವರು ಕತೆ, ಕವಿತೆ, ಗಜಲ್, ನಾಟಕ, ಸಂಶೋಧನೆ, ವಿಮರ್ಶೆ ಸೇರಿದಂತೆ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಕೊಡುಗೆ ನೀಡಿದ್ದಾರೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಮಿಕರ ಮಕ್ಕಳ ಸ್ವಾತಂತ್ರ್ಯೋತ್ಸವ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಗರಬಾವಿ ಬಳಿ ಶೆಡ್‌ಗಳಲ್ಲಿ ವಾಸವಿರುವ ವಲಸೆ ಕಾರ್ಮಿಕರ ಮಕ್ಕಳು ಸ್ವಾತಂತ್ರ್ಯೋತ್ಸವನ್ನು ಸಂಭ್ರಮದಿಂದ ಶನಿವಾರ ಆಚರಿಸಿದರು.

ಉತ್ತರ ಕರ್ನಾಟಕದ ಯಾದಗಿರಿ, ರಾಯಚೂರು, ಕೊಪ್ಪಳ ಸೇರಿದಂತೆ ಹಲವು ಜಿಲ್ಲೆಗಳಿಂದ ವಲಸೆ ಬಂದಿರುವ ಕಾರ್ಮಿಕರು, ಕಟ್ಟಡ ನಿರ್ಮಾಣ ಹಾಗೂ ಇತರೆ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಶೆಡ್‌ಗಳಲ್ಲಿ ಕುಟುಂಬ ಸಮೇತ ವಾಸವಾಗಿದ್ದಾರೆ.

ಧ್ವಜಾರೋಹಣ ನೆರವೇರುತ್ತಿದ್ದಂತೆ ರಾಷ್ಟ್ರಧ್ವಜಕ್ಕೆ ವಲಸೆ ಕಾರ್ಮಿಕರ ಮಕ್ಕಳು ಸೆಲ್ಯೂಟ್ ಮಾಡಿದರು

ಇಂಥ ಕಾರ್ಮಿಕರ ಮಕ್ಕಳಿಗೆ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಶಾಂತಪ್ಪ ಜಡೆಮ್ಮನವರ್ ನಿತ್ಯವೂ ಶಿಕ್ಷಕರಾಗಿ ಪಾಠ ಮಾಡುತ್ತಿದ್ದಾರೆ. ಅದೇ ಮಕ್ಕಳು, ಸ್ವಾತಂತ್ರ್ಯೋತ್ಸವನ್ನು ಶಿಸ್ತಿನಿಂದ ಅರ್ಥಪೂರ್ಣವಾಗಿ ಆಚರಿಸಿದರು.

ಶೆಡ್‌ಗಳ ಬಳಿಯೇ ಧ್ವಜದ ಕಂಬ ನಿರ್ಮಿಸಿದ್ದ ಮಕ್ಕಳು, ರಂಗೋಲಿ ಹಾಕಿ ಅಂಗಳವನ್ನು ಅಲಂಕರಿಸಿದ್ದರು. ಶಿಸ್ತಿನಿಂದ ಸಾಲುಗಟ್ಟಿ ನಿಂತು ರಾಷ್ಟ್ರ ಜಾಗೃತಿ ಗೀತೆಗಳನ್ನು ಹಾಡಿದರು.

ರಾಜ್ಯಸಭಾ ಸದಸ್ಯ ಜಿ.ಸಿ. ಚಂದ್ರಶೇಖರ್ ಧ್ವಜಾರೋಹಣ ನೆರವೇರಿಸಿ ಮಕ್ಕಳ ಜೊತೆ ಕಾಲ ಕಳೆದರು.

ಧ್ವಜಾರೋಹಣದ ಬಳಿಕ ಮಕ್ಕಳೆಲ್ಲರೂ ಸಾಮೂಹಿಕ ಭೋಜನ ಸವಿದರು. ಮಕ್ಕಳ ಶಿಕ್ಷಣಕ್ಕೆ ಅಗತ್ಯವಿದ್ದ ಪ್ರೊಜೆಕ್ಟರ್‌ನ್ನು ಚಂದ್ರಶೇಖರ್ ಅವರು ಕೊಡುಗೆಯಾಗಿ ವಿತರಿಸಿದರು.

ಜಿ.ಸಿ. ಚಂದ್ರಶೇಖರ್ ಮಾತನಾಡಿ, 'ಶಾಲೆಯಿಂದ ದೂರವುಳಿದಿದ್ದ ಕಾರ್ಮಿಕರ ಮಕ್ಕಳಿಗೆ ಪಾಠ ಮಾಡುತ್ತಿರುವ ಪಿಎಸ್‌ಐ ಶಾಂತಪ್ಪ ಕೆಲಸ ಶ್ಲಾಘನೀಯ. ಈ ಮಕ್ಕಳು ಶೈಕ್ಷಣಿಕವಾಗಿ ಚುರುಕಾಗಿದ್ದು, ಮುಂದೊಂದು ದಿನ ದೇಶದ ಹೆಮ್ಮೆಯ ಆಸ್ತಿ ಆಗುತ್ತಾರೆ' ಎಂದು ಹೇಳಿದರು.

ಪಿಎಸ್‌ಐ ಶಾಂತಪ್ಪ, 'ವಲಸೆ ಕಾರ್ಮಿಕರ ಮುಗ್ಧ ಮಕ್ಕಳ ಮುಖದಲ್ಲಿರುವ ನಗು ಖುಷಿ ಕೊಡುತ್ತದೆ. ಅವರ ಸಮ್ಮುಖದಲ್ಲಿ ಸ್ವಾತಂತ್ರ್ಯೋತ್ಸವ ಆಚರಿಸಿದ ಈ ದಿನವನ್ನೂ ಎಂದಿಗೂ ಮರೆಯುವುದಿಲ್ಲ' ಎಂದರು.

ಸ್ವಯಂಘೋಷಿತ ಆಸ್ತಿ ತೆರಿಗೆ ರದ್ದತಿ ಕೋರಿ ಪಿಐಎಲ್

ಇಳಕಲ್: ರಾಜ್ಯ ಸರ್ಕಾರ ಹೊಸದಾಗಿ ಜಾರಿಗೊಳಿಸಿರುವ ಸ್ವಯಂ ಘೋಷಿತ ಆಸ್ತಿ ತೆರಿಗೆ ಕಾನೂನನ್ನು ರದ್ದುಗೊಳಿಸಿ ಜನಸ್ನೇಹಿ ಆಸ್ತಿ ತೆರಿಗೆ ವ್ಯವಸ್ಥೆ ರೂಪಿಸುವಂತೆ ಕೋರಿ ಇಲ್ಲಿನ ಹಿರಿಯ ಪತ್ರಕರ್ತ ಹಾಗೂ ಸಾಮಾಜಿಕ ಹೋರಾಟಗಾರ ನಾಗರಾಜ ಹೊಂಗಲ್ ರಾಜ್ಯ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ದಾಖಲಿಸಿದೆ.

ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ನ್ಯಾಯಪೀಠವು ಆ.16 ರಂದು ವಿಚಾರಣೆ ಕೈಗೆತ್ತಿಕೊಳ್ಳಲಿದೆ.

'ಕೊರೊನಾ ಬಿಕ್ಕಟ್ಟಿನಲ್ಲಿ ಎಲ್ಲ ರಾಜ್ಯಗಳು ಜನರಿಗೆ ಆಸ್ತಿ ತೆರಿಗೆಯಲ್ಲಿ ಸಾಕಷ್ಟು ಸವಲತ್ತು ಕೊಟ್ಟಿವೆ. ಆದರೆ ಕರ್ನಾಟಕ ಸರ್ಕಾರ ಯಾವ ಸವ ಲತ್ತು ಕೊಡದೇ ಅವೈಜ್ಞಾನಿಕವಾಗಿ ತೆರಿಗೆ ಹೆಚ್ಚಿಸಿದೆ. ಇದು ಕಾನೂನು ಬಾಹಿರವೂ ಆಗಿದೆ ಎಂದು ನಾಗರಾಜ ಹೊಂಗಲ್ ಸುದ್ದಿಗಾರರಿಗೆ ತಿಳಿಸಿದರು.

'ಮೈಸೂರಿಗೆ ಮೆಟ್ರೊ ನಿಯೊ, ಲೈಟ್ ಯೋಜನೆ: ಸಮೀಕ್ಷೆ ಶೀಘ್ರ'

ಮೈಸೂರು: ಕೇಂದ್ರ ಸರ್ಕಾರ ರೂಪಿಸಿರುವ ಮೆಟ್ರೊ ನಿಯೊ ಹಾಗೂ ಮೆಟ್ರೊ ಲೈಟ್ ಯೋಜನೆಯನ್ನು ನಗರದಲ್ಲಿ ಜಾರಿಗೊಳಿಸುವ ಕುರಿತು ಕಾರ್ಯಸಾಧ್ಯತಾ ಸಮೀಕ್ಷೆ ನಡೆಸುವ ಪ್ರಸ್ತಾವಕ್ಕೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಅನುಮೋದನೆ ನೀಡಿದೆ.

'ದಕ್ಷಿಣ ಭಾರತದಲ್ಲೇ ಈ ಯೋಜನೆಗೆ ಸಮೀಕ್ಷೆ ನಡೆಸಲು ಮುಂದಾದ ಪ್ರಥಮ ನಗರಿ ಎಂಬ ಶ್ರೇಯಕ್ಕೆ ಮೈಸೂರು ಪಾತ್ರವಾಗಿದೆ' ಎಂದು ಪ್ರಾಧಿಕಾರದ ಅಧ್ಯಕ್ಷ ಎಚ್.ವಿ. ರಾಜೀವ್ ನಗರದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಸಮೀಕ್ಷಾ ವರದಿ ಸಿದ್ಧವಾದ ಬಳಿಕ ರಾಜ್ಯಸರ್ಕಾರದ ಮೂಲಕ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗುವುದು. ಮೆಟ್ರೊ ನಿಯೊ ಯೋಜನೆಯಲ್ಲಿ 18ರಿಂದ 25 ಮೀಟರ್ ಉದ್ದದ ಬಸ್‌ಗಳು ಮೆಟ್ರೊ ಟೈಯರ್ ಮೂಲಕ ಸೇತುವೆ ಮೇಲೆ ಸಂಚರಿಸುತ್ತವೆ' ಎಂದರು.



ದೇಗುಲ ಪ್ರವೇಶ ನಿಷೇಧ ರಸ್ತೆ ವಿಭಜಕಕ್ಕೆ ಪೂಜೆ

ಪಾವಗಡ: ಶ್ರಾವಣ ಶನಿವಾರದ ಪ್ರಯುಕ್ತ ಪಟ್ಟಣದ ಶನೈಶ್ಚರ ದೇಗುಲಕ್ಕೆ ಬಂದಿದ್ದ ಭಕ್ತರು, ದೇವಾಲಯ ಪ್ರವೇಶ ನಿಷೇಧಿಸಿದ್ದ ಕಾರಣ ರಸ್ತೆ ವಿಭಜಕಕ್ಕೆ ಪೂಜೆ ಸಲ್ಲಿಸಿದರು.

ಕೋವಿಡ್ ಮೂರನೆ ಅಲೆ ಮುನ್ನೆಚ್ಚರಿಕೆ ಕ್ರಮವಾಗಿ ಜಿಲ್ಲಾಧಿಕಾರಿ 144 ಸೆಕ್ಷನ್ ವಿಧಿಸಿ ಶನಿವಾರ, ಭಾನುವಾರ, ಸೋಮವಾರ, ಸರ್ಕಾರಿ ರಜಾ ದಿನ ಹಾಗೂ ವಿಶೇಷ ದಿನಗಳಂದು ದೇಗುಲ ಪ್ರವೇಶ ನಿಷೇಧಿಸಿರುವುದರಿಂದ ಪಟ್ಟಣದ ಶನೈಶ್ಚರ ದೇಗುಲದ ಬಾಗಿಲು ಮುಚ್ಚಲಾಗಿತ್ತು.

ವಿಷಯ ತಿಳಿಯದೆ ಆಂಧ್ರ ಪ್ರದೇಶದ ವಿವಿಧ ಭಾಗಗಳಿಂದ ಭಕ್ತರು ಬಂದಿದ್ದರು. ಶನೈಶ್ಚರ ದೇಗುಲದ ಸುತ್ತಲೂ ಬ್ಯಾರಿಕೇಡ್ ಹಾಕಿದ್ದರಿಂದ ರಸ್ತೆ ವಿಭಜಕದ ಬಳಿ ಫೋಟೊ ಇರಿಸಿ ವಿಭಜಕಕ್ಕೆ ತೆಂಗಿನಕಾಯಿ ಒಡೆದು ಪೂಜೆ ಸಲ್ಲಿಸಿದರು.

ಸುಮಾರು 50 ಮೀಟರ್ ದೂರದಿಂದ ಭಕ್ತರು ದೇಗುಲದ ಗೋಪುರಕ್ಕೆ ನಮಸ್ಕರಿಸುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ವಸತಿ ಗೃಹದಲ್ಲಿ ಕೊಠಡಿ ನೀಡದ ಕಾರಣ ಭಕ್ತರು ಪಟ್ಟಣದ ಶೌಚಾಲಯ, ಹೊರ ವಲಯದ ಕಣಿವೆ ಲಕ್ಷ್ಮಿ ನರಸಿಂಹ ಸ್ವಾಮಿ ದೇಗುಲದ ಬಳಿ ಸ್ನಾನ ಮಾಡಿ, ಅಲ್ಲಿಯೇ ಆಹಾರ ಸೇವಿಸಿದರು.

ಶನಿಮಹಾತ್ಮಸ್ವಾಮಿ ದರ್ಶನ ಪಡೆದ ಡಿ.ಕೆ.ಶಿವಕುಮಾರ್ ದಂಪತಿ

ಪ್ರಜಾವಾಣಿ ವಾರ್ತೆ

ಕನಸವಾಡಿ (ದೊಡ್ಡಬಳ್ಳಾಪುರ): ಶ್ರಾವಣ ಮಾಸದ ಮೊದಲ ಶನಿವಾರದ ಅಂಗವಾಗಿ ತಾಲ್ಲೂಕಿನ ಕನಸವಾಡಿ ಶನಿಮಹಾತ್ಮಸ್ವಾಮಿ ದೇವಾಲಯಕ್ಕೆ ಶನಿವಾರ ಬೆಳಿಗ್ಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ದಂಪತಿ ಭೇಟಿ ನೀಡಿ ದೇವರ ದರ್ಶನ ಪಡೆದರು.

ಕೊರೊನಾ ಸೋಂಕು ಹರಡುವುದನ್ನು ತಡೆಯುವ ಸಲುವಾಗಿ ಜಿಲ್ಲಾಡಳಿತ ಸೆಪ್ಟೆಂಬರ್ 7ರವರೆಗೂ ಮುಜರಾಯಿ ಹಾಗೂ ಖಾಸಗಿ ದೇವಾಲಯಗಳನ್ನು ಸರ್ಕಾರಿ ರಜಾ ದಿನ ಹಾಗೂ ಶನಿವಾರ, ಭಾನುವಾರ ಬಂದ್ ಮಾಡುವಂತೆ ಆದೇಶ ಮಾಡಿತ್ತು.

ಹೀಗಾಗಿ ಮುಂಜಾನೆ ದೇವಾಲಯಕ್ಕೆ ದಂಪತಿ ಸಮೇತ ಭೇಟಿ ನೀಡಿ ಪೂಜೆ ಸಲ್ಲಿಸಿದರು.

ಕನಸವಾಡಿಯಲ್ಲಿನ ಶನಿಮಹಾತ್ಮಸ್ವಾಮಿ ದೇವಾಲಯಕ್ಕೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ದಂಪತಿ ಭೇಟಿ ನೀಡಿ ಪೂಜೆ ಸಲ್ಲಿಸಿದ್ದರು

ಈ ಸಂದರ್ಭದಲ್ಲಿ ಶಾಸಕ ಟಿ. ವೆಂಕಟರಮಣಯ್ಯ ದಂಪತಿ, ಕನಸವಾಡಿ ಗ್ರಾಮ ಪಂಚಾಯಿತಿ ಅಧ್ಯಕ್ಷ ವಿಜಯ್ ಕುಮಾರ್, ಶನಿ ಮಹಾತ್ಮಸ್ವಾಮಿ ದೇವಾಲಯ ಸಮಿತಿಯ ಅಧ್ಯಕ್ಷ ಪ್ರಕಾಶ್, ಕಾಂಗ್ರೆಸ್ ಮುಖಂಡರಾದ ಜಿ. ಚುಂಚೇಗೌಡ, ಎನ್.ರಂಗಪ್ಪ, ದೀಪು ಹಾಗೂ ಇತರರು ಹಾಜರಿದ್ದರು.

ಅದಾಲತ್: ಸಮಯ, ಹಣ ಉಳಿತಾಯ

ಚಿಕ್ಕಬಳ್ಳಾಪುರ: ಮೆಗಾ ಲೋಕ ಅದಾಲತ್‌ಗಳ ಮೂಲಕ ಪ್ರಕರಣ ಇತ್ಯರ್ಥ ಪಡಿಸಿಕೊಳ್ಳುವುದರಿಂದ ಕಕ್ಷಿದಾರರ ಸಮಯ, ಹಣ ಉಳಿತಾಯವಾಗುತ್ತದೆ. ಎಂದು ಹೈಕೋರ್ಟ್ ನ್ಯಾಯಮೂರ್ತಿ ಎಸ್.ಪಿ.ಸಂದೇಶ್ ಹೇಳಿದರು.

ಶನಿವಾರ ಇಲ್ಲಿ ನಡೆದ ರಾಷ್ಟ್ರೀಯ ಮೆಗಾ ಲೋಕಅದಾಲತ್ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

‘ಸ್ವಾತಂತ್ರ್ಯವನ್ನು ಹಗಲಿರುಳು ಕಾಯಬೇಕಿದೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಲವು ಜನರ ತ್ಯಾಗ, ಬಲಿದಾನದಿಂದ ಮಧ್ಯರಾತ್ರಿ ದೇಶಕ್ಕೆ ದೊರಕಿದ ಸ್ವಾತಂತ್ರ್ಯವನ್ನು ರಕ್ಷಿಸುವುದಕ್ಕಾಗಿ ಹಗಲಿರುಳು ಕಾಯಬೇಕಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ವಾರ್ತಾ ಇಲಾಖೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳು ಜಂಟಿಯಾಗಿ ವಿಧಾನಸೌಧದ ಮುಂಭಾಗದಲ್ಲಿ ಶನಿವಾರ ಸಂಜೆ ಆಯೋಜಿಸಿದ್ದ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ‘ಸ್ವಾತಂತ್ರ್ಯ ನನ್ನ ಜನ್ಮಸಿದ್ಧ ಹಕ್ಕು ಎಂಬ ಗೋಪಾಲಕೃಷ್ಣ ಗೋಖಲೆ ಅವರ ಘೋಷಣೆಯೊಂದಿಗೆ ಸ್ವಾತಂತ್ರ್ಯ ಹೋರಾಟ ಹೊಸ ದಿಕ್ಕಿನತ್ತ ಸಾಗಿತು. ಭಗತ್ ಸಿಂಗ್ ಅವರ ಬಲಿದಾನ, ವೀರ ಸಾವರ್ಕರ್ ಅವರಂತಹರ ತ್ಯಾಗದ ಮೂಲಕ ಮುನ್ನಡೆದುದು ಸ್ಮರಣಾರ್ಹ’ ಎಂದರು.

‘ಮಹಾತ್ಮ ಗಾಂಧಿಯವರು ಸ್ವಾತಂತ್ರ್ಯ ಚಳವಳಿಯಲ್ಲಿ ಸಾತ್ವಿಕ ಹೋರಾಟಕ್ಕೆ ಸತ್ಯದ ಮೆರುಗು ನೀಡಿದರು. ಅವರೆಲ್ಲರನ್ನೂ ನಾವು ಸದಾ ಕಾಲ ಸ್ಮರಿಸಬೇಕು. ವಿಧಾನಸೌಧದ ಈ ಮೆಟ್ಟಿಲುಗಳು ನವ ಭಾರತದ ನಿರ್ಮಾಣಕ್ಕೆ ಸಾಕ್ಷಿಯಾಗಿವೆ’ ಎಂದು ಮುಖ್ಯಮಂತ್ರಿ ಬಣ್ಣಿಸಿದರು.

ನಾಟಕ ಪ್ರದರ್ಶನ: ಧಾರವಾಡ ರಂಗಾಯಣದ ಕಲಾವಿದರು ‘ದಂಡಿ ಯಾತ್ರೆ’ ಮತ್ತು ‘ವೀರ ರಾಣಿ ಕಿತ್ತೂರು ಚೆನ್ನಮ್ಮ’ ಕಿರು ನಾಟಕಗಳನ್ನು ಪ್ರಸ್ತುತಪಡಿಸಿದರು. ಶಿವಮೊಗ್ಗ ರಂಗಾಯಣದ ಕಲಾವಿದರು ‘ಏಸೂರು ಕೊಟ್ಟರೂ ಈಸೂರು ಬಿಡೆವು’ ಮತ್ತು ‘ವಿದುರಾಶ್ವತ್ಥ’ ನಾಟಕಗಳನ್ನು ಪ್ರದರ್ಶಿಸಿದರು.

ರಾಜ್ಯದ ವಿವಿಧ ಜಿಲ್ಲೆಗಳ ಕಲಾವಿದರು ವೀರಗಾಸೆ, ಡೊಳ್ಳು ಕುಣಿತ, ಪೂಜಾ ಕುಣಿತ, ಕೀಲು ಕುದರೆ ಮತ್ತಿತರ ಜಾನಪದ ನೃತ್ಯಗಳನ್ನು ಪ್ರಸ್ತುತಪಡಿಸಿದರು.

ಆರೋಗ್ಯ ಸಚಿವ ಡಾ.ಕೆ. ಸುಧಾಕರ್, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಸ್.ಆರ್. ವಿಶ್ವನಾಥ್, ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳಾದ ವಂದಿತಾ ಶರ್ಮ, ರಜನೀಶ್ ಗೋಯಲ್, ಡಾ. ಶಾಲಿನಿ ರಜನೀಶ್, ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್, ವಾರ್ತಾ ಇಲಾಖೆ ಆಯುಕ್ತ ಡಾ.ಪಿ.ಎಸ್. ಹರ್ಷ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ರಂಗಪ್ಪ ಉಪಸ್ಥಿತರಿದ್ದರು.

ವಿಧಾನಸೌಧದ ಮುಂಭಾಗದ ಮೆಟ್ಟಿಲುಗಳ ಮೇಲೆ ಶನಿವಾರ ಸಂಜೆ ನಡೆದ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ ಸಮಾರಂಭದಲ್ಲಿ ಪಾಲ್ಗೊಂಡಿದ್ದ ವಿವಿಧ ಜಿಲ್ಲೆಗಳ ಕಲಾವಿದರೊಂದಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಮತ್ತು ಇತರರು – ಪ್ರಜಾವಾಣಿ ಚಿತ್ರ

ಸಿ.ಡಿ ಪ್ರಕರಣದಿಂದಾಗಿ ತಪ್ಪಿದ ಸಚಿವ ಸ್ಥಾನ: ರಮೇಶ ಜಾರಕಿಹೊಳಿ

ಅಥಣಿ: ‘ಸಚಿವ ಸ್ಥಾನ ಸಿಗದಿರುವುದಕ್ಕೆ ಬೇಸರವಿಲ್ಲ. ಸಿ.ಡಿ ಪ್ರಕರಣದಿಂದಾಗಿ ಸಚಿವ ಸ್ಥಾನ ಕೈತಪ್ಪಿದೆ, ಆ ಪ್ರಕರಣದ ಇತ್ಯರ್ಥಕ್ಕೆ ಇನ್ನೂ ಒಂದು ವರ್ಷವಾಗಲಿ ನನಗೆ ತೊಂದರೆ ಇಲ್ಲ. ಸಹೋದರ ಬಾಲಚಂದ್ರ ಜಾರಕಿಹೊಳಿ, ಶ್ರೀಮಂತ ಪಾಟೀಲ, ಮಹೇಶ ಕುಮಠಳ್ಳಿ ಇದ್ದಾರೆ. ನನ್ನ ಬದಲು ಅವರಲ್ಲಿ ಒಬ್ಬರಿಗೆ ಸಚಿವ ಸ್ಥಾನ ಸಿಗುವ ವಿಶ್ವಾಸ ಇದೆ’ ಎಂದು ಶಾಸಕ ರಮೇಶ ಜಾರಕಿಹೊಳಿ ಹೇಳಿದರು.

ಅಥಣಿಯಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದರು. ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿ ಆಗಿರುವುದು ಸಂತೋಷ ತಂದಿದೆ. ಸೂತ್ತೂರು ಶ್ರೀಗಳನ್ನು ಭೇಟಿ ಮಾಡಿದಾಗ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಬೇಡಿ ಎಂದು ಮಾರ್ಗದರ್ಶನ ನೀಡಿದ್ದಾರೆ. ಆದ್ದರಿಂದ ರಾಜೀನಾಮೆ ನೀಡುವುದಿಲ್ಲ. ಮಹೇಶ ಕುಮಠಳ್ಳಿ ಮುಂದಿನ ಚುನಾವಣೆಯಲ್ಲಿಯೂ ಬಿಜೆಪಿಯಿಂದಲೇ ಸ್ಪರ್ಧಿಸುವರು ಎಂದು ಹೇಳಿದರು.

ಸುದ್ದಿ 2 ನಿಮಿಷ

ಸರ್ಕಸ್ ಕಂಪನಿಗಳ ಪ್ರಾಣಿಗಳ ಸ್ಥಿತಿ: ಅಫಿಡವಿಟ್ ಸಲ್ಲಿಸಲು ಸೂಚನೆ

ನವದೆಹಲಿ (ಪಿಟಿಐ): ಸ್ಥಗಿತಗೊಂಡಿರುವ ಸರ್ಕಸ್ ಕಂಪನಿಗಳಲ್ಲಿರುವ ಪ್ರಾಣಿಗಳ ಸ್ಥಿತಿಗತಿ ಬಗ್ಗೆ ಅಫಿಡವಿಟ್ ಸಲ್ಲಿಸುವಂತೆ ಭಾರತೀಯ ಪ್ರಾಣಿ ಕಲ್ಯಾಣ ಮಂಡಳಿಗೆ (ಎಡಬ್ಲ್ಯುಬಿಐ) ದೆಹಲಿ ಹೈಕೋರ್ಟ್ ಸೂಚಿಸಿದೆ.

ಪೀಪಲ್ ಫಾರ್ ಎಥಿಕಲ್ ಟ್ರೀಟ್ಮೆಂಟ್ ಆಫ್ ಅನಿಮಲ್ಸ್ (ಪೇಟಾ) ಅರ್ಜಿ ಸಲ್ಲಿಸಿತ್ತು. ನ್ಯಾಯಮೂರ್ತಿಗಳಾದ ವಿಪಿನ್ ಸಾಂಘಿ ಮತ್ತು ಜಸ್ಮೀತ್ ಸಿಂಗ್ ಅವರಿರುವ ನ್ಯಾಯಪೀಠ ಅರ್ಜಿ ವಿಚಾರಣೆ ನಡೆಸಿ, ಈ ಬಗ್ಗೆ ಮೂರು ವಾರಗಳೊಳಗೆ ಅಫಿಡವಿಟ್ ಸಲ್ಲಿಸುವಂತೆ ಎಡಬ್ಲ್ಯುಬಿಐಗೆ ನಿರ್ದೇಶನ ನೀಡಿದೆ.

‘ಈ ಹಿಂದೆ ಎಡಬ್ಲ್ಯುಬಿಐ ಸಲ್ಲಿಸಿದ ಅಫಿಡವಿಟ್‌ನಲ್ಲಿ ಪ್ರಾಣಿಗಳ ಸ್ಥಿತಿಗತಿ ಬಗ್ಗೆ ನಿಖರ ಮಾಹಿತಿಯನ್ನು ನೀಡಲಾಗಿಲ್ಲ’ ಎಂದು ಪೇಟಾ ಪರ ವಕೀಲ ಅಮನ್ ಹಿಂಗೊರಾನಿ ಅವರು ನ್ಯಾಯಾಲಯದ ಗಮನಕ್ಕೆ ತಂದರು.

‘ಕೋವಿಡ್–19 ನಿಂದಾಗಿ ಸ್ಥಗಿತಗೊಂಡಿರುವ ಸರ್ಕಸ್ ಕಂಪನಿಗಳು, ಪ್ರಾಣಿಗಳಿಗೆ ಆಹಾರ ನೀಡುವುದಕ್ಕೂ ಕಷ್ಟಪಡುತ್ತಿವೆ. ಇದರಿಂದ ಪ್ರಾಣಿಗಳು ಹಸಿವಿನಿಂದ ಬಳಲುತ್ತಿವೆ’ ಎಂದು ಅರ್ಜಿಯಲ್ಲಿ ಹೇಳಲಾಗಿದೆ.

ಸ್ವಾತಂತ್ರ್ಯ ಓಟ ಆಯೋಜನೆಗೆ ಸೂಚನೆ

ಬೆಂಗಳೂರು: ‘ರಾಜ್ಯದ ಎಲ್ಲ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳ ವ್ಯಾಪ್ತಿಯಲ್ಲಿ ‘ಫಿಟ್ ಇಂಡಿಯಾ ಸ್ವಾತಂತ್ರ್ಯ ಓಟ’ವನ್ನು ಆಯೋಜಿಸಬೇಕು’ ಎಂದು ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕಿ ಅರುಂಧತಿ ಚಂದ್ರಶೇಖರ್ ಸೂಚಿಸಿದ್ದಾರೆ.

ಈ ಬಗ್ಗೆ ಅವರು ಸುತ್ತೋಲೆ ಹೊರಡಿಸಿದ್ದಾರೆ. ‘75ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ‘ಆರೋಗ್ಯಯುತ ಮತ್ತು ಸದೃಢ ಭಾರತ’ ಎಂಬ ಧ್ಯೇಯದೊಂದಿಗೆ ಯುವಜನ ಮತ್ತು ಕ್ರೀಡಾ ಸಚಿವಾಲಯದ ಸಹಯೋಗದಲ್ಲಿ ‘ಫಿಟ್ ಇಂಡಿಯಾ ಸ್ವಾತಂತ್ರ್ಯ ಓಟ’ವನ್ನು ನಡೆಸಲಾಗುತ್ತಿದೆ. ಎಲ್ಲ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳ ವ್ಯಾಪ್ತಿಯಲ್ಲಿ ಕೋವಿಡ್ ಮಾನದಂಡವನ್ನು ಅನುಸರಿಸಿ, ಅ.2ರೊಳಗೆ ಯಾವುದಾದರೂ ಒಂದು ದಿನ ಆಯೋಜಿಸಬೇಕು’ ಎಂದು ತಿಳಿಸಿದ್ದಾರೆ.

‘ನಡೆದ ಚಟುವಟಿಕೆಗಳ ಮಾಹಿತಿಯನ್ನು ಛಾಯಾಚಿತ್ರಗಳೊಂದಿಗೆ ಫಿಟ್ ಇಂಡಿಯಾ ಪೋರ್ಟಲ್‌ನಲ್ಲಿ ದಾಖಲಿಸಬೇಕು’ ಎಂದು ಹೇಳಿದ್ದಾರೆ.

ಕೋಟಿ ವೃಕ್ಷ ಸೈನ್ಯ ಕಾರ್ಯಕ್ರಮಕ್ಕೆ ಶಾಸಕ ಅರವಿಂದಲಿಂಬಾವಳಿ ಸಸಿ ವಿತರಿಸುವ ಮೂಲಕ ಚಾಲನೆ ನೀಡಿದರು. ಮುಖಂಡರಾದ ಜಯಚಂದ್ರರೆಡ್ಡಿ, ಅನ್ವಯ ಫೌಂಡೇಷನ್‌ನ ಸಂಪತ್ ಕುಮಾರ್, ಕಾರ್ತಿಕೇಯನ್, ರೋಟರಿಯ ಪ್ರಸನ್ನ, ಸತೀಶ್ ರಾವ್, ಮಧು, ಅನಿತಾ ಇದ್ದರು

ಸಸಿ ನೆಡುವ ಕಾರ್ಯಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಮಹದೇವಪುರ ಕ್ಷೇತ್ರದ ವೈಟ್ ಫೀಲ್ಡ್ ನ ಸಮೀಪ ಬಿಬಿಎಂಪಿ, ಅನ್ವಯ ಫೌಂಡೇಷನ್, ಸಿಎಲ್‌ಐಪಿ, ರೋಟರಿ, ಆರ್ ಡಬ್ಲ್ಯು ಎ ಮಹದೇವಪುರ ಸೇರಿದಂತೆ ಇತರ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ 75 ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ 75 ಸಾವಿರ ಸಸಿನೆಡುವ ಕೋಟಿ ವೃಕ್ಷ ಸೈನ್ಯ ಕಾರ್ಯಕ್ರಮಕ್ಕೆ ಸಸಿ ವಿತರಿಸುವ ಮೂಲಕ ಶಾಸಕ ಅರವಿಂದ ಲಿಂಬಾವಳಿ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ’ಕ್ಷೇತ್ರವನ್ನು ಹಸಿರು ಕವಚವಾಗಿಸಲು ನಾವೆಲ್ಲರೂ ಶ್ರಮಿಸೋಣ. ಉಳಿದ ಬೆಂಗಳೂರಿನ ಶಾಸಕರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಸಸಿ ನೆಡುವ ಮೂಲಕ ಬೆಂಗಳೂರನ್ನ ಹಸಿರಾಗಿಸಬೇಕು‘ ಎಂದು ಮನವಿ ಮಾಡಿದರು.

150 ಅಪಾರ್ಟ್‌ಮೆಂಟ್‌ಗಳಿಂದ 4,500 ಸಸಿಗಳಿಗೆ ಬೇಡಿಕೆ ಬಂದಿದ್ದು ಅವರಿಗೆ ಸಸಿಗಳನ್ನು ವಿತರಿಸಲಾಯಿತು. ಉಳಿದ ಸಸಿಗಳನ್ನು ಶಕ್ತಿ ಕೇಂದ್ರಗಳ ಮುಖಂಡರ ಮೂಲಕ ಆ. 15 ರ ಸಂಜೆ ಒಳಗೆ ವಿತರಿಸಲು ಸೂಚಿಸಿದರು.

ಬಿಬಿಎಂಪಿ ವತಿಯಿಂದ 7,500 ಸಸಿಗಳು ಹಾಗೂ ಎನ್‌ಜಿಒಗಳಿಂದ 500 ಸಸಿಗಳನ್ನು ವಿತರಿಸಲಾಯಿತು.

ಕೋಟಿ ವೃಕ್ಷ ಸೈನ್ಯದ ಕಾರ್ಯಕ್ಕೆ ಮೆಚ್ಚುಗೆ

ಬೆಂಗಳೂರು: ಕೋಟಿ ವೃಕ್ಷ ಸೈನ್ಯವು, 75ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಸಿಟಿಜನ್ಸ್ ಫಾರ್ ಸಿಟಿಜನ್ಸ್, ಕ್ಲಿಪ್ ಅಲ್ಯೂಮ್ನಿ ಅಸೋಸಿಯೇಷನ್, ಪಬ್ಲಿಕ್ ಇಶ್ಯೂಸ್ ಫೋರಂ, ನಮ್ಮ ಬೆಂಗಳೂರು ಫೌಂಡೇಷನ್, ಅನ್ವಯ, ಆದ್ಯತೆ, ಸ್ವರ್ಣ ಭಾರತ ಫೌಂಡೇಷನ್, ಚೇಂಜ್ ಮೇಕರ್ಸ್ ಮತ್ತು ಬಿಬಿಎಂಪಿ ಸಹಯೋಗದಲ್ಲಿ ನಗರದಲ್ಲಿ 75 ಸಾವಿರ ಸಸಿಗಳನ್ನು ನೆಡಲು ಮುಂದಾಗಿವೆ. ಈ ಕಾರ್ಯಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

‘ಕೋಟಿ ವೃಕ್ಷ ಸೈನ್ಯವು ವಿವಿಧ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಕೈಗೊಂಡಿರುವ ಈ ಅಭಿಯಾನ ಮೆಚ್ಚುವಂತಹದ್ದು. ನೆಟ್ಟ ಸಸಿಗಳನ್ನು ಮುಂದಿನ ಎರಡು ವರ್ಷ ಪೋಷಿಸುವ ಜವಾಬ್ದಾರಿಯನ್ನೂ ಈ ಸಂಸ್ಥೆಗಳೇ ತೆಗೆದುಕೊಂಡಿರುವುದು ಸ್ವಾಗತಾರ್ಹ. ಬೆಂಗಳೂರಿನಲ್ಲಿ ವಾಸಿಸುತ್ತಿರುವ ಎಲ್ಲಾ ನಾಗರಿಕರೂ ಒಂದೊಂದು ಸಸಿ ನೆಟ್ಟು ಅದನ್ನು ಬೆಳೆಸುವ ಪಣ ತೊಟ್ಟರೆ ಮಹಾನಗರಿಯು ಹಸಿರಿನ ತೊಟ್ಟಿಲಾಗಿ ಕಂಗೊಳಿಸುವುದರಲ್ಲಿ ಅನುಮಾನವೇ ಇಲ್ಲ’ ಎಂದು ಮುಖ್ಯಮಂತ್ರಿಯವರು ತಿಳಿಸಿದ್ದಾರೆ.

ಇಂಗುಗುಂಡಿ ನಿರ್ಮಿಸುವ ಯೋಜನೆಗೆ ಚಾಲನೆ

75 ಸಾವಿರ ಸಸಿ ನೆಡುವ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 75ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಮಹಾನಗರದ ವ್ಯಾಪ್ತಿಯಲ್ಲಿ 75 ಸಾವಿರ ಸಸಿಗಳನ್ನು ನೆಡಲು ಬಿಬಿಎಂಪಿ ಮುಂದಾಗಿದೆ. ಅಲ್ಲದೆ, ಐದು ಸಾವಿರ ಇಂಗುಗುಂಡಿಗಳನ್ನು ನಿರ್ಮಿಸುವ ಯೋಜನೆಯನ್ನೂ ಮಹಾನಗರ ಪಾಲಿಕೆ ರೂಪಿಸಿದೆ.

ಪಾಲಿಕೆಯ ಅರಣ್ಯ ವಿಭಾಗ, ತೋಟಗಾರಿಕಾ ಹಾಗೂ ಕೆರೆಗಳ ವಿಭಾಗ ಸೇರಿ ನಗರದಲ್ಲಿರುವ ಉದ್ಯಾನಗಳು, ಕೆರೆಗಳ ಸುತ್ತಮುತ್ತಲಿನ ಖಾಲಿ ಸ್ಥಳದಲ್ಲಿ 75,000 ಸಸಿಗಳನ್ನು ನೆಡಲಿವೆ. ನಾಗರಿಕರು, ಸಂಘ-ಸಂಸ್ಥೆಗಳ ಸಹಯೋಗದಲ್ಲಿ ಕೈಗೊಂಡಿರುವ ಈ ಅಭಿಯಾನಕ್ಕೆ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಶನಿವಾರ ಚಾಲನೆ ನೀಡಿದರು.

ಇಂಗು ಗುಂಡಿ ನಿರ್ಮಾಣ: ಬಿಬಿಎಂಪಿ ವ್ಯಾಪ್ತಿಯಲ್ಲಿ 1,300 ಉದ್ಯಾನಗಳಿದ್ದು, ಇವುಗಳಲ್ಲಿ ಬೀಳುವ ಮಳೆ ನೀರನ್ನು ಅಲ್ಲೇ ಇಂಗುವಹಾಗೆ ಮಾಡುವ ನಿಟ್ಟಿನಲ್ಲಿ ‘ಯುನೈಟೆಡ್ ವೇ ಆಫ್ ಬೆಂಗಳೂರು’ ಸಹಯೋದಲ್ಲಿ ವೈಜ್ಞಾನಿಕವಾಗಿ ಐದು ಸಾವಿರ ಇಂಗು ಗುಂಡಿಗಳನ್ನು ನಿರ್ಮಿಸಲಾಗುತ್ತಿದೆ.

ಸ್ವಾತಂತ್ರ್ಯ ಉದ್ಯಾನದಲ್ಲಿ ಈಗಾಗಲೇ 24 ಇಂಗು ಗುಂಡಿಗಳನ್ನು ನಿರ್ಮಿಸಲಾಗಿದ್ದು, ಇನ್ನೂ 6 ಇಂಗು ಗುಂಡಿಗಳನ್ನು ಇಲ್ಲಿ ನಿರ್ಮಿಸಲಾಗುತ್ತದೆ.

ಸಸಿ ನೆಡುವ ಅಭಿಯಾನಕ್ಕೆ ಗೌರವ್ ಗುಪ್ತ ಚಾಲನೆ ನೀಡಿದರು. ವಿವಿಧ ಸಂಘ–ಸಂಸ್ಥೆಗಳ ಸದಸ್ಯರು, ಬಿಬಿಎಂಪಿ ಅಧಿಕಾರಿಗಳು ಇದ್ದರು

ಪ್ರತಿ ಇಂಗುಗುಂಡಿಯೂ 12 ಅಡಿ ಆಳ ಹಾಗು 4 ಅಡಿ ಸುತ್ತಳತೆ ಹೊಂದಿರುತ್ತದೆ. ಒಂದು ಇಂಗುಗುಂಡಿಯಲ್ಲಿ ಸುಮಾರು 4000 ಲೀಟರ್ ಮಳೆನೀರನ್ನು ಸಂಗ್ರಹಿಸಿ ಇಂಗಿಸಬಹುದಾಗಿದೆ. ಒಟ್ಟಾರೆ 5000 ಗುಂಡಿಗಳಲ್ಲಿ 2 ಕೋಟಿ ಲೀಟರ್‌ನಷ್ಟು ನೀರನ್ನು ಸಂಗ್ರಹಿಸಿ ಇಂಗಿಸಬಹುದಾಗಿದೆ.

ಒಂದು ಇಂಗು ಗುಂಡಿಗೆ ಸುಮಾರು ₹32 ಸಾವಿರ ವೆಚ್ಚವಾಗಲಿದ್ದು, ಈ ಮೊತ್ತವನ್ನು ‘ಯುನೈಟೆಡ್ ವೇ ಆಫ್ ಬೆಂಗಳೂರು’ ಸಂಸ್ಥೆಯೇ ಭರಿಸಲಿದೆ. ಪಾಲಿಕೆಯಿಂದ ಇಂಗುಗುಂಡಿ ನಿರ್ಮಿಸಲು ಸ್ಥಳಾವಕಾಶ ನೀಡಲಾಗುತ್ತದೆ.

‘ನೀರು ಸಂಗ್ರಹಿಸಿ ಇಂಗಿಸುವುದರಿಂದ ಅಂತರ್ಜಲ ಮಟ್ಟವು ಏರಿಕೆಯಾಗುತ್ತದೆ ಮತ್ತು ಉದ್ಯಾನಗಳಲ್ಲಿರುವ ವಿವಿಧ ಸಸ್ಯ ಪ್ರಭೇದಗಳಿಗೆ ನೀರಿನ ಕೊರತೆಯನ್ನು ನೀಗಿಸಲು ಸಹಕಾರಿಯಾಗುತ್ತದೆ’ ಎಂದು ಗೌರವ್ ಗುಪ್ತ ಹೇಳಿದರು.

ವಿಶೇಷ ಆಯುಕ್ತರಾದ ರೆಡ್ಡಿ ಶಂಕರ ಬಾಬು, ತುಳಸಿ ಮದ್ದಿನೇನಿ, ಪಶ್ಚಿಮ ವಲಯದ ಜಂಟಿ ಆಯುಕ್ತ ಶಿವಸ್ವಾಮಿ, ಕೆರೆಗಳ ವಿಭಾಗ ಮುಖ್ಯ ಎಂಜಿನಿಯರ್ ಬಿ.ಟಿ. ಮೋಹನ್ ಕೃಷ್ಣ ಹಾಗೂ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಚುನಾವಣಾ ರಾಜಕೀಯದಿಂದ ನಿವೃತ್ತಿ ಘೋಷಿಸಿದ ಇಬ್ಬರು ಮಾಜಿ ಶಾಸಕರು

ಪ್ರಜಾವಾಣಿ ವಾರ್ತೆ

ಲಕ್ಷ್ಮೇಶ್ವರ: ಸಮೀಪದ ಶಿಗ್ಲಿ ಗ್ರಾಮದ ಸೇವಾ ಮಂದಿರದಲ್ಲಿ ಶನಿವಾರ ನಡೆದ ಸಮಾರಂಭದಲ್ಲಿ ಮಾಜಿ ಶಾಸಕರಾದ ಕಾಂಗ್ರೆಸ್ಸಿನ ಡಿ.ಆರ್. ಪಾಟೀಲ ಮತ್ತು ಜಿ.ಎಸ್. ಗಡ್ಡದೇವರಮಠ ಅವರು ಚುನಾವಣಾ ರಾಜಕೀಯಕ್ಕೆ ನಿವೃತ್ತಿ ಘೋಷಿಸಿದರು.

‘ರಾಜಕೀಯ ಕ್ಷೇತ್ರದಲ್ಲಿ ಯುವ ಜನತೆಗೆ ಅವಕಾಶ ಕೊಡಬೇಕು. ವಯಸ್ಸಿನ ಕಾರಣಕ್ಕಾಗಿ ನಿವೃತ್ತಿ ಘೋಷಿಸುತ್ತಿದ್ದೇವೆ, ಇದರಲ್ಲಿ ಯಾವುದೇ ಉದ್ದೇಶ ಇಲ್ಲ. ಕಾರ್ಯಕರ್ತರು ವಿಚಲಿತರಾಗಬೇಕಾದ ಅಗತ್ಯ ಇಲ್ಲ. ನಾವು ಅವರೊಂದಿಗೆ ಸದಾ ಇರುತ್ತೇವೆ. ಆದರೆ ಚುನಾವಣೆಗೆ ಮಾತ್ರ ಸ್ಪರ್ಧಿಸುವುದಿಲ್ಲ’ ಎಂದರು.

ಡಿ.ಆರ್. ಪಾಟೀಲ ಅವರು 1992ರಿಂದ 2008ರವರೆಗೆ ಗದಗ ಶಾಸಕರಾಗಿದ್ದರು. ಜಿ.ಎಸ್. ಗಡ್ಡದೇವರಮಠ ಅವರು ಶಿರಹಟ್ಟಿ ಕ್ಷೇತ್ರದಿಂದ 1999ರಿಂದ 2004ರವರೆಗೆ ಹಾಗೂ 2004ರಿಂದ 2008ರ ಅವಧಿಯಲ್ಲಿ ಶಾಸಕರಾಗಿದ್ದರು.

ಪ್ರಶ್ನೆಯೊಂದಕ್ಕೆ ಉತ್ತರಿಸಿದ ಡಿ.ಆರ್. ಪಾಟೀಲ, ‘ಪ್ರಜಾಪ್ರಾತಿನಿಧ್ಯ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ 75 ವರ್ಷ ತುಂಬಿದವರು ಚುನಾವಣೆಗೆ ಸ್ಪರ್ಧಿಸುವುದನ್ನು ನಿರ್ಬಂಧಿಸಲು ಪ್ರಧಾನಿ ನರೇಂದ್ರ ಮೋದಿ ಅವರು ಸುಗ್ರೀವಾಜ್ಞೆ ಹೊರಡಿಸುವ ಧೈರ್ಯ ತೋರಲಿ’ ಎಂದರು.

ಎಲ್ಲಾ ದೇಶವಾಸಿಗಳಿಗೆ ಸ್ವಾತಂತ್ರ್ಯೋತ್ಸವದ ಶುಭಾಶಯಗಳು

75ನೇ ಸ್ವಾತಂತ್ರ್ಯ ದಿನಾಚರಣೆ

ಜೈ ಹಿಂದ್

Azadi Ka Amrit Mahotsav

ಸತ್ಯಮೇವ ಜಯತೇ
ವಾರ್ತಾ ಮತ್ತು ಪ್ರಸಾರ ಸಚಿವಾಲಯ
ಭಾರತ ಸರ್ಕಾರ

“ರಾಷ್ಟ್ರ ಸ್ವಾತಂತ್ರ್ಯದ ಅಮೃತ ಮಹೋತ್ಸವವು ಇಡೀ ಭಾರತದ ಪರಂಪರೆಯನ್ನು ಹೊಂದಿರುವ ಕೋಟ್ಯಂತರ ಭಾರತೀಯರ ಹಬ್ಬವಾಗಿದೆ. ಇದು ಸ್ವಾತಂತ್ರ್ಯ ಹೋರಾಟದ ಪ್ರತಿಬಿಂಬವಾಗಿದೆ ಮತ್ತು ಸ್ವತಂತ್ರ ಭಾರತದ ಹೆಮ್ಮೆಯ ಪ್ರಗತಿಯಾಗಿದೆ. ಈ ಉತ್ಸವವು ಜಗತ್ತಿಗೆ ನಮ್ಮ 75 ವರ್ಷಗಳ ಸಾಧನೆಗಳನ್ನು ತೋರಿಸುತ್ತದೆ. ಮುಂದಿನ 25 ವರ್ಷಗಳ ಅಭಿವೃದ್ಧಿಯ ಮುನ್ನೋಟಕ್ಕೆ ಸ್ಫೂರ್ತಿ ನೀಡುವ ಮತ್ತು ಸಂಕಲ್ಪ ಮಾಡುವ ಸಂದರ್ಭವಾಗಿದೆ.”

– ನರೇಂದ್ರ ಮೋದಿ

ಪ್ರತಿ ಕಣ ಕಣದಲ್ಲೂ, ಪ್ರತಿ ಹೃದಯ ಬಡಿತದಲ್ಲೂ ...ರಾಷ್ಟ್ರ ಮೊದಲು

ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮವನ್ನು ಕೆಂಪು ಕೋಟೆಯ ಪ್ರಾಂಗಣದಿಂದ ಬೆಳಿಗ್ಗೆ 6.25 ರಿಂದ ದೂರದರ್ಶನದಲ್ಲಿ ನೇರ ಪ್ರಸಾರ ಮಾಡಲಾಗುವುದು.

#AmritMahotsav
ಈ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಮತ್ತು ಆಜಾದಿ ಕಾ ಅಮೃತ ಮಹೋತ್ಸವದಲ್ಲ ಭಾಗಿಯಾಗಿ

davp 22201/13/0010/2122

ಶಾಸಕರ ಬಳಿ ಕಣ್ಣೀರಿಟ್ಟ ನಿವೇಶನದಾರರು

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: 'ಸಾಲ ಮಾಡಿ ಮನೆ ಕಟ್ಟಿದ್ದೇವೆ. ಬಿಡಿಎ ಅಧಿಕಾರಿಗಳು ಒಡೆದು ಹಾಕ್ರಿದ್ರೆ ಬೀದಿಗೆ ಬರುತ್ತೇವೆ. ನೀವು ಮನಸ್ಸು ಮಾಡಿದ್ರೆ ಏನಾದರೂ ಮಾಡ್ಬಹುದು. ದುಡ್ಡು ತೆಗೆದ್ಕೊಂಡ ಭೂ ಮಾಲೀಕ ಅರಾಮವಾಗಿ ಇದ್ದಾರೆ. ದುಡ್ಡು ಕೊಟ್ಟು ನಾವು ನೆಮ್ಮದಿ ಕಳದ್ಕೊಂಡು ಇದ್ದೇವೆ ಸ್ವಾಮಿ'.

ಹೀಗೆ ಕೆಂಪಾಪುರ ಗ್ರಾಮದಲ್ಲಿ ಶಿವರಾಮ ಕಾರಂತ ಬಡಾವಣೆಯಲ್ಲಿ ಮನೆ ಕಟ್ಟಿಕೊಂಡ ಗ್ರಾಮಸ್ಥರು ತಮ್ಮ ದುಃಖವನ್ನು ಬಿಡಿಎ ಅಧ್ಯಕ್ಷ ಮತ್ತು ಯಲಹಂಕ ಶಾಸಕ ಎಸ್. ಅರ್.ವಿಶ್ವನಾಥ್ ಅವರ ಬಳಿ ತೊಡಿಕೊಂಡರು.

ಕೆಂಪಾಪುರ ಗ್ರಾಮಕ್ಕೆ ರಸ್ತೆ ಮತ್ತು ಚರಂಡಿ ಕಾಮಗಾರಿ ಉದ್ಘಾಟನೆ ಸಮಾರಂಭಕ್ಕೆ ಬಂದ ಶಾಸಕರ ಬಳಿ ತಮ್ಮ ಸಮಸ್ಯೆಗಳನ್ನು ಹೇಳಿಕೊಂಡು ಮಹಿಳೆಯರು ಕಣ್ಣೀರು ಇಟ್ಟರು.

ಗ್ರಾಮ ಪಂಚಾಯಿತಿ ಸದಸ್ಯ ಕಿರಣ್ ಕುಮಾರ್ ಅವರು, 'ಕೆಂಪಾಪುರ ಗ್ರಾಮದಲ್ಲಿ ಮನೆಗಳನ್ನು ಕಟ್ಟಿಕೊಂಡವರು ಬಹುತೇಕರು ಬ್ಯಾಂಕ್ ಸಾಲ ಪಡೆದವರು. ಮನೆಗಳನ್ನು ಕೆಡವಿ ಬಿಟ್ಟರೆ ಸಂಸಾರಗಳು ಬೀದಿಗೆ ಬೀಳಲಿವೆ. ನಿಮ್ಮದೇ ಸರ್ಕಾರವಿದೆ. ಮನೆಗಳನ್ನು ಕೆಡಹುವುದು ಬಿಟ್ಟು ಪರ್ಯಾಯ ಮಾರ್ಗವನ್ನು ಹುಡುಕಿ ರಕ್ಷಣೆ ನೀಡಿ' ಎಂದು ಮನವಿ ಸಲ್ಲಿಸಿದರು.

ಗ್ರಾಮಸ್ಥರ ಸಮಸ್ಯೆಗಳನ್ನು ಅಲಿಸಿದ ಎಸ್.ಅರ್.ವಿಶ್ವನಾಥ್, 'ಬಿಡಿಎ ವಿರುದ್ಧ ಪ್ರತಿಭಟನೆ ಮಾಡಿದಾಗ ಮುಂಚೂಣಿಯಲ್ಲಿ ನಾನೇ ಇದ್ದೆ. ನಿಮ್ಮ ಕಷ್ಟಗಳ ಅರಿವು ನನಗೆ ಇದೆ. ಆದರೆ, ಸುಪ್ರೀಂ ಕೋರ್ಟ್ ನೀಡಿದ ತೀರ್ಪಿಗೆ ನಾವು ತಲೆಬಾಗಬೇಕು' ಎಂದರು.

'ಶಿವರಾಮಕಾರಂತ ಬಡಾವಣೆ ನಿರ್ಮಾಣಕ್ಕೆ ಇನ್ನೆರಡು ದಿನದಲ್ಲಿ ₹4 ಸಾವಿರ ಕೋಟಿ ಅನುದಾನಕ್ಕೆ ಮುಖ್ಯ-ಮಂತ್ರಿಗಳು ಒಪ್ಪಿಗೆ ನೀಡಲಿದ್ದಾರೆ. ಜಾಗ ಕಳೆದುಕೊಂಡ ರೈತರಿಗೆ ಸ್ಥಳದಲ್ಲಿಯೇ ಪರಿಹಾರದ ಪತ್ರ ವಿತರಿಸುವ ಬಗ್ಗೆ ಚಿಂತನೆ ನಡೆದಿದೆ. ರೈತರ ಜಮೀನಿನಲ್ಲಿ ಮನೆ ಕಟ್ಟಿಕೊಂಡವರಿಗೆ ಅದೇ ಜಮೀನಿನಲ್ಲಿ ಸ್ಥಳವಿದ್ದರೆ ಜಾಗ ನೀಡುವ ಬಗ್ಗೆ ಬಿಡಿಎ ಆಲೋಚನೆ ಮಾಡುತ್ತಿದೆ' ಎಂದರು.

ಕೆಂಪಾಪುರ ಗ್ರಾಮದ ಶಿವರಾಮಕಾರಂತ ಬಡಾವಣೆ ನಿವೇಶನದಾರರು ಎಸ್.ಅರ್. ವಿಶ್ವನಾಥ್ ಅವರಿಗೆ ಕೈ ಮುಗಿದು ಮನವಿ ಮಾಡಿದರು. ಗ್ರಾಮ ಪಂಚಾಯಿತಿ ಸದಸ್ಯರಾದ ಕಿರಣ್ ಕುಮಾರ್, ಮುಖಂಡ ಸಂದೀಪ್ ಕುಮಾರ್ ಇದ್ದರು

ಅಂತರ್ಜಲ ಮರುಪೂರಣಕ್ಕೆ ಒತ್ತು: ಈಶ್ವರಪ್ಪ

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ: ಅಂತರ್ಜಲ ಮರುಪೂರಣ ಕಾರ್ಯಕ್ರಮ ದಡಿ ರಾಜ್ಯದ ಎಲ್ಲ ಕೆರೆಕಟ್ಟೆ, ಕಲ್ಯಾಣಿ-ಗಳನ್ನು ನರೇಗಾ ಮೂಲಕ ಪುನಶ್ಚೇ-ತನಗೊಳಿಸಲು ಒತ್ತು ನೀಡಲಾಗುತ್ತಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ಹೇಳಿದರು.

ಅವರು ತಾಲ್ಲೂಕಿನ ಎಸ್.ಎಸ್. ಘಾಟಿಯಲ್ಲಿರುವ ರಾಷ್ಟ್ರೋತ್ಥಾನ ಗೋಶಾಲೆ ಮಾಧವ ಸೃಷ್ಟಿಗೆ ಶನಿವಾರ ಭೇಟಿ ನೀಡಿ ಗೋ ಪೂಜೆ ನಡೆಸಿ, ಗಿಡ ನೆಟ್ಟರು.

ರಾಜ್ಯದ ಎಲ್ಲ ಕೆರೆ ಕಟ್ಟೆಗಳು, ಕಲ್ಯಾಣಿಗಳನ್ನು ನರೇಗಾ ಅಡಿಯಲ್ಲಿ ಅಭಿವೃದ್ಧಿ ಮಾಡಲಾಗುತ್ತಿದ್ದು, ಇಡೀ ದೇಶದಲ್ಲಿ ನರೇಗಾ ಕಾಮಗಾರಿ ಮುಖಾಂತರ ಕರ್ನಾಟಕ ದೇಶದಲ್ಲಿಯೇ ಮೊದಲನೇ ಸ್ಥಾನದಲ್ಲಿದೆ. ನರೇಗಾದಡಿ ದುಡಿಯುವುದಕ್ಕೆ ಕೂಲಿ ಎಂದು ಹೇಳುವುದಕ್ಕೆ ಇಷ್ಟ ಪಡುವುದಿಲ್ಲ. ಯುದ್ಧ ಭೂಮಿಯಲ್ಲಿ ಸೈನಿಕರು ಕರ್ತವ್ಯ ನಿರ್ವಹಿಸುವ ರೀತಿಯಲ್ಲಿಯೇ ಸಮಾಜದಲ್ಲಿ ಬಡವರು ಕೂಡ ಸೈನಿಕರ ರೂಪದಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ಹೆಮ್ಮೆಯಿಂದ ಹೇಳಬಹುದು ಎಂದರು.

'ನಾವೆಲ್ಲರೂ ಪರಿಸರ ಬೆಳೆಸಲು, ಕೆರೆ ಮತ್ತು ಕಲ್ಯಾಣಿಗಳು ಅಭಿವೃದ್ಧಿ ಮಾಡಲು ಈ ಸ್ಥಳ ಸ್ಫೂರ್ತಿ ನೀಡುತ್ತದೆ. ಇಲ್ಲಿ ತರಬೇತಿ ಕೇಂದ್ರ ತೆರೆಯಬೇಕೆಂಬ ತೀರ್ಮಾನ ಕೈಗೊಂಡಿರುವುದಾಗಿ' ತಿಳಿಸಿದರು.

ರೇವಾ: ಒಬ್ಬ ವಿದ್ಯಾರ್ಥಿ-ಒಂದು ಮರ ಅಭಿಯಾನಕ್ಕೆ ಚಾಲನೆ

ಯಲಹಂಕ: ಸ್ವಚ್ಛ ಮತ್ತು ಹಸಿರು ನಗರವನ್ನು ನಿರ್ಮಿಸುವ ನಿಟ್ಟಿನಲ್ಲಿ ರೇವಾ ವಿಶ್ವವಿದ್ಯಾಲಯ-ವು ಬೆಂಗಳೂರು ಮತ್ತು ಸುತ್ತ ಮುತ್ತಲ ಪ್ರದೇಶ ಗಳಲ್ಲಿ 15 ಸಾವಿರ ಸಸಿಗಳನ್ನು ನೆಡುವ ಮೂಲಕ ರೇವಾ ವನ ಮಹೋತ್ಸವ ಆಚರಣೆಗೆ ಚಾಲನೆ ನೀಡಲಾಗಿದೆ ಎಂದು ಕುಲಾಧಿಪತಿ ಡಾ.ಪಿ.ಶ್ಯಾಮರಾಜು ತಿಳಿಸಿದರು.

ಡಾ.ಪಿ. ಶ್ಯಾಮರಾಜು

ಪತ್ರಿಕಾಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಅವರು, 'ಆಜಾದಿ ಕಾ ಅಮೃತ್ ಮಹೋತ್ಸವ್' ಸಂಭ್ರ-ಮಾಚರಣೆಯ ಧ್ಯೇಯದೊಂದಿಗೆ ರೇವಾ ವನಮಹೋತ್ಸವದಡಿಯಲ್ಲಿ ಒಬ್ಬ ವಿದ್ಯಾರ್ಥಿ-ಒಂದು ಮರ ಅಭಿಯಾನದ ಮೂಲಕ ವಿಶ್ವವಿ-ದ್ಯಾಲಯವು ವಿದ್ಯಾರ್ಥಿಗಳಲ್ಲಿ ಪ್ರಕೃತಿಯ ಬಗ್ಗೆ ಜವಾಬ್ದಾರಿ ಹಾಗೂ ಪ್ರಜ್ಞೆಯನ್ನು ಮೂಡಿಸುವ ಗುರಿ ಹೊಂದಿದೆ. 2021-22ನೇ ಶೈಕ್ಷಣಿಕ ವರ್ಷದಿಂದ ರೇವಾ ದಲ್ಲಿ ಪ್ರವೇಶ ಪಡೆಯುವ ಪ್ರತಿ ವಿದ್ಯಾರ್ಥಿಯು ಒಂದೊಂದು ಸಸಿ ನೆಡಲಿದ್ದಾರೆ' ಎಂದರು.

'ವಿಶ್ವವಿದ್ಯಾಲಯದಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳು 2022ರ ವೇಳೆಗೆ 15 ಸಾವಿರ ಸಸಿಗಳನ್ನು ನೆಡಲಿದ್ದಾರೆ. ಇದರ ಭಾಗವಾಗಿ ಮೊದಲ ಹಂತದಲ್ಲಿ ರೇವಾ ವಸತಿನಿಲಯದ ವಿದ್ಯಾರ್ಥಿಗಳು ಮತ್ತು ಬೋಧಕ ವೃಂದದವರಿಂದ ಸುಮಾರು 3 ಸಾವಿರ ಗಿಡಗಳನ್ನು ನೆಡಲಾಗುವುದು. ಅಲ್ಲದೆ ಬಿಬಿಎಂಪಿ ಸಹಯೋಗದೊಂದಿಗೆ ನೆಡುತೋಪು ಅಭಿಯಾನ ನಡೆಸುವುದರ ಜೊತೆಗೆ ಹಸಿರಿನ ಕೊರತೆಯಿರುವ ಅರಣ್ಯ ಪ್ರದೇಶಗಳಲ್ಲಿ ಸಸಿಗಳನ್ನು ನೆಡಲು ತೀರ್ಮಾನಿಸಲಾಗಿದೆ' ಎಂದು ಹೇಳಿದರು.

ಶ್ರೀನಿವಾಸಪುರ, ಕೋಗಿಲು ಕೆರೆ, ಪಾಲನಹಳ್ಳಿ ಕೆರೆ ಮತ್ತು ರೇವಾ ವಿಶ್ವವಿದ್ಯಾಲಯದ ಸುತ್ತಮುತ್ತಲ ಕೆಲವು ಗ್ರಾಮಪಂಚಾಯಿತಿ ಪ್ರದೇಶಗಳನ್ನು ಗುರುತಿಸಿ ಸಸಿನೆಡುವ ಕಾರ್ಯಕ್ರಮ ಆರಂಭಿಸಲಾಗಿದೆ. ಮುಂದಿನ ಶೈಕ್ಷಣಿಕ ವರ್ಷದಲ್ಲಿ 6 ಸಾವಿರ ಸಸಿಗಳನ್ನು ನೆಡುವ ಗುರಿ ಹೊಂದಲಾಗಿದ್ದು, ಈ ಸಂದರ್ಭದಲ್ಲಿ ಸಿಎಸ್‌ಆರ್ ಕಾರ್ಯಕ್ರಮದಡಿ-ಯಲ್ಲಿ ವಿಶ್ವವಿದ್ಯಾಲಯವು ದತ್ತು ಪಡೆದಿರುವ 10 ಸರ್ಕಾರಿ ಶಾಲೆಗಳಲ್ಲಿಯೂ ಗಿಡನೆಡುವ ಕಾರ್ಯ-ಕ್ರಮಕ್ಕೆ ಚಾಲನೆ ನೀಡಲಾಗುವುದು. ಸ್ವಯಂಸೇವಕರು ಮತ್ತು ಸರ್ಕಾರಿ ಶಾಲೆಗಳ ಸಿಬ್ಬಂದಿ ಸಸಿಗಳ ನಿರ್ವಹಣೆ ಮಾಡುವ ಆಸಕ್ತಿ ತೋರಿದ್ದಾರೆ ಎಂದು ಮಾಹಿತಿ ನೀಡಿದರು.

ಪ್ರಶಸ್ತಿ: ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ನೇತೃತ್ವದ ಇಕೋ ಕ್ಲಬ್‌ಗಳು ನುರಿತ ಮಾರ್ಗದರ್ಶಕರ ಸಹಾಯದಿಂದ ಪ್ರಚಾರ ಮತ್ತು ಮೇಲ್ವಿಚಾರಣೆ ಮಾಡಲಿವೆ. 2022ರ ಆಗಸ್ಟ್ 15 ರಂದು ಅತ್ಯುತ್ತಮವಾಗಿ ಬೆಳೆದ ಮರ ಮತ್ತು ನಿರ್ವಹಣೆಯನ್ನು ಪರಿಗಣಿಸಿ, ಮಾರ್ಗದರ್ಶಕರ ಶಿಫಾರಸಿನ ಮೇರೆಗೆ ಪ್ರಶಸ್ತಿ ನೀಡಲಾಗುವುದು ಎಂದು ಶ್ಯಾಮರಾಜು ತಿಳಿಸಿದರು.

ಸಂಗೊಳ್ಳಿ ರಾಯಣ್ಣ ಸ್ಮರಣೆಗೆ ಕಾರ್ಯಕ್ರಮ
ಸಿ.ಎಂ.ಗೆ ಕಾಗಿನೆಲೆ ಶ್ರೀ, ಈಶ್ವರಪ್ಪ ಅಭಿನಂದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅವರ ಜನ್ಮದಿನ ಮತ್ತು ಹುತಾತ್ಮರಾದ ದಿನಗಳಂದು ಸರ್ಕಾರಿ ಕಾರ್ಯಕ್ರಮಗಳನ್ನು ನಡೆಸುವಂತೆ ಆದೇಶ ಹೊರಡಿಸಿರುವುದಕ್ಕಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಕಾಗಿನೆಲೆ ಕನಕ ಗುರುಪೀಠದ ನಿರಂಜನಾನಂದ ಸ್ವಾಮೀಜಿ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ಅಭಿನಂದನೆ ಸಲ್ಲಿಸಿದ್ದಾರೆ.

ಸಂಗೊಳ್ಳಿ ರಾಯಣ್ಣನ ಜನ್ಮದಿನವಾದ ಆಗಸ್ಟ್ 15 ಮತ್ತು ಅವರು ಹುತಾತ್ಮರಾದ ದಿನವಾದ ಜನವರಿ 26ರಂದು ರಾಜ್ಯ ರಾಜಧಾನಿ, ಎಲ್ಲ ಜಿಲ್ಲಾ ಕೇಂದ್ರಗಳು ಮತ್ತು ತಾಲ್ಲೂಕು ಮಟ್ಟದಲ್ಲಿ ಸರ್ಕಾರಿ ಕಾರ್ಯಕ್ರಮ ನಡೆಸುವಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಶುಕ್ರವಾರ ಆದೇಶ ಹೊರಡಿಸಿತ್ತು.

ಕಾಗಿನೆಲೆ ಕನಕ ಗುರುಪೀಠದ ಬೆಂಗಳೂರು ಶಾಖಾ ಮಠಕ್ಕೆ ಶನಿವಾರ ಭೇಟಿನೀಡಿದ ಬಸವರಾಜ ಬೊಮ್ಮಾಯಿ ಅವರು, ನಿರಂಜನಾನಂದ ಸ್ವಾಮೀಜಿ ಅವರಿಂದ ಆಶೀರ್ವಾದ ಪಡೆದರು.

ಸಂಗೊಳ್ಳಿ ರಾಯಣ್ಣ ಸ್ಮರಣೆಗೆ ಕಾರ್ಯಕ್ರಮಗಳನ್ನು ನಡೆಸುವಂತೆ ಆದೇಶ ಹೊರಡಿಸಿರುವುದಕ್ಕಾಗಿ ಸ್ವಾಮೀಜಿ ಮತ್ತು ಸಚಿವ ಕೆ.ಎಸ್. ಈಶ್ವರಪ್ಪ ಅವರು ಮುಖ್ಯಮಂತ್ರಿ ಅವರನ್ನು ಅಭಿನಂದಿಸಿದರು.

ಕಾಗಿನೆಲೆ ಮಹಾಸಂಸ್ಥಾನದ ಕನಕ ಗುರುಪೀಠದ ಬೆಂಗಳೂರಿನ ಶಾಖಾ ಮಠಕ್ಕೆ ಶನಿವಾರ ಭೇಟಿ ನೀಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನಿರಂಜನಾನಂದ ಸ್ವಾಮೀಜಿ ಅವರನ್ನು ಭೇಟಿಯಾಗಿ ಆಶೀರ್ವಾದ ಪಡೆದರು. ಸಚಿವ ಕೆ.ಎಸ್.ಈಶ್ವರಪ್ಪ ಉಪಸ್ಥಿತರಿದ್ದರು.

ವಾರಾಂತ್ಯಕ್ಕೆ ಹಂಪಿ ವೀಕ್ಷಣೆಗೆ ನಿರ್ಬಂಧ

ಹೊಸಪೇಟೆ (ವಿಜಯನಗರ): ಕೋವಿಡ್ ಹರಡದಂತೆ ತಡೆಯಲು ಜಿಲ್ಲಾಡಳಿತವು ಶನಿವಾರ ಕಠಿಣ ಕ್ರಮಗಳನ್ನು ತೆಗೆದುಕೊಂಡಿದ್ದು, ವಾರಾಂತ್ಯಕ್ಕೆ ಹಂಪಿ ಸ್ಮಾರಕಗಳ ವೀಕ್ಷಣೆಗೆ ನಿರ್ಬಂಧ ಹೇರಿದೆ.

ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯ ವ್ಯಾಪ್ತಿಗೆ ಬರುವ ಹಂಪಿ, ಕಮಲಾಪುರ, ವೆಂಕಟಾಪುರ ಸುತ್ತಮುತ್ತಲಿನ ಸ್ಮಾರಕಗಳ ವೀಕ್ಷಣೆಗೆ ಶನಿವಾರ, ಭಾನುವಾರ ಅವಕಾಶ ಇರುವುದಿಲ್ಲ. ಹಂಪಿ ವಿರೂಪಾಕ್ಷೇಶ್ವರ ದೇವಸ್ಥಾನಕ್ಕೆ ಶನಿವಾರದಿಂದ ಸೋಮವಾರ ದವರೆಗೆ ಹಾಗೂ ಅಮಾವಾಸ್ಯೆಯಂದು ಭಕ್ತರ ಪ್ರವೇಶದ ಮೇಲೆ ನಿರ್ಬಂಧ ಹೇರಲಾಗಿದೆ ಎಂದು ಜಿಲ್ಲಾಧಿಕಾರಿ ಪವನಕುಮಾರ ಮಾಲಪಾಟಿ ತಿಳಿಸಿದ್ದಾರೆ.

ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿಕೆ
ಯಾವುದೇ ಸಂದರ್ಭದಲ್ಲಿ ಸರ್ಕಾರ ಪತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ರಾಜ್ಯ ಸರ್ಕಾರ ಯಾವುದೇ ಸಂದರ್ಭದಲ್ಲಿ ಪತನಗೊಳ್ಳಬಹುದು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, 'ಆಡಳಿತ ಪಕ್ಷದ ಶಾಸಕರು ಸರ್ಕಾರದ ವಿರುದ್ಧ ಅಸಮಾಧಾನ ಹೊರಹಾಕುತ್ತಿದ್ದಾರೆ. ಸರ್ಕಾರದಲ್ಲಿ ಗೊಂದಲ ಮುಂದುವರಿದಿದೆ. ಹೀಗಾಗಿ, ಅವಧಿ ಪೂರ್ಣಗೊಳಿಸುವುದು ಅನುಮಾನ' ಎಂದರು.

ಸರ್ಕಾರದ ಜವಾಬ್ದಾರಿ: 'ಕೋವಿಡ್ ಮೂರನೇ ಅಲೆ ಆರಂಭವಾಗುತ್ತಿರುವುದರಿಂದ ಜನಜಂಗುಳಿ ಹೆಚ್ಚು ಸೇರುವ ಕಾರ್ಯಕ್ರಮಗಳಿಗೆ ಸರ್ಕಾರ ಅನುಮತಿ ನೀಡಬಾರದು. ಹಬ್ಬ ಹರಿದಿನ, ಜಾತ್ರೆಗಳನ್ನು ಒಂದು ವರ್ಷ ಮಾಡದಿರುವುದು ಉತ್ತಮ' ಎಂದೂ ಸಿದ್ದರಾಮಯ್ಯ ಸಲಹೆ ನೀಡಿದರು.

ಸಿದ್ದರಾಮಯ್ಯ

'ಮೂರನೇ ಅಲೆಯಿಂದ ಜನ ತೊಂದರೆಗೆ ಒಳಗಾಗದಂತೆ ನೋಡಿಕೊಳ್ಳುವುದು ಸರ್ಕಾರದ ಜವಾಬ್ದಾರಿ. ಕೊಡಗು, ದಕ್ಷಿಣ ಕನ್ನಡ, ಮೈಸೂರು ಸೇರಿದಂತೆ ಗಡಿ ಜಿಲ್ಲೆಗಳಲ್ಲಿ ಬಿಗಿ ಕ್ರಮ ಕೈಗೊಳ್ಳಬೇಕು. ವಾರಾಂತ್ಯದ ಲಾಕ್‌ಡೌನ್ ಘೋಷಣೆಯಿಂದ ಪ್ರಯೋಜನ ಇಲ್ಲ' ಎಂದು ಅಭಿಪ್ರಾಯಪಟ್ಟ ಅವರು, 'ಎಲ್ಲರಿಗೂ ಲಸಿಕೆ ಕೊಡಿಸುವುದು ಕೇಂದ್ರ ಮತ್ತು ರಾಜ್ಯ ಸರ್ಕಾರದ ಹೊಣೆ. ಮೂರನೇ ಅಲೆ ನಿಯಂತ್ರಣಕ್ಕೆ ಬರದಿದ್ದರೆ ಶಾಲೆ, ಕಾಲೇಜು ಆರಂಭಿಸುವುದು ಸೂಕ್ತವಲ್ಲ' ಎಂದರು.

ಭೇಟಿಯಲ್ಲಿ ವಿಶೇಷ ಇಲ್ಲ: 'ಹೊಸಕೋಟೆಯಲ್ಲಿ ಕನಕ ಸಮೃದ್ಧಿ ಸಹಕಾರ ಬ್ಯಾಂಕ್ ಉದ್ಘಾಟನೆ ಕಾರ್ಯಕ್ರಮದಲ್ಲಿ ನಾನು ಮತ್ತು ಸಚಿವ ಎಂ.ಟಿ.ಬಿ ನಾಗರಾಜ್ ಶುಕ್ರವಾರ ಭೇಟಿ ಆಗಿರುವುದು ನಿಜ. ಆದರೆ, ಯಾವುದೇ ರಾಜಕೀಯ ವಿಚಾರ ಚರ್ಚಿಸಿಲ್ಲ. ಬಿಜೆಪಿಯವರ ಜೊತೆ ರಾಜಕೀಯ ಮಾತನಾಡುವುದೂ ಇಲ್ಲ. ಅವರು ಅಧಿಕಾರದಿಂದ ತೊಲಗಲಿ ಎಂದು ಹೇಳುವವನು ನಾನು' ಎಂದರು.

ಈಶ್ವರಪ್ಪ ಆಸಕ್ತಿ ವಹಿಸಲಿ: 'ನಾನು ಮುಖ್ಯಮಂತ್ರಿ ಆಗಿದ್ದಾಗ ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಗಣತಿ ವರದಿ ಸಿದ್ಧವಾಗಿರಲಿಲ್ಲ. ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದಾಗ ಸಿದ್ಧವಾಗಿತ್ತು. ಅಂದಿನ ಸಚಿವ ಪುಟ್ಟರಂಗ ಶೆಟ್ಟಿ ವರದಿ ಮಂಡಿಸಲು ಮುಂದಾದಾಗ ಅವಕಾಶ ಕೊಡಲಿಲ್ಲ. ಈಗ ಈಶ್ವರಪ್ಪ ಸಚಿವರಾಗಿದ್ದಾರೆ. ಅವರು ವರದಿ ಸ್ವೀಕರಿಸುವಂತೆ ಮಾಡಲಿ' ಎಂದು ಹೇಳಿದರು.

ಸಿ.ಎಂ 'ಝೀರೊ ಟ್ರಾಫಿಕ್' ವ್ಯವಸ್ಥೆ ರದ್ದು
ಹಲವು ಬಾರಿ 'ಗೌರವ ರಕ್ಷೆ' ಪದ್ಧತಿ ರದ್ದು ಮಾಡಲು ಬೊಮ್ಮಾಯಿ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಪ್ರಯಾಣಿಸುವ ಮಾರ್ಗಗಳಲ್ಲಿ ಸಾರ್ವಜನಿಕರಿಗೆ ತೀವ್ರ ಕಿರಿಕಿರಿ ಉಂಟು ಮಾಡುತ್ತಿದ್ದ 'ಝೀರೊ ಟ್ರಾಫಿಕ್' ವ್ಯವಸ್ಥೆ ರದ್ದುಪಡಿಸುವ ಮಹತ್ವದ ತೀರ್ಮಾನವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕೈಗೊಂಡಿದ್ದಾರೆ.

ಮುಖ್ಯಮಂತ್ರಿ ಭೇಟಿ ವೇಳೆ ಹಲವು ಬಾರಿ ನೀಡಲಾಗುತ್ತಿದ್ದ ಗೌರವ ರಕ್ಷೆ ಪದ್ಧತಿಗೆ ವಿದಾಯ ಹೇಳಿದ ಬೆನ್ನಲ್ಲೇ, ಈ ಕುರಿತ ಸೂಚನೆಯೂ ಹೊರಬಿದ್ದಿದೆ.

'ಬೆಂಗಳೂರಿನಲ್ಲಿ ಸಂಚರಿಸುವ ವೇಳೆ ನನ್ನ ವಾಹನಕ್ಕೆ ಝೀರೊ ಟ್ರಾಫಿಕ್ ನೀಡುವುದರಿಂದ ಸಾರ್ವಜನಿಕರಿಗೆ ತೀವ್ರ ತೊಂದರೆಯಾಗುತ್ತಿದೆ. ಕೆಲವು ಸಂದರ್ಭದಲ್ಲಿ ಆಂಬ್ಯುಲೆನ್ಸ್, ಅಗ್ನಿಶಾಮಕ ದಳದ ವಾಹನ ಸಿಲುಕಿಕೊಳ್ಳುವುದು ನೋವು ಮತ್ತು ಮುಜುಗರ ಉಂಟು ಮಾಡುತ್ತಿದೆ. ಹೀಗಾಗಿ, ನನ್ನ ವಾಹನಕ್ಕೆ ನೀಡುತ್ತಿರುವ ಝೀರೊ ಟ್ರಾಫಿಕ್ ವ್ಯವಸ್ಥೆ ರದ್ದುಪಡಿಸಬೇಕು' ಎಂದು ಬೊಮ್ಮಾಯಿ ಅವರು ಪೊಲೀಸ್ ಅಧಿಕಾರಿಗಳಿಗೆ ಸೂಚಿಸಿದ್ದರು.

ಇದನ್ನು ಆಧರಿಸಿ, ಆದೇಶ ಹೊರಡಿಸಿರುವ ಬೆಂಗಳೂರು ನಗರ ಜಂಟಿ ಪೊಲೀಸ್ ಆಯುಕ್ತ ಬಿ.ಆರ್. ರವಿಕಾಂತೇಗೌಡ, ಮುಖ್ಯಮಂತ್ರಿ ಪ್ರಯಾಣ ವೇಳೆ ಝೀರೋ ಟ್ರಾಫಿಕ್ ವ್ಯವಸ್ಥೆ ರದ್ದುಪಡಿಸಬೇಕು. ಒಂದು ಜಂಕ್ಷನ್‌ನಿಂದ ಇನ್ನೊಂದು ಜಂಕ್ಷನ್‌ಗೆ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು' ಎಂದು ಅವರು ಸೂಚಿಸಿದ್ದಾರೆ.

ತುರ್ತು ಹಾಗೂ ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಝೀರೊ ಟ್ರಾಫಿಕ್ ಸಂಚಾರ ವ್ಯವಸ್ಥೆ ಕಲ್ಪಿಸಬೇಕು ಎಂದೂ ಅವರು ತಿಳಿಸಿದ್ದಾರೆ.

ಹಲವು ಬಾರಿ 'ಗೌರವ ರಕ್ಷೆ' ಪದ್ಧತಿ ರದ್ದು: 'ಮುಖ್ಯಮಂತ್ರಿಗೆ ಇನ್ನು ಮುಂದೆ ಸರ್ಕಾರಿ ಕಚೇರಿಗಳ ಆವರಣದಲ್ಲಿ ಮಾತ್ರ ಗೌರವ ರಕ್ಷೆ (ಗಾರ್ಡ್ ಆಫ್ ಆನರ್) ಸಲ್ಲಿಸಬೇಕು. ನಿರ್ಗಮನ ಸಂದರ್ಭದಲ್ಲಿ ಗೌರವ ರಕ್ಷೆ ಸಲ್ಲಿಸುವ ಪದ್ಧತಿ ಕೈಬಿಡಬೇಕು' ಎಂದು ಘಟಕಾಧಿಕಾರಿಗಳಿಗೆ ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಸುತ್ತೋಲೆ ಹೊರಡಿಸಿದ್ದಾರೆ.

ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಿಗೆ ಇತ್ತೀಚೆಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ, 'ಸಿಕ್ಕ ಸಿಕ್ಕಲ್ಲಿ ಗೌರವ ರಕ್ಷೆ ಬೇಡ. ಅದನ್ನು ತೆಗೆದುಹಾಕುವಂತೆ ಆದೇಶ ಹೊರಡಿಸಲಾಗುವುದು' ಎಂದು ಬೊಮ್ಮಾಯಿ ಹೇಳಿದ್ದರು. ಆ ಬೆನ್ನಲ್ಲೆ, ಈ ಆದೇಶ ಹೊರಡಿಸಲಾಗಿದೆ.

'ಗಣ್ಯರು ಬಂದಾಗ ಮಾತ್ರ ಗೌರವ ರಕ್ಷೆ ಸಲ್ಲಿಸಬೇಕು. ಅಲ್ಲದೆ, ದಿನದಲ್ಲಿ ಒಮ್ಮೆ ಮಾತ್ರ ಸಲ್ಲಿಸಬೇಕು. ಆದರೆ, ಈ ಸೂಚನೆಗಳು ರಾಜ್ಯಪಾಲರು ಮತ್ತು ಸುಪ್ರೀಂ ಕೋರ್ಟ್ ಹಾಗೂ ಹೈಕೋರ್ಟ್ ನ್ಯಾಯಮೂರ್ತಿಗಳ ಭೇಟಿಯ ಸಂದರ್ಭಕ್ಕೆ ಅನ್ವಯಿಸುವುದಿಲ್ಲ' ಎಂಬುದು ಆದೇಶದಲ್ಲಿದೆ.

'ಪೊಲೀಸ್ ಕವಾಯತು ಕೈಪಿಡಿಯಲ್ಲಿರುವ ಗೌರವ ರಕ್ಷೆ ಸಲ್ಲಿಸುವ ಪದ್ಧತಿ ಬಹಳ ಹಳೆಯದು. ಕಾಲಕಾಲಕ್ಕೆ ನಿರ್ದಿಷ್ಟ ಸೂಚನೆ ನೀಡುತ್ತಿದ್ದರೂ, ಅದಕ್ಕೆ ವ್ಯತಿರಿಕ್ತವಾಗಿ ವಿಮಾನ ನಿಲ್ದಾಣ, ರೈಲು ನಿಲ್ದಾಣ, ಹೋಟೆಲ್‌ಗಳು, ಪ್ರವಾಸಿ ಮಂದಿರ, ಕಾರ್ಯಕ್ರಮ ನಡೆಯುವ ಸ್ಥಳ ಮತ್ತಿತರ ಸಾರ್ವಜನಿಕ ಸ್ಥಳಗಳಲ್ಲಿ ಗೌರವ ರಕ್ಷೆ ಸಲ್ಲಿಸಲಾಗುತ್ತಿದೆ. ಅಲ್ಲದೆ, ಒಂದೇ ದಿನ ಹಲವು ಸ್ಥಳಗಳಲ್ಲಿ ಗೌರವ ರಕ್ಷೆ ಸಲ್ಲಿಸಲಾಗುತ್ತಿದೆ. ಈ ಕ್ರಮದಿಂದ ಗೌರವ ರಕ್ಷೆಯ ಪಾವಿತ್ರ್ಯತೆಗೆ ಕುಂದು ಬರುವುದಲ್ಲದೆ, ಸಾರ್ವಜನಿಕರಿಗೂ ತೊಂದರೆ ಉಂಟಾಗುತ್ತಿದೆ. ಹೀಗಾಗಿ, ಈ ಆದೇಶ ಹೊರಡಿಸಲಾಗಿದೆ' ಎಂದೂ ಆದೇಶದಲ್ಲಿ ಸೂದ್ ಸ್ಪಷ್ಟಪಡಿಸಿದ್ದಾರೆ.

ದೈಹಿಕ ಶಿಕ್ಷಣ ಕಡ್ಡಾಯಗೊಳಿಸಿ: ನಾರಾಯಣ ಗೌಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರಿ ಮತ್ತು ಖಾಸಗಿ ಶಾಲಾ ಕಾಲೇಜುಗಳಲ್ಲಿ ನಿತ್ಯ ಕನಿಷ್ಠ ಒಂದು ಗಂಟೆ ಅವಧಿಯನ್ನು ವಿದ್ಯಾರ್ಥಿಗಳ ದೈಹಿಕ ಶಿಕ್ಷಣಕ್ಕೆ ಕಡ್ಡಾಯವಾಗಿ ಮೀಸಲಿಡಬೇಕು. ಖಾಲಿ ಇರುವ ದೈಹಿಕ ಶಿಕ್ಷಣ ಶಿಕ್ಷಕರ ಹುದ್ದೆ ಭರ್ತಿ ಮಾಡಬೇಕು' ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರಿಗೆ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಕೆ.ಸಿ. ನಾರಾಯಣಗೌಡ ಪತ್ರ ಬರೆದಿದ್ದಾರೆ.



ನಾರಾಯಣ ಗೌಡ

'ಕ್ರೀಡಾಂಗಣ, ಕ್ರೀಡಾ ಸೌಲಭ್ಯ ಇದ್ದ ಮಾತ್ರಕ್ಕೆ ಸಾಧನೆ ಆಗಲಾರದು. ವಿದ್ಯಾರ್ಥಿದೆಸೆಯಲ್ಲೇ ಕ್ರೀಡೆಯ ತರಬೇತಿ ನೀಡಬೇಕು. ಆಸಕ್ತಿ ಇರುವ ಸಮರ್ಥ ವಿದ್ಯಾರ್ಥಿಗಳು ಕ್ರೀಡೆಯಲ್ಲಿ ಮುಂದುವರಿಯುತ್ತಾರೆ. ಪ್ರಾಥಮಿಕ ಮತ್ತು ಪ್ರೌಢಶಾಲೆ ಹಂತದಲ್ಲೇ ವ್ಯಾಯಾಮ, ಕ್ರೀಡೆ ಬಗ್ಗೆ ಸೂಕ್ತ ತರಬೇತಿ ನೀಡುವ ಪ್ರಕ್ರಿಯೆ ಆರಂಭವಾಗಬೇಕು' ಎಂದು ಪತ್ರದಲ್ಲಿ ಅವರು ಉಲ್ಲೇಖಿಸಿದ್ದಾರೆ.

'ರಾಜ್ಯದಲ್ಲಿರುವ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ 39,308 ದೈಹಿಕ ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಇದರಿಂದ ಬೆಳೆವ ಸಿರಿ ಮೊಳಕೆಯಲ್ಲೇ ಚಿವುಟಿದಂತೆ ಆಗುತ್ತಿದೆ. ಮುಂದಿನ ಒಲಿಂಪಿಕ್ಸ್‌ಗೆ ರಾಜ್ಯದಿಂದ 100 ಕ್ರೀಡಾಪಟುಗಳನ್ನು ಕಳುಹಿಸುವ ಗುರಿ ಹೊಂದಿದ್ದೇವೆ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಕ್ರೀಡಾಪಟುಗಳನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಕಳುಹಿಸಬೇಕೆಂದರೆ ಈಗಿನಿಂದಲೇ ಸಿದ್ಧತೆ ಆಗಬೇಕು' ಎಂದೂ ಅವರು ಹೇಳಿದ್ದಾರೆ.

'ಎಲ್ಲ ಶಾಲಾ ಕಾಲೇಜುಗಳಲ್ಲಿ ನಿತ್ಯ ಒಂದು ಗಂಟೆ ಅವಧಿ ವಿದ್ಯಾರ್ಥಿಗಳ ದೈಹಿಕ ಶಿಕ್ಷಣಕ್ಕೆ ಈ ಹಿಂದೆ ಮೀಸಲಿಡಲಾಗುತ್ತಿತ್ತು. ಆದರೆ, ಇತ್ತೀಚಿನ ದಿನಗಳಲ್ಲಿ ಈ ಪದ್ಧತಿ ಕೈಬಿಟ್ಟಿರುವುದು, ಕ್ರಮೇಣವಾಗಿ ಕಡಿಮೆ ಮಾಡುತ್ತಿರುವುದು ವಿಷಾದದ ಸಂಗತಿ. ವಿದ್ಯಾರ್ಥಿಗಳ ದೈಹಿಕ ಆರೋಗ್ಯದ ಜೊತೆಗೆ ಮಾನಸಿಕ ಆರೋಗ್ಯ ಕೂಡಾ ಮುಖ್ಯ' ಎಂದಿದ್ದಾರೆ.

ಕ್ರಿಮಿನಲ್ ಪ್ರಕರಣ ರದ್ದು ಕೋರಿದ್ದ ಜೀವರಾಜ್ ಅರ್ಜಿ ವಜಾ

ಬೆಂಗಳೂರು: ತಮ್ಮ ವಿರುದ್ಧದ ಕ್ರಿಮಿನಲ್ ಪ್ರಕರಣ ರದ್ದು ಕೋರಿ ಮಾಜಿ ಸಚಿವ ಡಿ.ಎನ್. ಜೀವರಾಜ್ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಭೂ ಮಂಜೂರಾತಿ ಸಮಿತಿ ಅಧ್ಯಕ್ಷರಾಗಿದ್ದಾಗ ನಿಯಮ ಉಲ್ಲಂಘಿಸಿ ಸಂಬಂಧಿಕರಿಗೆ ಭೂ ಮಂಜೂರಾತಿ ನೀಡಿದ್ದ ಆರೋಪದಲ್ಲಿ ಅವರ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು.

ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರ ತಾಲ್ಲೂಕಿನ ವಾಸುದೇವ ಕೋಟ್ಯಾನ್ ಎಂಬುವರು ಸಲ್ಲಿಸಿದ್ದ ಖಾಸಗಿ ದೂರು ಆಧಾರಿಸಿ ಲೋಕಾಯುಕ್ತ ವಿಶೇಷ ನ್ಯಾಯಾಲಯ ತನಿಖೆಗೆ ಆದೇಶಿಸಿತ್ತು.

ಲೋಕಾಯುಕ್ತ ಪೊಲೀಸರು ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಇಡೀ ಪ್ರಕ್ರಿಯೆಯನ್ನು ಜೀವರಾಜ್ ಪ್ರಶ್ನಿಸಿದ್ದರು.

'ನಿಯಮ ಉಲ್ಲಂಘನೆ ಆಗಿದೆಯೋ ಇಲ್ಲವೋ ಎಂಬುದನ್ನು ನ್ಯಾಯಾಲಯ ವಿಚಾರಣೆ ಬಳಿಕ ತೀರ್ಮಾನಿಸಲಿದೆ' ಎಂದು ತಿಳಿಸಿದ ನ್ಯಾಯಮೂರ್ತಿ ಸುನೀಲ್ ದತ್ತ ಯಾದವ್ ಅವರಿದ್ದ ಪೀಠ ಅರ್ಜಿ ವಜಾಗೊಳಿಸಿತು.

37 ಸಾವಿರದತ್ತ ಕೋವಿಡ್ ಮರಣ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪೀಡಿತರಲ್ಲಿ 25 ಮಂದಿ ಮೃತಪಟ್ಟಿರುವುದು ಶನಿವಾರ ದೃಢಪಟ್ಟಿದೆ. ಈವರೆಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 37 ಸಾವಿರದ ಗಡಿಯತ್ತ (36,958) ಸಾಗಿದೆ.

ರಾಜ್ಯದಲ್ಲಿ ಕಳೆದ ವರ್ಷ ಮಾ.10ರಂದು ಮೊದಲ ಕೋವಿಡ್ ಮರಣ ಪ್ರಕರಣ ವರದಿಯಾಗಿತ್ತು. ವರ್ಷದ ಅಂತ್ಯಕ್ಕೆ ಮೃತರ ಸಂಖ್ಯೆ 12,090ಕ್ಕೆ ತಲುಪಿತ್ತು. ಈ ವರ್ಷ 7 ತಿಂಗಳು 14 ದಿನಗಳಲ್ಲಿ 24,864 ಮಂದಿ ಸಾವಿಗೀಡಾಗಿದ್ದಾರೆ. ಕೋವಿಡ್ ಅಧಿಕ ಮರಣ ಪ್ರಕರಣ ವರದಿಯಾದ ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕ ದ್ವಿತೀಯ ಸ್ಥಾನದಲ್ಲಿದೆ. ಮಹಾರಾಷ್ಟ್ರ ಅಗ್ರ ಸ್ಥಾನ ಹೊಂದಿದೆ. ರಾಜ್ಯದಲ್ಲಿ 1,632 ಮಂದಿ ಕೊರೊನಾ ಸೋಂಕಿತರಾಗಿರುವುದು ಶನಿವಾರ ದೃಢಪಟ್ಟಿದೆ. ಈವರೆಗೆ ವರದಿಯಾದ ಕೋವಿಡ್ ಪ್ರಕರಣಗಳ ಒಟ್ಟು ಸಂಖ್ಯೆ 29.28 ಲಕ್ಷ ದಾಟಿದೆ.

12 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 11 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬೀದರ್, ಯಾದಗಿರಿ, ಗದಗದಲ್ಲಿ ಹೊಸ ಪ್ರಕರಣ ವರದಿಯಾಗಿಲ್ಲ. ದಕ್ಷಿಣ ಕನ್ನಡದಲ್ಲಿ 7, ಕೋಲಾರ, ಹಾಸನ ಹಾಗೂ ಚಿತ್ರದುರ್ಗದಲ್ಲಿ ತಲಾ 3 ಹಾಗೂ ಮಂಡ್ಯದಲ್ಲಿ ಇಬ್ಬರು ಸಾವಿಗೀಡಾಗಿದ್ದಾರೆ. ಬೆಂಗಳೂರು ಸೇರಿದಂತೆ 7 ಜಿಲ್ಲೆಗಳಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	120.72	3,748	5,481
ಹಾರಂಗಿ	2,859	2,856.28	3,725	1,966
ಕಬಿನಿ	2284.00	2,282.63	6,566	700
ಹೇಮಾವತಿ	2,922	2,920.22	3,195	4,255
ಲಿಂಗನಮಕ್ಕಿ	1,819	1,812.10	6,319	-
ಸೂಪಾ (ಮೀ)	564	554.53	5,118	4,689
ಮಾಣಿ	594	585	1,215	-
ತುಂಗಭದ್ರಾ	1,633	1,633.29	29,174	29,174
ಮಲಪ್ರಭಾ	2079.5	2,077.20	4,582	1,594
ಘಟಪ್ರಭಾ	2175	2,174.60	7,644	3,776
ಭದ್ರಾ	186	184.9	5,239	4,336
ಆಲಮಟ್ಟಿ (ಮೀ)	519.6	519.54	20,330	2,507
ನಾರಾಯಣಪುರ (ಮೀ)	492.25	491.27	200	9,600

* ನೆಲಮಟ್ಟದಿಂದ

ನಿಧನ ವಾರ್ತೆ

ಡಾ.ಎಂ.ಎಸ್. ಅನಂತರಾಜು

ಬೆಂಗಳೂರು: ವೈದ್ಯಕೀಯ ಶಿಕ್ಷಣ ಇಲಾಖೆಯ ನಿವೃತ್ತ ನಿರ್ದೇಶಕ ಡಾ.ಎಂ.ಎಸ್. ಅನಂತರಾಜು (87) ಅವರು ಶುಕ್ರವಾರ ರಾತ್ರಿ ಹೃದಯಾಘಾತದಿಂದ ಇಲ್ಲಿ ನಿಧನರಾಗಿದ್ದಾರೆ.

ಅವರಿಗೆ ಪತ್ನಿ ಮತ್ತು ನಾಲ್ವರು ಪುತ್ರಿಯರು ಇದ್ದಾರೆ. ನಿವೃತ್ತಿ ನಂತರ ಅವರು ಮೈಸೂರಿನ ಜೆ.ಎಸ್.ಎಸ್. ಮಹಾ ವಿದ್ಯಾಪೀಠದ ನಿರ್ದೇಶಕರಾಗಿ ಮತ್ತು ಶ್ರವಣಬೆಳಗೊಳದ ಬಾಹುಬಲಿ ಮಕ್ಕಳ ಆಸ್ಪತ್ರೆಯ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದರು. ಕರ್ನಾಟಕ ಕ್ಯಾನ್ಸರ್ ಸೊಸೈಟಿ ಮತ್ತು ಕರ್ನಾಟಕ ಜೈನ ಅಸೋಸಿಯೇಷನ್‌ನ ಅಧ್ಯಕ್ಷರಾಗಿಯೂ ಅವರು ಕೆಲಸ ಮಾಡಿದ್ದರು. ಶನಿವಾರ ಮಧ್ಯಾಹ್ನ ಅವರ ಅಂತ್ಯ ಸಂಸ್ಕಾರ ನೆರವೇರಿತು.

ಶಿವಮೊಗ್ಗ: ವಡ್ಡಿನಬೈಲು ಮಾರ್ಗದ ಧರೆ ಕುಸಿತ

ಶಿವಮೊಗ್ಗ: ತೀರ್ಥಹಳ್ಳಿ ತಾಲ್ಲೂಕಿನ ಹೊದಲ ಅರಳಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನೆಲ್ಲಿಸರ ತಿರುವಿನ ವಡ್ಡಿನಬೈಲು ಬಳಿ ಧರೆ ಕುಸಿದಿದೆ. ರಸ್ತೆ ಸಂಪರ್ಕ ಕಡಿತವಾಗುವ ಭೀತಿ ಎದುರಾಗಿದೆ.

ಜುಲೈ 23, 24ರಂದು ಸುರಿದ ಭಾರಿ ಮಳೆಗೆ ಧರೆ ಕುಸಿದಿತ್ತು. ಈಗ ಪ್ರತಿದಿನ ಸ್ವಲ್ಪ ಸ್ವಲ್ಪವೇ ಕುಸಿಯುತ್ತಿದ್ದು, ಒಂದೆರಡು ಅಡಿ ಕುಸಿದರೆ ತೀರ್ಥಹಳ್ಳಿ–ಕೋಣಂದೂರು ಸಂಪರ್ಕದ ಮಾರ್ಗದಲ್ಲಿನ ಕೊಪ್ಪಲು, ಹೊದಲ ಅರಳಾಪುರ, ವಡ್ಡಿನಬೈಲು, ತುಪ್ಪದ ಮನೆ ಮತ್ತಿತರ ಗ್ರಾಮಗಳಿಗೆ ಸಂಪರ್ಕ ಕಡಿತಗೊಳ್ಳಲಿದೆ. ಕುಸಿತದ ಅಪಾಯದ ಮಧ್ಯೆಯೂ ಭಾರ ತುಂಬಿದ ವಾಹನಗಳು ಸಂಚರಿಸುತ್ತಿವೆ.

ತೀರ್ಥಹಳ್ಳಿ ತಾಲ್ಲೂಕಿನ ಹೊದಲ–ಅರಳಾಪುರ–ನೆಲ್ಲಿಸರ ತಿರುವಿನ ಬಳಿ ವಡ್ಡಿನಬೈಲು ಧರೆ ಕುಸಿದಿದೆ

ತುಂತುರು ಮಳೆ: ಶಿವಮೊಗ್ಗ ಜಿಲ್ಲೆಯಲ್ಲಿ ಶನಿವಾರ ಕೆಲವೆಡೆ ತುಂತುರು ಮಳೆಯಾಗಿದೆ. ಹೊಸನಗರದಲ್ಲಿ 18.4 ಮಿ.ಮೀ., ಭದ್ರಾವತಿಯಲ್ಲಿ 1.2 ಮಿ.ಮೀ. ಮಳೆಯಾಗಿದ್ದು, ಉಳಿದೆಡೆ ಬಿಡುವು ನೀಡಿತ್ತು.

ಬಿರುಸಿನ ಮಳೆ: ಕೊಡಗು ಜಿಲ್ಲೆಯ ಮಡಿಕೇರಿ, ನಾಪೋಕ್ಲು, ಭಾಗಮಂಡಲ, ತಲಕಾವೇರಿ ಭಾಗದಲ್ಲಿ ಶನಿವಾರ ಬಿರುಸಿನ ಮಳೆಯಾಗಿದೆ. ಶುಕ್ರವಾರ ರಾತ್ರಿಯೂ ಧಾರಾಕಾರ ಮಳೆ ಸುರಿದಿತ್ತು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ವೈಕುಂಠ ಸಮಾರಾಧನೆ

ಶ್ರೀ ಟಿ.ಆರ್ ದೇವರಾಜ್
ದಿ: 1.08.2021ನೇ ಭಾನುವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಇವರ ತತ್ಸಂಬಂಧವಾದ ಪುಣ್ಯಾಹ ಮತ್ತು ವೈಕುಂಠ ಸಮಾರಾಧನೆಯನ್ನು ದಿನಾಂಕ : 15.08.2021ನೇ ಭಾನುವಾರ ಬೆಳಿಗ್ಗೆ 9.30 ಗಂಟೆಗೆ
ವಿಳಾಸ: ತಪಸ್ವಿ ಭವನ, ನಂ.01, 30ನೇ ಮುಖ್ಯ ರಸ್ತೆ, ಕಾವೇರಿ ನಗರ, ಭನಗಿರಿ ನಗರ, ಶ್ರೀ ಹರಿ ಕಲ್ಯಾಣ ಮಂಟಪ ಹತ್ತಿರ, ಬನಶಂಕರಿ 3ನೇ ಹಂತ, ಬೆಂಗಳೂರು -560085 ಇಲ್ಲಿ ಏರ್ಪಡಿಸಲಾಗಿದೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ
ಇಂತಿ ದುಃಖತಪ್ತರು
ಟಿ.ಆರ್ ಭಾಸ್ಕರ್ ಕುಟುಂಬದವರು ಹಾಗೂ ಸ್ನೇಹಿತರು

For Online Classified Booking
Name Change / Education / Property / Job / Services & many more
Log on to :
dhclassifieds.com

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಬಿಲ್ಡರ್ ಎಸೆನ್ಷಿಯಲ್
Water Proofing Materials
ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ಉದ್ಯೋಗಾವಕಾಶ
General
WANTED RESPECTABLE Hindu Female cook for family of 5 Good salary accommodation and food Police Verification will be done Contact 9741900909
ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧ ಕಂಪನಿ ಹಾಗೂ ಆಫೀಸ್ ಕೆಲಸಗಳಿಗೆ ಯುವಕಯುವತಿಯರು ಬೇಕಾಗಿದ್ದಾರೆ ವಸತಿಯೂಟದೊಂದಿಗೆ Salary+OT 16,800-45000/-. 9980295449, 9902839010
WANTED MARRIED hindu couple husband as driver not more than 40 years and wife as Cook for a family of 5 at Bangalore Good salary Accommodation and food Police verification will be made Call 9741900909

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600- 60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ: 7760014526, 9739544856
ತಕ್ಷಣ ಬೇಕಾಗಿದ್ದಾರೆ ಕರ್ನಾಟಕದ ಎಲ್ಲಾಜಿಲ್ಲೆಗಳಲ್ಲಿನ ಕಂಪನಿಗಳಿಗೆ ಹಾಗೂ ಆಫೀಸ್‌ಗಳಿಗೆ ಯುವಕಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ 7th,SSLC,PUC,ITI Degree Pass/Fail ಆದವರಿಗೆ, (ವಿದ್ಯಾರ್ಹತೆಯಿಲ್ಲದವರಿಗೂ) ಉಚಿತ ವಸತಿಯೂಟದೊಂದಿಗೆ ESI/PFನೊಂದಿಗೆ ಸಂಬಳ:16,500/-ರಿಂದ 45000/- ದವರೆಗೆ.9538250222, 9538191333
Marketing & Sales
WANTED EXPERIENCED Sales Managers for Cement, Contact: 9916449766/ 9986696546, acecemex@gmail.com

Cook
ಚನ್ನೈನಲ್ಲಿ ಅಡುಗೆ ಮತ್ತು ಮನೆ ಕೆಲಸ ಮಾಡಲು ಮಹಿಳೆ ಬೇಕಾಗಿದ್ದಾರೆ. ವಸತಿ ಸೌಲಭ್ಯವಿದೆ . ಸಂಪರ್ಕಿಸಿ : 9962480357 .
Teachers/ Professors
REQUIRED
KAIRALEE NIKETHAN EDUCATION TRUST (Established by Kerala Samajam (R) Bangalore)
Indiranagar Composite P.U .College (Aided by the Govt of Karnataka) Indiranagar, Blore - 38 (Teacher for Govt. Aided Post)
Post: Physical Education Teacher Qlfn : M.P.Ed (55% and above in PG are eligible)
Apply within 21 days from the date of publication with Resume , Passport size Photo, Id proof, Qualification certificate & Caste certificate
To,The Secretary, Kairalee Nikethan Education Trust, 5th Main, 9th Cross, Indiranagar 1st Stage, Bangalore -560 038. Ph: 25256754 /25250817 25217798, Mob: 9535800165
Wanted
ಶ್ರೀ ಶಕ್ತಿ ಹೆಲ್ತ್ ಕೇರ್ ನಲ್ಲಿ ಕರ್ನಾಟಕದಾದ್ಯಂತ ಪ್ರಾರಂಭಗೊಳ್ಳುತ್ತಿರುವ ನಮ್ಮ 20ಬ್ರಾಂಚ್‌ಗಳಿಗೆ ಬ್ಯುಸಿನೆಸ್ ಪಾರ್ಟನರ್ ಗಳು ಮತ್ತು ಹೆಲ್ಪರ್ ಯುವಕ ಯವತಿಯರಿಗೆ ಕೆಲಸ ಖಾಲಿ ಇದೆ.ತಿಂಗಳಿಗೆ ವೇತನ: 25,000 ದಿಂದ 30,000 ರ ವರೆಗೆ ಶೇಷಾದ್ರಿಪುರಂ, ಬೆಂಗಳೂರು.ಮೊಬೈಲ್ ನಂ: 9019626612
ನೇರನೇಮಕಾತಿ ಎಲ್ಲಾಜಿಲ್ಲೆಗಳಲ್ಲಿ ಪ್ರಾರಂಭವಾಗಿರುವ ಕಂಪನಿಗಳಿಗೆ, ಆಫೀಸ್‌ಗಳಿಗೆ 7th,ಎಸ್‌ಎಸ್‌ಎಲ್‌ಸಿ, ಪಿಯುಸಿ, ಡಿಗ್ರಿ B.Com (ವಿದ್ಯಾರ್ಹತೆಯಿಲದಲ್ಲದವರಿಗೂ) ವಸತಿಯೂಟದೊಂದಿಗೆ 16,700/-56,000/- 8884412622, 9986083666

ವ್ಯಾಪಾರ
Business to Business
Finance
ಸಾಲ ಸೌಲಭ್ಯ. ಕೃಷಿ ಸಾಲ ವ್ಯವಹಾರ ಸಾಲ ವೈಯಕ್ತಿಕ ಸಾಲ ಸ್ಥಿರಾಸ್ತಿ ಸಾಲ ವಿದ್ಯಾ ಸಾಲ ಮಾರ್ಟ್ ಗೇಜ್ ಸಾಲ ವಾರ್ಷಿಕ ಬಡ್ಡಿ ದರ 4% ಸಬ್ಸಿಡಿ 10 ರಿಂದ 30%. ಸಂಪರ್ಕಿಸಿರಿ 8421876983/ 7219699215
ಸಾಲಗಳು ನಾವು ಎಲ್ಲಾ ರೀತಿಯ ಸಾಲಗಳನ್ನು ನೀಡುತ್ತೇವೆ. ವೈಯಕ್ತಿಕ, ವ್ಯವಹಾರ, ಆಸ್ತಿ, ವಸತಿ, ಕೃಷಿ, ಸ್ವಾಧೀನ ಮತ್ತು ಆಸ್ತಿಗಾಗಿ ಸಾಲ ನೀಡಲಾಗುತ್ತದೆ. ಮೊಬೈಲ್: 7837015557
Business Offers
Finance
★ಸಾಲ ಸೌಲಭ್ಯ★ ವ್ಯಾಪಾರಸಾಲ, ಆಸ್ತಿಸಾಲ, ಅಡಮಾನಸಾಲ, ಶಿಕ್ಷಣಸಾಲ, ಶೇ.6%ರ ಬಡ್ಡಿದರದಲ್ಲಿ, 40%ಸಬ್ಸಿಡಿ, ಎಲ್ಲಾರೀತಿಯ ಸಾಲ ದೊರೆಯುತ್ತದೆ.ಸಂಪರ್ಕಿಸಿ: 08222841175, 08278291749.ಏಜೆಂಟರು ಸಂಪರ್ಕಿಸಬಹುದು.

ಭವಿಷ್ಯ
Astrology
ಕೊಲ್ಲೂರು ಮೂಕಾಂಬಿಕಾ ಜ್ಯೋತಿಷ್ಯರು, ಸ್ತ್ರೀಪುರುಷ ವಶೀಕರಣ, ಪ್ರೀತಿಯಲ್ಲಿ ನಂಬಿ ಮೋಸ, ಗಂಡಹೆಂಡತಿ ಕಲಹ ಇನ್ನೂ ನಿಮ್ಮ ಯಾವುದೇ ಸಮಸ್ಯೆಗಳಿಗೆ 100% ಶಾಶ್ವತ ಪರಿಹಾರ ಕೆಲಸ ಹಾಗದಿದ್ದಲ್ಲಿ ಹಣ ವಾಪಸ್, ರಾಮಕೃಷ್ಣ ಶರ್ಮಾ. 9880950461
★ಅಂಭಾಭವಾನಿ★ ಜ್ಯೋತಿಷ್ಯಾಲಯ ಕೊಳ್ಳೆಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೇಯಿರಲಿ 2 ದಿನದಲ್ಲಿ ಪರಿಹಾರ.9886755306
ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.
★ಉಚಿತ ಭವಿಷ್ಯ★ಖಚಿತ ಪರಿಹಾರ:ನಿಮ್ಮ ಸಮಸ್ಯೆಗಳು ಯಾವುದೇ ಇರಲಿ ಸ್ತ್ರೀವಶೀಕರಣ, ಪುರುಷವಶೀಕರಣ ಲೈಂಗಿಕ ಸಮಸ್ಯೆ,ನಿಮ್ಮ ಯಾವುದೇ ಸಮಸ್ಯೆಗಳಿದ್ದರು 100% ಶಾಶ್ವತ ಪರಿಹಾರ.ಮಂತ್ರಾಲಯ. ಪಂಡಿತ್.ಸಾಗರ್ ಶರ್ಮ.8217374106
ಶಕ್ತಿಶಾಲಿ ಮಹಾಲಕ್ಷ್ಮಿ ಯಂತ್ರ ವ್ಯಾಪಾರ ಅಭಿವೃದ್ಧಿ, ಹಣಕಾಸಿನ ಸಮಸ್ಯೆಯಿಂದ ಆರ್ಥಿಕ ಅಭಿವೃದ್ಧಿ ಹೊಂದಲು ಲಕ್ಷ್ಮಿಯಂತ್ರ ಉಚಿತವಾಗಿ ಕೊಡಲಾಗುತ್ತದೆ ಹಾಗೂ ಎಲ್ಲಾ ಕಠಿಣ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ: 9606701007, 8892501007

ವೈವಾಹಿಕ
Brides Wanted
Hindu
ವಧು ಬೇಕಾಗಿದ್ದಾರೆ
SC (Right) 34 ವರ್ಷದ MCA ಪದವೀದರ MNC ಕಂಪನಿಯಲ್ಲಿ ಉದ್ಯೋಗ ಬೆಂಗಳೂರಿನಲ್ಲಿ ವಾಸ, ಪದವೀದರೆಗೆ ಆದ್ಯತೆ. ವಾಟ್ಸಪ್ ಫೋಟೊ ಕಳುಹಿಸಿ
Ph: 6362668443
CHANDAN BONDADE Date of Birth 11- 06-1992 Education MBA (Hindu) Phone : 8050991374 Health Issue - Colostomy, Cox Town, Bengaluru-5.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
ಮಾನ್ಯ ಓದುಗರು ಮತ್ತು ಜಾಹೀರಾತುದಾರರಿಗೆ
75ನೇ ಸ್ವಾತಂತ್ರ್ಯೋತ್ಸವದ ಶುಭಾಶಯಗಳು
ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿರಿ:
Mob: 9845114560, 9731821077, 9886213331, 9606912256

ಸಾಕ್ಷ್ಯ ನಾಶ: ಪೊಲೀಸರ ಚಾಣಾಕ್ಷ್ಯತೆಯಿಂದ ಕೆಲ ಪ್ರಕರಣಗಳಷ್ಟೇ ಬಯಲು • ಅಪರಿಚಿತ ಮೃತದೇಹಗಳೇ ಹೆಚ್ಚು

123 ಕಡೆ ಹಳಿಗಳಿಗೆ ಬೇಕಿದೆ ಕಾವಲು

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು ಗ್ರಾಮಾಂತರ ರೈಲ್ವೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಮೃತದೇಹ ಸಿಕ್ಕ ಹಳಿ ಜಾಗದಲ್ಲಿ ಪೊಲೀಸರು ಇತ್ತೀಚೆಗೆ ಪರಿಶೀಲನೆ ನಡೆಸಿದರು

ಬೆಂಗಳೂರು: ಕೊಲೆಯಂಥ ಅಪರಾಧ ಕೃತ್ಯ ಎಸಗಿ ಪೊಲೀಸರಿಂದ ತಪ್ಪಿಸಿಕೊಳ್ಳಲು ಕೆಲ ಆರೋಪಿಗಳು, ಮೃತದೇಹಗಳ ಸಾಕ್ಷ್ಯ ನಾಶಕ್ಕಾಗಿ ರೈಲು ಹಳಿಗಳನ್ನು ಬಳಸಿಕೊಳ್ಳುತ್ತಿದ್ದಾರೆ. ಇಂಥ ರೈಲು ಹಳಿಗಳು ಹಾದು ಹೋಗಿರುವ 123 ಸ್ಥಳಗಳನ್ನು ಗುರುತಿಸಿರುವ ಪೊಲೀಸರು, ಅಲ್ಲಲ್ಲ ಕ್ಯಾಮೆರಾ ಅಳವಡಿಸುವಂತೆ ಕೋರಿ ರೈಲ್ವೆ ಇಲಾಖೆಗೆ ಪತ್ರ ಬರೆದಿದ್ದಾರೆ.

ಬೆಂಗಳೂರು ಹಾಗೂ ಹೊರ ಜಿಲ್ಲೆಗಳಲ್ಲಿ ಕೆಲ ಆರೋಪಿಗಳು, ಮೃತದೇಹಗಳನ್ನು ಹಳಿ ಮೇಲೆ ಮಲಗಿಸಿ 'ಆತ್ಮಹತ್ಯೆ' ಕಥೆ ಸೃಷ್ಟಿಸುತ್ತಿದ್ದಾರೆ. ಪೊಲೀಸರ ಚಾಣಾಕ್ಷ್ಯತೆಯಿಂದ ಕೆಲ ಪ್ರಕರಣಗಳಷ್ಟೇ ಬಯಲಾಗುತ್ತಿದ್ದು, ಉಳಿದವು ಅಪರಿಚಿತ ಮೃತದೇಹ ಪ್ರಕರಣಗಳಾಗಿ ಅಂತ್ಯವಾಗುತ್ತಿವೆ. ರೈಲು ಹರಿದು ಛಿದ್ರಗೊಂಡ ಸ್ಥಿತಿಯಲ್ಲಿ ಪತ್ತೆಯಾಗುವ ಮೃತದೇಹಗಳ ತನಿಖೆ ರೈಲ್ವೆ ಪೊಲೀಸರಿಗೆ ಸವಾಲಾಗಿ ಪರಿಣಮಿಸುತ್ತಿದೆ.

ಕೆಲವರು ರೈಲಿಗೆ ತಲೆಕೊಟ್ಟು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಇನ್ನು ಕೆಲವರು, ಕೊಲೆ ಮಾಡಿದ ಮೃತದೇಹಗಳನ್ನು ಸಾಕ್ಷ್ಯ ನಾಶ ಮಾಡುವ ಉದ್ದೇಶದಿಂದ ಹಳಿ ಮೇಲೆ ಹಾಕುತ್ತಿರುವ ಪ್ರಕರಣಗಳೂ ಇವೆ. ಇಂಥ ಮೃತದೇಹಗಳ ಮೇಲೆ ರೈಲು ಹರಿದು ಹೋಗುತ್ತಿದ್ದು, ಇದು ಆತ್ಮಹತ್ಯೆಯೋ ಅಥವಾ ಕೊಲೆಯೋ ಎಂಬುದನ್ನು ಪತ್ತೆ ಮಾಡಲು ಪೊಲೀಸರು ಹರಸಾಹಸಪಡುತ್ತಿದ್ದಾರೆ.

'ರೈಲು ಹಳಿ ಮೇಲೆ ಸಿಕ್ಕ ಮೃತದೇಹಗಳು ಛಿದ್ರವಾಗಿರುತ್ತವೆ. ಬಹುತೇಕ ಮೃತದೇಹಗಳ ಗುರುತು ಸಿಗುವುದಿಲ್ಲ. ರಾಜ್ಯದ ಠಾಣೆಗಳಲ್ಲಿ ದಾಖಲಾದ ವ್ಯಕ್ತಿ ನಾಪತ್ತೆ ಪ್ರಕರಣಗಳಿಗೆ ಹೋಲಿಕೆ ಮಾಡಿದಾಗಲೂ ಸುಳಿವು ಲಭ್ಯವಾಗುವುದಿಲ್ಲ. ಇಂಥ ಸಂದರ್ಭದಲ್ಲಿ ಅಪರಿಚಿತ ಮೃತದೇಹವೆಂದು ಘೋಷಿಸಲಾಗುತ್ತದೆ. ಪ್ರತಿ ವರ್ಷ ದಾಖಲಾಗುವ ಪ್ರಕರಣಗಳ ಪೈಕಿ ಶೇ 60ರಷ್ಟು ಪ್ರಕರಣಗಳಲ್ಲಿ ಮೃತದೇಹಗಳ ಪತ್ತೆಯೇ ಆಗುವುದಿಲ್ಲ' ಎಂದು ರೈಲ್ವೆ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಪ್ರಜಾವಾಣಿ ವಿಶೇಷ

'ಕೆಲ ಪ್ರಕರಣಗಳಲ್ಲಿ ಮೃತದೇಹದ ಮೇಲಿನ ಮಚ್ಚೆ ಹಾಗೂ ಇತರೆ ಯಾವುದಾದರೂ ಗುರುತಿನಿಂದ ವ್ಯಕ್ತಿಯನ್ನು ಪತ್ತೆ ಮಾಡಲಾಗುತ್ತದೆ. ಅಂಥವರ ಕೊಲೆ ಪ್ರಕರಣ ಭೇದಿಸಿ ಆರೋಪಿಗಳನ್ನು ಬಂಧಿಸಲಾಗಿದೆ. ಆದರೆ, ಗುರುತು ಸಿಗದ ಪ್ರಕರಣಗಳು ನಮ್ಮ ನಿದ್ದೆಗೆಡಿಸುತ್ತವೆ' ಎಂದೂ ತಿಳಿಸಿದರು.

ನಿಗಾ ವಹಿಸಲು ಸಿಬ್ಬಂದಿ ಕೊರತೆ; 'ರಾಜ್ಯದ 123 ಹಳಿ ಸ್ಥಳಗಳಲ್ಲಿ ನಿಗಾ ವಹಿಸಲು ಸಿಬ್ಬಂದಿ ಕೊರತೆ ಇದೆ. ಹೀಗಾಗಿ, ಅಲ್ಲಲ್ಲ ಕ್ಯಾಮೆರಾ ಅಳವಡಿಸಲು ರೈಲ್ವೆ ಇಲಾಖೆಯನ್ನ ಕೋರಲಾಗಿದೆ. ಹಳಿಗಳು ರೈಲ್ವೆ ಇಲಾಖೆ ಆಸ್ತಿಯಾಗಿದ್ದು, ಕ್ಯಾಮೆರಾ ಅಳವಡಿಕೆ ಬಗ್ಗೆ ಅವರೇ ಕ್ರಮ ಕೈಗೊಳ್ಳಬೇಕು' ಎಂದು ರೈಲ್ವೆ ಪೊಲೀಸ್ ಎಸ್ಪಿ ಸಿರಿ ಗೌರಿ ಹೇಳಿದರು.

'ನಿರ್ಜನ ಸ್ಥಳದಲ್ಲಿರುವ ರೈಲು ಹಳಿ ಬಳಿ ಹೆಚ್ಚು ಮಂದಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಅಪರಾಧ ಕೃತ್ಯ ಎಸಗಿದವರು ಮೃತದೇಹ ತಂದು ಎಸೆದು ಸಾಕ್ಷ್ಯ ನಾಶಕ್ಕೂ ಪ್ರಯತ್ನಿಸುತ್ತಿದ್ದಾರೆ. ನಮ್ಮ ಪೊಲೀಸರು, ಚುರುಕಿನ ತನಿಖೆ ಕೈಗೊಂಡು ಸಾಧ್ಯವಾದಷ್ಟು ಪ್ರಕರಣಗಳನ್ನು ಭೇದಿಸುತ್ತಿದ್ದಾರೆ' ಎಂದೂ ಅವರು ತಿಳಿಸಿದರು.

'ಒಂದೇ ಸುಳಿವು ಸಿಕ್ಕರೂ ರಹಸ್ಯ ಬಯಲು'

'ಬೆಂಗಳೂರು ಗ್ರಾಮಾಂತರ ರೈಲ್ವೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿರುವ ರೈಲು ಹಳಿ ಮೇಲೆ ಇತ್ತೀಚೆಗೆ 70 ವರ್ಷದ ವೃದ್ಧೆ ನಿಂಗಮ್ಮ ಮೃತದೇಹ ಸಿಕ್ಕಿತ್ತು. ಕೈ, ಕಾಲು, ಮುಂಡ ಮಾತ್ರ ಇತ್ತು. ಇಳಕಲ್‌ನಲ್ಲಿ ಸರಕು ಸಾಗಣೆ ವಾಹನದಲ್ಲಿ ರುಂಡ ಸಿಕ್ಕಿತ್ತು. ಕೈ ಮೇಲಿನ ಮಚ್ಚೆ ಆಧರಿಸಿ ತನಿಖೆ ಕೈಗೊಂಡಾಗ ವೃದ್ಧೆಯ ಸೊಸೆ ಹಾಗೂ ಆಕೆಯ ಸ್ನೇಹಿತನೇ ಕೊಲೆಗಾರರು ಎಂಬುದು ಪತ್ತೆಯಾಯಿತು' ಎಂದೂ ಅಧಿಕಾರಿ ಹೇಳಿದರು.

'ಕೆಲ ಪ್ರಕರಣಗಳಲ್ಲಿ ಒಂದೇ ಸುಳಿವು ಸಿಕ್ಕರೂ ಕೊಲೆ ರಹಸ್ಯ ಬಯಲಾಗುತ್ತದೆ. ಆದರೆ, ಬಹುತೇಕ ಪ್ರಕರಣಗಳಲ್ಲಿ ಸುಳಿವು ಸಹ ಇರುವುದಿಲ್ಲ. ಇಂಥ ಪ್ರಕರಣ ತನಿಖೆಯೇ ನಮಗೆ ದೊಡ್ಡ ಸವಾಲು' ಎಂದೂ ತಿಳಿಸಿದರು.

ರೈಲು ಹಳಿ ಮೇಲೆ ಮೃತಪಟ್ಟವರ ಅಂಕಿ–ಅಂಶ

ವರ್ಷ	ಮೃತರ ಒಟ್ಟು ಸಂಖ್ಯೆ	ಪುರುಷರು	ಮಹಿಳೆಯರು
2019	1,657	1,378	279
2020	863	765	98
2021 (ಮೇ 31)	472	408	64

ರೈಲ್ವೆ ಪೊಲೀಸ್ ವಿಭಾಗದಲ್ಲಿ ದಾಖಲಾದ ಅಪರಾಧಗಳ ಸಂಖ್ಯೆ



ಟೋಯಿಂಗ್– ಅನುಚಿತವಾಗಿ ವರ್ತಿಸಿದರೆ ಕ್ರಮ: ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಕಮಲ್ ಪಂತ್

ಕೆ.ಆರ್.ಪುರ: ನಗರದಲ್ಲಿ ಟೋಯಿಂಗ್ ನಡೆಸುವವರು ಸಾರ್ವಜನಿಕರ ಬಳಿ ಸಭ್ಯತೆಯಿಂದ ನಡೆದುಕೊಳ್ಳಬೇಕು. ಅಸಭ್ಯ ವರ್ತನೆ ಕಂಡುಬಂದಲ್ಲಿ ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ತಿಳಿಸಿದರು.

ರಾಮಮೂರ್ತಿನಗರದಲ್ಲಿ ಕೆ.ಆರ್.ಪುರ ಸಂಚಾರ ಠಾಣೆ ವತಿಯಿಂದ ಬೆಂಗಳೂರು ನಗರ ಸಂಚಾರ ಪೊಲೀಸ್ ಪೂರ್ವ ವಿಭಾಗದ ಸಹಯೋಗದಲ್ಲಿ ಏರ್ಪಡಿಸಿದ್ದ ಸಂಚಾರ ಸಂಪರ್ಕ ದಿನ ಹಾಗೂ ಸಂಚಾರ ಸಮಸ್ಯೆಗಳು ನಿಮ್ಮ ಅಹವಾಲು ಮತ್ತು ಪರಿಹಾರ ಕುರಿತು ಚರ್ಚೆಯಲ್ಲಿ ಮಾತನಾಡಿದರು.

ಟೋಯಿಂಗ್ ಗುತ್ತಿಗೆದಾರರು ಸಾರ್ವಜನಿಕರ ಜೊತೆ ಅಮಾನವೀಯವಾಗಿ ನಡೆದುಕೊಳ್ಳುತ್ತಿರುವ ಬಗ್ಗೆ ದೂರುಗಳು ಬರುತ್ತಿದ್ದು, ಟೋಯಿಂಗ್ ವಾಹನಗಳ ಹಿಂಭಾಗದಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಹೊಸದಾಗಿ ಅಳವಡಿಸಲಾಗುತ್ತದೆ. ಯಾರೂ ಕಾನೂನು ಬಾಹಿರ ಕೃತ್ಯಗಳಲ್ಲಿ ಭಾಗಿಯಾದರೆ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಕ್ಕೆ ಅಧಿಕಾರಿಗಳಿಗೆ ಅವರು ಸೂಚಿಸಿದರು.

ಕೆ.ಆರ್.ಪುರ ಜಂಕ್ಷನ್‌ನಲ್ಲಿ ಅತಿಯಾದ ಸಂಚಾರ ದಟ್ಟಣೆ ಉಲ್ಬಣಗೊಳ್ಳುತ್ತಿದೆ. ಇಲ್ಲಿನ ಬಾರ್ ಆ್ಯಂಡ್ ರೆಸ್ಟೋರೆಂಟ್‌ನವರು ವಾಹನಗಳನ್ನು ರಸ್ತೆಯಲ್ಲೇ ಪಾರ್ಕಿಂಗ್ ಮಾಡಿ ಸಂಚಾರ ದಟ್ಟಣೆ ಕಾರಣವಾಗುತ್ತಿದ್ದಾರೆ. ಫುಟ್‌ಪಾತ್‌ನಲ್ಲಿ ತರಕಾರಿ ಅಂಗಡಿಗಳು ತಲೆ ಎತ್ತಿವೆ. ಬಸ್ ಆಟೋಗಳನ್ನು ರಸ್ತೆಯಲ್ಲೇ ನಿಲ್ಲಿಸುವುದರಿಂದ ವಾಹನ ಸವಾರರಿಗೆ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಬಗ್ಗೆ ದೂರುಗಳಿವೆ. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದರು.

ಪೊಲೀಸ್ ಜಂಟಿ ಕಮಿಷನರ್ (ಸಂಚಾರ) ಬಿ.ಆರ್. ರವಿಕಾಂತೇಗೌಡ, ಸಂಚಾರ ಪೂರ್ವ ವಿಭಾಗದ ಎಸಿಪಿ ಕೆ.ಎಂ. ಶಾಂತರಾಜು, ಕೆ.ಆರ್.ಪುರ ಸಂಚಾರಿ ಠಾಣಾಧಿಕಾರಿ ಎಂ.ಎ. ಮೊಹಮ್ಮದ್, ರಾಮಮೂರ್ತಿ ನಗರ ಠಾಣಾಧಿಕಾರಿ ಮೆಲ್ವಿನ್ ಇದ್ದರು.

'ಶಾಸಕರಿಗೇ ರಕ್ಷಣೆ ಇಲ್ಲದಿದ್ದರೆ, ಜನಸಾಮಾನ್ಯರ ಗತಿ ಏನು?'

ಬೆಂಗಳೂರು: 'ರಾಜ್ಯದಲ್ಲಿ ಅಪರಾಧ ಪ್ರಕರಣಗಳು ಹೆಚ್ಚುತ್ತಲೇ ಇವೆ. ಈಗಿನ ಸರ್ಕಾರದಲ್ಲಿ ಆ ಪಕ್ಷದ ಶಾಸಕರಿಗೇ ರಕ್ಷಣೆ ಇಲ್ಲ. ಇಂತಹ ಸರ್ಕಾರ ಜನಸಾಮಾನ್ಯರನ್ನು ರಕ್ಷಿಸಲು ಸಾಧ್ಯವೇ' ಎಂದು ಆಮ್ ಆದ್ಮಿ ಪಕ್ಷದ ಕಾನೂನು ಘಟಕದ ಅಧ್ಯಕ್ಷ ನಂಜಪ್ಪ ಕಾಳೇಗೌಡ ಪ್ರಶ್ನಿಸಿದರು.

ಪಕ್ಷದ ಮಾಧ್ಯಮ ಕಚೇರಿಯಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು 'ಗೃಹ ಸಚಿವರಾಗಿ ವೈಫಲ್ಯ ಕಂಡಿದ್ದ ಬಸವರಾಜ ಬೊಮ್ಮಾಯಿ ಅವರಿಗೆ ಮುಖ್ಯಮಂತ್ರಿ ಪಟ್ಟ ಕಟ್ಟಲಾಗಿದೆ. ಈ ಹುದ್ದೆಗೆ ಅವರು ನ್ಯಾಯ ಒದಗಿಸಬಲ್ಲರೇ. ರಾಜ್ಯದಲ್ಲಿ ಕೊಲೆ, ಸುಲಿಗೆ, ದರೋಡೆ ಪ್ರಕರಣಗಳು ಏರುತ್ತಲೇ ಇವೆ. ಮಕ್ಕಳು, ಮಹಿಳೆಯರು ನಿರ್ಭೀತಿಯಿಂದ ಓಡಾಡುವುದೂ ಕಷ್ಟವಾಗಿದೆ' ಎಂದು ದೂರಿದರು.

'ತಾವು ಗೃಹಸಚಿವರಾಗಿದ್ದ ಅವಧಿಯಲ್ಲಿ ಅಪರಾಧ ಪ್ರಕರಣಗಳು ಶೇ 20ರಷ್ಟು ಹೆಚ್ಚಿದೆ ಎಂದು ಬಸವರಾಜ್ ಬೊಮ್ಮಾಯಿ ಅವರೇ ಒಪ್ಪಿಕೊಂಡಿದ್ದರು. ಹೀಗಿದ್ದರೂ ಅವುಗಳಿಗೆ ಕಡಿವಾಣ ಹಾಕಲು ಸರ್ಕಾರ ಯಾವುದೇ ಕ್ರಮ ಕೈಗೊಂಡಿರಲಿಲ್ಲ. ತನಿಖೆ ನಡೆಸಬೇಕು ಎಂಬ ಕಾರಣಕ್ಕೆ ಕೆಲ ಠಾಣೆಗಳಲ್ಲಿ ಪೊಲೀಸರು ಎಫ್‌ಐಆರ್ ದಾಖಲಿಸುವುದನ್ನೇ ನಿಲ್ಲಿಸಿಬಿಟ್ಟಿದ್ದಾರೆ' ಎಂದರು.

'ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ಶಾಸಕರ ಮನೆಗಳ ಮೇಲೆ ದಾಳಿ ನಡೆದಿದೆ. ಪೊಲೀಸ್ ಅಧಿಕಾರಿಗಳ ಮೇಲೂ ಹಲ್ಲೆ ನಡೆಸಲಾಗಿದೆ. ಪಾಲಿಕೆಯ ಸದಸ್ಯೆಯಾಗಿದ್ದ ರೇಖಾ ಕದಿರೇಶ್ ಹತ್ಯೆಯಾಗಿದೆ. ರಸ್ತೆಗಳಲ್ಲಿ ವಾಹನ ಸವಾರರನ್ನು ನಿಲ್ಲಿಸಿ ದಂಡದ ರೂಪದಲ್ಲಿ ಹಣ ವಸೂಲಿ ಮಾಡುವ ಪೊಲೀಸರು ಅಪರಾಧ ಕೃತ್ಯದಲ್ಲಿ ಭಾಗಿಯಾಗಿರುವವರ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ. ಪೊಲೀಸ್ ಇಲಾಖೆ ಇದ್ದು ಪ್ರಯೋಜನವಿಲ್ಲದಂತಾಗಿದೆ' ಎಂದರು.

ಪಕ್ಷದ ಮುಖಂಡ ಫಿರೋಜ್, 'ರಾಜ್ಯದಲ್ಲಿ ಸೈಬರ್ ಅಪರಾಧ ಕೂಡ ಹೆಚ್ಚಿದೆ. ಈ ಜಾಲವನ್ನು ಬೇಧಿಸುವಲ್ಲಿ ಪೊಲೀಸರು ವಿಫಲರಾಗಿದ್ದಾರೆ' ಎಂದು ತಿಳಿಸಿದರು.

'ಕಿಡಿಗೇಡಿಗಳಿಗೆ ಪಾಠ ಕಲಿಸದೆ ಬಿಡುವುದಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಾಸಕ ಎಂ.ಸತೀಶ್ ರೆಡ್ಡಿ ಮನೆಯ ಮುಂದೆ ನಿಲ್ಲಿಸಿದ್ದ ಕಾರುಗಳಿಗೆ ಬೆಂಕಿ ಹಚ್ಚಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಮೂವರನ್ನು ಬಂಧಿಸಲಾಗಿದೆ. ಘಟನೆ ನಡೆದ 24 ಗಂಟೆಗಳೊಳಗೆ ಪೊಲೀಸರು ದುಷ್ಕರ್ಮಿಗಳನ್ನು ವಶಕ್ಕೆ ಪಡೆದಿರುವುದು ಶ್ಲಾಘನೀಯ. ಕಿಡಿಗೇಡಿಗಳು ಎಷ್ಟೇ ಚಾಲಾಕಿಗಳಾಗಿದ್ದರೂ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ ಎಂಬ ಸಂದೇಶವನ್ನು ರಾಜ್ಯದ ಪೊಲೀಸರು ಈ ಮೂಲಕ ರವಾನಿಸಿದ್ದಾರೆ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಕೆಎಸ್‌ಆರ್‌ಪಿ ಶನಿವಾರ ಹಮ್ಮಿಕೊಂಡಿದ್ದ 'ಏಕತೆ ಮತ್ತು ದೈಹಿಕ ಸದೃಢತೆಗಾಗಿ ಸ್ವಾತಂತ್ರ್ಯತೆಯ ಓಟ' ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಜಂಟಿ ಪೊಲೀಸ್ ಆಯುಕ್ತ (ಅಪರಾಧ) ಸಂದೀಪ್ ಪಾಟೀಲ (ಎಡ ತುದಿ) ಅವರಿಗೆ ನೀಡಬೇಕಿದ್ದ ಪದಕವನ್ನು ಸಿಐಡಿ ಡಿಜಿಪಿ ಪಿ.ಎಸ್.ಸಂಧು ಅವರ ಕೊರಳಿಗೆ ಹಾಕಲು ಮುಂದಾದರು. ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಇದ್ದಾರೆ –ಪ್ರಜಾವಾಣಿ ಚಿತ್ರ

'ಮಾದಕ ವಸ್ತು ಕಳ್ಳಸಾಗಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಈಗಾಗಲೇ ಹಲವು ಪ್ರಕರಣಗಳನ್ನು ಬೇಧಿಸಿದ್ದಾರೆ. ಕಳ್ಳ ಮಾರ್ಗದ ಮೂಲಕ ಅವುಗಳನ್ನು ತರುತ್ತಿರುವವರ ಮೇಲೆ ಹದ್ದಿನ ಕಣ್ಣು ಇಡಲಾಗಿದೆ. ಹಿಂದಿನ ಒಂದು ವರ್ಷದಲ್ಲಿ ಟನ್‌ಗಟ್ಟಲೆ ಮಾದಕ ವಸ್ತುಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ಅವು ಮಾದಕ ವ್ಯಸನಿಗಳ ಕೈ ಸೇರಿದ್ದರೆ ಆಗಬಹುದಾಗಿದ್ದ ಅನಾಹುತ ಎಂತಹದ್ದು ಎಂಬುದನ್ನು ಊಹಿಸಿಕೊಳ್ಳುವುದಕ್ಕೂ ಸಾಧ್ಯವಿಲ್ಲ. ಇದನ್ನು ಸಂಪೂರ್ಣವಾಗಿ ತೊಡೆದುಹಾಕಲು ಪೊಲೀಸರು ಮತ್ತಷ್ಟು ಚುರುಕಾಗಿ ಕೆಲಸ ಮಾಡಲಿದ್ದಾರೆ' ಎಂದರು.

ಮುಂದಿನ ವಾರ ನೇಮಕಾತಿ ಅಧಿಸೂಚನೆ: ಸೂದ್

'ಕ್ರೀಡಾಪಟುಗಳಿಗೆ ಶೇ 2ರಷ್ಟು ಮೀಸಲಾತಿ ಕಲ್ಪಿಸಿ, ಅವರನ್ನು ಆದ್ಯತೆಯ ಮೇರೆಗೆ ಪೊಲೀಸ್ ಇಲಾಖೆಯಲ್ಲಿ ನೇಮಕ ಮಾಡಿಕೊಳ್ಳಬೇಕು ಎಂಬುದು ಬಹುದಿನಗಳ ಬೇಡಿಕೆಯಾಗಿತ್ತು. ಈ ಸಂಬಂಧ ಮುಂದಿನ ವಾರದಲ್ಲೇ ನೇಮಕಾತಿ ಅಧಿಸೂಚನೆ ಹೊರಡಿಸಲಾಗುತ್ತದೆ' ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಹೇಳಿದರು.

'ಕೆಎಸ್‌ಆರ್‌ಪಿಗೆ ನೇಮಕಗೊಂಡವರು ನಿವೃತ್ತಿಯವರೆಗೂ ಅಲ್ಲೇ ಕೆಲಸ ಮಾಡಬೇಕಿತ್ತು. ಕೆಎಸ್‌ಆರ್‌ಪಿ, ಸಿಆರ್, ಡಿಆರ್‌ನಲ್ಲಿ ಕೆಲಸ ಮಾಡುವವರಿಗೆ ನಾಗರಿಕ ಪೊಲೀಸ್ ಇಲಾಖೆಯಲ್ಲೂ ಅವಕಾಶ ನೀಡಬೇಕು ಎಂಬ ಉದ್ದೇಶದಿಂದ ಶೇ 10ರಷ್ಟು ಮೀಸಲಾತಿ ಕಲ್ಪಿಸಲಾಗಿದೆ. ಮುಂದಿನ ವಾರ ನೇಮಕಾತಿ ಆದೇಶ ಹೊರಬೀಳಲಿದೆ. ಕೆಎಸ್‌ಆರ್‌ಪಿ, ಡಿಆರ್, ಸಿಆರ್‌ನಲ್ಲಿ ಕನಿಷ್ಠ ಐದು ವರ್ಷ ಸೇವೆ ಸಲ್ಲಿಸಿರುವವರು ಇದಕ್ಕೆ ಅರ್ಹರಾಗಿರುತ್ತಾರೆ. ಅವರು ಎಲ್ಲರಂತೆ ಲಿಖಿತ ಹಾಗೂ ದೈಹಿಕ ಪರೀಕ್ಷೆಗೆ ಹಾಜರಾಗಬೇಕಾಗುತ್ತದೆ. ಇದಕ್ಕೆ ವಯೋಮಿತಿಯೂ ಅನ್ವಯವಾಗುತ್ತದೆ. ಈ ನೇಮಕಾತಿ ಪ್ರಕ್ರಿಯೆ ಸಂಪೂರ್ಣವಾಗಿ ಪಾರದರ್ಶಕವಾಗಿರಲಿದೆ' ಎಂದು ತಿಳಿಸಿದರು.

ಬಂಧಿತರ ಹಿಂದೆ ಸೂತ್ರಧಾರ; ಸತೀಶ್ ರೆಡ್ಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಶಾಸಕ ಎಂ.ಸತೀಶ್ ರೆಡ್ಡಿ ಮನೆ ಎದುರು ನಿಲ್ಲಿಸಿದ್ದ ಕಾರುಗಳಿಗೆ ಬೆಂಕಿ ಹಚ್ಚಿದ್ದ ಪ್ರಕರಣದಲ್ಲಿ ಮೂವರನ್ನು ಬಂಧಿಸಿರುವ ಪೊಲೀಸರು, ತಲೆಮರೆಸಿಕೊಂಡಿರುವ ಮತ್ತಷ್ಟು ಆರೋಪಿಗಳ ಬಂಧನಕ್ಕೆ ತನಿಖೆ ಮುಂದುವರಿಸಿದ್ದಾರೆ.

ಪ್ರಕರಣದ ಬಗ್ಗೆ ಪ್ರತಿಕ್ರಿಯಿಸಿರುವ ಸತೀಶ್ ರೆಡ್ಡಿ, 'ಬಂಧಿತರ ಹಿಂದೆ ಪ್ರಮುಖ ಸೂತ್ರಧಾರ ಇದ್ದಾನೆ. ಆತನ ಬಂಧನವಾಗಬೇಕು' ಎಂದರು.

'ಘಟನೆ ನಡೆಯುವ ಹಿಂದಿನ ದಿನ ಆರೋಪಿಯೊಬ್ಬ ನನ್ನ ಮನೆಗೆ ಬಂದಿದ್ದ. ನನ್ನನ್ನು ಭೇಟಿಯಾಗಬೇಕೆಂದು ಭದ್ರತಾ ಸಿಬ್ಬಂದಿಯನ್ನು ಕೇಳಿದ್ದ. ಆತನ ಭೇಟಿಯ ಹಿಂದೆ ದೊಡ್ಡ ಸಂಚಿರುವಂತೆ ಕಾಣುತ್ತಿದೆ. ಬಂಧಿತರ ಪೈಕಿ ಇಬ್ಬರು ಕೇಬಲ್ ಹುಡುಗರು, ಇನ್ನೊಬ್ಬ ಪೇಟಿಂಗ್ ಕೆಲಸ ಮಾಡುತ್ತಾನೆ' ಎಂದೂ ಹೇಳಿದರು.

ಚಿತ್ರಾವಳಿ

75ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ರೆಡ್ ಕ್ರಾಸ್ ರಕ್ತನಿಧಿ ಏರ್ಪಡಿಸಿದ್ದ ವಿಶೇಷ ರಕ್ತದಾನ ಶಿಬಿರಕ್ಕೆ ರೋಟರಿ ಗವರ್ನರ್ ಫಜಲ್ ಮಹಮೂದ್ ಅವರು ಶನಿವಾರ ಚಾಲನೆ ನೀಡಿದರು. ರೋಟರಿ ಬೆಂಗಳೂರು ದಕ್ಷಿಣ ಪರೇಡ್ ಅಧ್ಯಕ್ಷ ರವಿಪ್ರಸಾದ್, ರೆಡ್ ಕ್ರಾಸ್‌ನ ರಾಜು ಚಂದ್ರಶೇಖರ್, ಆನಂದ ರಾಮಚಂದ್ರ, ಮಮತಾ, ಸೋಮಶೇಖರ್ ಇದ್ದರು

ಮಲ್ಲೇಶ್ವರ ಕ್ಷೇತ್ರ ವ್ಯಾಪ್ತಿಯಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿರುವ ಅಮಿತ್ ಪ್ರಕಾಶ್, ಖುಷಿ ಕುಮಾರಿ, ಚಂದನ, ಅಕ್ಷತಾ, ವಿ. ಚೇತನ್ ಅವರನ್ನು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರು ಶನಿವಾರ ಸನ್ಮಾನಿಸಿದರು. ಚಿತ್ರನಟ ಜಗ್ಗೇಶ್, ಕ್ಷೇತ್ರ ಶಿಕ್ಷಣಾಧಿಕಾರಿ ಉಮಾದೇವಿ ಹಾಗೂ ಶಿಕ್ಷಕರು ಇದ್ದರು

ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ಪ್ರತಿವರ್ಷ ಜನರಿಂದ ತುಂಬಿ ಹೋಗುತ್ತಿದ್ದ ಲಾಲ್‌ಬಾಗ್‌ನ ಗಾಜಿನ ಮನೆ, ಬಿಕೊ ಎನ್ನುತ್ತಿದ್ದ ದೃಶ್ಯ ಶನಿವಾರ ಕಂಡುಬಂತು. ಕೋವಿಡ್ ಮೂರನೇ ಅಲೆಯ ಕಾರಣ ಈ ಬಾರಿ ಫಲಪುಷ್ಪ ಪ್ರದರ್ಶನ ರದ್ದುಗೊಳಿಸಲಾಗಿದ್ದು, ಹೀಗಾಗಿ ಜನ ಇತ್ತ ಸುಳಿಯುತ್ತಿಲ್ಲ

– ಪ್ರಜಾವಾಣಿ ಚಿತ್ರ

ಶಿರಸಿ: ಹಳ್ಳಿ ಶಾಲೆಗೆ ಸ್ಮಾರ್ಟ್ ಟಿವಿ

• ಗಣಪತಿ ಹೆಗಡೆ

ಶಿರಸಿ: ಆರ್ಥಿಕವಾಗಿ ಹಿಂದುಳಿದ ಕುಟುಂಬಗಳು ಹೆಚ್ಚಿರುವ ಹಳ್ಳಿಗಳ ಸರ್ಕಾರಿ ಶಾಲೆಗೆ ಸ್ಮಾರ್ಟ್ ಟಿವಿ ನೀಡಲು ನವದೆಹಲಿ ಮೂಲದ ರೂಟ್ 2 ರೂಟ್ (ಆರ್ 2 ಆರ್) ಸರ್ಕಾರೇತರ ಸಂಸ್ಥೆ ಮುಂದೆ ಬಂದಿದೆ. ಅದಕ್ಕಾಗಿ ದಕ್ಷಿಣ ಭಾರತದಲ್ಲಿ ಮೊದಲಿಗೆ ಶಿರಸಿ ಶೈಕ್ಷಣಿಕ ಜಿಲ್ಲೆಯನ್ನು ಆಯ್ಕೆ ಮಾಡಿಕೊಂಡಿದೆ.

ಈಗಾಗಲೆ ಜಿಲ್ಲೆಗೆ 52 ಸ್ಮಾರ್ಟ್ ಟಿವಿ ಪೂರೈಕೆ ಮಾಡಲಾಗಿದೆ. ವಿಶೇಷ ಸಾಫ್ಟ್‌ವೇರ್ ಒಳಗೊಂಡಿರುವ ಟಿವಿ ಮೂಲಕ ಯೂಟ್ಯೂಬ್, ಇನ್ನಿತರ ಕಲಿಕಾ ತಾಣಗಳನ್ನು ಬಳಸಿ ಪಾಠ ಬೋಧಿಸುವುದು ಸುಲಭವಾಗಲಿದೆ. ವಿದ್ಯಾರ್ಥಿಗಳ ಜತೆ ಸಂವಹನ ನಡೆಸಲು ಅನುಕೂಲವಾಗುವಂತೆ ವೆಬ್ ಕ್ಯಾಮೆರಾಗಳನ್ನೂ ನೀಡಲಾಗುತ್ತದೆ.

ತಾಂತ್ರಿಕತೆ ಅಳವಡಿಕೆ ಮೂಲಕ ಹಳ್ಳಿ ಮಕ್ಕಳಿಗೆ ಹೊಸರೂಪದ ಕಲಿಕೆಗೆ ಇದು ಅನುಕೂಲವಾಗಲಿದೆ. ಮೊಬೈಲ್ ಸೌಲಭ್ಯ ಹೊಂದಿರದ ಕಾರಣ ಆನ್‌ಲೈನ್ ಶಿಕ್ಷಣದಿಂದ ನೂರಾರು ವಿದ್ಯಾರ್ಥಿಗಳು ವಂಚಿತರಾಗಿದ್ದು, ಇದನ್ನೆಲ್ಲ ತಪ್ಪಿಸಲು ಈ ಸೌಲಭ್ಯ ಅಗತ್ಯವಾಗಿದೆ.

'ವಿರಾಸತ್ ಹೆಸರಿನಲ್ಲಿ ಸಂಸ್ಥೆ ಗ್ರಾಮೀಣ ಭಾಗದ ಮಕ್ಕಳಿಗೆ ಕಲೆಯ ಜತೆ ಡಿಜಿಟಲ್ ಶಿಕ್ಷಣ ನೀಡುವ ಗುರಿ ಹೊಂದಿದೆ. ಹಿಂದುಳಿದ ಹಳ್ಳಿಗಳ ಮಕ್ಕಳು ತಾಂತ್ರಿಕತೆಯೊಂದಿಗೆ ಬೆರೆತು ದೇಶ, ವಿದೇಶಗಳ ಮಕ್ಕಳ ಜತೆ ಸಂವಹನ ನಡೆಸಲು ಅನುಕೂಲವಾಗುವ ಉದ್ದೇಶಕ್ಕೆ ಯೋಜನೆ ರೂಪಿಸಿದ್ದೇವೆ' ಎನ್ನುತ್ತಾರೆ ಆರ್‌2ಆರ್ ಸಂಸ್ಥಾಪಕರಾದ ರಾಕೇಶ ಗುಪ್ತಾ ಮತ್ತು ರವಿ ವಾಚನಿ.

'ನಗರ ಪ್ರದೇಶದಿಂದ ದೂರವಿರುವ, ಇಂಟರ್‌ನೆಟ್ ಸಂಪರ್ಕ ಹೊಂದಿರಬಹುದಾದ ಶಾಲೆಗಳ ಪಟ್ಟಿ ಸಿದ್ಧಪಡಿಸಲಾಗಿದೆ ಎಂದು ಎಂದು ಶಿರಸಿ ಶೈಕ್ಷಣಿಕ ಜಿಲ್ಲೆಯ ಡಿಡಿಪಿಐ ದಿವಾಕರ ಶೆಟ್ಟಿ ತಿಳಿಸಿದರು.

'ಕಲಿಕೆಗೆ ತಾಂತ್ರಿಕತೆಯ ಸೌಲಭ್ಯ ಒದಗಿಸುವ ಕುರಿತಂತೆ ಈ ಹಿಂದೆ ಕೇಂದ್ರೀಯ ಸಂಸ್ಕೃತಿ ಸಚಿವಾಲಯದ ಅಧೀನದ ಸಿ.ಸಿ. ಆರ್.ಟಿ.ಗೆ ಸಲ್ಲಿಸಿದ್ದ ಪ್ರಸ್ತಾವಕ್ಕೆ ಸ್ಪಂದನೆ ಸಿಕ್ಕಿದೆ' ಎಂದರು.

ಸರ್ಕಾರಿ ಶಾಲೆಗೆ ಪೂರೈಸಲಿರುವ ಸ್ಮಾರ್ಟ್ ಟಿವಿ

> **ಶಿರಸಿ ಶೈಕ್ಷಣಿಕ ಜಿಲ್ಲೆಯಲ್ಲಿ ಗುಡ್ಡಗಾಡು ಪ್ರದೇಶ ಹೆಚ್ಚು. ಸ್ಮಾರ್ಟ್ ಟಿವಿ ಅಳವಡಿಕೆಯಿಂದ ಶಾಲೆಗಳಲ್ಲಿ ಗುಣಾತ್ಮಕ ಶಿಕ್ಷಣಕ್ಕೆ ಅನುಕೂಲವಾಗಲಿದೆ**
> **ದಿವಾಕರ ಶೆಟ್ಟಿ**, ಡಿಡಿಪಿಐ

ಕಲೆಯೊಂದಿಗೆ ಕಲಿಕೆಗೆ ಅವಕಾಶ

ಕೇಂದ್ರೀಯ ಸಂಸ್ಕೃತಿ ಸಂಪನ್ಮೂಲ ಮತ್ತು ತರಬೇತಿ ಸಂಸ್ಥೆ (ಸಿ.ಸಿ.ಆರ್.ಟಿ.) ಕಲೆಯೊಂದಿಗೆ ಕಲಿಕೆಗೆ ಒತ್ತು ನೀಡುತ್ತಿದೆ. ಈ ಸಂಸ್ಥೆಯ ಮುಖಾಂತರವೇ ಆರ್‌2ಆರ್ ಸಂಸ್ಥೆ ಸ್ಮಾರ್ಟ್ ಟಿವಿ ಒದಗಿಸುತ್ತಿದೆ. ಈ ಟಿ.ವಿಯಲ್ಲಿ ಭಾರತ ಸೇರಿದಂತೆ ವಿವಿಧ ರಾಷ್ಟ್ರಗಳ ಕಲಾ ಪ್ರಕಾರಗಳ ಮೂಲಕ ಪಠ್ಯ ಬೋಧಿಸುವ ವಿಡಿಯೊ, ಪಾಠೋಪಕರಣವಿದೆ. ಈ ರೀತಿ ಬೋಧಿಸುವ ಪಾಠ ಗ್ರಾಮೀಣ ಭಾಗದ ಮಕ್ಕಳಿಗೆ ಪರಿಣಾಮಕಾರಿ ಆಗಬಹುದು ಎನ್ನುತ್ತಾರೆ ಸಿಸಿಆರ್‌ಟಿ ಜಿಲ್ಲಾ ಸಂಯೋಜಕ ಸಿದ್ಧಪ್ಪ ಬಿರಾದಾರ.

ಮೇಕೆದಾಟು: ರೈತರಿಂದಲೇ ಶಿಲಾನ್ಯಾಸ – ಎಚ್ಚರಿಕೆ

ಸರ್ಕಾರ ನಿಲುವು ಸ್ಪಷ್ಟಪಡಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ರಾಮನಗರ: ಮೇಕೆದಾಟು ಜಲಾಶಯ ನಿರ್ಮಾಣ ಸಂಬಂಧ ರಾಜ್ಯ ಸರ್ಕಾರ ತನ್ನ ನಿಲುವನ್ನು ಸ್ಪಷ್ಟಪಡಿಸಬೇಕು. ಸರ್ಕಾರದ ಕೈಲಿ ನಿರ್ಮಾಣ ಕಾರ್ಯ ಸಾಧ್ಯವಾಗದೇ ಇದ್ದಲ್ಲಿ ರೈತರೇ ಅಡಿಗಲ್ಲು ಹಾಕುತ್ತೇವೆ ಎಂದು ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಎಚ್ಚರಿಸಿದರು.

'ಮೇಕೆದಾಟು ಜಲಾಶಯ ನಿರ್ಮಾಣ ಮಾಡುವುದಾಗಿ ಸರ್ಕಾರ ಹೇಳುತ್ತಲೇ ಬಂದಿದೆ. ಆದರೆ ಯಾವಾಗ ಚಾಲನೆ ನೀಡಲಾಗುವುದು ಹಾಗೂ ಯಾವಾಗ ಯೋಜನೆ ಪೂರ್ಣಗೊಳಿಸುತ್ತೇವೆ ಎಂದು ಹೇಳುತ್ತಿಲ್ಲ. ಇದೇ ನಿರ್ಲಕ್ಷ್ಯ ಧೋರಣೆ ಮುಂದುವರಿದಲ್ಲಿ ರಾಜ್ಯದ ವಿವಿಧ ಭಾಗಗಳಿಂದ ರೈತರು ಬಂದು ನಾವೇ ಅಡಿಗಲ್ಲು ಹಾಕುತ್ತೇವೆ. ಸದ್ಯದಲ್ಲೇ ಈ ಬಗ್ಗೆ ನಿರ್ಧಾರ ಕೈಗೊಳ್ಳುತ್ತೇವೆ' ಎಂದು ಅವರು ಶನಿವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ತಮಿಳುನಾಡಿನಲ್ಲಿ ಕಾವೇರಿ ನದಿ ನೀರು, ಮೇಕೆದಾಟು ಯೋಜನೆಯನ್ನು ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳಲಾಗುತ್ತಿದೆ. ತಮಿಳುನಾಡಿನ ಬಿಜೆಪಿ ಘಟಕದ ಅಧ್ಯಕ್ಷ ಅಣ್ಣಾಮಲೈ ಮೇಕೆದಾಟು ಯೋಜನೆ ವಿರುದ್ಧ ಸತ್ಯಾಗ್ರಹ ನಡೆಸಿರುವುದು ಸಹ ರಾಜಕೀಯ ಕಾರಣಕ್ಕೆ. ಹೀಗಾಗಿ ನಾವು ಪ್ರತಿಯಾಗಿ ಪ್ರತಿಭಟಿಸುವ ಅಗತ್ಯವಿಲ್ಲ ಎಂದು ಅಭಿಪ್ರಾಯ ಪಟ್ಟರು. ತಮಿಳುನಾಡಿನ ಖ್ಯಾತೆಗಳಿಗೆ ನಾವು ಉತ್ತರ ಕೊಡಬೇಕಾದ ಅವಶ್ಯಕತೆ ಇಲ್ಲ ಎಂದರು.

ಅಣ್ಣಾಮಲೈ ಪ್ರತಿಭಟನೆಯ ವಿಚಾರದಲ್ಲಿ ತಾನು ಭಾರತೀಯ ಎಂಬ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಅವರ ಹೇಳಿಕೆಯ ಬಗ್ಗೆ ಪ್ರತಿಕ್ರಿಯಿಸಿದ ಕೋಡಿಹಳ್ಳಿ ಚಂದ್ರಶೇಖರ್, ಸಿ.ಟಿ. ರವಿ ಅವರ ಹೇಳಿಕೆ ಮೂರ್ಖತನದ್ದು. ಮೊದಲು ನಮ್ಮ ತಾಯಿಯನ್ನು ಅಮ್ಮ ಅನ್ನುತ್ತೇವೆ, ತದನಂತರವಷ್ಟೇ ಬೇರೆಯವರಿಗೆ ಆ ಗೌರವ ಎಂದು ಹೇಳಿದರು.

ಕಾವೇರಿ ನ್ಯಾಯಮಂಡಳಿ, ಸುಪ್ರೀಂ ಕೋರ್ಟ್ ತೀರ್ಪಿನಂತೆ ತಮಿಳುನಾಡಿಗೆ ಸಿಗಬೇಕಾದ ಪ್ರಮಾಣದಷ್ಟು ನೀರು ಸಿಗಲಿದೆ. ನೀರು ಸಿಗದಿದ್ದ ಪಕ್ಷದಲ್ಲಿ ಮಾತ್ರ ಆ ರಾಜ್ಯ ಕಾವೇರಿ ನಿರ್ವಹಣಾ ಮಂಡಳಿಗೆ ಮೊರೆ ಹೋಗಬಹುದು. ಇದಿಷ್ಟೇ ಆ ರಾಜ್ಯದ ಹಕ್ಕು. ಜಲಾಶಯ ನಿರ್ಮಾಣದ ವಿಚಾರದಲ್ಲಿ ಆಕ್ಷೇಪಣೆ ವ್ಯಕ್ತಪಡಿಸುವ ಹಕ್ಕು ಆ ರಾಜ್ಯಕ್ಕೆ ಇಲ್ಲ ಎಂದು ಹೇಳಿದರು.

ರೈತ ಸಂಘದ ರಾಜ್ಯ ಉಪಾಧ್ಯಕ್ಷೆ ಅನುಸೂಯಮ್ಮ, ಜಿಲ್ಲಾ ಘಟಕದ ಅಧ್ಯಕ್ಷ ಎಚ್.ಬಿ. ಚಂದ್ರಶೇಖರ್, ಪ್ರಮುಖರಾದ ಬೈರೇಗೌಡ, ರಮೇಶ್, ಅನಂತರಾಮ ಪ್ರಸಾದ್, ಗೋವಿಂದರಾಜು, ಸೀಬಕಟ್ಟೆ ಕೃಷ್ಣಪ್ಪ ಮುಂತಾದವರು ಉಪಸ್ಥಿತರಿದ್ದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ರಾಜ್ಯ ರೈತ ಸಂಘದ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಮಾತನಾಡಿದರು. ಚಂದ್ರಶೇಖರ್, ಬೈರೇಗೌಡ, ಅನಸೂಯಮ್ಮ ಇದ್ದರು

ಕೇಂದ್ರ ರಸಗೊಬ್ಬರ ಖಾತೆ ರಾಜ್ಯ ಸಚಿವ ಭಗವಂತ ಖೂಬಾ

'ನ್ಯಾನೊ ತಂತ್ರಜ್ಞಾನದಿಂದ ಯೂರಿಯಾ'

ಪ್ರಜಾವಾಣಿ ವಾರ್ತೆ

ತುಮಕೂರು: ನ್ಯಾನೊ ತಂತ್ರಜ್ಞಾನ ಬಳಸಿ ರಾಜ್ಯದಲ್ಲಿ ಯೂರಿಯಾ ರಸಗೊಬ್ಬರ ಉತ್ಪಾದನೆ ಮಾಡಲಾಗುವುದು ಎಂದು ಕೇಂದ್ರದ ರಸಗೊಬ್ಬರ ಖಾತೆ ರಾಜ್ಯ ಸಚಿವ ಭಗವಂತ ಖೂಬಾ ಶನಿವಾರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಇಫ್ಕೋ ಸಂಸ್ಥೆ ಹೊಸ ನ್ಯಾನೊ ತಂತ್ರಜ್ಞಾನ ಅಭಿವೃದ್ಧಿಪಡಿಸಿದ್ದು, ಅದನ್ನು ಬಳಸಿಕೊಂಡು ರಾಜ್ಯದಲ್ಲಿ ಯೂರಿಯಾ ರಸಗೊಬ್ಬರ ಉತ್ಪಾದಿಸಲು ಉದ್ದೇಶಿಸಲಾಗಿದೆ ಎಂದು ಹೇಳಿದರು.

ನಂತರ ಸಿದ್ಧಗಂಗಾ ಎಂಜಿನಿಯರಿಂಗ್ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿ, 'ಕಾಯಕ ನಿಷ್ಠೆ, ಸಾಧಿಸುವ ಛಲ, ಸತತ ಪ್ರಯತ್ನವಿದ್ದರೆ ಸಾಧನೆಗೆ ಯಾರೂ ಅಡ್ಡಿಯಾಗುವುದಿಲ್ಲ. ಕಾಲೇಜಿನ ಹಳೆ ವಿದ್ಯಾರ್ಥಿಯಾಗಿ ಸನ್ಮಾನ ಸ್ವೀಕರಿಸುತ್ತಿರುವುದು ಹೆಮ್ಮೆ ತಂದಿದೆ' ಎಂದು ಹೇಳಿದರು.

'ನಾನು ಕೇಂದ್ರ ಸಚಿವನಾಗಿರುವುದಕ್ಕೆ ಬಸವಣ್ಣ, ಲಿಂ.ಡಾ.ಶಿವಕುಮಾರ ಸ್ವಾಮೀಜಿ ಅವರ ಆದರ್ಶ ಪಾಲಿಸಿರುವುದೇ ಕಾರಣವಾಗಿದೆ. ಯಶಸ್ಸು ಸಿಕ್ಕ ಸಮಯದಲ್ಲಿ ಸಮಾಜ ಸನ್ಮಾನಿಸುತ್ತದೆ. ನಮ್ಮ ಊರಿನಲ್ಲಿ, ಓದಿದ ಸಂಸ್ಥೆಯಲ್ಲಿ ಸಿಗುವ ಸನ್ಮಾನ ಎಲ್ಲಕ್ಕಿಂತ ಮಹತ್ವ ಎನಿಸುತ್ತದೆ. ಈಗ ಸಚಿವನಾಗಿದ್ದು, ಜವಾಬ್ದಾರಿ ಮತ್ತಷ್ಟು ಹೆಚ್ಚಾಗಿದೆ. ಕಪ್ಪು ಚುಕ್ಕೆ ಬಾರದಂತೆ ಕೆಲಸ ನಿರ್ವಹಿಸುತ್ತೇನೆ. ಉತ್ತಮ ಕೆಲಸ ಮಾಡಿ ತೋರಿಸುತ್ತೇನೆ' ಎಂದು ಭರವಸೆ ನೀಡಿದರು.

ಸಿದ್ಧಲಿಂಗ ಸ್ವಾಮೀಜಿ, 'ಭಗವಂತ ಖೂಬಾ ಅವರು ಮತ್ತಷ್ಟು ಎತ್ತರಕ್ಕೆ ಬೆಳೆಯುತ್ತಾರೆ. ಅವರು ಸಚಿವರಾದಾಗ ಅಭಿಮಾನ, ಪ್ರೀತಿ ಎಲ್ಲರಲ್ಲೂ ಮೂಡಿತು. ಎಲ್ಲಾ ಸವಾಲುಗಳನ್ನು ಸಮರ್ಥವಾಗಿ ನಿಭಾಯಿಸುತ್ತಾರೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಶಾಸಕ ಜ್ಯೋತಿಗಣೇಶ್, 'ಎಸ್ಐಟಿ ವಿದ್ಯಾರ್ಥಿ ಖೂಬಾ ಅವರು ಕೇಂದ್ರ ಸಚಿವರಾಗಿರುವುದು ಸಂಸ್ಥೆಗೆ ಹೆಮ್ಮೆ ತಂದಿದೆ. ಇಲ್ಲಿನ ವಿದ್ಯಾರ್ಥಿಗಳು ರಾಜಕೀಯ ಮಾತ್ರವಲ್ಲದೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ್ದಾರೆ' ಎಂದು ಹೇಳಿದರು.

ಎಸ್ಐಟಿ ನಿರ್ದೇಶಕ ಡಾ.ಎಂ.ಎನ್.ಚನ್ನಬಸಪ್ಪ, ಸಿದ್ಧಗಂಗಾ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಟಿ.ಕೆ.ನಂಜುಂಡಪ್ಪ, ಪ್ರಾಂಶುಪಾಲ ಎಸ್.ವಿ.ದಿನೇಶ್ ಉಪಸ್ಥಿತರಿದ್ದರು.

ಇದಕ್ಕೂ ಮುನ್ನ ಸಿದ್ಧಗಂಗಾ ಮಠಕ್ಕೆ ಭೇಟಿನೀಡಿ ಸ್ವಾಮೀಜಿ ಆಶೀರ್ವಾದ ಪಡೆದುಕೊಂಡರು.

ತುಮಕೂರಿನ ಎಸ್ಐಟಿಯಲ್ಲಿ ಕೇಂದ್ರ ಸಚಿವ ಭಗವಂತ ಖೂಬಾ ಅವರನ್ನು ಅಭಿನಂದಿಸಲಾಯಿತು. ಸಿದ್ಧಲಿಂಗ ಸ್ವಾಮೀಜಿ, ಶಾಸಕ ಜ್ಯೋತಿ ಗಣೇಶ್, ಎಸ್ಐಟಿ ನಿರ್ದೇಶಕ ಡಾ.ಎಂ.ಎನ್.ಚನ್ನಬಸಪ್ಪ, ಪ್ರಾಂಶುಪಾಲ ಎಸ್.ವಿ.ದಿನೇಶ್, ಸಿದ್ಧಗಂಗಾ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಟಿ.ಕೆ.ನಂಜುಂಡಪ್ಪ ಉಪಸ್ಥಿತರಿದ್ದರು

ಪೊಲೀಸರ ಮೇಲೆ ಹಲ್ಲೆಗೆ ಯತ್ನ; ರೌಡಿ ಸಹಚರ ಬಂಧನ

ಅಪರಾಧ ಸುದ್ದಿ

ಬೆಂಗಳೂರು: ಗಸ್ತಿನಲ್ಲಿದ್ದ ಸಿಬ್ಬಂದಿ ಮೇಲೆ ಹಲ್ಲೆಗೆ ಯತ್ನಿಸಿದ್ದ ಆರೋಪದಡಿ ರೌಡಿಯೊಬ್ಬನ ಸಹಚರ ರಫೀಕ್ ಎಂಬಾತನನ್ನು ಬ್ಯಾಡರಹಳ್ಳಿ ಪೊಲೀಸರು ಬಂಧಿಸಿದ್ದಾರೆ.

'ಶುಕ್ರವಾರ ರಾತ್ರಿ ನಡೆದಿರುವ ಘಟನೆ ಬಗ್ಗೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಕೃತ್ಯದಲ್ಲಿ ಭಾಗಿಯಾಗಿದ್ದ ರೌಡಿ ಶಿವರಾಜ್ ಅಲಿಯಾಸ್ ಕುಳ್ಳ ತಲೆಮರೆಸಿಕೊಂಡಿದ್ದಾನೆ. ಆತನ ಸಹಚರನೇ ರಫೀಕ್' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಠಾಣೆ ವ್ಯಾಪ್ತಿಯ ಬಾರೊಂದರ ಬಳಿ ಗಲಾಟೆ ನಡೆಯುತ್ತಿತ್ತು. ರಾತ್ರಿ ಗಸ್ತಿನಲ್ಲಿದ್ದ ಪಿಎಸ್‌ಐ ಹಾಗೂ ಸಿಬ್ಬಂದಿ, ಸ್ಥಳಕ್ಕೆ ಹೋಗಿ ವಿಚಾರಿಸಿದ್ದರು. ಅದೇ ವೇಳೆಯೇ ಆರೋಪಿಗಳು, ಪೊಲೀಸರ ಮೇಲೆ ಹಲ್ಲೆಗೆ ಯತ್ನಿಸಿದ್ದರು' ಎಂದೂ ತಿಳಿಸಿವೆ.

ತಿಮಿಂಗಲ ವಾಂತಿ ವಶ; ಸೆರೆ

ಮೈಸೂರು: ಇಲ್ಲಿನ ದೇವರಾಜ ಠಾಣೆ ಪೊಲೀಸರು ಇಬ್ಬರು ಆರೋಪಿಗಳನ್ನು ಬಂಧಿಸಿ, ಕೋಟ್ಯಂತರ ರೂಪಾಯಿ ಬೆಲೆ ಬಾಳುವ 2 ಕೆ.ಜಿ ತಿಮಿಂಗಿಲ ವಾಂತಿ (ಅಬರ್ಗ್ರಿಸ್) ಗಟ್ಟಿಗಳನ್ನು ವಶಪಡಿಸಿಕೊಂಡಿದ್ದಾರೆ.

'ಇಲ್ಲಿನ ವಿನೋಬಾ ರಸ್ತೆಯ ಚಹಾದಂಗಡಿವೊಂದರಲ್ಲಿ ನಾಲ್ವರು ತಿಮಿಂಗಲ ವಾಂತಿ ಕುರಿತು ಮಾತನಾಡಿಕೊಳ್ಳುತ್ತಿರುವುದಾಗಿ ವ್ಯಕ್ತಿಯೊಬ್ಬರು ನೀಡಿದ ಮಾಹಿತಿ ಆಧರಿಸಿ ದಾಳಿ ನಡೆಸಿ ರಾಜೀವ್‌ನಗರದ ಸಮೀಉಲ್ಲಾ (44) ಹಾಗೂ ಶ್ರೀರಂಗಪಟ್ಟಣದ ರಾಘವೇಂದ್ರ (40) ಅವರನ್ನು ಬಂಧಿಸಲಾಯಿತು. ಉಳಿದ ಇಬ್ಬರು ಪರಾರಿಯಾದರು' ಎಂದು ಪೊಲೀಸರು ತಿಳಿಸಿದ್ದಾರೆ. ದೇವರಾಜ ಠಾಣೆಯ ಇನ್‌ಸ್ಪೆಕ್ಟರ್ ಆರ್. ದಿವಾಕರ್ ನೇತೃತ್ವ ವಹಿಸಿದ್ದರು.

ಒಂದೂವರೆ ತಿಂಗಳಲ್ಲಿ ಒಂದೂ ಸಾವಿಲ್ಲ • ಐಸಿಯುನಲ್ಲಿಯೂ ಯಾವುದೇ ಮಗು ದಾಖಲಾಗಿಲ್ಲ

‘ಮಕ್ಕಳಲ್ಲಿ ಸೋಂಕು: ಆತಂಕ ಬೇಡ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ 18 ವರ್ಷದೊಳಗಿನವರಲ್ಲಿ ಸೋಂಕಿನ ಪ್ರಮಾಣ ಹೆಚ್ಚಾಗುತ್ತಿಲ್ಲ. ಸಾರ್ವಜನಿಕರು ಆತಂಕ ಪಡುವ ಅಗತ್ಯವಿಲ್ಲ ಎಂದು ಬಿಬಿಎಂಪಿ ಮಕ್ಕಳ ತಜ್ಞರ ಸಮಿತಿ ಹೇಳಿದೆ.

ಮಕ್ಕಳಲ್ಲಿ ಕೊರೊನಾ ಸೋಂಕು ಹೆಚ್ಚಿನ ಪ್ರಮಾಣದಲ್ಲಿ ಕಂಡು ಬಂದಿದೆ ಎಂದು ಮಾಧ್ಯಮಗಳಲ್ಲಿ ವರದಿಯಾಗುತ್ತಿರುವುದರಿಂದ ಸಾರ್ವಜನಿಕರು ಆತಂಕಗೊಂಡಿದ್ದಾರೆ. ಆದರೆ, ಕೋವಿಡ್ ಪ್ರಕರಣಗಳ ದತ್ತಾಂಶ ಪರಿಗಣಿಸಿದಾಗ, ಮಕ್ಕಳಲ್ಲಿ ಸೋಂಕಿನ ಪ್ರಮಾಣ ತಿಂಗಳಿನಿಂದ ತಿಂಗಳಿಗೆ ಕಡಿಮೆಯಾಗುತ್ತಿದೆ ಎಂದೂ ಸಮಿತಿಯು ಸ್ಪಷ್ಟನೆ ನೀಡಿದೆ.

20 ದಿನಗಳಲ್ಲಿ ದಿನಕ್ಕೆ ಸರಾಸರಿ 388 ಹೊಸ ಪ್ರಕರಣಗಳು ವರದಿಯಾಗುತ್ತಿದ್ದು, ಪ್ರಕರಣಗಳ ಸಂಖ್ಯೆಯಲ್ಲಿ ತೀವ್ರಗತಿಯ ಏರಿಕೆ ಕಂಡು ಬಂದಿಲ್ಲ. 18 ವರ್ಷದ ಒಳಗಿನವರಲ್ಲಿ ಕಂಡು ಬಂದ ಸೋಂಕಿನ ಪ್ರಕರಣಗಳ ಬಗ್ಗೆಯೂ ಪರಿಶೀಲಿಸಿದಾಗ, ನಾಲ್ಕು ತಿಂಗಳಲ್ಲಿ ವರದಿಯಾಗಿರುವ ಒಟ್ಟು ಪ್ರಕರಣಗಳಲ್ಲಿ ಈ ವಯಸ್ಸಿನವರಲ್ಲಿ ಕಂಡು ಬಂದ ಪ್ರಕರಣಗಳ ಪ್ರಮಾಣ ಶೇ 11 ಮಾತ್ರ.

18 ವರ್ಷದ ಒಳಗಿನವರಿಗೆ ಸಂಬಂಧಿಸಿದಂತೆ ಜೂನ್‌ನಲ್ಲಿ 2,643 ಪ್ರಕರಣಗಳು ವರದಿಯಾಗಿದ್ದರೆ, ಜುಲೈನಲ್ಲಿ 778 ಹಾಗೂ ಆಗಸ್ಟ್ 13ರವರೆಗೆ 309 ಪ್ರಕರಣಗಳು ವರದಿಯಾಗಿವೆ. ಆಗಸ್ಟ್‌ನಲ್ಲಿನ ಪ್ರಕರಣಗಳನ್ನು ಮಾತ್ರವೇ ಗಮನಿಸಿದರೆ, ಈ ವಯಸ್ಸಿನವರಲ್ಲಿ 511 ಪ್ರಕರಣಗಳು ವರದಿಯಾಗಿವೆ. ಅಂದರೆ, ಒಟ್ಟು ಪ್ರಕರಣಗಳಲ್ಲಿ ಶೇ 11.5 ಮಾತ್ರ ಎಂದು ಸಮಿತಿ ಹೇಳಿದೆ.

ಮಕ್ಕಳ ತಜ್ಞರ ಸಮಿತಿಯ ಸದಸ್ಯರು: ಗೌರವ್ ಗುಪ್ತ, ಡಿ. ರಂದೀಪ್, ಡಾ. ಬಿ.ಕೆ. ವಿಜಯೇಂದ್ರ, ಡಾ. ನಿರ್ಮಲಾ ಬುಗ್ಗಿ, ಡಾ. ರಕ್ಷಯ್, ಡಾ. ವಿಶ್ವನಾಥ ಕಾಮೋಜಿ, ಡಾ. ಪ್ರಶಾಂತ್ ಅರಸ್, ಡಾ. ಮಲ್ಲಿಕಾರ್ಜುನ್, ಡಾ. ಸೆಂಥಿಲ್, ಡಾ. ಪಿ. ನರೇಶ್, ಡಾ. ಆನಂದ್, ಡಾ. ಸರಸ್ವತಿ, ಡಾ. ಲಲಿತಾ, ಡಾ. ಭಾರತಿ ಹಾಗೂ ಡಾ. ರಮೇಶ್.

ಸಮಿತಿ ಪ್ರಸ್ತಾಪಿಸಿದ ಮುಖ್ಯ ಅಂಶಗಳು

- ಸದ್ಯ, ಮಕ್ಕಳ ಆಸ್ಪತ್ರೆಗಳಲ್ಲಿ ಸರ್ಕಾರಿ ಕೋಟಾದಡಿ 5 ಮತ್ತು ಖಾಸಗಿ ಕೋಟಾದಡಿ 24 ಮಕ್ಕಳು ದಾಖಲಾಗಿದ್ದಾರೆ. ಎಲ್ಲ ವಯಸ್ಸಿನವರ ಒಟ್ಟು ಸಕ್ರಿಯ ಪ್ರಕರಣಗಳಲ್ಲಿ ಈ ವಯಸ್ಸಿನವರ ಪ್ರಮಾಣ ಶೇಕಡ 5.7.
- ತೀವ್ರ ನಿಗಾ ಘಟಕದಲ್ಲಿ ಯಾವುದೇ ಮಕ್ಕಳು ದಾಖಲಾಗಿಲ್ಲ. ಕಳೆದ ಒಂದೂವರೆ ತಿಂಗಳಲ್ಲಿ (ಜುಲೈನಿಂದ ಆ.13) ಯಾವುದೇ ಮಕ್ಕಳು ಕೋವಿಡ್‌ನಿಂದ ಮೃತಪಟ್ಟಿಲ್ಲ
- ಮಕ್ಕಳಲ್ಲಿ ಸೋಂಕು ಲಕ್ಷಣಗಳು ಕಂಡು ಬಂದರೆ, ಅವರನ್ನು ಬಿಬಿಎಂಪಿ ದೈಹಿಕ ಚಿಕಿತ್ಸಾ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರ ಅಥವಾ ಸಮುದಾಯ ಆರೋಗ್ಯ ಕೇಂದ್ರಗಳಿಗೆ ಕರೆದುಕೊಂಡುಬರಹುದು.
- ಮಕ್ಕಳ ಆರೈಕೆಗಾಗಿ ನಗರದಲ್ಲಿ 7 ಆಸ್ಪತ್ರೆಗಳನ್ನು ಗುರುತಿಸಲಾಗಿದೆ. ಬಿಬಿಎಂಪಿಯು ಮಕ್ಕಳ ಆರೈಕೆಗಾಗಿ ಶೀಘ್ರದಲ್ಲೇ 30 ಹಾಸಿಗೆಗಳ ಸಾಮರ್ಥ್ಯದ ವ್ಯವಸ್ಥೆ ಮಾಡಲಿದೆ.
- 3 ವರ್ಷಕ್ಕಿಂತ ಮೇಲ್ಪಟ್ಟ ಎಲ್ಲ ಮಕ್ಕಳು ಕಟ್ಟುನಿಟ್ಟಾಗಿ ಕೋವಿಡ್ ನಿಯಮಗಳನ್ನು ಪಾಲಿಸಬೇಕು ಮತ್ತು ಚಿಕ್ಕ ಮಕ್ಕಳು ಯಾವಾಗಲೂ ಪೋಷಕರ ಮೇಲ್ವಿಚಾರಣೆಯಲ್ಲಿರುವುದು ಸೂಕ್ತ

ಕೋವಿಡ್: ಕ್ಷೇಮಾಭಿವೃದ್ಧಿ ಸಂಘಗಳಿಗೆ ಮಾರ್ಗಸೂಚಿ

ಬಿಬಿಎಂಪಿ ವ್ಯಾಪ್ತಿಯಲ್ಲಿರುವ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು ಮತ್ತು ಅಪಾರ್ಟ್‌ಮೆಂಟ್ ಸಮುಚ್ಚಯಗಳಲ್ಲಿನ ನಿರ್ವಹಣಾ ಸಮಿತಿಗಳಿಗೆ ಕೋವಿಡ್‌ಗೆ ಸಂಬಂಧಿಸಿದಂತೆ ಬಿಬಿಎಂಪಿಯು ಮಾರ್ಗಸೂಚಿಗಳನ್ನು ಹೊರಡಿಸಿದೆ.

ನಗರದಲ್ಲಿ ಕಳೆದ ಎರಡು ವಾರಗಳಲ್ಲಿ ಮೂರು ಅಥವಾ ಅದಕ್ಕಿಂತ ಹೆಚ್ಚು ಕೋವಿಡ್ ಪ್ರಕರಣಗಳು ಒಟ್ಟಿಗೇ ಕಂಡುಬಂದರೆ ಅದನ್ನು ಕ್ಲಸ್ಟರ್ ಎಂದು ಗುರುತಿಸಲಾಗುತ್ತಿದೆ. ಜೊತೆಗೆ 100 ಮೀಟರ್ ಸುತ್ತಮುತ್ತಲಿನ ಪ್ರದೇಶವನ್ನು ಕಂಟೈನ್ಮೆಂಟ್ ವಲಯ ಎಂದು ಗುರುತಿಸಲಾಗುತ್ತದೆ.

ಸಕ್ರಿಯ ಕಂಟೈನ್ಮೆಂಟ್ ವಲಯಗಳ ಸಂಖ್ಯೆ ಶುಕ್ರವಾರ 160 ದಾಟಿತ್ತು. ಅದರಲ್ಲಿ ಸುಮಾರು ಶೇ.50 ರಷ್ಟು ಅಂದರೆ 79 ಅಪಾರ್ಟ್‌ಮೆಂಟ್ ಸಮುಚ್ಚಯಗಳು ಕಂಟೈನ್ಮೆಂಟ್ ವಲಯಗಳಿವೆ. ಇವುಗಳಲ್ಲಿ ನಿಯಂತ್ರಣ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಬಿಬಿಎಂಪಿ ಸೂಚನೆ ನೀಡಿದೆ.

ಮಾರ್ಗಸೂಚಿಗಳು:

- ಅಪಾರ್ಟ್‌ಮೆಂಟ್ ಸಮುಚ್ಚಯಗಳಿಗೆ ಭೇಟಿ ನೀಡುವವರ ದೇಹದ ಉಷ್ಣಾಂಶವನ್ನು ಪರೀಕ್ಷಿಸಬೇಕು
- ಬೇರೆಯವರು ಅಪಾರ್ಟ್‌ಮೆಂಟ್‌ಗಳಿಗೆ ಬಂದರೆ ಅವರ ಹೆಸರು ಮತ್ತು ದೂರವಾಣಿ ಸಂಖ್ಯೆಯನ್ನು ದಾಖಲಿಸಿಕೊಳ್ಳಬೇಕು
- ನಿವಾಸಿಗಳ ಮತ್ತು ಭೇಟಿಗೆ ಬರುವವರು ಕಡ್ಡಾಯವಾಗಿ ಮಾಸ್ಕ್ ಧರಿಸಿರಬೇಕು, ಸ್ಯಾನಿಟೈಸ್ ಮಾಡುತ್ತಿರಬೇಕು
- ಹೊರ ರಾಜ್ಯಗಳಿಗೆ ಭೇಟಿ ನೀಡಿದವರು 72 ಗಂಟೆಗಳ ಒಳಗಿನ ಆರ್‌ಟಿಪಿಸಿಆರ ನೆಗೆಟಿವ್ ಫಲಿತಾಂಶವಿರುವ ವರದಿ ತಂದಿರಬೇಕು ಇಲ್ಲವಾದಲ್ಲಿ ಬಂದ ಮೇಲೆ ಆರ್ಟಿಪಿಸಿಆರ್ ಪರೀಕ್ಷೆ ನಡೆಸಬೇಕು ಹಾಗೂ ಅದರ ಫಲಿತಾಂಶ ಬರುವವರೆಗೆ ಕ್ವಾರಂಟೈನ್ ಆಗಬೇಕು
- ಈಜುಕೊಳವನ್ನು ಮುಚ್ಚಿರಬೇಕು. ಜಿಮ್‌ಗಳು ಶೇ 60ರಷ್ಟು ಜನರೊಂದಿಗೆ ಕಾರ್ಯನಿರ್ವಹಿಸಬಹುದು.
- 3 ವರ್ಷ ಮೇಲ್ಪಟ್ಟ ಎಲ್ಲ ಮಕ್ಕಳು ಮಾಸ್ಕ್ ಧರಿಸಿರುವಂತೆ ಪೋಷಕರು ನೋಡಿಕೊಳ್ಳಬೇಕು. ಜನ ಸೇರುವ, ಗುಂಪಾಗಿ ನಡೆಸುವ, ಸಾರ್ವಜನಿಕ ಅಥವಾ ಸಾಮೂಹಿಕ ಕಾರ್ಯಕ್ರಮಗಳನ್ನು ನಡೆಸಲು ಅವಕಾಶ ಇರುವುದಿಲ್ಲ.
- ಹೋಂ ಡೆಲಿವರಿ, ಕೊರಿಯರ್ ಇನ್ನಿತರ ಸೇವೆಗಳಿಗೆ, ಸೇವೆ ನೀಡುವವರು ಅಪಾರ್ಟ್ಮೆಂಟ್‌ನ ಹೊರಗಿನ ಗೇಟ್ ಅಥವಾ ಮುಖ್ಯ ಗೇಟ್ ವರೆಗೆ ಮಾತ್ರ ಬರುವಂತೆ ನೋಡಿಕೊಳ್ಳಬೇಕು
- ಕಂಟೈನ್ಮೆಂಟ್ ವಲಯಗಳಿಂದ ಕಸ ಇತ್ಯಾದಿ ನಿರ್ವಹಣೆಗೆ ವೃತ್ತಿಪರ ಕೆಲಸಗಾರರನ್ನು ಬಳಸಬೇಕು
- ಕೋವಿಡ್ ಪಾಸಿಟಿವ್ ಪತ್ತೆಯಾದಲ್ಲಿ ಅಪಾರ್ಟ್ಮೆಂಟ್ ಸಮುಚ್ಚಯದಲ್ಲಿನ ಎಲ್ಲರೂ ಅವರಿಗೆ ಸಹಕರಿಸಬೇಕು

* ಅವರು ಮನೆಯಲ್ಲಿದ್ದುಕೊಂಡು ಆರೈಕೆ ಪಡೆಯಲು ಅವಕಾಶ ಇಲ್ಲದಿದ್ದಲ್ಲಿ, ಕೋವಿಡ್ ಆರೈಕೆ ಕೇಂದ್ರ ಅಥವಾ ಆಸ್ಪತ್ರೆಗೆ ದಾಖಲಾಗಬೇಕು ಎಂದು ಬಿಬಿಎಂಪಿ ಸಲಹೆ ನೀಡಿದೆ.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	20.73 ಕೋಟಿ ▲	3.21 ಕೋಟಿ
ಸಕ್ರಿಯ ಪ್ರಕರಣ	1.70 ಕೋಟಿ ▲	3.81 ಲಕ್ಷ ▼
ಗುಣಮುಖ	18.59 ಕೋಟಿ ▲	3.13 ಕೋಟಿ
ಸಾವು	43.64 ಲಕ್ಷ ▲	4.31 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	7.21 ಲಕ್ಷ ▲	35,218 ▲
ಗುಣಮುಖ	4.98 ಲಕ್ಷ ▼	35,167 ▲
ಸಾವು	10,156 ▲	478 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಅಮೆರಿಕ	ಇರಾನ್	ಬ್ರಿಟನ್
1.55 ಲಕ್ಷ ▲	39,119	33,933 ▲

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ಸ್ಪೇನ್	ಬ್ರಿಟನ್
65.97 ▲	7.11	13.10 ▲

(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು)

ಮಹಾರಾಷ್ಟ್ರ	1.34 ಲಕ್ಷ ▼
ತಮಿಳುನಾಡು	34,496 ▲
ದೆಹಲಿ	25,069 ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	63.87 ▲
ಕೇರಳ	36.71 ▲
ತಮಿಳುನಾಡು	25.86 ▲

ಪ್ರಜಾವಾಣಿ ಗ್ರಾಫಿಕ್ಸ್

‘3ನೇ ಅಲೆ ತಡೆಗೆ ಲಸಿಕೆ ಸಹಕಾರಿ’

ಶಾಸಕ ರವಿಸುಬ್ರಮಣ್ಯ ಅಭಿಮತ • ಸೈಕಲ್ ರ‍್ಯಾಲಿ ಮೂಲಕ ಕೋವಿಡ್ ಜಾಗೃತಿ

ಪ್ರಜಾವಾಣಿ ವಾರ್ತೆ

ಸೈಕಲ್ ಜಾಥಾಕ್ಕೆ ಎಲ್‌.ಎ.ರವಿಸುಬ್ರಮಣ್ಯ ಚಾಲನೆ ನೀಡಿದರು. ಡಾ. ವಿಕ್ರಮ್ ಸಿದ್ದಾರೆಡ್ಡಿ ಇದ್ದರು.

ಬೆಂಗಳೂರು: ‘ಕೊರೊನಾ ಮೂರನೇ ಅಲೆ ತಡೆಗೆ ಲಸಿಕೆ ಸಹಕಾರಿಯಾಗಲಿದೆ. ಹಾಗಾಗಿ, 18 ವರ್ಷ ಮೇಲ್ಪಟ್ಟ ಎಲ್ಲರೂ ಲಸಿಕೆಯನ್ನು ಆದಷ್ಟು ಬೇಗ ಹಾಕಿಸಿಕೊಳ್ಳಬೇಕು’ ಎಂದು ಶಾಸಕ ಎಲ್‌.ಎ. ರವಿಸುಬ್ರಮಣ್ಯ ತಿಳಿಸಿದರು.

ಜಯನಗರದ ಯುನೈಟೆಡ್ ಆಸ್ಪತ್ರೆಯ ಸಹಯೋಗದಲ್ಲಿ ರೋಟರ‍್ಯಾಕ್ಟ್ ಬೆಂಗಳೂರು ಸೌತ್ ನಗರದಲ್ಲಿ ಶನಿವಾರ ಆಯೋಜಿಸಿದ ಸೈಕಲ್ ಜಾಥಾಕ್ಕೆ ಚಾಲನೆ ನೀಡಿ, ಮಾತನಾಡಿದರು. ‘ಕೋವಿಡ್ ಮೂರನೇ ಅಲೆಯ ಮುನ್ಸೂಚನೆ ಗೋಚರಿಸಲಾರಂಭಿಸಿದೆ. ಈ ಸಾಂಕ್ರಾಮಿಕ ಕಾಯಿಲೆಯ ವಿರುದ್ಧ ಹೋರಾಡಲು ಲಸಿಕೆಯೇ ಪ್ರಮುಖ ಅಸ್ತ್ರ. ಹಾಗಾಗಿ, ಜನರು ಜಾಗೃತರಾಗಿ ಲಸಿಕೆಗಳನ್ನು ಪಡೆದುಕೊಳ್ಳಬೇಕು’ ಎಂದರು.

ಯುನೈಟೆಡ್ ಆಸ್ಪತ್ರೆಯ ಸಂಸ್ಥಾಪಕ ಡಾ. ವಿಕ್ರಮ್ ಸಿದ್ದಾರೆಡ್ಡಿ ಮಾತನಾಡಿ, ‘ಕೋವಿಡ್ ಮೊದಲೆರಡು ಅಲೆಯಲ್ಲಿ ಮಾಡಿದ ತಪ್ಪುಗಳನ್ನು ಮತ್ತೆ ಮಾಡಬಾರದು. ಲಸಿಕೆ ಪಡೆದುಕೊಳ್ಳದಿದ್ದಲ್ಲಿ ಸೋಂಕು ಜೀವಕ್ಕೆ ಅಪಾಯ ತಂದೊಡ್ಡುವ ಸಾಧ್ಯತೆಯಿದೆ. ಆದ್ದರಿಂದ ಎರಡೂ ಡೋಸ್ ಲಸಿಕೆಯನ್ನು ಪಡೆದುಕೊಳ್ಳಬೇಕು. ಜಾಥಾದಲ್ಲಿ ಭಾಗವಹಿಸಿದ ಸೈಕಲ್ ಸವಾರರಿಗೆ ಉಚಿತವಾಗಿ ಎರಡೂ ಡೋಸ್ ಲಸಿಕೆ ನೀಡುತ್ತಿದ್ದೇವೆ’ ಎಂದು ಹೇಳಿದರು.

ಆಸ್ಪತ್ರೆಯ ಕಾರ್ಯನಿರ್ವಾಹಕ ನಿರ್ದೇಶಕ ಡಾ. ಶಾಂತಕುಮಾರ್ ಮುರುಡಾ, ‘ಲಸಿಕೆಯು ಎಲ್ಲರಿಗೂ ದೊರೆಯುವಂತಾಗಬೇಕೆಂಬ ಉದ್ದೇಶದಿಂದ ರಿಯಾಯಿತಿ ದರದಲ್ಲಿ ನಾವು ಒದಗಿಸುತ್ತಿದ್ದೇವೆ’ ಎಂದು ತಿಳಿಸಿದರು.

ಕಂದಾಯ ಸಚಿವ ಆರ್‌. ಅಶೋಕ ಹೇಳಿಕೆ

‘ಮಂದಿರ-ಮಸೀದಿಗಳ ಮೇಲೆ ನಿಯಂತ್ರಣ’

ಪ್ರಜಾವಾಣಿ ವಾರ್ತೆ

ರಾಷ್ಟ್ರೀಯ ಯುವ ಪ್ರತಿಷ್ಠಾನದ ವತಿಯಿಂದ ನೀಡಲಾದ ಟ್ಯಾಬ್‌ಗಳನ್ನು ಸಚಿವ ಆರ್‌. ಅಶೋಕ ವಿದ್ಯಾರ್ಥಿಗಳಿಗೆ ವಿತರಿಸಿದರು. ಪ್ರತಿಷ್ಠಾನದ ಅಧ್ಯಕ್ಷ ಪ್ರಮೋದ್ ಶ್ರೀನಿವಾಸ್, ಸ್ಥಳೀಯ ಮುಖಂಡ ಎಲ್‌. ಶ್ರೀನಿವಾಸ್ ಇದ್ದರು

ಬೆಂಗಳೂರು: ‘ರಾಜ್ಯದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿರುವ ಕಾರಣ, ಮದುವೆ ಸಮಾರಂಭಗಳು, ಮಂದಿರ–ಮಸೀದಿಗಳ ಮೇಲೆ ನಿಯಂತ್ರಣ ಹೇರಲು ಚಿಂತನೆ ನಡೆಸಲಾಗಿದೆ’ ಎಂದು ಕಂದಾಯ ಸಚಿವ ಆರ್‌. ಅಶೋಕ ಹೇಳಿದರು.

‘ಸ್ಮಾರ್ಟ್ ಪದ್ಮನಾಭ ನಗರ’ ಕಾರ್ಯಕ್ರಮದಡಿ, ರಾಷ್ಟ್ರೀಯ ಯುವ ಪ್ರತಿಷ್ಠಾನದ ವತಿಯಿಂದ 100 ಮಕ್ಕಳಿಗೆ ಉಚಿತವಾಗಿ ಟ್ಯಾಬ್‌ಗಳನ್ನು ವಿತರಿಸಿ ಅವರು ಮಾತನಾಡಿದರು.

‘ಹಬ್ಬಗಳ ಸಂದರ್ಭದಲ್ಲಿ ಮಂದಿರ–ಮಸೀದಿಗಳಲ್ಲಿ ಹೆಚ್ಚು ಜನ ಸೇರುತ್ತಾರೆ. ಅಲ್ಲದೆ, ಮದುವೆ ಸಮಾರಂಭಗಳಲ್ಲಿಯೂ ಜನಜಂಗುಳಿ ಹೆಚ್ಚು. ಅದಕ್ಕಾಗಿ ಈ ಸ್ಥಳಗಳಲ್ಲಿ ಕಟ್ಟುನಿಟ್ಟಿನ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ’ ಎಂದರು.

‘ಕೋವಿಡ್ ತಡೆಗೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುವುದು ಸರ್ಕಾರದ ಆದ್ಯತೆ. ಆದರೆ, ಲಾಕ್‌ಡೌನ್ ಹೇರಿಕೆ ಸರ್ಕಾರದ ಕೊನೆಯ ಪರ್ಯಾಯ ಕ್ರಮ. ಎಲ್ಲರೂ ಮಾರ್ಗಸೂಚಿಗಳನ್ನು ಪಾಲಿಸಬೇಕು’ ಎಂದರು.

ರಾಷ್ಟ್ರೀಯ ಯುವ ಪ್ರತಿಷ್ಠಾನದ ಸಂಸ್ಥಾಪಕ ಪ್ರಮೋದ್ ಶ್ರೀನಿವಾಸ್ ಮಾತನಾಡಿ, ‘ಆನ್‌ಲೈನ್ ತರಗತಿಗೆ ಹಾಜರಾಗಲು ಬೇಕಾದ ಸ್ಮಾರ್ಟ್ ಫೋನ್ ಅಥವಾ ಇನ್ನಿತರ ಸಾಧನಗಳು ಇಲ್ಲದೆ ಅನೇಕ ವಿದ್ಯಾರ್ಥಿಗಳು ತೊಂದರೆಗೆ ಸಿಲುಕಿದ್ದರು. ಅಂತಹ ಆಯ್ದ 100 ಮಕ್ಕಳಿಗೆ ಉಚಿತವಾಗಿ ಟ್ಯಾಬ್ ನೀಡಿದ್ದೇವೆ’ ಎಂದರು.

‘ಸಾರ್ವಜನಿಕ ಶಿಕ್ಷಣ ಇಲಾಖೆ ಇತ್ತೀಚೆಗೆ ನಡೆಸಿದ ಸಮೀಕ್ಷೆಯಲ್ಲಿ 93.01 ಲಕ್ಷ ವಿದ್ಯಾರ್ಥಿಗಳ ಪೈಕಿ ಶೇ 33ರಷ್ಟು ವಿದ್ಯಾರ್ಥಿಗಳ ಬಳಿ ಸ್ಮಾರ್ಟ್ ಫೋನ್‌ಗಳಿಲ್ಲ. ಈ ಮಕ್ಕಳು ಕಲಿಕೆಯಲ್ಲಿ ಹಿಂದುಳಿಯುವ ಪರಿಸ್ಥಿತಿ ನಿರ್ಮಾಣವಾಗಿದೆ’ ಎಂದೂ ಹೇಳಿದರು.

ಬೆಂಗಳೂರು ನಗರದ ಕೋವಿಡ್ ಅಂಕಿ–ಅಂಶ

12,32,597 ▲ ಒಟ್ಟು ಸೋಂಕಿತರು (12,32,220 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
8,200 ▼	12,08,462 ▲	15,934 ▲

ದಿನದ ಏರಿಕೆ

ಹೊಸ ಪ್ರಕರಣ	377 ▼
ಗುಣಮುಖ	365 ▼
ಸಾವು	1 ▼

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಐಟಿ ನಿಯಮಾವಳಿಗೆ ತಡೆ

ಮುಂಬೈ(ಪಿಟಿಐ): ಡಿಜಿಟಲ್ ಮಾಧ್ಯಮಗಳಿಗೆ ನೀತಿ ಸಂಹಿತೆ ಕಡ್ಡಾಯ ಕುರಿತ ನಿಯಮಾವಳಿಗೆ ಸಂಬಂಧಿಸಿದಂತೆ ಬಾಂಬೆ ಹೈಕೋರ್ಟ್ ಶನಿವಾರ ತಡೆಯಾಜ್ಞೆ ನೀಡಿದೆ.

ಮಾಹಿತಿ ತಂತ್ರಜ್ಞಾನ ನಿಯಮಾವಳಿ–2021ರಲ್ಲಿನ ಉಪನಿಯಮ 9(1) ಮತ್ತು 9(3)ಕ್ಕೆ ಅನುಷ್ಠಾನಕ್ಕೆ ಸಂಬಂಧಿಸಿದ ಈ ತಡೆ ನೀಡಲಾಗಿದೆ.

ನೀತಿ ಸಂಹಿತೆಯನ್ನು ಕಡ್ಡಾಯವಾಗಿ ಪಾಲಿಸುವಂತೆ ಸೂಚಿಸುವುದರಿಂದ ಸಂವಿಧಾನದ 19ನೇ ವಿಧಿ ಅಡಿ ಅಭಿವ್ಯಕ್ತಿ ಸ್ವಾತಂತ್ರ್ಯದ ಉಲ್ಲಂಘನೆಯಾಗುತ್ತದೆ ಎಂದು ಮುಖ್ಯ ನ್ಯಾಯಮೂರ್ತಿ ದೀಪಂಕರ್ ದತ್ತಾ ಮತ್ತು ನ್ಯಾಯಮೂರ್ತಿ ಜಿ.ಎಸ್‌. ಕುಲಕರ್ಣಿ ಅವರನ್ನೊಳಗೊಂಡ ಪೀಠವು ಹೇಳಿದೆ. ಆದರೆ, ನ್ಯಾಯಾಲಯವು ಮಾಹಿತಿ ತಂತ್ರಜ್ಞಾನ ಕಾಯ್ದೆಯ ಉಪನಿಯಮ 14 ಮತ್ತು 16ಕ್ಕೆ ತಡೆ ನೀಡಲು ನಿರಾಕರಿಸಿದೆ.

ಕೆಲವು ಸಂದರ್ಭಗಳಲ್ಲಿ ವಿಷಯಗಳಿಗೆ ನಿರ್ಬಂಧ ಹೇರುವುದು ಮತ್ತು ಅಂತರ ಸಚಿವಾಲಯ ಸಮಿತಿ ರಚಿಸಲು ಈ ನಿಯಮಗಳು ಅವಕಾಶ ಕಲ್ಪಿಸುತ್ತವೆ. ಹೊಸ ನಿಯಮಗಳನ್ನು ಪ್ರಶ್ನಿಸಿ ಪತ್ರಕರ್ತ ನಿಖಿಲ್ ವಾಗ್ಲೆ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದರು.

‘ರಾಜ್ಯದಲ್ಲಿ ಮಧ್ಯಂತರ ಚುನಾವಣೆ’

ರಾಯಚೂರು: ‘ಆಪರೇಷನ್ ಕಮಲದ ಮೂಲಕ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿರುವ ಬಿಜೆಪಿ ಸರ್ಕಾರದಲ್ಲಿ ಸಚಿವ ಸ್ಥಾನಕ್ಕಾಗಿ ಶಾಸಕರಲ್ಲಿ ಅಸಮಾಧಾನ ಶುರುವಾಗಿದೆ. ಅವಧಿಗೆ ಮುನ್ನವೇ ರಾಜ್ಯದಲ್ಲಿ ಮಧ್ಯಂತರ ಚುನಾವಣೆ ನಡೆಯಬಹುದು’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಈಶ್ವರ ಖಂಡ್ರೆ ಹೇಳಿದರು.

‘ಅಸ್ಥಿರ ಸರ್ಕಾರ ಹೆಚ್ಚು ದಿನ ಇರುವುದಿಲ್ಲ. ಚುನಾವಣೆ ಎದುರಿಸುವುದಕ್ಕೆ ಕಾಂಗ್ರೆಸ್ ಸನ್ನದ್ಧವಾಗಿದೆ. ಸಚಿವರಾದ ಎಂ.ಟಿ.ಬಿ.ನಾಗರಾಜ, ಮುರುಗೇಶ ನಿರಾಣಿ ಮತ್ತು ಇನ್ನಿತರ ಬಿಜೆಪಿ ಶಾಸಕರು ಕಾಂಗ್ರೆಸ್ ಸಂಪರ್ಕದಲ್ಲಿದ್ದಾರೆ’ ಎಂದು ಅವರು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಹಣ ಅಕ್ರಮ ವರ್ಗಾವಣೆ ಪ್ರಕರಣ

ಚಾರ್ಟರ್ಡ್ ಅಕೌಂಟೆಂಟ್ ಬಂಧಿಸಿದ ಇ.ಡಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಶಕ್ತಿ ಭೋಗ್ ಫುಡ್ಸ್ ಲಿಮಿಟೆಡ್ ವಿರುದ್ಧದ ₹3,269.42 ಕೋಟಿ ಬ್ಯಾಂಕ್ ಸಾಲ ವಂಚನೆಯ ಹಣ ವರ್ಗಾವಣೆ ಪ್ರಕರಣ ಸಂಬಂಧ ಚಾರ್ಟರ್ಡ್ ಅಕೌಂಟೆಂಟ್ ಒಬ್ಬರನ್ನು ದೆಹಲಿಯಲ್ಲಿ ಜಾರಿ ನಿರ್ದೇಶನಾಲಯ (ಇಡಿ) ಬಂಧಿಸಿದೆ.

ರಾಮನ್ ಭುರಾರಿಯಾ ಅವರನ್ನು ಅಕ್ರಮ ಹಣ ವರ್ಗಾವಣೆ ಕಾಯ್ದೆ (ಪಿಎಂಎಲ್‌ಎ) ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿದ್ದು, ಕೋರ್ಟ್ ಇದೇ 20ರವರೆಗೆ ಅವರನ್ನು ಬಂಧನಕ್ಕೆ ಒಪ್ಪಿಸಿದೆ.

ನ್ಯಾಯಾಲಯವು ಭುರಾರಿಯಾಗೆ ನಿರೀಕ್ಷಣಾ ಜಾಮೀನು ತಿರಸ್ಕರಿಸಿದ ನಂತರ, ವಂಚನೆ ಆರೋಪ ಪ್ರಕರಣದಲ್ಲಿ ‘ಸಹಾಯ ಮತ್ತು ಸಹಭಾಗಿತ್ವ’ ನೀಡಿದ್ದಕ್ಕಾಗಿ ಅವರನ್ನು ಶುಕ್ರವಾರ ಬಂಧಿಸಲಾಯಿತು. ಅಲ್ಲದೇ ಭುರಾರಿಯಾಗೆ ಸಂಬಂಧಿಸಿದ ಹಲವು ಜಾಗಗಳಲ್ಲಿ ಶೋಧ ನಡೆಸಲಾಯಿತು. ವಿವಿಧ ದಾಖಲೆಗಳು ಮತ್ತು ಡಿಜಿಟಲ್ ಸಾಕ್ಷ್ಯಗಳನ್ನು ವಶಕ್ಕೆ ಪಡೆಯಲಾಯಿತು ಎಂದು ಇ.ಡಿ ಹೇಳಿದೆ.

ಈ ಪ್ರಕರಣ ಸಂಬಂಧ ಶಕ್ತಿ ಭೋಗ್ ಫುಡ್ಸ್ ಲಿಮಿಟೆಡ್ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕರಾದ ಕೇವಲ್ ಕ್ರಿಶನ್‌ಕುಮಾರ್ ಅವರನ್ನು ಇ.ಡಿ ಜುಲೈನಲ್ಲಿ ಬಂಧಿಸಿತ್ತು. ಶಕ್ತಿ ಭೋಗ್ ಫುಡ್ಸ್ ಲಿಮಿಟೆಡ್ ಮತ್ತು ಇತರರ ವಿರುದ್ಧ ಕ್ರಿಮಿನಲ್ ಪಿತೂರಿ, ವಂಚನೆ ಮತ್ತು ಕ್ರಿಮಿನಲ್ ದುರ್ನಡತೆಗಾಗಿ ಸಿಬಿಐ ಎಫ್‌ಐಆರ್ ದಾಖಲಿಸಿದ ನಂತರ ಇ.ಡಿ, ಅಕ್ರಮ ಹಣ ವರ್ಗಾವಣೆ ಪ್ರಕರಣ ದಾಖಲಿಸಿತ್ತು.

ಶಕ್ತಿ ಭೋಗ್ ಫುಡ್ಸ್ ಲಿಮಿಟೆಡ್ ವಹಿವಾಟು 2008ರಲ್ಲಿ ₹1,411.87 ಕೋಟಿಯಿಂದ 2013-14ರ ವೇಳೆಗೆ ₹6,000 ಕೋಟಿಗೆ ಏರಿದೆ. ಆದಾಗ್ಯೂ, ಖಾತೆಯು ಕಾರ್ಯನಿರ್ವಹಿಸದ ಸ್ವತ್ತಾಗಿ (ಎನ್‌ಪಿಎ) ಬದಲಾಯಿತು. ಇದನ್ನು 2019ರಲ್ಲಿ ವಂಚನೆ ಎಂದು ಘೋಷಿಸಲಾಯಿತು ಎಂದು ಎಸ್‌ಬಿಐ ತನ್ನ ದೂರಿನಲ್ಲಿ ಹೇಳಿದೆ.

ಅಪರೂಪದ ಕ್ಷಣಕ್ಕೆ ಲೋಕ ಅದಾಲತ್ ಸಾಕ್ಷಿ

ವಿಚ್ಛೇದಿತ ದಂಪತಿಗೆ ಮರುವಿವಾಹ ಭಾಗ್ಯ!

ಪ್ರಜಾವಾಣಿ ವಾರ್ತೆ

ಮರು ವಿವಾಹಕ್ಕೆ ಒಪ್ಪಿಕೊಂಡ ಮಾರ ಹಾಗೂ ಗೀತಾ ಹಾರ ಬದಲಾಯಿಸಿಕೊಂಡರು. ಎಂ.ಎಲ್‌.ರಘುನಾಥ್, ಎಚ್‌.ಎಂ.ವಿರೂಪಾಕ್ಷಯ್ಯ ಇದ್ದಾರೆ

ಮೈಸೂರು: ನಾಲ್ಕು ವರ್ಷಗಳ ಹಿಂದೆ ವಿಚ್ಛೇದನ ಪಡೆದಿದ್ದ ದಂಪತಿ ಮನಸ್ತಾಪ ಬದಿಗಿಟ್ಟು ಮತ್ತೆ ಒಂದಾದ ಅಪರೂಪದ ಕ್ಷಣಕ್ಕೆ ನಗರದಲ್ಲಿ ಶನಿವಾರ ನಡೆದ ಲೋಕ ಅದಾಲತ್ ಸಾಕ್ಷಿಯಾಯಿತು.

ಜ್ಯೋತಿ ನಗರದ ಮಾರ (50 ವರ್ಷ) ಮತ್ತು ಗೀತಾ (47 ವರ್ಷ) ಮರು ವಿವಾಹಕ್ಕೆ ಒಪ್ಪಿಕೊಂಡ ಜೋಡಿ. 1989ರಲ್ಲಿ ಮದುವೆಯಾಗಿದ್ದ ಅವರಿಗೆ ಮೂವರು ಮಕ್ಕಳಿದ್ದಾರೆ. ದಂಪತಿ ನಡುವೆ ಮನಸ್ತಾಪ ಉಂಟಾಗಿ ಮೂರು ದಶಕಗಳ ದಾಂಪತ್ಯ ಜೀವನವನ್ನು ಪರಸ್ಪರರ ಸಮ್ಮತಿಯೊಂದಿಗೆ 2018ರಲ್ಲಿ ಕೊನೆಗೊಳಿಸಿ ವಿಚ್ಛೇದನ ಪಡೆದಿದ್ದರು. ದಂಪತಿಯ ಮೂವರು ಮಕ್ಕಳಿಗೂ ಮದುವೆಯಾಗಿದೆ.

ಪತ್ನಿಗೆ ಪ್ರತಿ ತಿಂಗಳು ₹3 ಸಾವಿರ ಜೀವನಾಂಶ ನೀಡುವಂತೆ ಇಲ್ಲಿನ 2ನೇ ಕೌಟುಂಬಿಕ ನ್ಯಾಯಾಲಯ ಆದೇಶಿಸಿತ್ತು. ಜೀವನಾಂಶ ಸರಿಯಾಗಿ ದೊರೆಯದ ಕಾರಣ ಗೀತಾ ನ್ಯಾಯಾಲಯದ ಮೊರೆ ಹೋಗಿದ್ದರು.

ಪ್ರಕರಣದ ವಿಚಾರಣೆ ನಡೆಸಿದ್ದ 2ನೇ ಕೌಟುಂಬಿಕ ನ್ಯಾಯಾಲಯದ ನ್ಯಾಯಾಧೀಶ ಎಚ್‌.ಎಂ.ವಿರೂಪಾಕ್ಷಯ್ಯ, ಲೋಕ ಅದಾಲತ್‌ನಲ್ಲಿ ದಂಪತಿಯನ್ನು ಮತ್ತೆ ಒಂದುಗೂಡಿಸಲು ಪ್ರಯತ್ನಿಸಿ ಯಶಸ್ವಿಯಾದರು.

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಎಂ.ಎಲ್‌.ರಘುನಾಥ್ ಅವರ ಸಮ್ಮುಖದಲ್ಲಿ ಇಬ್ಬರೂ ಸಾಂಕೇತಿಕವಾಗಿ ಹಾರ ಬದಲಾಯಿಸಿಕೊಂಡರು. ನ್ಯಾಯಾಧೀಶರು ಅಕ್ಷತೆ ಹಾಕಿ ಶುಭ ಕೋರಿದರು.

‘ನ್ಯಾಯಾಧೀಶನಾಗಿ ಎರಡೂವರೆ ದಶಕದಿಂದ ಸೇವೆ ಸಲ್ಲಿಸುತ್ತಿದ್ದು, ವಿಚ್ಛೇದಿತ ದಂಪತಿಯನ್ನು ಒಂದುಗೂಡಿಸುವಅವಕಾಶಲಭಿಸಿದ್ದುಇದೇಮೊದಲು. ಅವರು ಸೋಮವಾರ ವಿವಾಹ ನೋಂದಣಿ ಅಧಿಕಾರಿಗಳ ಮುಂದೆ ಕಾನೂನುಬದ್ಧವಾಗಿ ಮರುವಿವಾಹವಾಗಲಿದ್ದಾರೆ’ ಎಂದು ನ್ಯಾಯಾಧೀಶ ರಘುನಾಥ್ ತಿಳಿಸಿದರು.

‘ಇದು ಸಂತಸದ ಸಂಗತಿ. ಇಬ್ಬರಿಗೂ ತಮ್ಮ ತಪ್ಪಿನ ಅರಿವಾಗಿದ್ದು, ಒಟ್ಟಾಗಲು ತೀರ್ಮಾನಿಸಿದ್ದಾರೆ. ವಿಚ್ಛೇದಿತ ದಂಪತಿ ಲೋಕ ಅದಾಲತ್‌ನಲ್ಲಿ ರಾಜಿಯಾದ ಘಟನೆ ಮೈಸೂರಿನಲ್ಲಿ ನಡೆದಿರುವುದು ಇದೇ ಮೊದಲು’ ಎಂದು ನ್ಯಾಯಾಧೀಶ ವಿರೂಪಾಕ್ಷಯ್ಯ ಹೇಳಿದರು.

ಸುದ್ದಿ 2 ನಿಮಿಷ

ಸಿ.ಟಿ. ರವಿ ಹೇಳಿಕೆಗೆ ಗಣೇಶ್ ಕಾರ್ಣಿಕ್ ಬೆಂಬಲ

ಬೆಂಗಳೂರು: ಸರ್ಕಾರಿ ವೆಚ್ಚದಲ್ಲಿ ನಡೆಯುತ್ತಿರುವ ಇಂದಿರಾ ಕ್ಯಾಂಟೀನ್‌ಗಳ ಹೆಸರನ್ನು ಅನ್ನಪೂರ್ಣೇಶ್ವರಿ ಕ್ಯಾಂಟೀನ್ ಎಂಬುದಾಗಿ ಬದಲಿಸುವಂತೆ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ನೀಡಿರುವ ಹೇಳಿಕೆಯನ್ನು ಬೆಂಬಲಿಸುವುದಾಗಿ ಬಿಜೆಪಿ ರಾಜ್ಯ ಘಟಕದ ವಕ್ತಾರ ಗಣೇಶ್ ಕಾರ್ಣಿಕ್ ಹೇಳಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ‘ದೇಶದಲ್ಲಿ ತುರ್ತು ಪರಿಸ್ಥಿತಿ ಹೇರಿ, ವಾಕ್ ಸ್ವಾತಂತ್ರ್ಯವನ್ನೇ ದಮನ ಮಾಡಿದ್ದ ನಾಯಕಿಯ ಹೆಸರಿನಲ್ಲಿ ಬಡವರಿಗಾಗಿ ಯೋಜನೆಗಳನ್ನು ಘೋಷಿಸುವುದು ಎಷ್ಟು ಸರಿ? ಒಂದು ಕುಟುಂಬದ ಸದಸ್ಯರ ಹೆಸರಿನಲ್ಲಿ 600ಕ್ಕೂ ಹೆಚ್ಚು ಯೋಜನೆಗಳು, ಸಂಸ್ಥೆಗಳು, ವಿಶ್ವವಿದ್ಯಾಲಯಗಳು, ಕ್ರೀಡಾಂಗಣಗಳು ಇವೆ. ಇದು ಕಾಂಗ್ರೆಸ್ ಪಕ್ಷದ ಬೌದ್ಧಿಕ ದಿವಾಳಿತನ ಮತ್ತು ಗುಲಾಮಿ ಮನಸ್ಥಿತಿಗೆ ಸಾಕ್ಷಿ’ ಎಂದು ಟೀಕಿಸಿದ್ದಾರೆ. ನಾಡಿನ ಜನರು ಬಯಸುತ್ತಿರುವ ಬದಲಾವಣೆಗೆ ಪೂರಕವಾಗಿ ಸಿ.ಟಿ. ರವಿ ಹೇಳಿಕೆ ನೀಡಿದ್ದಾರೆ. ಕಾಂಗ್ರೆಸ್ ಪಕ್ಷವು ತನ್ನ ಸ್ವಾರ್ಥಕ್ಕಾಗಿ ಒಂದೇ ಕುಟುಂಬದ ಸದಸ್ಯರ ಹೆಸರನ್ನು ಎಲ್ಲದಕ್ಕೂ ನಾಮಕರಣ ಮಾಡುತ್ತಾ ಬಂದಿದೆ. ಪ್ರಜಾಪ್ರಭುತ್ವ ವಿರೋಧಿಯಾದ ಈ ನಡೆಯನ್ನು ಬಿಜೆಪಿ ಖಂಡಿಸುತ್ತದೆ ಎಂದಿದ್ದಾರೆ.

ಸಿದ್ದರಾಮಯ್ಯ– ಜಮೀರ್ ಚರ್ಚೆ

ಬೆಂಗಳೂರು: ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ಚಾಮರಾಜಪೇಟೆ ಕ್ಷೇತ್ರದ ಕಾಂಗ್ರೆಸ್ ಶಾಸಕ ಜಮೀರ್ ಅಹ್ಮದ್ ಖಾನ್ ಅವರು ಶನಿವಾರ ಭೇಟಿ ಮಾಡಿ ಚರ್ಚೆ ನಡೆಸಿದರು.

ಹೈದರಾಬಾದ್ ಹೋಗಿದ್ದ ಜಮೀರ್, ಅಲ್ಲಿಂದ ಬಂದವರು ನೇರವಾಗಿ ಶಿವಾನಂದ ವೃತ್ತದಲ್ಲಿರುವ ಸಿದ್ದರಾಮಯ್ಯ ಅವರ ನಿವಾಸಕ್ಕೆ ತೆರಳಿದರು.

ಜಮೀರ್ ಅವರ ಮನೆ ಮೇಲೆ ಇತ್ತೀಚೆಗೆ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ದಾಳಿ ನಡೆಸಿದ್ದರು. ಸಿದ್ದರಾಮಯ್ಯ ಅವರ ಮನೆಗೆ ಆಗಾಗ ಬಂದು ಹೋಗುತ್ತಿದ್ದ ಜಮೀರ್, ಇ.ಡಿ ದಾಳಿಯ 10 ದಿನಗಳ ಬಳಿಕ ಮೊದಲ ಬಾರಿಗೆ ಭೇಟಿ ಮಾಡಿ ಆ ಬಗ್ಗೆ ಮಾಹಿತಿ ಹಂಚಿಕೊಂಡಿದ್ದಾರೆ.

ಸುಮಾರು 40 ನಿಮಿಷ ಇಬ್ಬರೂ ಚರ್ಚೆ ನಡೆಸಿದರು. ಬಳಿಕ ಅಲ್ಲಿಂದ ಹೊರಟ ಜಮೀರ್, ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಲು ನಿರಾಕರಿಸಿದರು.

ಸಿ.ಟಿ.ರವಿ ಕುಡುಕ: ಧ್ರುವನಾರಾಯಣ

ಪ್ರಜಾವಾಣಿ ವಾರ್ತೆ



ಆರ್‌. ಧ್ರುವ ನಾರಾಯಣ

ಮೈಸೂರು: ‘ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಕುಡುಕ ಮತ್ತು ವ್ಯಭಿಚಾರಿ. 2019ರ ಫೆಬ್ರುವರಿಯಲ್ಲಿ ಪಾನಮತ್ತರಾಗಿ ಇಬ್ಬರ ಸಾವಿಗೆ ಕಾರಣರಾಗಿದ್ದವರು’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್‌.ಧ್ರುವನಾರಾಯಣ ದೂರಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ರವಿ ಸಚಿವರಾಗಿದ್ದಾಗ ಕ್ಯಾಸಿನೋ ಕ್ಲಬ್ ತೆರೆಯಲು ಯತ್ನಿಸಿದ್ದರು. ಮದ್ಯಪಾನಿಯಾಗಿರುವ ಅವರಿಂದ ಬೇರೇನೂ ನಿರೀಕ್ಷಿಸಲು ಸಾಧ್ಯವಿಲ್ಲ. ಅವರ ಬಾಯಿಂದ ಬರುವ ಪದಗಳನ್ನು ಕೇಳಲು ಹೇಸಿಗೆ ಅನ್ನಿಸುತ್ತದೆ. ಅವರದು ದುರಂಹಕಾರದ ಪರಮಾವಧಿ. ಅದು ಬಿಜೆಪಿ ಸಂಸ್ಕೃತಿ’ ಎಂದರು.

‘ಹಸಿರು ಕ್ರಾಂತಿಯ ಮೂಲಕ ಆಹಾರ ಸ್ವಾವಲಂಬನೆಗೆ ಕಾರಣರಾದವರು ಇಂದಿರಾಗಾಂಧಿ. ದೇಶದ ನಿಜವಾದ ಅನ್ನಪೂರ್ಣೇಶ್ವರಿ’ ಎಂದರು.

‘ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಅಟಲ್‌ಜೀ ಆವಾಸ್ ಯೋಜನೆ ಸೇರಿದಂತೆ ಬಿಜೆಪಿ ಮುಖಂಡರ ಯಾವ ಹೆಸರನ್ನೂ ಬದಲಿಸಿಲ್ಲ. ಆದರೆ ಈಗ ಜ್ವಲಂತ ಸಮಸ್ಯೆಗಳಿಂದ ಜನರ ಗಮನವನ್ನು ಬೇರೆಡೆ ಸೆಳೆಯಲು ಮರುನಾಮಕಾರಣದ ರಾಜಕಾರಣ ನಡೆದಿದೆ’ ಎಂದು ಕಿಡಿಕಾರಿದರು.

ಚಿತ್ರಾವಳಿ

ನಗರದಲ್ಲಿ ಶನಿವಾರ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದವರಿಗೆ ಆರೋಗ್ಯ ಕಾರ್ಯಕರ್ತರು ಕೋವಿಡ್ ಪರೀಕ್ಷೆ ನಡೆಸಿದರು ಪ್ರಜಾವಾಣಿ ಚಿತ್ರ

ಬೇರೆ ಊರುಗಳಿಂದ ನಗರದ ರೈಲು ನಿಲ್ದಾಣದಲ್ಲಿ ಶನಿವಾರ ಬಂದಿಳಿದ ಪ್ರಯಾಣಿಕರಿಗೆ ಆರೋಗ್ಯ ಕಾರ್ಯಕರ್ತರು ಕೋವಿಡ್ ಪರೀಕ್ಷೆ ನಡೆಸಿದರು

ಆರ್‌.ಟಿ.ನಗರದಲ್ಲಿನ ತರಳಬಾಳು ಕೇಂದ್ರದಲ್ಲಿ ಚಿತ್ರದುರ್ಗದ ತರಳಬಾಳು ಮಠದ ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅವರನ್ನು ಸಹಕಾರ ಸಚಿವ ಎಸ್‌.ಟಿ. ಸೋಮಶೇಖರ್ ಅವರು ಭೇಟಿಯಾಗಿ ಆಶೀರ್ವಾದ ಪಡೆದರು

ಹಣಕಾಸು ಇಲಾಖೆಯಲ್ಲೇ ಬಾಕಿ ಉಳಿದ ಅನುದಾನ ಕೋರಿಕೆಯ ಪ್ರಸ್ತಾವ

ಸಾರಿಗೆ ನೌಕರರಿಗೆ ಸಿಗದ ವೇತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಸೋಂಕು ರಾಜ್ಯಕ್ಕೆ ಕಾಲಿಟ್ಟಾಗಿನಿಂದ ತಿಂಗಳ ವೇತನಕ್ಕಾಗಿ ಸರ್ಕಾರದ ಕಡೆಯೇ ಕೈಚಾಚಬೇಕಾದ ಅನಿವಾರ್ಯತೆಯಿಂದ ಸಾರಿಗೆ ಸಂಸ್ಥೆಗಳು ಹೊರ ಬಂದಿಲ್ಲ. ವೇತನಕ್ಕೆ ಅನುದಾನ ಕೋರಿರುವ ಪ್ರಸ್ತಾವನೆ ಹಣಕಾಸು ಇಲಾಖೆಯಲ್ಲೇ ಬಾಕಿ ಇದ್ದು, ಈ ಬಾರಿ ವರಮಹಾ ಲಕ್ಷ್ಮಿ ಹಬ್ಬವನ್ನೂ ನೌಕರರು ಬರಿಗೈನಲ್ಲೇ ಬರ ಮಾಡಿಕೊಳ್ಳಬೇಕಾದ ಕಷ್ಟದ ಸ್ಥಿತಿ ಎದುರಾಗಿದೆ.

ಲಾಕ್‌ಡೌನ್ ತೆರವಾದ ಬಳಿಕ ಪೂರ್ಣ ಪ್ರಮಾಣದಲ್ಲಿ(ಎಲ್ಲಾ ಸೀಟುಗಳಲ್ಲೂ) ಪ್ರಯಾಣಿಕರು ಸಂಚರಿಸಲು ಅವಕಾಶ ನೀಡಿದ್ದರೂ, ಬಸ್ ಹತ್ತಲು ಪ್ರಯಾಣಿಕರು ಹಿಂದೇಟು ಹಾಕುತ್ತಲೇ ಇದ್ದಾರೆ. ಈ ನಡುವೆ ಮಹಾರಾಷ್ಟ್ರ ಮತ್ತು ಕೇರಳಕ್ಕೆ ಬಸ್ ಸಂಚಾರವನ್ನು ಮತ್ತೆ ಸ್ಥಗಿತಗೊಳಿಸಲಾಗಿದೆ. ಪ್ರಯಾಣಿಕರ ಕೊರತೆ ಕಾರಣಕ್ಕೆ ಎಲ್ಲಾ ಮಾರ್ಗಗಳಲ್ಲೂ ಪೂರ್ಣ ಪ್ರಮಾಣದ ಬಸ್ ಸಂಚಾರ ಆರಂಭಿಸಿಲ್ಲ.

ನೌಕರರು ಕೆಲಸವಿಲ್ಲದೆ ಡಿಪೋಗಳಲ್ಲಿ ಕೂರುವ ಸ್ಥಿತಿ ಮುಂದುವರಿದೇ ಇದೆ. ತಡೆ ರಹಿತ ಬಸ್‌ಗಳಲ್ಲಿ ಈ ಹಿಂದೆ ಚಾಲಕರೊಬ್ಬರೇ ನಿರ್ವಾಹಕರ ಕೆಲಸವನ್ನೂ ನಿರ್ವಹಿಸುತ್ತಿದ್ದರು. ನೌಕರರನ್ನು ಖಾಲಿ ಕೂರಿಸಬಾರದು ಎಂಬ ಕಾರಣಕ್ಕೆ ತಡೆ ರಹಿತ ಬಸ್‌ಗಳಲ್ಲೂ ಚಾಲಕ ಮತ್ತು ನಿರ್ವಾಹಕರಿಬ್ಬರನ್ನೂ ನಿಯೋಜಿಸಲಾಗುತ್ತಿದೆ. ಆ ಬಸ್‌ಗಳೂ ಪ್ರಯಾಣಿಕರಿಲ್ಲದೆ ಖಾಲಿ ಖಾಲಿಯಾಗಿಯೇ ಸಂಚರಿಸುತ್ತಿವೆ. ಇನ್ನು ಡೀಸೆಲ್ ದರ ದುಪಟ್ಟಾಗಿರುವುದು ಸಾರಿಗೆ ಸಂಸ್ಥೆಗಳಿಗೆ ಗಾಯದ ಮೇಲೆ ಬರೆ ಎಳೆದಂತಾಗಿದೆ. ಬರುವ ವರಮಾನವೆಲ್ಲ ಡೀಸೆಲ್ ವೆಚ್ಚಕ್ಕೆ ಸಮವಾಗುತ್ತಿದೆ.

ನಿಗಮದ ವರಮಾನ ಡೀಸೆಲ್ ವೆಚ್ಚಕ್ಕೆ ಸಮವಾಗುತ್ತಿದೆ. ವೇತನಕ್ಕೆ ಅನುದಾನ ಕೋರಿ ಸಲ್ಲಿಸಿರುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆ ಹಂತದಲ್ಲಿದೆ

ಶಿವಯೋಗಿ ಸಿ. ಕಳಸದ
ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ

ನೌಕರರ ವೇತನಕ್ಕೆ ಮತ್ತೆ ಸರ್ಕಾರದ ಮುಂದೆಯೇ ಕೈಚಾಚುವ ಸ್ಥಿತಿ ಇದೆ. ನಾಲ್ಕೂ ಸಂಸ್ಥೆಗಳ ನೌಕರರಿಗೆ ವೇತನ ನೀಡಲು ₹326 ಕೋಟಿ ಅನುದಾನ ಬೇಕು. ಹೆಚ್ಚಳ ಮಾಡಿರುವ ತುಟ್ಟಿಭತ್ಯೆಯ ಹೊರೆಯೂ ಸೇರಿ ಒಟ್ಟಾರೆ ₹350 ಕೋಟಿಗೂ ಹೆಚ್ಚು ಅನುದಾನ ಬೇಕಾಗಲಿದೆ. ಅನುದಾನ ಕೋರಿ ಕೆಎಸ್‌ಆರ್‌ಟಿಸಿ ಮೂಲಕ ನಾಲ್ಕು ನಿಗಮಗಳು ಸಲ್ಲಿಸಿರುವ ಪ್ರಸ್ತಾವನೆ ಹಣಕಾಸು ಇಲಾಖೆಯಲ್ಲಿ ಪರಿಶೀಲನೆಯ ಹಂತದಲ್ಲಿದೆ.

ಹಿಂದಿನ ಸಾರಿಗೆ ಸಚಿವ ಲಕ್ಷ್ಮಣ ಸವದಿ ಅವರು ಮುಖ್ಯಮಂತ್ರಿ ಆಗಿದ್ದ ಬಿ.ಎಸ್. ಯಡಿಯೂರಪ್ಪ ಅವರಿಗೆ ಮನವರಿಕೆ ಮಾಡಿಸಿ ಅನುದಾನ ಬಿಡುಗಡೆ ಮಾಡಿಸುತ್ತಿದ್ದರು. ಹೊಸ ಸರ್ಕಾರ ಹಣಕಾಸಿನ ಸ್ಥಿತಿಗತಿ ನೋಡಿಕೊಂಡು ಹೆಜ್ಜೆ ಇಡುತ್ತಿದೆ. ಹೀಗಾಗಿ, ನೌಕರರ ವೇತನದ ಪ್ರಸ್ತಾವನೆ ಇನ್ನೂ ಪರಿಶೀಲನೆ ಹಂತದಲ್ಲೇ ಇದೆ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

'ಮುಖ್ಯಮಂತ್ರಿ ಅವರ ಅನುಮೋದನೆ ಪಡೆದು ಹಣ ಬಿಡುಗಡೆಯಾಗಿ ನಿಗಮಗಳ ಖಾತೆಗೆ ಹಂಚಿಕೆಯಾಗಿ, ಅಲ್ಲಿಂದ ನೌಕರರ ಬ್ಯಾಂಕ್ ಖಾತೆಗಳಿಗೆ ಜಮೆ ಆಗಲು ಇನ್ನೂ ಸಾಕಷ್ಟು ಸಮಯ ಬೇಕಾಗಲಿದೆ. ಈ ಬಾರಿಯ ವರಮಹಾಲಕ್ಷ್ಮಿ ಹಬ್ಬವನ್ನು ನೌಕರರು ವೇತನ ಇಲ್ಲದ ಖಾಲಿ ಜೇಬಿನಲ್ಲೇ ಆಚರಿಸಬೇಕಾಗುತ್ತದೆ. ಅದಕ್ಕೆ ಅವಕಾಶ ನೀಡದೆ ಹಬ್ಬಕ್ಕೂ ಮೊದಲೇ ವೇತನ ನೀಡಬೇಕು' ಎಂದು ನೌಕರರ ಮುಖಂಡರು ಆಗ್ರಹಿಸಿದ್ದಾರೆ.

'ಬಸ್ ಪ್ರಯಾಣ ದರ ಏರಿಕೆ ಇಲ್ಲ'

ಬಳ್ಳಾರಿ: ಪೆಟ್ರೋಲ್ ಮತ್ತು ಡೀಸೆಲ್ ದರ ಹೆಚ್ಚಳವಾಗಿದ್ದರೂ, ಬಸ್ ಪ್ರಯಾಣ ದರವನ್ನು ಸದ್ಯಕ್ಕೆ ಏರಿಸುವುದಿಲ್ಲ ಎಂದು ಸಾರಿಗೆ ಸಚಿವ ಬಿ. ಶ್ರೀರಾಮುಲು ತಿಳಿಸಿದರು.

ಪ್ರಯಾಣ ದರ ಹೆಚ್ಚಿಸಿದರೆ ಪ್ರಯಾಣಿಕರಿಗೆ ತೊಂದರೆಯಾಗಲಿದೆ. ಇದರ ಬದಲಾಗಿ ಎಲೆಕ್ಟ್ರಿಕ್ ಬಸ್‌ಗಳನ್ನು ಓಡಿಸಲು ಯೋಜನೆ ರೂಪಿಸಲಾಗಿದ್ದು, ಟೆಂಡರ್ ಕೂಡ ಕರೆಯಲಾಗಿದೆ. ಕೇಂದ್ರ ಸರ್ಕಾರ ಈ ಯೋಜನೆಗಾಗಿ ಪ್ರತ್ಯೇಕವಾಗಿ ಅನುದಾನ ನೀಡುವ ವಿಶ್ವಾಸವಿದೆ. ಮೊದಲ ಹಂತದಲ್ಲಿ ಬೆಂಗಳೂರು ಸೇರಿ ದೊಡ್ಡ ನಗರಗಳಲ್ಲಿ ಎಲೆಕ್ಟ್ರಿಕ್ ಬಸ್ ಓಡಿಸಲಾಗುವುದು. ಆರಂಭದಲ್ಲಿ 700 ಬಸ್ ಖರೀದಿಸಲಿದ್ದೇವೆ ಎಂದು ಶನಿವಾರ ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಿದರು.

ಸಾರಿಗೆ ಇಲಾಖೆಯ ನಾಲ್ಕು ನಿಗಮಗಳು ತೀವ್ರ ನಷ್ಟದಲ್ಲಿವೆ. ಪ್ರಸಕ್ತ ಸಾಲಿನಲ್ಲಿ ₹ 510 ಕೋಟಿ ನಷ್ಟವಾಗಿದೆ. ಕಳೆದ ವರ್ಷ ₹ 1280 ಕೋಟಿ ನಷ್ಟವಾಗಿದೆ. ನಷ್ಟದಲ್ಲಿರುವ ನಿಗಮಗಳನ್ನು ಲಾಭದತ್ತ ಕೊಂಡೊಯ್ಯುವ ಕುರಿತು ಹಿರಿಯ ಅಧಿಕಾರಿಗಳ ಸಭೆ ನಡೆಸಲಾಗಿದೆ. ಸಂಸ್ಥೆಯನ್ನು ನಷ್ಟದಿಂದ ಹೊರ ತರಲು ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಸಚಿವರು ಹೇಳಿದರು.

ಹಳೇ ಬಸ್‌ಗಳನ್ನು ಗುಜುರಿಗೆ ಬಿಸಾಡುವ ಕೇಂದ್ರ ಸರ್ಕಾರದ ನೀತಿ ಚೆನ್ನಾಗಿದೆ. ಮೋದಿಯವರ ಸೂಚನೆಯಂತೆ ಅನುಷ್ಠಾನ ಮಾಡಲಾಗುವುದು ಎಂದು ಶ್ರೀರಾಮುಲು ಸ್ಪಷ್ಟಪಡಿಸಿದರು.

ಪ್ರತಿಕ್ರಿಯೆಗೆ ನಕಾರ: ಆನಂದ ಸಿಂಗ್ ಅಸಮಾಧಾನದ ವಿಚಾರ ಕುರಿತು ಪ್ರಸ್ತಾಪಿಸಿದ ಸಾರಿಗೆ ಸಚಿವರು, ಸಿಂಗ್ ಜತೆ ಶುಕ್ರವಾರ ಮಾತನಾಡಿದ್ದೇನೆ. ಈ ಕುರಿತಂತೆ ಯಾವುದೇ ಪ್ರತಿಕ್ರಿಯೆ ನೀಡಲಾರೆ ಎಂದರು.

2021ನೇ ಸಾಲಿನ ರಾಷ್ಟ್ರಪತಿ ವಿಶಿಷ್ಟ ಸೇವಾ ಪದಕ

ಬೆಂಗಳೂರು: ಅತ್ಯುತ್ತಮ ಸೇವೆ ಸಲ್ಲಿಸಿದ ರಾಜ್ಯದ ಎಡಿಜಿಪಿಗಳು ಸೇರಿದಂತೆ 21 ಪೊಲೀಸರಿಗೆ 2021ನೇ ಸಾಲಿನ ರಾಷ್ಟ್ರಪತಿ ಪದಕ ಲಭಿಸಿದೆ. ಸ್ವಾತಂತ್ರ್ಯ ದಿನಾಚರಣೆಯಂದು ಪದಕ ಪ್ರದಾನ ಕಾರ್ಯಕ್ರಮ ಜರುಗಲಿದೆ. ಪದಕ ಪಡೆದವರ ವಿವರ ಇಲ್ಲಿದೆ.

ಉಮೇಶ್‌ಕುಮಾರ, ಎಡಿಜಿಪಿ, ಸಿಐಡಿ

ಜೆ. ಅರುಣ್ ಚಕ್ರವರ್ತಿ, ಎಡಿಜಿಪಿ, ಐಎಸ್‌ಡಿ

2021ನೇ ಸಾಲಿನ ರಾಷ್ಟ್ರಪತಿ ಶ್ಲಾಘನೀಯ ಸೇವಾ ಪದಕ

ಎಂ.ವಿ. ರಾಮಕೃಷ್ಣ ಪ್ರಸಾದ್, ಕಮಾಂಡೆಂಟ್, ಕೆಎಸ್‌ಆರ್‌ಪಿ 3ನೇ ಪಡೆ

ಕೆ.ಎಸ್. ವೆಂಕಟೇಶ್ ನಾಯ್ಡು, ಎಸಿಪಿ, ಬೆಂಗಳೂರು ಮಲ್ಲೇಶ್ವರ ಉಪವಿಭಾಗ

ಪಿ. ರವಿ, ಎಸಿಪಿ, ಬೆಂಗಳೂರು ಚಿಕ್ಕಪೇಟೆ ಉಪವಿಭಾಗ

ನವೀನ್ ಕುಲಕರ್ಣಿ, ಡಿವೈಎಸ್ಪಿ, ರಾಜ್ಯ ಗುಪ್ತದಳ

ಜೆ.ಸಿದ್ದರಾಜು, ಇನ್‌ಸ್ಪೆಕ್ಟರ್, ಬೆಂಗಳೂರು ತಲಘಟ್ಟಪುರ ಠಾಣೆ

ಎಂ.ಜೆ. ದಯಾನಂದ, ಇನ್‌ಸ್ಪೆಕ್ಟರ್, ಬೆಂಗಳೂರು ಎಸಿಬಿ

ಶಂಕರಗೌಡ ಪಾಟೀಲ, ಸಿಪಿಐ, ಕಲಬುರ್ಗಿ ವೃತ್ತ

ಎಸ್.ಬಿ. ಮಾಳಗಿ, ಸ್ಪೆಷಲ್ ಆರ್‌ಎಸ್‌ಐ, ಬೆಳಗಾವಿ ಕಂಗ್ರಾಳಿ ಕೆಎಸ್‌ಆರ್‌ಪಿ ತರಬೇತಿ ಶಾಲೆ

ಎಸ್.ಇ. ಗೀತಾ, ಮಹಿಳಾ ಪಿಎಸ್‌ಐ, ರಾಜ್ಯ ಗುಪ್ತದಳ

ಡಿ.ಎಸ್. ಗೋವರ್ಧನ ರಾವ್, ಸ್ಪೆಷಲ್ ಎಆರ್‌ಎಸ್‌ಐ, ಕೆಎಸ್‌ಆರ್‌ಪಿ 3ನೇಪಡೆ

ಮೋಹನ್, ಎಎಸ್‌ಐ, ಮಂಗಳೂರು ಸೈಬರ್ ಕ್ರೈಂ ಠಾಣೆ

ರಾಮನಾಯ್ಕ, ಎಎಸ್‌ಐ, ಬೆಂಗಳೂರು ವೈರ್‌ಲೆಸ್

ಮೊಹಮ್ಮದ್ ಮುನ್ನಾವರ್ ಪಾಷಾ, ಹೆಡ್ ಕಾನ್‌ಸ್ಟೆಬಲ್, ತುಮಕೂರು ಜಯನಗರ ಠಾಣೆ

ಎಸ್.ಪಿ. ಕೆರುಟಗಿ, ಸ್ಪೆಷಲ್ ರಿಸರ್ವ್ ಹೆಡ್ ಕಾನ್‌ಸ್ಟೆಬಲ್, ಕೆಎಸ್‌ಆರ್‌ಪಿ 4ನೇ ಪಡೆ

ಬಿ.ಎಸ್. ದಾದಾ ಅಮೀರ್, ಹೆಡ್ ಕಾನ್‌ಸ್ಟೆಬಲ್, ಬಳ್ಳಾರಿ ಡಿಎಆರ್

ವಿ. ಸೋಮಶಂಕರ, ಹೆಡ್ ಕಾನ್‌ಸ್ಟೆಬಲ್, ಯಲಹಂಕ ಎಪಿಟಿಎಸ್

ಆರ್.ಕುಮಾರ್, ಹೆಡ್ ಕಾನ್‌ಸ್ಟೆಬಲ್, ಚಿಕ್ಕಮಗಳೂರು ಪೊಲೀಸ್ ಕಂಪ್ಯೂಟರ್ ವಿಭಾಗ



ಸೈಯದ್ ಅಬ್ದುಲ್ ಖಾದರ್, ರಿಸರ್ವ್ ಹೆಡ್ ಕಾನ್‌ಸ್ಟೆಬಲ್, ಕೆಎಸ್‌ಆರ್‌ಪಿ 3ನೇ ಪಡೆ

ಗೋಪಾಲಪ್ಪ ಕೊಟಬಾಗಿ, ಹೆಡ್ ಕಾನ್‌ಸ್ಟೆಬಲ್, ಹುಬ್ಬಳ್ಳಿ–ಧಾರವಾಡ ಸಿಸಿಆರ್‌ಬಿ

ಶಾಸ್ತ್ರೀಯ ಕನ್ನಡ ಅಧ್ಯಯನ ಕೇಂದ್ರ: ಇಬ್ಬರ ರಾಜೀನಾಮೆ



ವೆಂಕಟಾಚಲಶಾಸ್ತ್ರಿ

ತಾರಾನಾಥ್

ಮೈಸೂರು: ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರವು ನಗರದಲ್ಲಿ ಸ್ಥಾಪನೆಗೊಳ್ಳುವಲ್ಲಿ ಪ್ರಧಾನ ಪಾತ್ರ ವಹಿಸಿದ್ದ ಪ್ರೊ.ಟಿ.ವಿ. ವೆಂಕಟಾಚಲಶಾಸ್ತ್ರಿ ಹಾಗೂ ಪ್ರೊ.ಎನ್.ಎಸ್.ತಾರಾನಾಥ್ ಅವರು ಕೇಂದ್ರದ ಯೋಜನಾ ಮೇಲುಸ್ತುವಾರಿ ಮಂಡಳಿ (ಪಿಎಂಬಿ)ಗೆ ಕೆಲವು ದಿನಗಳ ಹಿಂದೆ ರಾಜೀನಾಮೆ ನೀಡಿದ್ದಾರೆ. ರಾಜೀನಾಮೆಗೆ ವಯೋಸಹಜ ಅನಾರೋಗ್ಯದ ಕಾರಣ ಕೊಟ್ಟಿದ್ದಾರೆ.

'ಸಭೆಗಳು ಆನ್‌ಲೈನ್ ಮೂಲಕವೇ ನಡೆಯುತ್ತಿವೆ. ಇಬ್ಬರಿಗೂ ತಂತ್ರಜ್ಞಾನ ಬಳಕೆ ಸಮಸ್ಯೆಯಾಗಿತ್ತು' ಎಂದು ಕೇಂದ್ರದ ಯೋಜನಾ ನಿರ್ದೇಶಕ ಪ್ರೊ.ಬಿ.ಶಿವರಾಮ ಶೆಟ್ಟಿ ತಿಳಿಸಿದರು.

'ಕನ್ನಡದ ಸುಮಾರು 15 ವಿದ್ವಾಂಸರ ಹೆಸರುಗಳನ್ನು ಸಿಐಐಎಲ್ ನಿರ್ದೇಶಕರಿಗೆ ಶಿಫಾರಸು ಮಾಡಲಾಗಿದೆ' ಎಂದು ಶಾಸ್ತ್ರೀಯ ಭಾಷೆಗಳ ಮುಖ್ಯಸ್ಥ ಪ್ರೊ.ಪಿ.ಆರ್.ಧರ್ಮೇಶ್ ಫರ್ನಾಂಡಿಸ್ ತಿಳಿಸಿದರು.

ಕೇಂದ್ರ ಸಂಪುಟ ಸೇರಿದ ಬಳಿಕ ಮೊದಲ ಬಾರಿ ಸಚಿವರ ಕ್ಷೇತ್ರ ಭೇಟಿ

3ನೇ ಅಲೆಯ ಆತಂಕದ ನಡುವೆ ಯಾತ್ರೆ!

• ಸಿದ್ದಯ್ಯ ಹಿರೇಮಠ

ನವದೆಹಲಿ: ಕೊರೊನಾ 3ನೇ ಅಲೆಯ ಭೀತಿ ನಡುವೆಯೂ ಆಡಳಿತಾರೂಢ ಬಿಜೆಪಿ ಇದೇ 16ರಿಂದ ಕೇಂದ್ರದ ನೂತನ ಸಚಿವರ 'ಜನಾಶೀರ್ವಾದ ಯಾತ್ರೆ' ಆಯೋಜಿಸಿದೆ.

ಯಾತ್ರೆಯ ವೇಳೆ ಕಡ್ಡಾಯವಾಗಿ ಕೋವಿಡ್ ನಿಯಮಾವಳಿ ಪಾಲಿಸುವುದಾಗಿ ಪಕ್ಷ ತಿಳಿಸಿದೆಯಾದರೂ, ದೇಶದ 22 ರಾಜ್ಯಗಳ ಪ್ರತಿ ಜಿಲ್ಲೆಗೂ ನೂತನ ಸಚಿವರು ಭೇಟಿ ನೀಡುತ್ತಿರುವುದರಿಂದ ಪಕ್ಷದ ಸಾವಿರಾರು ಕಾರ್ಯಕರ್ತರು, ಸಾರ್ವಜನಿಕರು ಪಾಲ್ಗೊಳ್ಳುವ ಸಾಧ್ಯತೆ ಇದೆ. ಇದು ಕೊರೊನಾ ಸೋಂಕು ಹರಡುವುದಕ್ಕೆ ಆಹ್ವಾನ ನೀಡಿದಂತಾಗಲಿದೆ ಎನ್ನುವ ಅಭಿಪ್ರಾಯ ಕೇಳಿಬರುತ್ತಿದೆ.

ಮೋದಿ ಸಂಪುಟಕ್ಕೆ ಜುಲೈ 7ರಂದು ಸೇರ್ಪಡೆ ಆಗಿರುವ ಒಟ್ಟು 40 ಮಂದಿ ನೂತನ ಸಚಿವರ ಪೈಕಿ 39 ಸಚಿವರು 3ರಿಂದ 7 ದಿನ ನಡೆಯುವ ಯಾತ್ರೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಸಚಿವರಾದ ನಂತರ ಅವರೆಲ್ಲ ಇದೇ ಮೊದಲ ಬಾರಿಗೆ ತಮ್ಮ ಕ್ಷೇತ್ರಕ್ಕೆ ಭೇಟಿ ನೀಡಲಿರುವುದು ವಿಶೇಷ.

ರಾಜ್ಯದ ಎಲ್ಲರಿಗೂ ಕೋವಿಡ್ ಲಸಿಕೆ ದೊರೆತಿಲ್ಲ. ಲಸಿಕೆ ಹಾಕಿಸಿಕೊಂಡವರು ಯಾತ್ರೆಯಲ್ಲಿ ನಿರ್ಭಯವಾಗಿ ಮಾಸ್ಕ್ ಧರಿಸದೆ ಓಡಾಡಿದಲ್ಲಿ, ಇತರರಿಗೆ ಕೊರೊನಾ ಹರಡುವ ಸಾಧ್ಯತೆ ಇದೆ

ಶಾಕಿರ್ ಸನದಿ, ಎಐಸಿಸಿ ಸದಸ್ಯ

ಯಾತ್ರೆ ಹೊರಡುವ ಕಡೆ ಮುಖಂಡರ ಕಟೌಟ್, ಬ್ಯಾನರ್, ಬಂಟಿಂಗ್ಸ್ ಅಳವಡಿಕೆಯ ಭರಾಟೆ ನಡೆದಿದ್ದು, ಆಯಾ ಕ್ಷೇತ್ರಗಳ ಶಾಸಕರು, ಸಂಸದರು, ಜಿಲ್ಲಾ ಉಸ್ತುವಾರಿ ಸಚಿವರು ಮೆರವಣಿಗೆಯಲ್ಲಿ ಭಾಗವಹಿಸುವುದರಿಂದ ಜನಸ್ತೋಮದ ನಿರೀಕ್ಷೆ ಇದೆ.

ಯಾತ್ರೆಗೇಕೆ ನಿರ್ಬಂಧವಿಲ್ಲ?: 'ಕೋವಿಡ್ 3ನೇ ಅಲೆಯ ಕಾರಣ ಮುಂದಿರಿಸಿ ಮೊಹರ್ರಂ ಮೆರವಣಿಗೆ ಮತ್ತು ಸಾರ್ವಜನಿಕ ಗಣೇಶೋತ್ಸವ ಪ್ರತಿಷ್ಠಾಪನೆಯನ್ನು ಕರ್ನಾಟಕ ಸೇರಿದಂತೆ ಕೆಲವು ರಾಜ್ಯ ಸರ್ಕಾರಗಳು ಈಗಾಗಲೇ ರದ್ದುಪಡಿಸಿದ್ದು, ಸ್ವಾತಂತ್ರ್ಯೋತ್ಸವದ ಸರಳ ಆಚರಣೆಗೂ ಸೂಚಿಸಿವೆ. ಆದರೆ, ಸಾವಿರಾರು ಜನ ಭಾಗವಹಿಸುವ ರಾಜಕೀಯ ಮೆರವಣಿಗೆಯಲ್ಲಿ ದೈಹಿಕ ಅಂತರ ಕಾಪಾಡಿಕೊಳ್ಳುವುದು ಅಸಾಧ್ಯ ಎಂಬುದು ಗೊತ್ತಿದ್ದರೂ, ಜನಾಶೀರ್ವಾದ ಯಾತ್ರೆಗೆ ಅವಕಾಶ ನೀಡಿರುವುದು ಎಷ್ಟು ಸೂಕ್ತ?' ಎಂದು ಎಐಸಿಸಿ ಸದಸ್ಯರೂ ಆಗಿರುವ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಶಾಕಿರ್ ಸನದಿ ಪ್ರಶ್ನಿಸಿದ್ದಾರೆ.

ರಾಜ್ಯದಲ್ಲಿ ಬೊಮ್ಮಾಯಿ ಅವರ ಸಂಪುಟ ಸೇರಿರುವ ನೂತನ ಸಚಿವರು ಇತ್ತೀಚೆಗಷ್ಟೇ ತಮ್ಮ ಕ್ಷೇತ್ರಗಳಿಗೆ ಭೇಟಿ ನೀಡಿದಾಗ ಸಾವಿರಾರು ಜನರು ಮೆರವಣಿಗೆಯಲ್ಲಿ ಪಾಲ್ಗೊಂಡು ಕೋವಿಡ್ ನಿಯಮ ಗಾಳಿಗೆ ತೂರಿದ್ದಾರೆ. ಕೋವಿಡ್ 2ನೇ ಅಲೆ ಭಾರಿ ಸಮಸ್ಯೆ ತಂದೊಡ್ಡಲು ಪಶ್ಚಿಮ ಬಂಗಾಳ, ಅಸ್ಸಾಂ, ಕೇರಳ, ತಮಿಳುನಾಡು ವಿಧಾನಸಭೆಗೆ ನಡೆದ ಚುನಾವಣೆಯೇ ಕಾರಣ ಎಂಬುದನ್ನು ಸರ್ಕಾರ ಮರೆತಿದೆ ಎಂದು ಅವರು ಆತಂಕ ವ್ಯಕ್ತಪಡಿಸಿದ್ದಾರೆ.

ರಾಜ್ಯದ ಬಸವಕಲ್ಯಾಣ, ಮಸ್ಕಿ ವಿಧಾನಸಭೆ ಹಾಗೂ ಬೆಳಗಾವಿ ಲೋಕಸಭೆ ಕ್ಷೇತ್ರಗಳಿಗೆ ನಡೆದಿದ್ದ ಉಪ ಚುನಾವಣೆಯೂ ಸಾಕಷ್ಟು ಜನರಲ್ಲಿ ಕೊರೊನಾ ಸೋಂಕು ಹರಡಲು ಕಾರಣವಾಗಿತ್ತು. ದಕ್ಷಿಣದ ಮಹಾರಾಷ್ಟ್ರ, ಕೇರಳಗಳಲ್ಲಿ ಈಗ ಡೆಲ್ಟಾ ವೈರಸ್‌ನ ಆತಂಕ ಹೆಚ್ಚಿದೆ. ಈ ಸಂದರ್ಭ ಯಾತ್ರೆಗೆ ಅನುಮತಿ ನೀಡಿದರೆ ಜನರನ್ನು ಸರ್ಕಾರವೇ ಸಂಕಷ್ಟಕ್ಕೆ ದೂಡಿದಂತಾಗಲಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ರಾಜ್ಯದಲ್ಲಿ ನಾಲ್ವರ ಯಾತ್ರೆ

ಕೇಂದ್ರ ಸಚಿವರಾಗಿರುವ ರಾಜ್ಯದ ಶೋಭಾ ಕರಂದ್ಲಾಜೆ, ಎ.ನಾರಾಯಣಸ್ವಾಮಿ, ಭಗವಂತ ಖೂಬಾ ಹಾಗೂ ರಾಜ್ಯಸಭೆ ಸದಸ್ಯ ರಾಜೀವ ಚಂದ್ರಶೇಖರ್ ಅವರು ಆಗಸ್ಟ್ 16ರಿಂದ 19ರವರೆಗೆ ಸತತ 4 ದಿನ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಯಾತ್ರೆ ಹೊರಡಲಿದ್ದಾರೆ.

ಸೇನೆಯ 6 ಯೋಧರಿಗೆ ಶೌರ್ಯ ಚಕ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ಸೇನೆಯ ಆರು ಯೋಧರಿಗೆ ಶೌರ್ಯ ಚಕ್ರ ಪದಕ ಘೋಷಿಸಲಾಗಿದೆ. ಇವರಲ್ಲಿ ಒಬ್ಬರಿಗೆ ಮರಣೋತ್ತರ ಪದಕ ನೀಡಲಾಗುತ್ತಿದೆ.

ಜಮ್ಮು ಮತ್ತು ಕಾಶ್ಮೀರದಲ್ಲಿ ಕಳೆದ ವರ್ಷ ಭಯೋತ್ಪಾದಕರ ವಿರುದ್ಧ ನಡೆಸಿದ ಕಾರ್ಯಾಚರಣೆಯ ಸಂದರ್ಭದಲ್ಲಿ ತೋರಿದ ಸಾಹಸ ಮತ್ತು ಶೌರ್ಯ ಪರಿಗಣಿಸಿ ಈ ಪದಕ ನೀಡಲಾಗುತ್ತಿದೆ.

ಮೇಜರ್ ಅರುಣ್ ಕುಮಾರ್ ಪಾಂಡೆ, ಮೇಜರ್ ರವಿ ಕುಮಾರ್ ಚೌಧರಿ, ಕ್ಯಾಪ್ಟನ್ ಅಶುತೋಷ್ ಕುಮಾರ್ (ಮರಣೋತ್ತರ), ಕ್ಯಾಪ್ಟನ್ ವಿಕಾಸ್ ಖತ್ರಿ, ರೈಫಲ್‌ಮ್ಯಾನ್ ಮುಕೇಶ್ ಕುಮಾರ್ ಮತ್ತು ಸಿಪಾಯಿ ನೀರಜ್ ಅಹ್ಲಾವತ್ ಅವರಿಗೆ ಶೌರ್ಯ ಚಕ್ರ ಪದಕ ಘೋಷಿಸಲಾಗಿದೆ ಎಂದು ಭಾರತೀಯ ಸೇನೆ ತಿಳಿಸಿದೆ.

ಕಳೆದ ವರ್ಷ ಜೂನ್ 9 ಮತ್ತು 10ರಂದು ಭಯೋತ್ಪಾದಕರ ವಿರುದ್ಧ ನಡೆದ ಕಾರ್ಯಾಚರಣೆಯ ನೇತೃತ್ವ ವಹಿಸಿದ್ದ ರಾಷ್ಟ್ರೀಯ ರೈಫಲ್ಸ್‌ನ 44ನೇ ಬೆಟಾಲಿಯನ್‌ನ ಮೇಜರ್ ಪಾಂಡೆ, ಅಪಾರ ಧೈರ್ಯ ತೋರಿಸಿ ಇಬ್ಬರು ಉಗ್ರರನ್ನು ಹೊಡೆದುರುಳಿಸಿದ್ದರು.

ಇದೇ ರೀತಿ, ರಾಷ್ಟ್ರೀಯ ರೈಫಲ್ಸ್‌ನ 55ನೇ ಬೆಟಾಲಿಯನ್‌ನ ಮೇಜರ್ ಚೌಧರಿ ಅವರು, ನಾಲ್ಕು ಯಶಸ್ವಿ ಕಾರ್ಯಾಚರಣೆಯ ನೇತೃತ್ವ ವಹಿಸಿ 13 ಭಯೋತ್ಪಾದಕರನ್ನು ಹತ್ಯೆ ಮಾಡಿದ್ದರು.

ಮದ್ರಾಸ್ ರೆಜಿಮೆಂಟ್‌ನ 18ನೇ ಬೆಟಾಲಿಯನ್‌ನ ಕ್ಯಾಪ್ಟನ್ ಕುಮಾರ್ ಅವರಿಗೆ ಮರಣೋತ್ತರವಾಗಿ ಶೌರ್ಯ ಚಕ್ರ ನಿಡಲಾಗಿದೆ. ಕಳೆದ ವರ್ಷ ನವೆಂಬರ್ 8ರಂದು ನಡೆದ ಕಾರ್ಯಾಚರಣೆಯಲ್ಲಿ ಕುಮಾರ್ ಅವರು ತಮ್ಮ ಬ್ಯಾಟಲಿಯನ್‌ನ ಯೋಧರೊಬ್ಬರ ಜೀವ ರಕ್ಷಿಸುವ ಜತೆಗೆ ಒಬ್ಬ ಭಯೋತ್ಪಾದಕನನ್ನು ಹತ್ಯೆ ಮಾಡಿದ್ದರು.

ರಾಷ್ಟ್ರೀಯ ರೈಫಲ್ಸ್‌ನ 16ನೇ ಬೆಟಾಲಿಯನ್‌ನ ಕ್ಯಾಪ್ಟನ್ ವಿಕಾಸ್ ಖತ್ರಿ ಅವರು, ಕಳೆದ ವರ್ಷ ಡಿಸೆಂಬರ್ 12 ಮತ್ತು 13ರ ರಾತ್ರಿ 12 ಸಾವಿರ ಅಡಿ ಎತ್ತರದ ಪ್ರದೇಶದಲ್ಲಿ ನಡೆದ ಅತ್ಯಂತ ಕಠಿಣ ಮತ್ತು ಸವಾಲಿನ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದರು. ತೀವ್ರ ಪ್ರತಿರೋಧದ ನಡುವೆಯೂ ಧೈರ್ಯದಿಂದ ದಾಳಿ ನಡೆಸಿ ಒಬ್ಬ ವಿದೇಶಿ ಉಗ್ರನನ್ನು ಹತ್ಯೆ ಮಾಡಿದ್ದರು.

ರಾಷ್ಟ್ರೀಯ ರೈಫಲ್ಸ್‌ನ 9ನೇ ಬೆಟಾಲಿಯನ್‌ನ ರೈಫಲ್‌ಮ್ಯಾನ್ ಮುಕೇಶ್ ಕುಮಾರ್ ಅವರಿಗೆ ಗುಂಡು ತಗುಲಿದ್ದರೂ ಉಗ್ರನೊಬ್ಬನ ಜತೆ ಹೋರಾಟ ನಡೆಸಿ ಹತ್ಯೆ ಮಾಡಿದ್ದರು.

ಕಳೆದ ವರ್ಷ ಜೂನ್ 20ರಂದು ಜಮ್ಮು ಮತ್ತು ಕಾಶ್ಮೀರದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ತೋರಿದ ಶೌರ್ಯ, ಸಾಹಸಕ್ಕಾಗಿ ಸಿಪಾಯಿ ನೀರಜ್ ಅಹ್ಲಾವತ್ ಅವರಿಗೆ ಶೌರ್ಯ ಚಕ್ರ ಪದಕ ನೀಡಲಾಗಿದೆ. ಈ ಕಾರ್ಯಾಚರಣೆಯಲ್ಲಿ ಒಬ್ಬ ಉಗ್ರ ಹತ್ಯೆಗೀಡಾಗಿದ್ದ.

ನೌಕಾಪಡೆಯ ಒಬ್ಬರಿಗೆ ಮತ್ತು ಭಾರತೀಯ ವಾಯು ಪಡೆಯ ಇಬ್ಬರಿಗೆ ಹಾಗೂ ಪೊಲೀಸ್ ಇಲಾಖೆಯ ಆರು ಮಂದಿಗೂ ಶೌರ್ಯ ಚಕ್ರ ಘೋಷಿಸಲಾಗಿದೆ.

ಇಬ್ಬರಿಗೆ ಮರಣೋತ್ತರ ಅಶೋಕ, ಕೀರ್ತಿ ಚಕ್ರ

ಜಮ್ಮು ಮತ್ತು ಕಾಶ್ಮೀರದ ಇಬ್ಬರು ಧೈರ್ಯಶಾಲಿ ಪೊಲೀಸರಿಗೆ ದೇಶದ ಉನ್ನತ ಶೌರ್ಯ ಪ್ರಶಸ್ತಿಗಳನ್ನು ಘೋಷಿಸಲಾಗಿದೆ.

ಆದರೆ, ಇಬ್ಬರಿಗೂ ಮರಣೋತ್ತರವಾಗಿ ಈ ಪ್ರಶಸ್ತಿಗಳು ದೊರೆಯಲಿದೆ. ಜಮ್ಮು ಮತ್ತು ಕಾಶ್ಮೀರ ಪೊಲೀಸ್ ಇಲಾಖೆಯ ಸಹಾಯಕ ಸಬ್ ಇನ್‌ಸ್ಪೆಕ್ಟರ್ ಬಾಬು ರಾಮ್ ಅವರಿಗೆ ಅಶೋಕ ಚಕ್ರ ಹಾಗೂ ಕಾನ್‌ಸ್ಟೆಬಲ್ ಅಲ್ತಾಫ್ ಹುಸೇನ್ ಭಟ್ ಅವರಿಗೆ ಕೀರ್ತಿ ಚಕ್ರ ಘೋಷಿಸಲಾಗಿದೆ.

48 ವರ್ಷದ ಬಾಬು ರಾಮ್ ಅವರು, ಕಳೆದ ವರ್ಷ ಶ್ರೀನಗರದ ಹೊರವಲಯದಲ್ಲಿ ನಡೆದ ಗುಂಡಿನ ಚಕಮಕಿಯಲ್ಲಿ ಹುತಾತ್ಮರಾಗಿದ್ದರು.

ಗಂದೇರ್‌ಬಾಲ್‌ನಲ್ಲಿ ಭಯೋತ್ಪಾದಕರು ನಡೆಸಿದ ದಾಳಿಯಲ್ಲಿ ವ್ಯಕ್ತಿಯೊಬ್ಬರನ್ನು ರಕ್ಷಿಸುವಾಗ ಕಾನ್‌ಸ್ಟೆಬಲ್ ಅಲ್ತಾಫ್ ಹುತಾತ್ಮರಾಗಿದ್ದರು. ಇವರು ತೋರಿದ ಸಾಹಸಕ್ಕಾಗಿ ಕೀರ್ತಿ ಚಕ್ರ ನೀಡಲಾಗಿದೆ.

ಕ್ರಿಯಾಶೀಲ ವ್ಯಕ್ತಿತ್ವದ ಆರ್.ಎನ್. ಶೆಟ್ಟಿ ನೆನಪು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಾ. ರಾಮ ನಾಗಪ್ಪ ಶೆಟ್ಟಿ ಎಂಬ ಹೆಸರು ಅಪರಿಚಿತ. ಆದರೆ, ಆರ್.ಎನ್. ಶೆಟ್ಟಿ ಎಂಬ ಹೆಸರು ತಿಳಿಯದವರಿಲ್ಲ. ಸದಾ ಕ್ರಿಯಾಶೀಲರಾಗಿದ್ದು, ಸ್ಫೂರ್ತಿಯ ಸೆಲೆಯಾಗಿ ತುಂಬು ಜೀವನ ನಡೆಸಿದ್ದ ಅವರದ್ದು ಪರಿಪೂರ್ಣ ಬದುಕು. ಇಂದು ಭೌತಿಕವಾಗಿ ಇಲ್ಲದೇ ಇದ್ದರೂ ಅವರ ಜೀವನ ಪ್ರೀತಿ, ಕಾರ್ಯಶ್ರದ್ಧೆ ಮಾಡಿದ ಕೆಲಸಗಳು ಅನುಕರಣೀಯ.

ಸಾಮಾನ್ಯ ಮಧ್ಯಮ ವರ್ಗದಿಂದ ಬಂದು, ಸಾವಿರಾರು ಜನರ ಬದುಕಿಗೆ ದಾರಿದೀಪವಾಗಿರುವ ಆರ್‌ಎನ್‌ಎಸ್ ಸಮೂಹ ಸಂಸ್ಥೆಯನ್ನು ಕಟ್ಟಿದವರು ಶೆಟ್ಟರು.

ಸಿವಿಲ್ ಗುತ್ತಿಗೆದಾರರಾಗಿ ವೃತ್ತಿ ಆರಂಭಿಸಿದ ಅವರು, ಹಿಡಕಲ್, ತಟ್ಟೀಹಳ್ಳ, ಸೂಪಾ, ಗೇರುಸೊಪ್ಪೆ ಅಣೆಕಟ್ಟು ನಿರ್ಮಾಣಗಳ ಜತೆಗೆ ವಾರಾಹಿ ಜಲವಿದ್ಯುತ್ ಸ್ಥಾವರ, ಕೊಂಕಣ ರೈಲ್ವೆ ಸುರಂಗ ಮಾರ್ಗಗಳು ಹೀಗೆ ವಿವಿಧ ಯೋಜನೆಗಳ ನಿರ್ಮಾಣದಲ್ಲಿ ತಮ್ಮ ಛಾಪು ಮೂಡಿಸಿದ್ದರು.

ಹೋಟೆಲ್ ಉದ್ಯಮದತ್ತಲೂ ತಮ್ಮನ್ನು ತೊಡಗಿಸಿಕೊಂಡ ಅವರು, ತಾಜ್ ಸಮೂಹಗಳಲ್ಲಿ ಸಹಭಾಗಿಯಾದರು. ತಮ್ಮ ಹುಟ್ಟೂರು ಮುರುಡೇಶ್ವರದಲ್ಲಿ 150 ಹಾಸಿಗೆಗಳ ಆರ್‌ಎನ್‌ಎಸ್ ಆಸ್ಪತ್ರೆ, ಗ್ರಾಮೀಣ ಭಾಗದಲ್ಲಿ ಅಗತ್ಯವಿರುವಂಥ ಪಾಲಿಟೆಕ್ನಿಕ್ ಕಾಲೇಜು, ತೆರೆದು ಆರೋಗ್ಯ, ಶಿಕ್ಷಣ ಮುಂತಾದ ಕ್ಷೇತ್ರಗಳ ಅಭಿವೃದ್ಧಿಗೆ ಅಹರ್ನಿಶಿ ಶ್ರಮಿಸಿದರು.

ಆರ್.ಎನ್. ಶೆಟ್ಟಿ ಧರ್ಮಾರ್ಥ ಸಂಸ್ಥೆಯ ಆಶ್ರಯದಲ್ಲಿ ಬಡ ಮಕ್ಕಳಿಗೆ ಉಚಿತ ಶಿಕ್ಷಣ, ಕಲ್ಯಾಣ ಮಂಟಪಗಳು, ಅನಾಥಾಶ್ರಮಗಳ ನಿರ್ಮಾಣ, ಕುಡಿಯುವ ನೀರು ಸೌಲಭ್ಯ, ನಿರ್ಗತಿಕರಿಗೆ ವಸತಿ, ಉಚಿತ ವೈದ್ಯಕೀಯ ಸೌಲಭ್ಯ, ಹೀಗೆ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದರು.

ಶಾ ಭೇಟಿ ಮಾಡಿದ ರಾಜ್ಯಪಾಲ ಕೋಶಿಯಾರಿ

ಮುಂಬೈ(ಪಿಟಿಐ): ಮಹಾರಾಷ್ಟ್ರ ರಾಜ್ಯಪಾಲ ಭಗತ್‌ಸಿಂಗ್ ಕೋಶಿಯಾರಿ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ನವದೆಹಲಿಯಲ್ಲಿ ಭೇಟಿಯಾಗಿದ್ದಾರೆ.

ವಿಧಾನ ಪರಿಷತ್‌ಗೆ ನಾಮನಿರ್ದೇಶನ ಮಾಡುವ ಬಗ್ಗೆ ಸೂಕ್ತ ಸಮಯದಲ್ಲಿ ತೀರ್ಮಾನ ಕೈಗೊಳ್ಳುವುದು ರಾಜ್ಯಪಾಲರ ಕರ್ತವ್ಯ ಎಂಬುದಾಗಿ ಬಾಂಬೆ ಹೈಕೋರ್ಟ್ ತೀರ್ಪು ಪ್ರಕಟಿಸಿದ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ.

ಧ್ವಜ ಖರೀದಿ ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ಕಲಬುರ್ಗಿಯ ಸೂಪರ್ ಮಾರ್ಕೆಟ್ ಬಳಿ ಶನಿವಾರ ಮಕ್ಕಳು ಮತ್ತು ಯುವಜನರು ರಾಷ್ಟ್ರ ಧ್ವಜಗಳನ್ನು ಖರೀದಿಸಿದರು. ಪ್ರಜಾವಾಣಿ ಚಿತ್ರ/ತಾಜುದ್ದೀನ ಆಜಾದ್

ಏಕವಚನದಲ್ಲಿ ಬಿಜೆಪಿ ಸಂಸದ, ಜೆಡಿಎಸ್ ಶಾಸಕ ಕಿತ್ತಾಟ

ಪ್ರಜಾವಾಣಿ ವಾರ್ತೆ

ತುಮಕೂರು: ಬಿಜೆಪಿ ಸಂಸದ ಜಿ.ಎಸ್. ಬಸವರಾಜು ಹಾಗೂ ಜೆಡಿಎಸ್‌ನ ಗುಬ್ಬಿ ಶಾಸಕ ಎಸ್.ಆರ್.ಶ್ರೀನಿವಾಸ್ ಪರಸ್ಪರ ಏಕ ವಚನದಲ್ಲಿ ನಿಂದಿಸಿಕೊಂಡಿದ್ದಾರೆ. ಥೀ, ಥೂ... ಎಂದು ಪರಸ್ಪರ ಕಿತ್ತಾಡಿಕೊಂಡಿದ್ದಾರೆ. ಅಯೋಗ್ಯ ಪದವೂ ಧಾರಾಳವಾಗಿ ಬಳಕೆಯಾಗಿದೆ.

ಗುಬ್ಬಿ ತಾಲ್ಲೂಕು ಚೇಳೂರು ಸಮೀಪದ ಸಿ.ನಂದಿಹಳ್ಳಿ ಬಳಿ ಶನಿವಾರ ಕೆಪಿಟಿಸಿಎಲ್ ವಿದ್ಯುತ್ ವಿತರಣಾ ಕೇಂದ್ರದ ಉದ್ಘಾಟನಾ ಕಾರ್ಯಕ್ರಮದಲ್ಲಿ ಇಬ್ಬರ ನಡುವೆ ವಾಗ್ವಾದ ನಡೆದಿದೆ.

ಜಿ.ಎಸ್. ಬಸವರಾಜು

ಎಸ್.ಆರ್. ಶ್ರೀನಿವಾಸ್

'ಈ ಭಾಗದಲ್ಲಿ ಡ್ಯಾಂ ನಿರ್ಮಿಸಲಾಗುತ್ತದೆ. ರೈತರಿಗೆ ಹೆಚ್ಚಿನ ರೀತಿಯಲ್ಲಿ ಪರಿಹಾರ ಕೊಡಿಸಲಾಗುತ್ತದೆ. ಅದಕ್ಕೆ ಕೇಂದ್ರ ಸರ್ಕಾರ ಹಣ ಕೊಡುತ್ತಿದೆ. ಇಲ್ಲಿನ ಜನರಿಗೆ ಸಹಕಾರಿಯಾಗುತ್ತದೆ' ಎಂದು ಬಸವರಾಜು ವಿಷಯ ಪ್ರಸ್ತಾಪಿಸುತ್ತಾರೆ. ಪಕ್ಕದಲ್ಲೇ ಕುಳಿತಿದ್ದ ಶ್ರೀನಿವಾಸ್, ತಕ್ಷಣ ಪ್ರತಿಕ್ರಿಯೆ ನೀಡಿ 'ಈ ರೀತಿ ಸುಳ್ಳು ಹೇಳಬೇಡ. ರೈತರಿಗೆ ಏಕೆ ಸುಳ್ಳು ಹೇಳುತ್ತೀಯಾ. ಇಡೀ ಜೀವನದಲ್ಲಿ ಸುಳ್ಳು ಹೇಳಿಕೊಂಡು ಬಂದಿದ್ದೀಯಾ' ಎನ್ನುತ್ತಾರೆ. ಅಲ್ಲಿಂದ ಇಬ್ಬರ ನಡುವೆ ಏಕ ವಚನದಲ್ಲಿ ಕಿತ್ತಾಟ ಆರಂಭವಾಗುತ್ತದೆ.

ಇಬ್ಬರ ನಡುವಿನ ಸಂಭಾಷಣೆ

ಬಸವರಾಜು: ನನ್ನ ಜೀವನದಲ್ಲಿ ಸುಳ್ಳು ಹೇಳಿಲ್ಲ. ನೀನು ಸುಳ್ಳು ಹೇಳುತ್ತಿರುವುದು, ಅಯೋಗ್ಯನ ತಂದು...

ಶ್ರೀನಿವಾಸ್: ನೀನು ಅಯೋಗ್ಯ. ಅಯೋಗ್ಯನ ರೀತಿ ನೀನು ಮಾತನಾಡುತ್ತಿದ್ದೀಯಾ. ಸುಳ್ಳು ಹೇಳುತ್ತಿರುವುದಕ್ಕೆ ನಾಚಿಕೆ ಆಗಬೇಕು. ಥೀ, ಥೂ... ಇಡೀ ಜೀವನದಲ್ಲಿ ಒಂದು ಗಾಡಿ ಸುಳ್ಳು ಹೇಳಿಕೊಂಡು ಬಂದಿದ್ದೀಯಾ? ಈಗ ರೈತರಿಗೆ ಮೋಸ ಮಾಡುತ್ತಿದ್ದೀಯಾ?

ಬಸವರಾಜು: ಹಾಗಾದರೆ ಈಗ ₹550 ಕೋಟಿ ತಂದಿಲ್ಲವೆ. ನೆಟ್ಟಗೆ ಮಾತನಾಡು. ಅಯೋಗ್ಯನ ರೀತಿ ಮಾತನಾಡುತ್ತೀಯಾ?

ಶ್ರೀನಿವಾಸ್: ನಿಮ್ಮ ತಾತನ ಮನೆಯಿಂದ ತಂದಿದ್ದೀಯಾ? ನೀನು ನೆಟ್ಟಗೆ ಮಾತನಾಡು. ನಿನ್ನ ಯೋಗ್ಯತೆಗೆ ಬೆಂಕಿ ಹಾಕ, ಮಾನ ಮರ್ಯಾದೆ ಇಲ್ಲ

ಬಸವರಾಜು: ಇದು ನಿಮ್ಮ ತಾತನ ಮನೆಯ ಹಣವೆ? ನಾನು ಮಾಡಿರುವ ಕೆಲಸಕ್ಕೆ ನನ್ನ ಹೆಸರು ಹೇಳಿಕೊಂಡು ಸಾಯುವವರೆಗೂ ದೀಪ ಹಚ್ಚಬೇಕು

ಶ್ರೀನಿವಾಸ್: ನಾನೇಕೆ ದೀಪ ಹಚ್ಚಲಿ, ನನಗೇನು ತೆವಲು ಹಿಡಿದಿಲ್ಲ. ಇದು ಸುಳ್ಳು ಎಂದು ಚಾಲೆಂಜ್ ಮಾಡುತ್ತೇನೆ.

ಬಸವರಾಜು: ನೀನು ಏನು ಬೇಕಾದರೂ ಮಾಡಿಕೊ ಹೋಗು...

ಕೊನೆಗೆ ಸ್ಥಳದಲ್ಲಿ ಇದ್ದವರು ಇಬ್ಬರನ್ನೂ ಸಮಾಧಾನಪಡಿಸುತ್ತಾರೆ.

ಸಿ.ಎಂ ಭೇಟಿ ಮಾಡಿದ ಯೋಗೇಶ್ವರ, ರಾಮದಾಸ್

ಗೈರು ಕುರಿತು ಮುಚ್ಚಿದ ಲಕೋಟೆಯಲ್ಲಿ ಪತ್ರ ನೀಡಿದ ಮೈಸೂರು ಶಾಸಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಚಿವ ಸ್ಥಾನದ ಆಕಾಂಕ್ಷಿಗಳಾದ ಸಿ.ಪಿ. ಯೋಗೇಶ್ವರ ಮತ್ತು ಎಸ್.ಎ. ರಾಮದಾಸ್ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಶನಿವಾರ ಭೇಟಿ ಮಾಡಿ, ಕೆಲಹೊತ್ತು ಮಾತುಕತೆ ನಡೆಸಿದರು.

ಮುಖ್ಯಮಂತ್ರಿ ಭೇಟಿ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ರಾಮದಾಸ್, 'ಮೈಸೂರಿಗೆ ಮುಖ್ಯಮಂತ್ರಿ ಬಂದಿದ್ದಾಗ ನಾನು ಅವರನ್ನು ಭೇಟಿ ಮಾಡಿರಲಿಲ್ಲ. ಯಾಕೆ ಭೇಟಿ ಮಾಡಿಲ್ಲ ಎಂಬ ಬಗ್ಗೆ ಮುಚ್ಚಿದ ಲಕೋಟೆಯಲ್ಲಿ ಪತ್ರದ ಮೂಲಕ ಕಾರಣ ಕೊಡುತ್ತೇನೆ ಎಂದು ಹೇಳಿದ್ದೆ. ಅದೇ ರೀತಿಯಲ್ಲಿ ಅವರನ್ನು ಭೇಟಿಮಾಡಿ ಮುಚ್ಚಿದ ಲಕೋಟೆಯಲ್ಲಿ ಪತ್ರ ನೀಡಿದ್ದೇನೆ' ಎಂದರು.

'ಪತ್ರದಲ್ಲಿ ಕೋವಿಡ್ ವಿಚಾರ, ರಾಜ್ಯ, ಸರ್ಕಾರದ ಹಿತದೃಷ್ಟಿಯಿಂದ ಅನುಭವಗಳನ್ನು ಹಂಚಿಕೊಂಡಿದ್ದೇನೆ. ಸಮಯ ಸಿಕ್ಕಿದಾಗ ಪತ್ರವನ್ನು ಓದುವಂತೆಯೂ ಮುಖ್ಯಮಂತ್ರಿಯವರಿಗೆ ಹೇಳಿದ್ದೇನೆ' ಎಂದು ತಿಳಿಸಿದರು.

'ನಾನೊಬ್ಬ ಸ್ವಯಂಸೇವಕ. ಪಕ್ಷ ಕಟ್ಟುವ ಕಷ್ಟದ ಅನುಭವ ಇದೆ. ಪಕ್ಷದ ವಿರುದ್ಧ ನನ್ನ ಅಭಿಪ್ರಾಯ, ಅಸಮಾಧಾನ ಹೇಳಿಕೊಂಡಿಲ್ಲ. ಬೊಮ್ಮಾಯಿ ಅವರು ಮಾಜಿ ಮುಖ್ಯಮಂತ್ರಿಯವರ ಮಗ. ಹೀಗಾಗಿ ಪರಿಸ್ಥಿತಿಗಳು ಅವರಿಗೆ ಗೊತ್ತಿವೆ' ಎಂದು ಅವರು ಹೇಳಿದರು.

ಸಂಪುಟದಲ್ಲಿ ಮೈಸೂರು ಜಿಲ್ಲೆಗೆ ಪ್ರಾತಿನಿಧ್ಯ ನೀಡದೇ ಇರುವ ಕುರಿತ ಪ್ರಶ್ನೆಗೆ, 'ಈ ವಿಚಾರ ಮೈಸೂರಿನ ನಾಯಕರಿಗೆ ಗೊತ್ತಿದೆ. ಮೈಸೂರಿನಲ್ಲಿ ಬಿಜೆಪಿ ದುರ್ಬಲ ಅಲ್ಲ. ಆದರೆ, ಪರಿಸ್ಥಿತಿಯ ಕಾರಣಕ್ಕೆ ಸಚಿವ ಸ್ಥಾನ ಸಿಕ್ಕಿಲ್ಲ' ಎಂದು ಅವರು ಉತ್ತರಿಸಿದರು.

ಯಾವ ಅಸಮಾಧಾನವೂ ಇಲ್ಲ: ಯೋಗೇಶ್ವರ ಮಾತನಾಡಿ 'ನನಗೆ ಯಾವ ಅಸಮಾಧಾನವೂ ಇಲ್ಲ. ನಾನು ಪಕ್ಷದ ಕಾರ್ಯಕರ್ತನಾಗಿಯೇ ಇರುತ್ತೇನೆ' ಎಂದರು.

'ಮುಖ್ಯಮಂತ್ರಿಯವರನ್ನು ಈ ಹಿಂದೆಯೂ ಭೇಟಿ ಮಾಡಿದ್ದೆ. ಮಾಧ್ಯಮಗಳ ಮುಂದೆ ಈಗ ಬಂದಿದ್ದೇನೆ ಅಷ್ಟೆ. ಯಾವುದೇ ವಿಶೇಷ ಇಲ್ಲ' ಎಂದರು.

ಯಡಿಯೂರಪ್ಪ ಅವರ ನಾಯಕತ್ವ ಬದಲಾವಣೆ ಕುರಿತ ಪ್ರಶ್ನೆಗೆ, 'ಎಲ್ಲ ಪ್ರಶ್ನೆಗಳಿಗೆ ಉತ್ತರಿಸಲು ಆಗಲ್ಲ' ಎಂದರು.

ಬಿಎಸ್‌ವೈ ಜತೆ ಬೊಮ್ಮಾಯಿ ಚರ್ಚೆ

ಶಾಸಕ ಎಸ್.ಎ. ರಾಮದಾಸ್ ಮತ್ತು ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ ಭೇಟಿಯ ಬೆನ್ನಲ್ಲೇ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ನಿವಾಸ 'ಕಾವೇರಿ'ಗೆ ದೌಡಾಯಿಸಿದ ಮುಖ್ಯಮಂತ್ರಿ ಬೊಮ್ಮಾಯಿ, ಕೆಲಕಾಲ ಚರ್ಚೆ ನಡೆಸಿದರು.

ಯಡಿಯೂರಪ್ಪ ಜತೆ ಯಾವ ವಿಷಯಗಳ ಕುರಿತು ಚರ್ಚಿಸಲಾಗಿದೆ ಎಂಬುದನ್ನು ಮುಖ್ಯಮಂತ್ರಿ ಬಹಿರಂಗಪಡಿಸಲಿಲ್ಲ.

ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ

'ನೀರಾವರಿ ಬಳಕೆಗೆ ಶೇ 1ರಷ್ಟು ತೆರಿಗೆ'

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: 'ರಾಜ್ಯದ ನೀರಾವರಿ ಯೋಜನೆಗಳ ಪ್ರಯೋಜನ ಪಡೆಯುವ ಬಳಕೆದಾರರು ಸರ್ಕಾರ ಖರ್ಚು ಮಾಡಿದ ಹಣದ ಶೇ 1ರಷ್ಟಾದರೂ ತೆರಿಗೆ ಕಟ್ಟಬೇಕು' ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಹೇಳಿದರು.

ಭದ್ರಾ ಜಲಾಶಯಕ್ಕೆ ಶನಿವಾರ ಬಾಗಿನ ಅರ್ಪಿಸಿದ ನಂತರ ಅವರು ಮಾತನಾಡಿದರು.

'ನೀರಾವರಿಗೆ ಸರ್ಕಾರ ಭಾರಿ ಮೊತ್ತದ ಹಣ ಖರ್ಚು ಮಾಡುತ್ತಿದೆ. ಎರಡು ವರ್ಷಗಳ ಅವಧಿಯಲ್ಲಿ ಕೆರೆ ತುಂಬಿಸುವ ಯೋಜನೆಗಳಿಗೆ ₹4,900 ಕೋಟಿ ವೆಚ್ಚ ಮಾಡಲಾಗಿದೆ. ಯೋಜನೆಗಳ ಪ್ರಯೋಜನ ಪಡೆಯುವ ಫಲಾನುಭವಿಗಳು ಶೇ 1ರಷ್ಟು ತೆರಿಗೆಯನ್ನೂ ಪಾವತಿಸದಿದ್ದರೆ ಹೇಗೆ' ಎಂದು ಪ್ರಶ್ನಿಸಿದರು.

ನೀರಾವರಿ ಯೋಜನೆಗಳಿಗೆ ಸಾಕಷ್ಟು ಬೇಡಿಕೆ ಇದೆ. ಸರ್ಕಾರ ಆದ್ಯತೆಯ ಮೇಲೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುತ್ತಿದೆ. ಭವಿಷ್ಯದಲ್ಲಿ ಹೆಚ್ಚಿನ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುವುದು ಎಂದರು.

ಪ್ರವಾಹಕ್ಕೆ ಒತ್ತುವರಿಯೇ ಕಾರಣ: 'ನದಿ, ಹಳ್ಳ, ಕೊಳ್ಳಗಳ ತೀರಗಳನ್ನು ಜನರು ಒತ್ತುವರಿ ಮಾಡಿದ ಪರಿಣಾಮ ಪ್ರವಾಹ ಪರಿಸ್ಥಿತಿ ಎದುರಿಸುತ್ತಿದ್ದೇವೆ. 146 ಮೀಟರ್ ಅಗಲವಿದ್ದ ಮಲಪ್ರಭಾ ನದಿ 46 ಮೀಟರ್ ಕಿರಿದಾಗಿದೆ. ಬಹುತೇಕ ಜಲಪಥಗಳ ಹಾದಿ ಹೀಗೆಯೇ ಇದೆ. ಇದರಿಂದ ನೆರೆ ಸಂಕಷ್ಟ ಎದುರಾಗುತ್ತಿದೆ' ಎಂದು ಕಳವಳ ವ್ಯಕ್ತಪಡಿಸಿದರು.

'69 ವರ್ಷಗಳ ಇತಿಹಾಸದಲ್ಲಿ ಭದ್ರಾ ಜಲಾಶಯ 23 ಬಾರಿ ತುಂಬಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಪ್ರಥಮ ಬಾಗಿನ ಅರ್ಪಿಸಿರುವೆ. ಕೆಆರ್‌ಎಸ್ ಮಾದರಿಯಲ್ಲಿ ಅಣೆಕಟ್ಟು ಪ್ರದೇಶ ರೂಪಿಸಲಾಗುವುದು' ಎಂದು ಭರವಸೆ ನೀಡಿದರು.

'ಮೇಕೆದಾಟು ವಿಚಾರದಲ್ಲಿ ರಾಜಿ ಇಲ್ಲ'



ಗೋವಿಂದ ಕಾರಜೋಳ

ದಾವಣಗೆರೆ: 'ಮೇಕೆದಾಟು ಯೋಜನೆ ವಿಚಾರದಲ್ಲಿ ಯಾವುದೇ ರಾಜಿ ಇಲ್ಲ. ನಮ್ಮ ಪಾಲಿನ ನೆಲ, ಜಲ ಕಬಳಿಸಲು ಬೇರೆಯವರು ಪ್ರಯತ್ನ ಮಾಡಿದರೆ ಸರ್ಕಾರ ಬಗ್ಗುವುದಿಲ್ಲ' ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಹೇಳಿದರು.

ದಾವಣಗೆರೆಯಲ್ಲಿ ಮಾತನಾಡಿದ ಅವರು, 'ಕುಡಿಯುವ ನೀರು ಹಾಗೂ ಜಲವಿದ್ಯುತ್ ಉತ್ಪಾದನೆಗೆ ಯೋಜನೆ ರೂಪಿಸಲು ಯಾವುದೇ ಅಡೆತಡೆ ಇಲ್ಲ. ಅರಣ್ಯ ಹಾಗೂ ಪರಿಸರ ಇಲಾಖೆಗಳ ನಿರಾಕ್ಷೇಪಣೆಗಾಗಿ ಪ್ರಯತ್ನಿಸುತ್ತಿದ್ದೇವೆ' ಎಂದರು.

ಮಗುವಿನ ಆಟ ಕಿತ್ತುಕೊಂಡ 'ಅಪೌಷ್ಟಿಕತೆ'

• ಸಂತೋಷ ಈ.ಚಿನಗುಡಿ

ತಾಯಿ ಶಾಹೀದಾ ಆಸರೆಯಿಂದ ಎದ್ದುನಿಲ್ಲಲು ಪ್ರಯತ್ನಿಸುತ್ತಿರುವ ಮಗಳು ರಜಾಬಿ

ಸಿಂಧನೂರ (ರಾಯಚೂರು ಜಿಲ್ಲೆ): ಇಲ್ಲಿಯ ಮೆಹಬೂಬ್ ಕಾಲೊನಿಯ ನಾಲ್ಕು ವರ್ಷದ ಪುಟಾಣಿ ರಜಾಬಿಗೆ ಎಲ್ಲಾ ಮಕ್ಕಳಂತೆ ಓಡಾಡಿಕೊಂಡು, ಆಟವಾಡುವ ಆಸೆ. ಆದರೆ, ಅಪೌಷ್ಟಿಕತೆಯ ಕಾರಣ ಈ ಮಗುವಿನ ಕಾಲುಗಳಿಗೆ ಶಕ್ತಿ ಬಂದಿಲ್ಲ. ಕುಣಿದು ನಲಿಯಬೇಕಾದ ವಯಸ್ಸಿನಲ್ಲಿ ಮಗು ತೆವಳಿಕೊಂಡೇ ಹೋಗುತ್ತಿದೆ.

ರಜಾಬಿ ತಂದೆ ಶಬ್ಬೀರ್ (25) ಹಾಗೂ ತಾಯಿ ಶಾಹೀದಾ (23) ಹೊಟ್ಟೆಪಾಡಿಗಾಗಿ ಕೂಲಿ ಕೆಲಸ ಮಾಡಿಕೊಂಡಿದ್ದಾರೆ. ಚಿಕ್ಕ ಬಾಡಿಗೆ ಮನೆಯಲ್ಲಿ ವಾಸಿಸುತ್ತಿರುವ ಈ ದಂಪತಿಯ ಬಡತನದ ಕಾರಣ, ಮಗಳಿಗೆ ಪೌಷ್ಟಿಕ ಆಹಾರ ನೀಡಲು ಆಗುತ್ತಿಲ್ಲ. ಶಾಹೀದಾ ಅವರು ಗರ್ಭಿಣಿ ಇದ್ದಾಗಲೇ ರಕ್ತಹೀನತೆಯ ತೊಂದರೆ ಅನುಭವಿಸಿದರು. ಹೆರಿಗೆ ನಂತರ ಮಗು ಕಡಿಮೆ ತೂಕವಿತ್ತು. ಇದೀಗ ನಾಲ್ಕು ವರ್ಷ ಕಳೆದ ಮೇಲೂ ಮಗುವಿನ ಆರೋಗ್ಯದಲ್ಲಿ ಸುಧಾರಣೆ ಕಂಡಿಲ್ಲ. ತೂಕ ಕೂಡ 8.4 ಕೆ.ಜಿ ಇದೆ.

ಸಿಂಧನೂರು, ರಾಯಚೂರು, ಕಲಬುರ್ಗಿ ಸರ್ಕಾರಿ ಆಸ್ಪತ್ರೆಗಳಿಗೆ ಹಲವು ಬಾರಿ ತೋರಿಸಿದ್ದಾರೆ. 'ಕಾಲುಗಳಿಗೆ ಏನೂ ತೊಂದರೆ ಇಲ್ಲ. ಶಕ್ತಿ ಇಲ್ಲದ ಕಾರಣ ಮಗು ನಡೆಯುತ್ತಿಲ್ಲ. ಸತ್ವಯುತ ಆಹಾರ ಕೊಟ್ಟರೆ ಸರಿಯಾಗುತ್ತಾಳೆ ಎಂದು ವೈದ್ಯರು ಹೇಳಿ ಕಳುಹಿಸಿದ್ದಾರೆ. ಎನ್‌ಆರ್‌ಸಿ ಕೇಂದ್ರಗಳಲ್ಲೂ ತಿಂಗಳವರೆಗೆ ದಾಖಲಿಸಿದ್ದೇವೆ. ಆದರೂ ಸುಧಾರಣೆ ಕಂಡಿಲ್ಲ' ಎನ್ನುವುದು ದಂಪತಿಯ ನೋವಿನ ನುಡಿ.

'ಗರ್ಭ ಧರಿಸಿದ್ದಾಗ ಸರ್ಕಾರಿ ಆಸ್ಪತ್ರೆಯ ವೈದ್ಯರು, ಅಂಗನವಾಡಿಯವರು ಹೇಳಿದ ಎಲ್ಲ ನಿಯಮಗಳನ್ನು ಪಾಲಿಸಿದ್ದೇನೆ. ಆದರೆ, ಸರ್ಕಾರದಿಂದ ನೀಡುವ ಧಾನ್ಯಗಳು ಎರಡು ದಿನಕ್ಕೂ ಸಾಲುತ್ತಿಲ್ಲ. ಅಕ್ಕಿ, ತೊಗರಿ ಬೇಳೆ, ಹೆಸರು ಬೇಳೆ, ಸಕ್ಕರೆ, ಬೆಲ್ಲ, ಗೋಧಿ ಎಲ್ಲವನ್ನೂ ಅರ್ಧ ಕೆ.ಜಿ ಮಾತ್ರ ಕೊಡುತ್ತಾರೆ. ಹಾಲಿನ ಪುಡಿ ಒಂದು ಪಾಕೀಟು, ಆರು ಮೊಟ್ಟೆ... ಇದು ಒಂದು ತಿಂಗಳಿಗೆ ಹೇಗೆ ಸಾಲುತ್ತದೆ? ಹೆರಿಗೆ ಸಂದರ್ಭದಲ್ಲಿ ಅನಿವಾರ್ಯ ಆಗಬಹುದು ಎಂದು ಸ್ವಲ್ಪ ಹಣ ಕೂಡಿಟ್ಟುಕೊಳ್ಳಬೇಕಾಯಿತು. ಸಮತೋಲಿತ ಆಹಾರ ಸೇವಿಸಲು ಸಾಧ್ಯವಾಗಲಿಲ್ಲ. ಹೀಗಾಗಿ, ನಮ್ಮ ಮಗಳು ಅಂಗವಿಕಲೆಯಾಗುತ್ತಾಳೇನೋ' ಎಂದು ಕಣ್ಣೀರಿಟ್ಟರು ಶಾಹೀದಾ.

'ಖಾಸಗಿ ಆಸ್ಪತ್ರೆಗೆ ಕರೆದೊಯ್ಯುವ ಶಕ್ತಿ ನನ್ನಲ್ಲಿಲ್ಲ. ಮಗಳು ತೆವಳುತ್ತ ಹೋಗುವುದನ್ನು ನೋಡಲು ಹಿಂಸೆಯಾಗುತ್ತಿದೆ' ಎಂಬ ಅಸಹಾಯಕತೆ ಶಬ್ಬೀರ್ ಅವರದು. ಈಗ ನಾಲ್ಕು ತಿಂಗಳ ಗರ್ಭಿಣಿಯಾಗಿರುವ ಶಾಹೀದಾ, ಮಗಳಿಗೆ ಪೌಷ್ಟಿಕ ಆಹಾರ ನೀಡುವ ಸವಾಲಿನ ಜತೆಗೆ ತಮ್ಮ ಆರೋಗ್ಯವನ್ನೂ ನೋಡಿಕೊಳ್ಳಬೇಕಿದೆ.

ಕೊರೊನಾ ಕಾರಣ ಮಕ್ಕಳ ಮನೆಗಳಿಗೆ ವಿತರಣೆ

ಮಕ್ಕಳ ಮೊಟ್ಟೆ, ಹಾಲು, ಕುಟುಂಬದವರ ಪಾಲು

• ಅನಿತಾ ಎಚ್.

ದಾವಣಗೆರೆಯಲ್ಲಿ ಲಾಕ್‌ಡೌನ್ ಸಂದರ್ಭದಲ್ಲಿ ಸೈಕಲ್ ಸಹಾಯದಿಂದ ಮಕ್ಕಳ ಮನೆಗೆ ಪೌಷ್ಟಿಕ ಆಹಾರದ ಪೂರೈಕೆ

6 ತಿಂಗಳಿಂದ 3 ವರ್ಷದ ತೀವ್ರ ಅಪೌಷ್ಟಿಕ ಮಗುವಿಗೆ ವಾರಕ್ಕೆ 3 ಮೊಟ್ಟೆ

3ರಿಂದ 6 ವರ್ಷದ ತೀವ್ರ ಅಪೌಷ್ಟಿಕ ಮಗುವಿಗೆ ವಾರಕ್ಕೆ 5 ಮೊಟ್ಟೆ

ಪ್ರತಿ ಮಗುವಿಗೆ ತಿಂಗಳಿಗೆ 300 ಗ್ರಾಂ ಹಾಲಿನ ಪುಡಿ ವಿತರಣೆ

ದಾವಣಗೆರೆ: ಕೋವಿಡ್ ಕಾರಣಕ್ಕೆ ಅಂಗನವಾಡಿಗಳು ಬಂದ್ ಆಗಿವೆ. ಹೀಗಾಗಿ ಮಕ್ಕಳ ಮನೆಗೇ ಮೊಟ್ಟೆ, ಹಾಲಿನಪುಡಿ ಸೇರಿ ಪೌಷ್ಟಿಕ ಆಹಾರವನ್ನು ಅಂಗನವಾಡಿ ಕಾರ್ಯಕರ್ತೆಯರು ವಿತರಿಸುತ್ತಿದ್ದಾರೆ. ಆದರೆ, ಕೆಲವೆಡೆ ಆಹಾರ ಕುಟುಂಬದವರ ನಡುವೆ ಹಂಚಿಕೆಯಾಗುವುದರಿಂದ ಮಗುವಿಗೆ ಪೂರ್ಣಪ್ರಮಾಣದಲ್ಲಿ ಆಹಾರ ಸಿಗುತ್ತಿಲ್ಲ.

ಗ್ರಾಮೀಣ ಪ್ರದೇಶಗಳಲ್ಲಿ ಬಡತನ, ಅನಕ್ಷರತೆ ಕಾರಣ ಪೋಷಕರು ತಮ್ಮ ಮಕ್ಕಳು ತೀವ್ರ ಅಪೌಷ್ಟಿಕತೆಯಿಂದ ಬಳಲುತ್ತಿದ್ದರೂ ಸರಿಯಾಗಿ ನಿಗಾ ವಹಿಸುವುದಿಲ್ಲ. ಕೋವಿಡ್ ಪೂರ್ವದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಕೇಂದ್ರದಲ್ಲೇ ಮಕ್ಕಳಿಗೆ ಪೌಷ್ಟಿಕ ಆಹಾರ ತಿನ್ನಿಸುತ್ತಿದ್ದರು. ಈಗ ಅನಿವಾರ್ಯವಾಗಿ ಮನೆಗೆ ತಲುಪಿಸುತ್ತಿದ್ದಾರೆ. ಆಹಾರವನ್ನು ಮಕ್ಕಳಿಗೆ ನೀಡಿ ಎಂದು ಪೋಷಕರಿಗೆ ತಿಳಿ ಹೇಳಿದರೂ ಕೇಳುವುದಿಲ್ಲ. ಅಪೌಷ್ಟಿಕತೆ ನಿವಾರಿಸುವ ಇಲಾಖೆಯ ಶ್ರಮವನ್ನು ಕೋವಿಡ್ ವ್ಯರ್ಥವಾಗಿಸುತ್ತಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮೂಲಗಳು ತಿಳಿಸಿವೆ.

'ಮಕ್ಕಳು ಅಂಗನವಾಡಿಗೆ ಬರುವಾಗ ಮೊಟ್ಟೆ ಬೇಯಿಸಿ ತಿನ್ನಿಸುತ್ತಿದ್ದೆವು. ಹಾಲು ಕುಡಿಸುತ್ತಿದ್ದೆವು. ಕಡಲೆಕಾಳು, ಹೆಸರುಕಾಳು ಮೊಳಕೆ ಬರಿಸಿ ತಿನ್ನಿಸುತ್ತಿದ್ದೆವು. ಆದರೆ, ಪೋಷಕರು ಮಕ್ಕಳಿಗೆ ಈ ರೀತಿ ತಿನ್ನಿಸಲ್ಲ. ಕಾಳುಗಳನ್ನು ಸಾರು ಮಾಡಲು ಬಳಸುತ್ತಾರೆ. ಕೇಂದ್ರದಿಂದ ಅಳತೆ ಮಾಡಿ ಮಗುವಿಗೆ ನೀಡುವ ಆಹಾರ ಮನೆಯವರ ನಡುವೆ ಹಂಚಿಕೆಯಾಗುತ್ತಿದೆ. ಹೀಗಾಗಿ ಲಾಕ್‌ಡೌನ್ ತೆರವುಗೊಳಿಸಿದ ನಂತರದಲ್ಲಿ ಇಲಾಖೆ ಸೂಚನೆ ಮೇರೆಗೆ ತೀವ್ರ ಅಪೌಷ್ಟಿಕತೆ ಇರುವ ಮಗುವನ್ನು ಕೇಂದ್ರಕ್ಕೆ ಕರೆತಂದು ಆರೈಕೆ ಮಾಡುತ್ತಿದ್ದೇವೆ. ಉಳಿದ ಮಕ್ಕಳಿಗೆ ಮನೆಗಳಿಗೇ ತಲುಪಿಸುತ್ತಿದ್ದೇವೆ' ಎಂದು ಅಂಗನವಾಡಿ ಕಾರ್ಯಕರ್ತೆಯೊಬ್ಬರು ತಿಳಿಸಿದ್ದಾರೆ.

ಮಲೆನಾಡು ಮತ್ತು ಕರಾವಳಿ ಪ್ರದೇಶದಲ್ಲಿ ಅಲ್ಲೊಂದು, ಇಲ್ಲೊಂದು ಮನೆಗಳಿರುತ್ತವೆ. ಕಾರ್ಯಕರ್ತೆಯರು ಹರಸಾಹಸಪಟ್ಟು ಫಲಾನುಭವಿಗಳಿಗೆ ಆಹಾರ ತಲುಪಿಸುತ್ತಿದ್ದಾರೆ. ಮಲೆನಾಡಿನಲ್ಲಿ ಶೇ 25ರಷ್ಟು ಅಂಗನವಾಡಿಗಳಲ್ಲಿ ಪೌಷ್ಟಿಕ ಆಹಾರ ವಿತರಣೆ ಸಮಸ್ಯೆ ಇದೆ.

ಕೋವಿಡ್‌ನ ಮೊದಲ ಮತ್ತು ಎರಡನೇ ಅಲೆಯ ಲಾಕ್‌ಡೌನ್ ಸಂದರ್ಭದಲ್ಲಿ ಕಾರ್ಯಕರ್ತೆಯರು ತರಕಾರಿ, ನೀರಿನ ಗಾಡಿ, ಬುಟ್ಟಿಗಳಲ್ಲಿ ಪೌಷ್ಟಿಕ ಆಹಾರವನ್ನು ಇಟ್ಟುಕೊಂಡು ಹೋಗಿ ಫಲಾನುಭವಿಗಳಿಗೆ ತಲುಪಿಸಿದ್ದಾರೆ ಎನ್ನುತ್ತಾರೆ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ದಾವಣಗೆರೆ ಜಿಲ್ಲಾ ಉಪನಿರ್ದೇಶಕ ಕೆ.ಎಚ್. ವಿಜಯಕುಮಾರ್.

'ಕೋವಿಡ್ ಕಾರಣದಿಂದ ವಲಸೆ ಹೋದವರು ಗ್ರಾಮಗಳಿಗೆ ವಾಪಸ್ ಬಂದಾಗ ಮಕ್ಕಳ ಸಂಖ್ಯೆ ಹೆಚ್ಚಿತ್ತು. ಅಗತ್ಯಕ್ಕೆ ತಕ್ಕಷ್ಟು ಆಹಾರ ಸರಬರಾಜು ಆಗದ ಕಾರಣ ಪೌಷ್ಟಿಕ ಆಹಾರ ವಿತರಣೆಯಲ್ಲಿ ವ್ಯತ್ಯಾಸವಾಯಿತು. ಡಿಸೆಂಬರ್ ತಿಂಗಳ ಅಕ್ಕಿ ಒಂದೇ ಬಾರಿ ಫೆಬ್ರುವರಿಯಲ್ಲಿ ಬಂದಿತು. ಒಂದು ಮೊಟ್ಟೆಗೆ ₹ 2 ಹೆಚ್ಚುವರಿ ಹೊರೆ ಸಮಸ್ಯೆಗೆ ಪರಿಹಾರ ಸಿಕ್ಕಿಲ್ಲ. ಇದೀಗ ಪೋಷಕರಿಗೆ ನೇರ ನಗದು ವರ್ಗಾವಣೆ (ಡಿಬಿಟಿ) ಜಾರಿ ಮಾಡಲು ಹೊರಟಿದ್ದು, ಇದರಿಂದ ಅಪೌಷ್ಟಿಕತೆ ಸಮಸ್ಯೆ ಹೆಚ್ಚುವ ಅಪಾಯವಿದೆ' ಎನ್ನುತ್ತಾರೆ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ (ಸಿಐಟಿಯು) ಅಧ್ಯಕ್ಷೆ ಎಸ್. ವರಲಕ್ಷ್ಮಿ.

ನ್ಯಾ. ಎನ್‌.ಕೆ. ಪಾಟೀಲ ವರದಿಯೂ ಮೂಲೆಗುಂಪು

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ರಾಜ್ಯದಲ್ಲಿ ಅಪೌಷ್ಟಿಕತೆ ನಿರ್ಮೂಲನೆ ಮಾಡಲು ಮಾರ್ಗೋಪಾಯಗಳನ್ನು ಸೂಚಿಸಿ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎನ್.ಕೆ. ಪಾಟೀಲ ನೇತೃತ್ವದ ಸಮಿತಿ ನೀಡಿದ್ದ ವರದಿಯೂ ಪೂರ್ಣವಾಗಿ ಅನುಷ್ಠಾನವಾಗದೇ ದೂಳು ಹಿಡಿಯುತ್ತಿದೆ.

ಅಂಗನವಾಡಿಗಳಲ್ಲಿ ವಿದ್ಯುತ್ ಸಂಪರ್ಕ ಮತ್ತು ಶೌಚಾಲಯಗಳು ಇಂದಿಗೂ ಇಲ್ಲದಿರುವುದು, ವರದಿ ಮೂಲೆಗುಂಪಾಗಿರುವುದಕ್ಕೆ ಜ್ವಲಂತ ನಿದರ್ಶನ.

ರಾಜ್ಯದಲ್ಲಿ ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳ ಸಂಖ್ಯೆ ಹೆಚ್ಚಾಗಿರುವುದನ್ನು ಗಮನಿಸಿದ್ದ ಹೈಕೋರ್ಟ್, ಸಮಗ್ರ ವರದಿಯನ್ನು ಸಲ್ಲಿಸುವಂತೆ ನ್ಯಾಯಮೂರ್ತಿ ಎನ್.ಕೆ. ಪಾಟೀಲ ನೇತೃತ್ವದ ಸಮಿತಿಯನ್ನು ಸ್ವಯಂಪ್ರೇರಿತವಾಗಿ ರಚಿಸಿತ್ತು. ಈ ಸಮಿತಿಯು 2012ರಲ್ಲಿ ವರದಿ ಸಲ್ಲಿಸಿತ್ತು.

'ಶೇ 57ರಷ್ಟು ಅಂಗನವಾಡಿಗಳು ಮಾತ್ರ ಸ್ವಂತ ಕಟ್ಟಡ ಹೊಂದಿವೆ. ಶೇ 27ರಷ್ಟು ಮರದ ಕೆಳಗೆ, ದೇವಾಲಯಗಳ ಆವರಣ, ಗೋದಾಮುಗಳಲ್ಲಿ ನಡೆಯುತ್ತಿವೆ. ಶೇ 55ರಷ್ಟು ಅಂಗನವಾಡಿಗಳಲ್ಲಿ ಕುಡಿಯುವ ನೀರು ಮತ್ತು ಶೇ 42ರಷ್ಟು ಕೇಂದ್ರಗಳಲ್ಲಿ ಶೌಚಾಲಯ ಸೌಲಭ್ಯವೂ ಇಲ್ಲ. 6 ವರ್ಷದ ಒಳಗಿನ ಹೆಚ್ಚು ಮಕ್ಕಳು ಅತಿಸಾರ ಸಮಸ್ಯೆ ಎದುರಿಸುತ್ತಿವೆ' ಎಂದು ವರದಿಯಲ್ಲಿ ತಿಳಿಸಲಾಗಿತ್ತು.

'ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳ ಸಂಖ್ಯೆ ಕಡಿಮೆಯಾಗಬೇಕೆಂದರೆ, ಅವರಿಗೆ ಗುಣಮಟ್ಟದ ಬಿಸಿಯೂಟ ಸಿಗಬೇಕು. ಕುಡಿಯಲು ಶುದ್ಧವಾದ ಮತ್ತು ಬಿಸಿ ನೀರು ಒದಗಿಸಬೇಕು. ಅಂಗನವಾಡಿಗಳಿಗೆ ಮೂಲ ಸೌಕರ್ಯ ಒದಗಿಸಬೇಕು. ಎರಡು–ಮೂರು ತಿಂಗಳಿಗೊಮ್ಮೆ ಅವರ ಆರೋಗ್ಯ ತಪಾಸಣೆ ಕಡ್ಡಾಯವಾಗಿ ನಡೆಸಬೇಕು' ಎಂಬುದೂ ಸೇರಿದಂತೆ ಒಟ್ಟಾರೆ 112 ಶಿಫಾರಸುಗಳನ್ನು ಈ ಸಮಿತಿ ಮಾಡಿತ್ತು.

'ಅಂಗನವಾಡಿಗಳಲ್ಲಿ ಮೂಲಸೌಕರ್ಯ ಕೊರತೆ ಬಗ್ಗೆ ಹೈಕೋರ್ಟ್ ಇತ್ತೀಚೆಗೆ ವಿಚಾರಣೆ ಆರಂಭಿಸಿದೆ. ರಾಜ್ಯದಲ್ಲಿ ಒಟ್ಟಾರೆ ಇರುವ 65,911 ಅಂಗನವಾಡಿಗಳಲ್ಲಿ 14,948 ಕೇಂದ್ರಗಳಲ್ಲಿ ವಿದ್ಯುತ್ ಸಂಪರ್ಕ ಇಲ್ಲ. 18,974 ಕೇಂದ್ರಗಳಲ್ಲಿ ಫ್ಯಾನ್‌ಗಳಿಲ್ಲ, 13,690 ಕೇಂದ್ರಗಳಲ್ಲಿ ಶೌಚಾಲಯಗಳೇ ಇಲ್ಲ ಎಂಬುದನ್ನು ಸರ್ಕಾರವೇ ಒಪ್ಪಿಕೊಂಡಿದೆ. ಇದನ್ನು ಗಮನಿಸಿದರೆ ಎನ್.ಕೆ. ಪಾಟೀಲ ಅವರ ವರದಿಯು ಎಷ್ಟರ ಮಟ್ಟಿಗೆ ಅನುಷ್ಠಾನ ಆಗಿದೆ ಎಂಬುದು ಅರ್ಥವಾಗುತ್ತದೆ' ಎಂದು ಮಕ್ಕಳ ಹಕ್ಕುಗಳ ಹೋರಾಟಗಾರರು ಹೇಳುತ್ತಾರೆ.

'ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ಅಪೌಷ್ಟಿಕ ಮಕ್ಕಳ ಪುನರ್ವಸತಿ ಕೇಂದ್ರಗಳು ಕೂಡ ಇರಬೇಕು ಎಂದೂ ಸಮಿತಿ ತಿಳಿಸಿತ್ತು. ಕೆಲವು ಆಸ್ಪತ್ರೆಗಳಲ್ಲಿ ತೆರೆದಿದ್ದ ಪುನರ್ವಸತಿ ಕೇಂದ್ರಗಳೂ ಈಗ ಮುಚ್ಚಿ ಹೋಗಿವೆ. ಬಹುತೇಕ ಕಡೆಗಳಲ್ಲಿ ಆರಂಭವೇ ಆಗಲಿಲ್ಲ. ಮಕ್ಕಳ ಆರೋಗ್ಯ ತಪಾಸಣಾ ಶಿಬಿರಗಳೂ ನಡೆಯುತ್ತಿಲ್ಲ. ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳ ಸಂಖ್ಯೆ ಬಗ್ಗೆ ಅಧಿಕಾರಿಗಳು ಸುಳ್ಳು ಲೆಕ್ಕ ಕೊಟ್ಟು ಸರ್ಕಾರದ ಮತ್ತು ನ್ಯಾಯಾಲಯದ ದಾರಿ ತಪ್ಪಿಸುತ್ತಿದ್ದಾರೆ. ಎನ್.ಕೆ. ಪಾಟೀಲ ಸಮಿತಿ ವರದಿಯನ್ನು ಅವರು ಗಂಭಿರವಾಗಿ ಪರಿಗಣಿಸಿಯೇ ಇಲ್ಲ' ಎಂದು ಸಾಮಾಜಿಕ ಪರಿವರ್ತನಾ ಜನಾಂದೋಲನದ ಪ್ರಧಾನ ಕಾರ್ಯದರ್ಶಿ ವೈ.ಮರಿಸ್ವಾಮಿ ಬೇಸರ ವ್ಯಕ್ತಪಡಿಸುತ್ತಾರೆ.

'ಪೋಷಣೆ'ಗೆ ಕೋವಿಡ್ ಅಡ್ಡಿ

ಅಭಿಯಾನಕ್ಕೆ 2018ರಲ್ಲಿ ಚಾಲನೆ: ಕೊನೆಯಿಂದ 2ನೇ ಸ್ಥಾನದಲ್ಲಿ ಕರ್ನಾಟಕ

• ವರುಣ ಹೆಗಡೆ

ಬೆಂಗಳೂರು: ಆರು ವರ್ಷದೊಳಗಿನ ಮಕ್ಕಳು ಮತ್ತು ತಾಯಂದಿರಲ್ಲಿ ಅಪೌಷ್ಟಿಕತೆ ನಿವಾರಿಸುವ ಉದ್ದೇಶದಿಂದ ಕೇಂದ್ರ ಸರ್ಕಾರ ಆರಂಭಿಸಿದ್ದ 'ಪೋಷಣ ಅಭಿಯಾನ' ರಾಜ್ಯದಲ್ಲಿ ಕೋವಿಡ್‌ನಿಂದಾಗಿ ನಿದ್ದೆಗೆ ಜಾರಿದೆ.

2018ರಲ್ಲಿ ಈ ಅಭಿಯಾನಕ್ಕೆ ಪ್ರಧಾನಿ ನರೇಂದ್ರ ಮೋದಿ ಚಾಲನೆ ನೀಡಿದ್ದರು. ಆ ವೇಳೆ ರಾಜ್ಯದಲ್ಲಿದ್ದ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ನೇತೃತ್ವದ ಮೈತ್ರಿ ಸರ್ಕಾರ ಈ ಅಭಿಯಾನಕ್ಕಾಗಿ 19 ಜಿಲ್ಲೆಗಳನ್ನು ಆಯ್ಕೆ ಮಾಡಿತ್ತು. ನಂತರ ಅಧಿಕಾರಕ್ಕೆ ಬಂದ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಸರ್ಕಾರದಲ್ಲಿ ಯೋಜನೆ ಅನುಷ್ಠಾನಗೊಂಡಿತ್ತು.

ಯುನಿಸೆಫ್ ಸಹಯೋಗದಲ್ಲಿ ರಾಷ್ಟ್ರಮಟ್ಟದಲ್ಲಿ ನಡೆಯುವ ಈ ಯೋಜನೆಗೆ ಕೇಂದ್ರ ಸರ್ಕಾರ ಶೇ 60 ಮತ್ತು ರಾಜ್ಯ ಸರ್ಕಾರ ಶೇ 40ರಷ್ಟು ಅನುದಾನ ಒದಗಿಸಲಿದೆ. ನೀತಿ ಆಯೋಗಕ್ಕೆ ಪೋಷಣ ಅಭಿಯಾನದ ಮೇಲ್ವಿಚಾರಣೆ–ಮೌಲ್ಯಮಾಪನದ ಹೊಣೆ ನೀಡಲಾಗಿದೆ. ಈ ಆಯೋಗವು ಕಳೆದ ವರ್ಷ ಬಿಡುಗಡೆ ಮಾಡಿದ ಸಮೀಕ್ಷಾ ವರದಿಯಲ್ಲಿ 'ಅಪೌಷ್ಟಿಕತೆ ನೀಗಿಸುವಲ್ಲಿ ಕರ್ನಾಟಕದ ಸಾಧನೆ ನಿರಾಶಾದಾಯಕ'ಎಂದು ತಿಳಿಸಿತ್ತು. ಇದನ್ನುಯಶಸ್ವಿಯಾಗಿ ಅನುಷ್ಠಾನಕ್ಕೆ ತಂದ 19 ದೊಡ್ಡ ರಾಜ್ಯಗಳ ಸಾಲಿನಲ್ಲಿ ಕರ್ನಾಟಕ ಕೊನೆಯಿಂದ ಎರಡನೇ ಸ್ಥಾನದಲ್ಲಿತ್ತು.

'ಜಾಗೃತಿ ಮೂಡಿಸುವ ಕಾರ್ಯಕ್ರಮಕ್ಕೆ ಕೋವಿಡ್ ಅಡ್ಡಿಯಾಗಿದೆ. ಅಂಗನವಾಡಿ ಕಾರ್ಯಕರ್ತೆಯರಿಗೆ ಸ್ಥಳೀಯರ ಬಗ್ಗೆ ತಿಳಿದಿರುವುದರಿಂದ ಕೋವಿಡ್ ಕಾರ್ಯದಲ್ಲಿ ತೊಡಗಿಸಲಾಗಿದೆ. ಕೋವಿಡ್ ನಿಯಂತ್ರಣಕ್ಕೆ ಬಂದ ಬಳಿಕ ಅವರನ್ನು ಹೆಚ್ಚುವರಿ ಕೆಲಸದಿಂದ ಬಿಡುಗಡೆ ಮಾಡಲಾಗುತ್ತದೆ' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಚಿವ ಹಾಲಪ್ಪ ಆಚಾರ್ 'ಪ್ರಜಾವಾಣಿ'ಗೆ ತಿಳಿಸಿದರು.

'ಅಂಗನವಾಡಿ ಕಾರ್ಯಕರ್ತೆಯರು ಫಲಾನುಭವಿಗಳ ಮಾಹಿತಿಯನ್ನು ಕಾಲ ಕಾಲಕ್ಕೆ ಮೊಬೈಲ್ ಆ್ಯಪ್ ಮೂಲಕ ಅಪ್‌ಲೋಡ್ ಮಾಡಬೇಕಾಗುತ್ತದೆ. ಆದರೆ, ಅದರ ಮೌಲ್ಯಮಾಪನಕ್ಕೆ ಸೂಕ್ತ ವ್ಯವಸ್ಥೆಯಿಲ್ಲ' ಎನ್ನುತ್ತಾರೆ ಇಲಾಖೆಯ ಮಾಜಿ ಸಚಿವೆ ಜಯಮಾಲಾ.

ಸ್ಮಾರ್ಟ್‌ಫೋನ್ ನಿರ್ವಹಣೆಯೇ ಸವಾಲು

ಅಂಗನವಾಡಿ ಕಾರ್ಯಕರ್ತರ ಮೂಲಕ ಪೋಷಣ ಅಭಿಯಾನವನ್ನು ಅನುಷ್ಠಾನ ಮಾಡಲಾಗುತ್ತಿದೆ. ಅಭಿಯಾನದಡಿ ಅವರಿಗೆ ಸ್ಮಾರ್ಟ್‌ಫೋನ್‌ಗಳನ್ನು ನೀಡಲಾಗಿದೆ. ಅಭಿಯಾನ ನಡೆಸಿದ ಬಗ್ಗೆ ಫೋಟೊ ಸಹಿತ ಮಾಹಿತಿಯನ್ನು ಆ್ಯಪ್‌ನಲ್ಲಿ ಅಪ್‌ಲೋಡ್ ಮಾಡಬೇಕಾಗುತ್ತದೆ. ನೈಜ ಸಮಯ ಮತ್ತು ಸ್ಥಳದ ವಿವರ ಕೂಡ ದಾಖಲಾಗಬೇಕಾಗುತ್ತದೆ. ಸ್ಮಾರ್ಟ್‌ಫೋನ್ ಬಳಕೆ ಗೊತ್ತಿರದ ಅಂಗನವಾಡಿ ಕಾರ್ಯಕರ್ತೆಯರಿಗೆ ಇದು ಸಮಸ್ಯೆಯಾಗಿದೆ. ಈ ಕಾರ್ಯಕ್ಕೆ ಅವರು ಅನ್ಯರನ್ನು ಅವಲಂಬಿಸಬೇಕಾಗಿ ಬಂದಿದೆ.

'ಮಕ್ಕಳು, ಗರ್ಭಿಣಿಯರು ಹಾಗೂ ಬಾಣಂತಿಯರನ್ನು ತೂಕ ಮಾಡಿ, ಶ್ರೇಣಿ ನೀಡಲಾಗುತ್ತದೆ. ಕಡಿಮೆ ತೂಕ ಇರುವ ಅಪೌಷ್ಟಿಕ ಮಕ್ಕಳನ್ನು ಪೌಷ್ಟಿಕ ಪುನರ್ವಸತಿ ಕೇಂದ್ರಕ್ಕೆ ಕಳುಹಿಸಲಾಗುತ್ತದೆ. ಮಕ್ಕಳ ಬೆಳವಣಿಗೆ ಟ್ರ್ಯಾಕ್ ಮಾಡಲು ಸ್ಮಾರ್ಟ್‌ಫೋನ್ ಸಹಕಾರಿ ಆದರೆ, ಕೆಲವೆಡೆ ಮಾತ್ರ ಈ ಅಭಿಯಾನ ಸಮರ್ಪಕವಾಗಿ ನಡೆಯುತ್ತಿದೆ' ಎಂದು ಚೈಲ್ಡ್ ರೈಟ್ ಟ್ರಸ್ಟ್‌ನ ರಾಜ್ಯ ಸಂಚಾಲಕ ಸತೀಶ್ ತಿಳಿಸಿದರು.

ಗಿರಿಜನರಿಗೆ ಪೌಷ್ಟಿಕ ಆಹಾರ ವಿತರಣೆ ಯೋಜನೆ

'ಕೋವಿಡ್ ಕಾಲದಲ್ಲಿ ಹೊಟ್ಟೆ ತುಂಬಿಸಿತು'

• ವಿ.ಸೂರ್ಯನಾರಾಯಣ

ಚಾಮರಾಜನಗರ: 'ಕೋವಿಡ್ ಲಾಕ್‌ಡೌನ್‌ನಲ್ಲಿ ನಮಗೆ ಕೆಲಸ ಇರಲಿಲ್ಲ. ಅರಣ್ಯ ಕಿರು ಉತ್ಪನ್ನಗಳನ್ನು ಸಂಗ್ರಹಿಸಿ ಮಾರಲೂ ಆಗದ ಹೊತ್ತಲ್ಲಿ, ನಮ್ಮ ಹಸಿವನ್ನು ನೀಗಿಸಿದ್ದು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಪೂರೈಸಿದ ಪೌಷ್ಟಿಕ ಆಹಾರ. ಆದರೆ, ಸರಿಯಾದ ಸಮಯಕ್ಕೆ ಹಂಚಿದರೆ ಅನುಕೂಲ ಆಗುತ್ತದೆ'

–ಜಿಲ್ಲೆಯ ಯಳಂದೂರು ತಾಲ್ಲೂಕಿನ ಬಿಳಿಗಿರಿರಂಗನಬೆಟ್ಟದ ಬಂಗ್ಲೆ ಪೋಡಿನ ಸೋಲಿಗ ಮಹಿಳೆ ಭಂಗಿ ಮಾದಮ್ಮನ ಮಾತುಗಳಿವು.

ರಾಜ್ಯ ಸರ್ಕಾರವು ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆಯಡಿಯಲ್ಲಿ ಪೂರೈಸುತ್ತಿರುವ ಪೌಷ್ಟಿಕ ಆಹಾರದ ಬಗ್ಗೆ ಮೈಸೂರು, ಕೊಡಗು, ದಕ್ಷಿಣ ಕನ್ನಡ, ಉತ್ತರ ಕನ್ನಡ ಸೇರಿದಂತೆ ರಾಜ್ಯದಾದ್ಯಂತ ಇರುವ ಬಹುತೇಕ ಅರಣ್ಯವಾಸಿಗಳದ್ದೂ ಇದೇ ಅಭಿಪ್ರಾಯ.

'ಗುಣಮಟ್ಟದ ಕಡಲೆ, ಹೆಸರುಕಾಳು ನೀಡಬೇಕು ಎಂದು ಅನೇಕ ಬಾರಿ ಬೇಡಿಕೆ ಮಂಡಿಸಿದ್ದೇವೆ. ತೀರಾ ಚಿಕ್ಕ ಮೊಟ್ಟೆ ನೀಡಲಾಗುತ್ತಿದೆ. ಗಿರಿಜನರಿಗೆ ವಿತರಿಸುವ ಆಹಾರದಲ್ಲಿ ಗುಣಮಟ್ಟ ಕಾಪಾಡಿಕೊಳ್ಳಬೇಕು' ಎಂಬುದು ದಕ್ಷಿಣಕನ್ನಡ ಜಿಲ್ಲೆ ಮಲೆಕುಡಿಯ ಸಂಘದ ಅಧ್ಯಕ್ಷ ಶ್ರೀನಿವಾಸ ಮಲೆಕುಡಿಯ ಅವರ ಆಗ್ರಹ.

'ಮೊಟ್ಟೆಗಳು ಕಳಪೆಯಾಗಿರುತ್ತವೆ, ಕೆಲವು ಬಾರಿ ಬೇಳೆಕಾಳು ಚೆನ್ನಾಗಿರುವುದಿಲ್ಲ, ಸಮಯಕ್ಕೆ ಸರಿಯಾಗಿ ಆಹಾರ ವಿತರಿಸುವುದಿಲ್ಲ' ಎಂಬ ದೂರುಗಳ ನಡುವೆಯೂ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಯೋಜನೆ ತನ್ನ ಉದ್ದೇಶವನ್ನು ಈಡೇರಿಸಿಕೊಳ್ಳುವಲ್ಲಿ ಭಾಗಶಃ ಸಫಲವಾಗಿದೆ.

ಜಿಲ್ಲೆಯಲ್ಲಿ ನಿಯಮಿತವಾಗಿ ಆಹಾರ ಪದಾರ್ಥಗಳನ್ನು ವಿತರಿಸಲಾಗುತ್ತಿದೆ. ಗುಣಮಟ್ಟದಲ್ಲಿ ರಾಜಿ ಇಲ್ಲ. ಯೋಜನೆಯಿಂದ ಗಿರಿಜನರಿಗೆ ಲಾಭವಾಗಿದೆ

ಹೊನ್ನೇಗೌಡ, ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿ, ಚಾಮರಾಜನಗರ

ಮಳೆಗಾಲ, ಬೇಸಿಗೆಯಲ್ಲಿ ಕೂಲಿ ಕೆಲಸ ಸಿಗದೆ ವಲಸೆ ಹೋಗಬೇಕಾಗುತ್ತದೆ. ಆಹಾರ ಕಿಟ್‌ಗಳನ್ನು ವಿತರಿಸುತ್ತಿರುವುದರಿಂದ ವಲಸೆ ತಪ್ಪಿದೆ.

ಪುಟ್ಟಬಸವಯ್ಯ, ವಡ್ಡರಗುಡಿ ಹಾಡಿ, ಎಚ್‌.ಡಿ.ಕೋಟೆ

ರಾಜ್ಯದಾದ್ಯಂತ ಕಾಡು ಹಾಗೂ ಅವುಗಳ ಅಂಚಿನಲ್ಲಿ ವಾಸಿಸುತ್ತಿರುವ ಬುಡಕಟ್ಟು ಜನರಲ್ಲಿ ಪೌಷ್ಟಿಕಾಂಶ ವೃದ್ಧಿಗಾಗಿ 2013ರಿಂದ ಗಿರಿಜನರಿಗೆ ಪೌಷ್ಟಿಕ ಆಹಾರ ವಿತರಿಸಲಾಗುತ್ತಿದೆ. ಮೊದಲು, ಪ್ರತಿ ಕುಟುಂಬಕ್ಕೆ ವರ್ಷಕ್ಕೆ ಆರು ತಿಂಗಳು ಪೌಷ್ಟಿಕ ಆಹಾರ ಪೂರೈಸಲಾಗುತ್ತಿತ್ತು. ಈಗ, ಪ್ರತಿ 45 ದಿನಗಳಿಗೊಮ್ಮೆ ವರ್ಷದಲ್ಲಿ ಆರು ಬಾರಿ ನೀಡಲಾಗುತ್ತಿದೆ. ಸಾಮಾನ್ಯವಾಗಿ ಬೇಸಿಗೆ ಅಂತ್ಯದಿಂದ ಮುಂದಿನ ಆರು ತಿಂಗಳ ಕಾಲ ಪೌಷ್ಟಿಕ ಆಹಾರ ನೀಡಲಾಗುತ್ತಿದೆ.

ಕಿಟ್‌ನಲ್ಲಿ ಏನಿದೆ?

ಅಕ್ಕಿ/ರಾಗಿ (8 ಕೆಜಿ), ತೊಗರಿಬೇಳೆ (3 ಕೆಜಿ), ಕಡಲೆಕಾಳು (1 ಕೆಜಿ), ಕಡಲೆ ಬೀಜ (1 ಕೆಜಿ), ಹುರುಳಿಕಾಳು (1 ಕೆಜಿ), ಅಲಸಂದೆ (1 ಕೆಜಿ), ಹೆಸರುಕಾಳು (1 ಕೆಜಿ), ಸಕ್ಕರೆ/ಬೆಲ್ಲ (2 ಕೆಜಿ), ಅಡುಗೆಎಣ್ಣೆ (2 ಲೀಟರ್), ಮೊಟ್ಟೆ (30), ನಂದಿನಿ ತುಪ್ಪ (ಅರ್ಧ ಲೀಟರ್)

ಮೈಸೂರು ಜಿಲ್ಲೆಯ 12,872 ಬುಡಕಟ್ಟು ಕುಟುಂಬಗಳು, ಚಾಮರಾಜನಗರದ 7,600, ಉತ್ತರ ಕನ್ನಡದಲ್ಲಿ 4,143 ಕುಟುಂಬಗಳು, ದಕ್ಷಿಣ ಕನ್ನಡದಲ್ಲಿ 1,600ಕ್ಕೂ ಹೆಚ್ಚು ಕುಟುಂಬಗಳು ಯೋಜನೆಯ ಫಲವನ್ನು ಉಣ್ಣುತ್ತಿವೆ.

'ಚಟಕ್ಕೆ ಬಿದ್ದವರು ಆಹಾರ ಪದಾರ್ಥಗಳನ್ನು ಮಾರಿಕೊಳ್ಳುತ್ತಾರೆ. ಯೋಜನೆಯಿಂದ ಹಲವರಿಗೆ ಅನುಕೂಲವಾಗಿದೆ. ಕೊಡಗಿನಲ್ಲಿ ಅಸಹಾಯಕ ವೃದ್ಧರಿಗೆ, ಅಂಗವಿಕಲರಿಗೆ, ಗರ್ಭಿಣಿಯರಿಗೆ, ಮಕ್ಕಳಿಗೆ ಅನುಕೂಲವಾಗಿದೆ. ರಕ್ತಹೀನತೆಯಿಂದ ಬಳಲುತ್ತಿದ್ದ ಮಹಿಳೆಯರು–ಮಕ್ಕಳು ಚೇತರಿಸಿಕೊಂಡಿದ್ದಾರೆ' ಎನ್ನುತ್ತಾರೆ ಮುಖಂಡರು.

ಪೂರಕ ಮಾಹಿತಿ: ಸಿ.ಮೋಹನ್‌ಕುಮಾರ್, ಕೆ.ಎ.ಆದಿತ್ಯ, ಸಂಧ್ಯಾ ಹೆಗಡೆ, ಸದಾಶಿವ ಎಂ.ಎಸ್.

ಅಪೌಷ್ಟಿಕ 'ಕರ್ನಾಟಕ'

ಒಂದನೇ ಪುಟದಿಂದ...

6 ವರ್ಷದೊಳಗಿನ ಮಕ್ಕಳ ಪೌಷ್ಟಿಕ ಮಟ್ಟವನ್ನು ಹೆಚ್ಚಿಸುವುದು ಯೋಜನೆಯ ಮುಖ್ಯ ಉದ್ದೇಶ. ಆದರೆ, ಕೋವಿಡ್ ಈ ಉದ್ದೇಶಕ್ಕೆ ಅಡ್ಡಗಾಲು ಹಾಕಿದೆ. ಅಗತ್ಯ ಪ್ರಮಾಣದ ಪೌಷ್ಟಿಕ ಆಹಾರ ದೊರೆಯದೆಯೇ ಗ್ರಾಮೀಣ ಪ್ರದೇಶದ ಮಕ್ಕಳ ತೂಕ ದಿನದಿಂದ ದಿನಕ್ಕೆ ಇಳಿಕೆ ಕಾಣುತ್ತಿದೆ ಎನ್ನುತ್ತಾರೆ ಮಕ್ಕಳ ತಜ್ಞರು.

ಕೋವಿಡ್ ಪೂರ್ವದಲ್ಲಿ 'ಸಮಗ್ರ ಶಿಶು ಅಭಿವೃದ್ಧಿ ಯೋಜನೆ'ಯಡಿ ಅಂಗನವಾಡಿ ಕೇಂದ್ರಗಳಲ್ಲಿ 6 ವರ್ಷದೊಳಗಿನ ಮಕ್ಕಳಿಗೆ ಚಿತ್ರಾನ್ನ, ರವೆ ಲಾಡು, ಅಕ್ಕಿ ಕಿಚಡಿ, ಮೊಳಕೆ ಬರಿಸಿದ ಹೆಸರುಕಾಳು, ಊಟ ಸೇರಿದಂತೆ ಪೂರಕ ಪೌಷ್ಟಿಕ ಆಹಾರಗಳನ್ನು ಒದಗಿಸಲಾಗುತ್ತಿತ್ತು. 'ಕ್ಷೀರ ಭಾಗ್ಯ' ಯೋಜನೆಯಡಿ ವಾರದಲ್ಲಿ 5 ದಿನ 150 ಮಿಲಿ ಲೀಟರ್ ಹಾಲು ಹಾಗೂ 2 ದಿನ ಮೊಟ್ಟೆ ನೀಡಲಾಗುತ್ತಿತ್ತು.

ಕೋವಿಡ್ ಕಾಣಿಸಿಕೊಂಡ ಬಳಿಕ ದಿನಸಿ ರೂಪದಲ್ಲಿ ಮಕ್ಕಳ ಮನೆಗೆ ಆಹಾರ ಧಾನ್ಯಗಳನ್ನು ವಿತರಿಸಲಾಗುತ್ತಿದೆ. ಆದರೆ, ಈ ಆಹಾರ ಧಾನ್ಯವನ್ನು ಕುಟುಂಬದ ಎಲ್ಲ ಸದಸ್ಯರು ಹಂಚಿಕೊಂಡು, ಸೇವಿಸುವ ಸಾಧ್ಯತೆಯಿದೆ. ಹೀಗಾಗಿ, ಪೂರೈಕೆಯಾಗುತ್ತಿರುವ ಪೌಷ್ಟಿಕ ಆಹಾರಗಳು ಮಗುವಿಗೆ ಸಮರ್ಪಕವಾಗಿ ಸೇರುತ್ತಿಲ್ಲ ಎನ್ನುವುದನ್ನು ಒಪ್ಪಿಕೊಳ್ಳುವ ಅಧಿಕಾರಿಗಳು, ಕೋವಿಡ್ ಕಾಲಘಟ್ಟದಲ್ಲಿ ಬೇರೆ ಮಾರ್ಗವೇ ಇಲ್ಲ ಎಂದು ಅಸಹಾಯಕತೆ ವ್ಯಕ್ತಪಡಿಸುತ್ತಾರೆ.

ಇನ್ನೊಂದೆಡೆ, ಒದಗಿಸಲಾಗುತ್ತಿರುವ ಪೌಷ್ಟಿಕ ಆಹಾರ ಮಕ್ಕಳನ್ನು ಎಷ್ಟರ ಮಟ್ಟಿಗೆ ತಲುಪಿದೆ ಎಂಬ ಮೌಲ್ಯಮಾಪನ ಕೂಡ ನಡೆದಿಲ್ಲ. ಈ ನಡುವೆ ಕಳಪೆ ಗುಣಮಟ್ಟದ ಆಹಾರ ಧಾನ್ಯವನ್ನು ಒದಗಿಸಲಾಗಿದೆ ಎಂಬ ಆರೋಪಗಳೂ ಇವೆ.

ಅಂಗನವಾಡಿ ಕಾರ್ಯಕರ್ತೆಯರಿಗೆ, ಕೋವಿಡ್ ಸಂಪರ್ಕಿತರ ಪತ್ತೆ ಸೇರಿದಂತೆ ವಿವಿಧ ಹೆಚ್ಚುವರಿ ಕೆಲಸಗಳನ್ನೂ ನೀಡಲಾಗಿದೆ. ಇದರಿಂದಾಗಿ ಅವರಿಗೆ ಪೂರ್ಣ ಪ್ರಮಾಣದಲ್ಲಿ 'ಸಮಗ್ರ ಶಿಶು ಅಭಿವೃದ್ಧಿ ಯೋಜನೆ'ಯಡಿ ತಮ್ಮನ್ನು ತೊಡಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಲಾಕ್‌ಡೌನ್ ಅವಧಿಯಲ್ಲಿ ಕೆಲ ಮನೆಗಳಿಗೆ ಪೌಷ್ಟಿಕ ಆಹಾರ ತಲುಪಿಲ್ಲ ಎಂಬ ಆರೋಪಗಳೂ ಇವೆ.

'ಕೋವಿಡ್ ಕಾಣಿಸಿಕೊಂಡ ಬಳಿಕ ಬೇರೆ ಬೇರೆ ಕೆಲಸಗಳಿಗೆ ನಿಯೋಜಿಸಿದ ಕಾರಣ ಪ್ರತಿ ತಿಂಗಳು ಮನೆ ಮನೆಗೆ ತೆರಳಿ, ಆಹಾರ ಧಾನ್ಯಗಳನ್ನು ಒದಗಿಸುವುದು ಸಾಧ್ಯವಾಗುತ್ತಿಲ್ಲ. ದೂರದ ಪ್ರದೇಶಗಳಲ್ಲಿ ಇರುವವರಿಗೆ ಕೇಂದ್ರಗಳಿಗೆ ಬಂದು ಒಯ್ಯುವಂತೆ ತಿಳಿಸಲಾಗುತ್ತಿದೆ. ಕೆಲವರು ಗೈರಾಗುತ್ತಿದ್ದಾರೆ' ಎನ್ನುತ್ತಾರೆ ಚಿಕ್ಕಬಳ್ಳಾಪುರದ ಅಂಗನವಾಡಿ ಕಾರ್ಯಕರ್ತೆಯೊಬ್ಬರು.

ರಕ್ತ ಹೀನತೆ ಸಮಸ್ಯೆ: ರಾಜ್ಯದಲ್ಲಿನ ಮಕ್ಕಳಲ್ಲಿ ರಕ್ತಹೀನತೆ ಸಮಸ್ಯೆ ಹೆಚ್ಚಳವಾಗಿರುವುದು ಕೇಂದ್ರ ಆರೋಗ್ಯ ಸಚಿವಾಲಯ ನಡೆಸಿರುವ 2019–20ನೇ ಸಾಲಿನ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯಿಂದ ಬಹಿರಂಗವಾಗಿದೆ. 2015–16ನೇ ಸಾಲಿನ ಸಮೀಕ್ಷೆಯಲ್ಲಿ 6 ರಿಂದ 59 ತಿಂಗಳೊಳಗಿನ ಶೇ 60.9 ರಷ್ಟು ಮಕ್ಕಳು ರಕ್ತ ಹೀನತೆಯಿಂದ ಬಳಲುತ್ತಿರುವುದು ಪತ್ತೆಯಾಗಿತ್ತು. ಈಗ ಆ ಪ್ರಮಾಣವು ಶೇ 65.5ಕ್ಕೆ ಏರಿಕೆಯಾಗಿದೆ.

ಈ ಸಮೀಕ್ಷೆಯ ಪ್ರಕಾರ ರಾಜ್ಯದಲ್ಲಿರುವ 5 ವರ್ಷದೊಳಗಿನ ಮಕ್ಕಳಲ್ಲಿ ಗ್ರಾಮೀಣ ಪ್ರದೇಶದ ಮಕ್ಕಳೇ ಹೆಚ್ಚಿನ ಪ್ರಮಾಣದಲ್ಲಿ (ಶೇ 32.9 ರಷ್ಟು) ಅಪೌಷ್ಟಿಕ ಸಮಸ್ಯೆ ಎದುರಿಸಿದ್ದಾರೆ. ಈ ಸಮಸ್ಯೆ ನಗರ ಪ್ರದೇಶದ ಮಕ್ಕಳಲ್ಲಿ ಶೇ 29.4ರಷ್ಟಿದೆ. ಗ್ರಾಮೀಣ ಪ್ರದೇಶದ ಮಕ್ಕಳಲ್ಲಿ ವರ್ಷದಿಂದ ವರ್ಷಕ್ಕೆ ಅಪೌಷ್ಟಿಕತೆ ಏರುಗತಿ ಪಡೆದುಕೊಳ್ಳುತ್ತಿದೆ. ಇದು ವೈದ್ಯರು ಹಾಗೂ ಇಲಾಖೆಯ ಅಧಿಕಾರಿಗಳ ಕಳವಳಕ್ಕೆ ಕಾರಣವಾಗಿದೆ.

ಮಾತೃವಂದನಾ: ತಾಯಂದಿರಲ್ಲಿ ಅಪೌಷ್ಟಿಕತೆ ಹೋಗಲಾಡಿಸಲು ಕೇಂದ್ರ–ರಾಜ್ಯಗಳ ಸಹಭಾಗಿತ್ವದಲ್ಲಿ ನಡೆಯುತ್ತಿರುವ 'ಮಾತೃವಂದನಾ' ಪ್ರಮುಖ ಯೋಜನೆಯಾಗಿದೆ. ಗರ್ಭಿಣಿಯರು ಇದರ ಫಲಾನುಭವಿಗಳಾಗಿದ್ದಾರೆ. ಅಪೌಷ್ಟಿಕತೆ, ರಕ್ತ ಹೀನತೆ, ಶಿಶು ಮತ್ತು ಬಾಣಂತಿಯರ ಮರಣ ತಡೆಯುವುದು ಯೋಜನೆಯ ಆಶಯ.

ಪೌಷ್ಟಿಕ ಆಹಾರವನ್ನು ಮನೆಗೆ ಪೂರೈಸಿದಲ್ಲಿ ಕುಟುಂಬದ ಸದಸ್ಯರೆಲ್ಲ ಹಂಚಿಕೊಳ್ಳುವ ಸಾಧ್ಯತೆಯಿದೆ ಎಂಬ ಕಾರಣಕ್ಕೆ ಮೂರು ಕಂತುಗಳಲ್ಲಿ ಒಟ್ಟು ₹ 5 ಸಾವಿರವನ್ನು ಫಲಾನುಭವಿಯ ಬ್ಯಾಂಕ್ ಖಾತೆಗೆ ಸಕಾಲದಲ್ಲಿ ಜಮಾ ಮಾಡಲಾಗುತ್ತಿದೆ. ಆದರೆ, ಈ ಹಣ ಸದುಪಯೋಗವಾಗುತ್ತಿದೆಯೇ ಎಂಬ ಬಗ್ಗೆ ಮೌಲ್ಯಮಾಪನ ನಡೆಯುತ್ತಿಲ್ಲ ಎಂದು ಇಲಾಖೆಯ ಮೂಲಗಳು ತಿಳಿಸುತ್ತವೆ.

ಸಮರ್ಪಕವಾಗಿ ನಡೆಯದ ತಪಾಸಣೆ

ಕೋವಿಡ್ ಪೂರ್ವದಲ್ಲಿ ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳ ತೂಕ, ಎತ್ತರವನ್ನು ಪ್ರತಿ ತಿಂಗಳು ಪರಿಶೀಲಿಸುವ ಜತೆಗೆ ಸಮಸ್ಯೆ ಎದುರಿಸುತ್ತಿರುವ ಮಕ್ಕಳಿಗೆ ಅಗತ್ಯ ಚಿಕಿತ್ಸೆ ಒದಗಿಸಲಾಗುತ್ತಿತ್ತು. ಆದರೆ, ಕೋವಿಡ್ ಕಾಣಿಸಿಕೊಂಡ ಬಳಿಕ ತೂಕ ಮತ್ತು ಎತ್ತರದ ಅಳತೆ ಹಾಗೂ ಆರೋಗ್ಯ ತಪಾಸಣೆ ನಿಯಮಿತವಾಗಿ ನಡೆದಿಲ್ಲ.

ಅಂಗನವಾಡಿಗಳು ಪ್ರಾರಂಭವಾದ ಬಳಿಕ ಹೆಚ್ಚಿನ ಮಕ್ಕಳಲ್ಲಿ ಸಮಸ್ಯೆಗಳು ಕಾಣಿಸಿಕೊಳ್ಳುವ ಸಾಧ್ಯತೆಯಿದೆ ಎಂದು ಇಲಾಖೆಯ ಅಧಿಕಾರಿಗಳೇ ಕಳವಳ ವ್ಯಕ್ತಪಡಿಸಿದ್ದಾರೆ.

ಆರೋಗ್ಯ ಇಲಾಖೆಯ ಮಾಹಿತಿ ಪ್ರಕಾರ, ಪ್ರತಿ ವರ್ಷ ಜನಿಸಿದ ಸಾವಿರ ಶಿಶುಗಳಲ್ಲಿ ಸರಾಸರಿ 25 ಕಂದಮ್ಮಗಳು ಅಪೌಷ್ಟಿಕತೆ ಸೇರಿದಂತೆ ವಿವಿಧ ಕಾರಣಗಳಿಂದ ಜೀವ ಕಳೆದುಕೊಳ್ಳುತ್ತಿವೆ.

ನವಜಾತ ಶಿಶುಗಳ ರಕ್ಷಣೆಗೋಸ್ಕರ ಇಲಾಖೆಯು ಕಾಂಗರೂ ಮದರ್‌ಕೇರ್, ನವಜಾತ ಶಿಶು ಸ್ಥಿರೀಕರಣ ಘಟಕ ಸೇರಿದಂತೆ ವಿವಿಧ ಮಕ್ಕಳ ಆರೋಗ್ಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡರೂ ನಿರೀಕ್ಷಿತ ಪ್ರಮಾಣದಲ್ಲಿ ಫಲಿತಾಂಶ ದೊರೆಯುತ್ತಿಲ್ಲ. ಇದರಿಂದಾಗಿಯೇ ಪ್ರತಿ ವರ್ಷ ಸರಾಸರಿ 10 ಸಾವಿರ ಶಿಶುಗಳು ಸಾವಿಗೀಡಾಗುತ್ತಿವೆ.

ಮಕ್ಕಳಿಗೆ ಸಮರ್ಪಕವಾಗಿ ಪೌಷ್ಟಿಕ ಆಹಾರ ಸಿಗಬೇಕು. ಈ ಬಗ್ಗೆ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಸೂಚಿಸಿದ್ದೇನೆ. ಅಪೌಷ್ಟಿಕತೆ ತೊಲಗಿಸುವುದು ಮೊದಲ ಆದ್ಯತೆ

ಹಾಲಪ್ಪ ಆಚಾರ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವ

ಅಪೌಷ್ಟಿಕತೆ ನಿವಾರಣೆಗೆ ಕಾರ್ಯಕ್ರಮಗಳಿವೆ. ಆದರೆ, ಸಮರ್ಪಕ ಅನುಷ್ಠಾನಕ್ಕೆ ಅಧಿಕಾರಿಗಳು ಇಚ್ಛಾಶಕ್ತಿ ತೋರುತ್ತಿಲ್ಲ. ಮಕ್ಕಳಿಗೆ ಪೌಷ್ಟಿಕ ಆಹಾರ ಸರಿಯಾಗಿ ತಲಪುತ್ತಿಲ್ಲ

ಜಯಮಾಲಾ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಾಜಿ ಸಚಿವೆ

ಮಕ್ಕಳಿಗೆ ಅಗತ್ಯ ಪ್ರಮಾಣದಲ್ಲಿ ಪೌಷ್ಟಿಕ ಆಹಾರ ನೀಡದಿದ್ದಲ್ಲಿ ಬೆಳವಣಿಗೆ ಕುಂಠಿತವಾಗಿ, ರಕ್ತ ಹೀನತೆ ಸೇರಿದಂತೆ ವಿವಿಧ ಅನಾರೋಗ್ಯ ಸಮಸ್ಯೆಗಳು ಕಾಡಲಿವೆ

ಡಾ. ಶ್ರೀನಿವಾಸ್ ಎಸ್., ಭಾರತೀಯ ವೈದ್ಯಕೀಯ ಸಂಘದ ಮಕ್ಕಳ ಆರೋಗ್ಯ ಸ್ಥಾಯಿ ಸಮಿತಿ ಅಧ್ಯಕ್ಷ

ಪದಬಂಧ 4689

– ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1.ದ್ವೇಷ ಇಲ್ಲಿ ಕಾಣುತ್ತಿದೆ (4)
3.ಸ್ವಭಾವವನ್ನು ಹೊಗಳುವುದು (4)
5.ರಸ ಒಸರುವ ಜಿಹ್ವೆ (3)
6.ವಿವಾದವಿಲ್ಲದೆ ನಡೆದ ಮದುವೆ (3)
8.ಇದು ಪಾಪಿಗಳ ಲೋಕ (3)
9.ತಿರುಗಿಸಿದರೂ ಇದು ಹೊಸತು (3)
10.ಆಳವಾದ ಗುಂಡಿಯಿದು (3)
12.ಕೆಲಸಕ್ಕಾಗಿ ಕೊಡುವ ಹಣ (3)
14.ಕರದಲ್ಲಿರುವ ದೇಹ (4)
15.ಸುಮಾರು ಮೂರು ಮೈಲುಗಳ ಒಂದು ಅಳತೆ (4)

ಮೇಲಿಂದ ಕೆಳಕ್ಕೆ

1.ತಿರುಗಿರುವಾಗ ಬಿಡುವು ಸಿಕ್ಕಿದೆ (3)
2.ಇಹವಲ್ಲ! ಇದು ಕೈವಲ್ಯ! (2)
3.ಅಳುವಿನ ವಿರುದ್ಧ ಪದವಿಲ್ಲಿ ಉಲ್ಟಾ ಆಗಿದೆ (2)
4.ಸೊಂಟದಿಂದ ಪ್ರಾರಂಭವಾದ ಕಂಪನ (3)
7.ಇದು ಅಶ್ವದ ಮೊಗ (5)
8.ಒಳ್ಳೇತನದ ಸೋಗಿನಲ್ಲಿ ಮೋಸ ಮಾಡುವವನು (5)
9.ನೃತ್ಯ ಮಾಡುವವನು (3)
11.ದುರಸ್ತಿಯನ್ನು ಹೀಗೆ ಹೇಳಿ (3)
12.ಮಧುರ ಫಲವನ್ನು ನೀಡುವ ವೃಕ್ಷ (2)
13.ವಿಷ್ಣುವಿನ ಹೆಸರು ಉಲ್ಟಾ ಕಾಣುತ್ತಿದೆಯಲ್ಲಾ? (2)

4688ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪರಾಜಯ 3.ವಕಾಲತ್ತು 5.ತಿಸರ 7.ಮಹಿ 8.ಯಕಾ 11.ಮಿತ 13.ಜಲ 14.ಬಳಪ 16.ಕರೆಯೋಲೆ 17.ರಸಾಯನ

ಮೇಲಿಂದ ಕೆಳಕ್ಕೆ: 1.ಪರಕಾಯ 2.ಯತಿ 3.ವರ 4.ತ್ತುಕ್ಕಹಿ 6.ಸಪ್ತಾಹ 7.ಮರುಭೂಮಿ 9.ಕಾಲುಬಲ 10.ಧಾರಾಳ 12.ತಪೋಧನ 13.ಜಳಕ 14.ಬಲೆ 15.ಪರ

ಸುಡೊಕು 5075

4		7		8			2	
6		5		9		4	1	
	2		6				3	5
5			2		1	8		
	1				9		4	2
	6			2		3		
		8	9				5	7
	5			3	4		9	1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5074 ಸುಡೊಕು

1	8	3	5	2	6	9	4	7
2	9	5	3	4	7	1	8	6
7	6	4	9	8	1	5	2	3
9	1	6	4	7	5	2	3	8
3	4	7	2	9	8	6	1	5
5	2	8	6	1	3	7	9	4
8	3	1	7	5	9	4	6	2
6	5	2	1	3	4	8	7	9
4	7	9	8	6	2	3	5	1

ಅಫ್ಗಾನಿಸ್ತಾನದಲ್ಲಿ ಮತ್ತೊಮ್ಮೆ ಅಂತರ್ಯುದ್ಧದ ಭೀತಿ: ಸರ್ಕಾರದ ನಿಯಂತ್ರಣದಲ್ಲಿ ಕೆಲವೇ ನಗರಗಳು

ಕಾಬೂಲ್ ಸುತ್ತುವರಿದಿರುವ ತಾಲಿಬಾನ್

ಕಾಬೂಲ್ (ರಾಯಿಟರ್ಸ್, ಎಪಿ): ಅಫ್ಗಾನಿಸ್ತಾನದ ಬಹುತೇಕ ಪ್ರದೇಶಗಳನ್ನು ವಶಪಡಿಸಿಕೊಂಡಿರುವ ತಾಲಿಬಾನ್ ಈಗ ಮತ್ತೊಮ್ಮೆ ಆಡಳಿತ ನಡೆಸಲು ಸಜ್ಜಾಗಿದೆ. ಇದರಿಂದ, ದೇಶದಲ್ಲಿ ಅಂತರ್ಯುದ್ಧದ ಭೀತಿಯು ಸಹ ಆವರಿಸಿಕೊಂಡಿದೆ.

ತಾಲಿಬಾನ್ ಶನಿವಾರ ಮತ್ತೆ ಎರಡು ಪ್ರಮುಖ ಪ್ರಾಂತ್ಯಗಳನ್ನು ವಶಪಡಿಸಿಕೊಂಡಿದ್ದು, ರಾಜಧಾನಿ ಕಾಬೂಲ್ ಸುತ್ತುವರಿದಿದೆ.

ರಾಜಧಾನಿ ಕಾಬೂಲ್‌ನ ದಕ್ಷಿಣ ಭಾಗದಲ್ಲಿರುವ ಲೋಗಾರ್ ಪ್ರಾಂತ್ಯವನ್ನು ಸಂಪೂರ್ಣವಾಗಿ ನಿಯಂತ್ರಣಕ್ಕೆ ತೆಗೆದುಕೊಂಡಿರುವ ತಾಲಿಬಾನ್ ಅಲ್ಲಿನ ಅಧಿಕಾರಿಗಳನ್ನು ವಶಕ್ಕೆ ತೆಗೆದುಕೊಂಡಿದೆ.

ಲೋಗಾರ್ ಪ್ರಾಂತ್ಯದ ರಾಜಧಾನಿ ಪಲ್-ಇ-ಅಲಂ ನಗರವನ್ನು ನಿರಾಯಾಸವಾಗಿ ನಿಯಂತ್ರಣಕ್ಕೆ ತೆಗೆದುಕೊಂಡಿದೆ. ಸೇನೆಯಿಂದ ಪ್ರತಿರೋಧವೇ ವ್ಯಕ್ತವಾಗಲಿಲ್ಲ ಎಂದು ಸ್ಥಳೀಯರು ತಿಳಿಸಿದ್ದಾರೆ. ಕಾಬೂಲ್ ಮೇಲೆ ದಾಳಿ ನಡೆಸಲು ಈ ನಗರವು ಅತ್ಯಂತ ಮಹತ್ವದ್ದಾಗಿತ್ತು.

ಅಮೆರಿಕ ರಾಯಭಾರ ಕಚೇರಿ ಸಿಬ್ಬಂದಿ ಸೇರಿದಂತೆ ಎಲ್ಲರಿಗೂ ಅಫ್ಗಾನಿಸ್ತಾನದಿಂದ ತೆರಳಲು ಕಾಬೂಲ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಮಾತ್ರ ಒಂದೇ ಮಾರ್ಗವಾಗಿ ಉಳಿದಿದೆ. ಹೀಗಾಗಿ, ಈ ವಿಮಾನ ನಿಲ್ದಾಣದಲ್ಲಿ ತೀವ್ರ ದಟ್ಟಣೆಯಾಗಿದೆ. ಶರಣಾ ಪ್ರಾಂತ್ಯ ಹಾಗೂ ಪಾಕಿಸ್ತಾನ ಗಡಿಯಲ್ಲಿರುವ ಪಕ್ತಿಕಾ ಪ್ರಾಂತ್ಯವನ್ನು ಉಗ್ರರು ಶನಿವಾರ ವಶಪಡಿಸಿಕೊಂಡಿದ್ದಾರೆ.

ಕಾಬೂಲ್‌ನ ಉದ್ಯಾನವೊಂದರಲ್ಲಿನ ಟೆಂಟ್‌ನಲ್ಲಿ ಆಶ್ರಯ ಪಡೆದಿರುವ ಮಹಿಳೆಯರು ಎಪಿ/ಪಿಟಿಐ ಚಿತ್ರ

ಮಝರ್-ಇ-ಷರೀಫ್ ನಗರವನ್ನು ವಶಪಡಿಸಿಕೊಳ್ಳಲು ತಾಲಿಬಾನ್ ಮತ್ತು ಅಫ್ಗನ್ ಸೇನೆ ನಡುವೆ ತೀವ್ರ ಸಂಘರ್ಷ ನಡೆದಿದೆ. 'ನಗರದಲ್ಲಿ ಪರಿಸ್ಥಿತಿ ಭಯಾನಕವಾಗಿದೆ. ಜೀವಕ್ಕೆ ಅಪಾಯವಿದೆ. ನನಗೆ ಶಾಂತಿ, ಸ್ಥಿರತೆ, ನೆಮ್ಮದಿ ಮುಖ್ಯ. ಈ ಸಂಘರ್ಷವನ್ನು ಸ್ಥಗಿತಗೊಳಿಸಬೇಕು' ಎಂದು ಮಝರ್-ಇ-ಷರೀಫ್ ನಗರದ ನಿವಾಸಿ ಕಾವಾ ಬಸ್ರತ್ ಆತಂಕ ವ್ಯಕ್ತಪಡಿಸಿದರು.

ಜಲಾಲಾಬಾದ್, ಗಾರ್ಡೆಝ್ ಮತ್ತು ಖೋಸ್ತ್- ಪಸ್ತು ನಗರಗಳು ಮಾತ್ರ ಸದ್ಯ ಸರ್ಕಾರದ ನಿಯಂತ್ರಣದಲ್ಲಿವೆ. ಈ ನಗರಗಳನ್ನು ವಶಪಡಿಸಿಕೊಳ್ಳಲು ಹೆಚ್ಚಿನ ಪ್ರತಿರೋಧ ವ್ಯಕ್ತವಾಗುವುದಿಲ್ಲ ಎಂದು ತಾಲಿಬಾನ್ ನಿರೀಕ್ಷಿಸಿದೆ.

ಅಫ್ಗಾನಿಸ್ತಾನದಲ್ಲಿ ಪರಿಸ್ಥಿತಿ ನಿಯಂತ್ರಣ ತಪ್ಪಿದೆ. ತಾಲಿಬಾನ್ ತಕ್ಷಣವೇ ದಾಳಿ ಸ್ಥಗಿತಗೊಳಿಸಬೇಕು. ಬಲ ಪ್ರಯೋಗದ ಅಧಿಕಾರ ಸುದೀರ್ಘ ಅವಧಿಯ ಅಂತರ್ಯುದ್ಧಕ್ಕೆ ಕಾರಣವಾಗುತ್ತದೆ

ಆ್ಯಂಟೊನಿಯೊ ಗುಟೆರಸ್ ವಿಶ್ವಸಂಸ್ಥೆ ಮಹಾ ಪ್ರಧಾನ ಕಾರ್ಯದರ್ಶಿ

ಭಯದಿಂದ ಕಣ್ಣೀರು ಹಾಕುತ್ತಿದ್ದೇನೆ. ಮದುವೆ ಪ್ರಸ್ತಾವನೆಯನ್ನು ನಾನು ಹಿಂದೆ ತಿರಸ್ಕರಿಸಿದ್ದೆ. ಈಗ ತಾಲಿಬಾನ್ ಉಗ್ರರು ಮದುವೆಯಾಗುವಂತೆ ಒತ್ತಾಯಿಸಿದರೆ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ

ಮುಝದಾ ಕಾಬೂಲ್ ಸಮೀಪದ ಪರ್ವಾನ್ ನಿವಾಸಿ

ಕಂದಾಹಾರ್‌ನ ಆಕಾಶವಾಣಿ ಕೇಂದ್ರ ವಶಕ್ಕೆ: ತಾಲಿಬಾನ್ ಶನಿವಾರ ಕಂದಾಹಾರ್‌ನ ಆಕಾಶವಾಣಿ ಕೇಂದ್ರವನ್ನು ತನ್ನ ವಶಕ್ಕೆ ಪಡೆದಿದೆ.

ಇದಕ್ಕೆ ಸಂಬಂಧಿಸಿ ತಾಲಿಬಾನ್ ವಿಡಿಯೊವೊಂದನ್ನು ಬಿಡುಗಡೆ ಮಾಡಿದೆ. 'ಈ ಆಕಾಶವಾಣಿ ಕೇಂದ್ರಕ್ಕೆ 'ವಾಯ್ಸ್ ಆಫ್ ಷರಿಯಾ' ಎಂದು ಮರುನಾಮಕರಣ ಮಾಡಲಾಗಿದೆ. ಸಂಸ್ಥೆಯ ಎಲ್ಲಾ ಸಿಬ್ಬಂದಿ ಆಕಾಶವಾಣಿ ಕೇಂದ್ರದಲ್ಲಿಯೇ ಇದ್ದಾರೆ. ಇಲ್ಲಿ ಸುದ್ದಿ, ರಾಜಕೀಯ ವಿಶ್ಲೇಷಣೆ ಮತ್ತು ಕುರಾನ್ ಪಠಣ ಪ್ರಸಾರ ಮಾಡಲಾಗುವುದು' ಎಂದು ತಿಳಿಸಲಾಗಿದೆ. ಈ ಕೇಂದ್ರದಿಂದ ಸಂಗೀತ ಪ್ರಸಾರವಾಗುವ ಸಾಧ್ಯತೆಗಳು ಕಡಿಮೆ ಎಂದು ಮೂಲಗಳು ಹೇಳಿವೆ.

- ರಾಯಭಾರ ಕಚೇರಿಯ ಅಧಿಕಾರಿಗಳು, ಸಿಬ್ಬಂದಿ ಸ್ಥಳಾಂತರಕ್ಕೆ ನೆರವಾಗಲು ಅಫ್ಗಾನಿಸ್ತಾನಕ್ಕೆ ಬಂದ ಅಮೆರಿಕದ ಮೂರು ಸಾವಿರ ಯೋಧರ ಪಡೆ
- ರಾಯಭಾರ ಕಚೇರಿಯಿಂದ ಸಿಬ್ಬಂದಿಯನ್ನು ವಾಪಸ್ ಕರೆಯಿಸಿಕೊಳ್ಳುತ್ತಿರುವ ಬ್ರಿಟನ್, ಜರ್ಮನಿ, ಡೆನ್ಮಾರ್ಕ್, ಸ್ಪೇನ್
- ಕಂದಾಹಾರ್‌ನ ಬಹುತೇಕ ನಿವಾಸಿಗಳು ತಾಲಿಬಾನ್ ಸೂಚಿಸಿದ್ದ ಸಾಂಪ್ರದಾಯಿಕ ಬಟ್ಟೆ ಧರಿಸುತ್ತಿದ್ದಾರೆ.
- ಕಾಬೂಲ್‌ನಲ್ಲಿರುವ 257 ಅಫ್ಗನ್ ಹಿಂದೂ ಮತ್ತು ಸಿಖ್ ಕುಟುಂಬಗಳನ್ನು ಶೀಘ್ರ ವಾಪಸ್ ಕರೆಯಿಸಿಕೊಳ್ಳುವಂತೆ ವಿಶ್ವ ಪಂಜಾಬಿ ಸಂಘಟನೆ ಭಾರತದ ಗೃಹ ಸಚಿವ ಅಮಿತ್ ಶಾ ಅವರಿಗೆ ಒತ್ತಾಯಿಸಿದೆ.

ಸೇನಾ ಪಡೆ ಮರು ಒಗ್ಗೂಡಿಸುತ್ತೇನೆ: ಅಧ್ಯಕ್ಷ ಅಷ್ರಫ್ ಘನಿ

ತಾಲಿಬಾನ್ ದಾಳಿ ಆರಂಭಿಸಿದ ಬಳಿಕ ಇದೇ ಮೊದಲ ಬಾರಿ ಶನಿವಾರ ಸಾರ್ವಜನಿಕವಾಗಿ ಕಾಣಿಸಿಕೊಂಡು ಭಾಷಣ ಮಾಡಿದ ಅಫ್ಗಾನಿಸ್ತಾನದ ಅಧ್ಯಕ್ಷ ಅಷ್ರಫ್ ಘನಿ, 'ದೇಶದ ಸೇನಾ ಪಡೆಗಳನ್ನು ಮರು ಒಗ್ಗೂಡಿಸುತ್ತೇನೆ' ಎಂದು ಪ್ರತಿಜ್ಞೆ ಮಾಡಿದ್ದಾರೆ.

ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡುವ ಬಗ್ಗೆ ಅಥವಾ ಪ್ರಸ್ತುತ ಸ್ಥಿತಿಯ ಹೊಣೆ ಹೊತ್ತುಕೊಳ್ಳುವ ಬಗ್ಗೆ ಅವರು ಯಾವುದೇ ಸುಳಿವು ನೀಡಲಿಲ್ಲ.

'ಕಳೆದ 20 ವರ್ಷಗಳಲ್ಲಿ ಸಾಧನೆಯನ್ನು ಬಿಟ್ಟುಕೊಡುವುದಿಲ್ಲ. ಯುದ್ಧವನ್ನು ಅಂತ್ಯಗೊಳಿಸುವ ನಿಟ್ಟಿನಲ್ಲಿ ಹಿರಿಯರು, ರಾಜಕೀಯ ನಾಯಕರು ಮತ್ತು ಸಮುದಾಯದ ಪ್ರತಿನಿಧಿಗಳು ಹಾಗೂ ಮೈತ್ರಿ ರಾಷ್ಟ್ರಗಳ ಜತೆ ಸಮಾಲೋಚನೆ ನಡೆಸಲಾಗುತ್ತಿದೆ' ಎಂದು ಟಿ.ವಿ. ಭಾಷಣದಲ್ಲಿ ತಿಳಿಸಿದರು.

'ಶೀಘ್ರ ರಾಜಕೀಯ ಪರಿಹಾರ ಕಂಡುಕೊಳ್ಳುವ ಮೂಲಕ ಶಾಂತಿ ಮತ್ತು ಸ್ಥಿರತೆ ಕಾಪಾಡಲು ಪ್ರಯತ್ನಿಸಲಾಗುವುದು' ಎಂದು ಹೇಳಿದರು.

ನೀಡಿದ ಭರವಸೆ ಈಡೇರಿಸಿದ ಡಿಎಂಕೆ ಸರ್ಕಾರ

ದೇವಸ್ಥಾನವೊಂದರ ಮದುವೆ ಮಂಟಪದಲ್ಲಿ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು 75 ಅರ್ಚಕರಿಗೆ ನೇಮಕಾತಿ ಆದೇಶಗಳನ್ನು ನೀಡಿದರು.

ತಮಿಳುನಾಡು: ವಿವಿಧ ಜಾತಿಯ 24 ಅರ್ಚಕರ ನೇಮಕ

ಚೆನ್ನೈ: ತಮಿಳುನಾಡಿನ ಡಿಎಂಕೆ ಸರ್ಕಾರವು ಚುನಾವಣೆ ಸಮಯದಲ್ಲಿ ನೀಡಿದ್ದ ಭರವಸೆಯಂತೆ ರಾಜ್ಯದ ದೇವಸ್ಥಾನಗಳಿಗೆ ವಿವಿಧ ಜಾತಿಗಳ ತರಬೇತಿ ಪಡೆದ 24 ಅರ್ಚಕರನ್ನು ಶನಿವಾರ ನೇಮಕ ಮಾಡಿದೆ.

ದೇವಸ್ಥಾನವೊಂದರ ಕಲ್ಯಾಣ ಮಂಟಪದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅರ್ಚಕರಿಗೆ ಹಿಂದೂ ಧಾರ್ಮಿಕ ಮತ್ತು ದತ್ತಿ ಇಲಾಖೆಯ ವತಿಯಿಂದ ನೇಮಕಾತಿ ಆದೇಶಗಳನ್ನು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ನೀಡಿದರು. ವಿವಿಧ ವರ್ಗಗಳ ಅಡಿ 208 ಹುದ್ದೆಗಳಿಗೆ ನೇಮಕಾತಿ ಮಾಡಲಾಗಿದೆ.



ಶನಿವಾರ ನೇಮಕವಾದ 24 ಮಂದಿ ಅರ್ಚಕರು ಹಿಂದೂ ದೇವಾಲಯಗಳಲ್ಲಿ ಅರ್ಚಕರಾಗಲು ಸರ್ಕಾರದ ವತಿಯಿಂದ ನೀಡಲಾದ ತರಬೇತಿ ಪೂರ್ಣಗೊಳಿಸಿದ್ದಾರೆ. 34 ಮಂದಿ ಇತರ ಪಾಠಶಾಲೆಗಳಲ್ಲಿ ಅರ್ಚಕ ತರಬೇತಿಯನ್ನು ಪಡೆದಿದ್ದಾರೆ. ಒಟ್ಟು 208 ನೇಮಕಾತಿಗಳಲ್ಲಿ ಭಟ್ಟಾಚಾರ್ಯರು, ಒಡುವರು, ಪೂಜಾರಿಗಳು, ತಾಂತ್ರಿಕ ಮತ್ತು ಕಚೇರಿ ಸಹಾಯಕರು ಸೂಕ್ತ ತರಬೇತಿಯ ನಂತರ ನೇಮಕಗೊಂಡಿದ್ದಾರೆ ಎಂದು ಸರ್ಕಾರ ಮಾಹಿತಿ ನೀಡಿದೆ.

ಪಾಕಿಸ್ತಾನದ ಸ್ವಾತಂತ್ರ್ಯ ದಿನಾಚರಣೆಯಂದು ಶನಿವಾರ ಪೂಂಚ್ ಮತ್ತು ಮೆಂಧರ್ ಪ್ರದೇಶದಲ್ಲಿ ಭಾರತೀಯ ಸೇನೆಯು ಪಾಕಿಸ್ತಾನ ಸೇನೆಯೊಂದಿಗೆ ಸಿಹಿ ಮತ್ತು ಅಭಿನಂದನೆಗಳನ್ನು ವಿನಿಮಯ ಮಾಡಿಕೊಂಡಿತು– ಪಿಟಿಐ ಚಿತ್ರ

ಭಾರತ –ಪಾಕ್ ಸೇನೆಯಿಂದ ಸಿಹಿ, ಶುಭಾಶಯ ವಿನಿಮಯ

ಶ್ರೀನಗರ (ಪಿಟಿಐ): ಪಾಕಿಸ್ತಾನದ ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ಶನಿವಾರ ಪಾಕಿಸ್ತಾನ ಮತ್ತು ಭಾರತೀಯ ಸೇನಾ ಸಿಬ್ಬಂದಿ ಜಮ್ಮು ಮತ್ತು ಕಾಶ್ಮೀರದ ಗಡಿ ನಿಯಂತ್ರಣ ರೇಖೆಯಲ್ಲಿ ಪರಸ್ಪರ ಸಿಹಿ ವಿನಿಮಯ ಮಾಡಿಕೊಂಡರು.

ಉತ್ತರ ಕಾಶ್ಮೀರದ ಕುಪ್ವಾರಾ ಜಿಲ್ಲೆಯ ತಂಗ್‌ಧರ್ ಸೆಕ್ಟರ್‌ನಲ್ಲಿರುವ ಚಿಲೇಹಾನಾ ತಿತ್ವಾಲ್ ಕ್ರಾಸಿಂಗ್ ಪಾಯಿಂಟ್‌ನಲ್ಲಿ ಭಾರತೀಯ ಸೇನಾ ಸಿಬ್ಬಂದಿ ಸಿಹಿತಿಂಡಿಗಳನ್ನು ಪಾಕಿಸ್ತಾನದ ಸೈನಿಕರಿಗೆ ನೀಡಿ, ಶುಭ ಕೋರಿದರು.

'ಭಾರತೀಯ ಸೇನೆಯು ಸಿಹಿಯನ್ನು ಉಡುಗೊರೆಯಾಗಿ ನೀಡಿತು. ಪಾಕಿಸ್ತಾನದ ಸ್ವಾತಂತ್ರ್ಯ ದಿನಾಚರಣೆಗೆ ಶುಭಾಶಯಗಳನ್ನು ಕೋರಿ, ಗಡಿ ನಿಯಂತ್ರಣ ರೇಖೆಯ ಉದ್ದಕ್ಕೂ ಶಾಂತಿ ಕಾಪಾಡುವ ಇಚ್ಛೆಯನ್ನು ಪ್ರದರ್ಶಿಸಿತು' ಎಂದು ಸೇನೆಯ ಅಧಿಕಾರಿಯೊಬ್ಬರು ತಿಳಿಸಿದರು.

ಈ ಪ್ರದೇಶದಲ್ಲಿ ಶಾಂತಿ ಕಾಪಾಡಲು ಈ ರೀತಿಯ ಸದ್ಭಾವನೆಯ ಮೂಲಕ ಭಾರತವು ಹಲವು ವರ್ಷಗಳಿಂದ ಪಾಕಿಸ್ತಾನದೊಂದಿಗೆ ದ್ವಿಪಕ್ಷೀಯ ಸಂಬಂಧಗಳನ್ನು ಬಲಪಡಿಸಲು ನಿರಂತರ ಪ್ರಯತ್ನಿಸುತ್ತಿದೆ ಎಂದು ಅವರು ಹೇಳಿದರು.

'ಗಡಿ ನಿಯಂತ್ರಣ ರೇಖೆಯ ಉದ್ದಕ್ಕೂ ಹಳ್ಳಿಗಳಲ್ಲಿ ಶಾಂತಿ ಕಾಪಾಡುವ ಭಾರತೀಯ ಸೇನೆಯ ಪ್ರಯತ್ನಗಳನ್ನು ಜನರು ಶ್ಲಾಘಿಸಿದ್ದಾರೆ. ಭಾರತೀಯ ಸೇನೆಯ ಈ ಸಕಾರಾತ್ಮಕ ಪ್ರಯತ್ನಗಳು ನಿಯಂತ್ರಣ ರೇಖೆಯ ಉದ್ದಕ್ಕೂ ಸುದೀರ್ಘ ಶಾಂತಿಗೆ ಕಾರಣವಾಗುತ್ತವೆ' ಎಂದು ಅಧಿಕಾರಿ ಹೇಳಿದರು.

ರಾಹುಲ್ ಗಾಂಧಿ ಖಾತೆ ಸಕ್ರಿಯಗೊಳಿಸಿದ ಟ್ವಿಟರ್

ನವದೆಹಲಿ (ಪಿಟಿಐ): ಅತ್ಯಾಚಾರ ಸಂತ್ರಸ್ತೆಯ ಕುಟುಂಬದವರ ಚಿತ್ರಗಳನ್ನು ಹಂಚಿಕೊಂಡಿದ್ದ ಕಾರಣಕ್ಕಾಗಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಟ್ವಿಟರ್ ಖಾತೆಯನ್ನು ನಿಷ್ಕ್ರಿಯಗೊಳಿಸಿದ್ದ ಟ್ವಿಟರ್, ಶನಿವಾರ ಅದನ್ನು ಸಕ್ರಿಯಗೊಳಿಸಿದೆ. ಇದಕ್ಕೆ ತಕ್ಷಣ ಪ್ರತಿಕ್ರಿಯೆ ನೀಡಿರುವ ಕಾಂಗ್ರೆಸ್ 'ಸತ್ಯಮೇವ ಜಯತೆ' ಎಂಬುದಾಗಿ ಟ್ವೀಟ್ ಮಾಡಿದೆ.

ಕಳೆದ ವಾರ ವಾಯವ್ಯ ದೆಹಲಿಯಲ್ಲಿ ಅತ್ಯಾಚಾರ ಮತ್ತು ಕೊಲೆಗೀಡಾದ ಒಂಬತ್ತು ವರ್ಷದ ಸಂತ್ರಸ್ತೆಯ ಕುಟುಂಬದ ಚಿತ್ರಗಳನ್ನು ಟ್ವೀಟ್ ಮಾಡಿದ ನಂತರ, ರಾಹುಲ್ ಗಾಂಧಿ ಮತ್ತು ಕಾಂಗ್ರೆಸ್‌ನ ಟ್ವಿಟರ್ ಖಾತೆಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿತ್ತು. ಇದು ನಿಯಮಗಳ ಉಲ್ಲಂಘನೆ ಎಂದು ಟ್ವಿಟರ್ ಪರಿಗಣಿಸಿತ್ತು.

ಅದೇ ಚಿತ್ರಗಳನ್ನು ಹಂಚಿಕೊಂಡಿದ್ದ ಪಕ್ಷದ ಕೆಲವು ನಾಯಕರ ಟ್ವಿಟರ್ ಖಾತೆಗಳನ್ನು ಸಹ ಮರುಸ್ಥಾಪಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಖಾತೆಗಳನ್ನು ಸಕ್ರಿಯಗೊಳಿಸಿದ ನಂತರ, ಕಾಂಗ್ರೆಸ್ ಪಕ್ಷದ ಮತ್ತು ಇತರೆ ಪಕ್ಷಗಳ ನಾಯಕರು 'ಟ್ವಿಟರ್‌ನ ದುಬೂಟಾಟಿಕೆ' ಎಂದು ಕಿಡಿಕಾರಿದ್ದಾರೆ.

'ಭಾರತದ ಜನರು ಟ್ವಿಟರ್‌ನಿಂದ ಉತ್ತರದಾಯಿತ್ವವನ್ನು ಬಯಸುತ್ತಾರೆ. ಅತ್ಯಾಚಾರ ಸಂತ್ರಸ್ತೆಯ ನ್ಯಾಯಕ್ಕಾಗಿ ಬೇಡಿಕೆ ಇಟ್ಟಿದ್ದ ಖಾತೆಗಳನ್ನು ಸ್ಥಗಿತಗೊಳಿಸಿ ಈಗ ಸಕ್ರಿಯಗೊಳಿಸಲಾಗಿದೆ. ಮೋದಿ ಸರ್ಕಾರದ ಭಯದಿಂದಾಗಿ, ನಮ್ಮ ರಾಜಕೀಯದಲ್ಲಿ ಹಸ್ತಕ್ಷೇಪ ನಿಲ್ಲಿಸಬೇಕು' ಎಂದು ಕಾಂಗ್ರೆಸ್ ಮುಖಂಡರೊಬ್ಬರು ಹೇಳಿದ್ದಾರೆ.

'ಮೋದಿ ಸರ್ಕಾರದ ಒತ್ತಡದಲ್ಲಿ ಭಾರತೀಯರ ಧ್ವನಿ ಅಡಗಿಸುವುದನ್ನು ನಿಲ್ಲಿಸಿ. ಬಿಜೆಪಿಗೆ ಹೆದರಬೇಡಿ. ನ್ಯಾಯ ಕೋರುವ ಎಲ್ಲ ಖಾತೆಗಳನ್ನು ಮರುಸ್ಥಾಪಿಸಿ' ಎಂದು ಅನೇಕ ಕಾಂಗ್ರೆಸ್ ನಾಯಕರು ಆಗ್ರಹಿಸಿದ್ದಾರೆ.

ಸ್ವಾತಂತ್ರ್ಯೋತ್ಸವಕ್ಕೆ ಹೆಲಿಕಾಪ್ಟರ್‌ನಲ್ಲಿ ಹೂಮಳೆ

ಸಮಾರಂಭಕ್ಕೆ ಒಲಿಂಪಿಕ್ಸ್ ಪದಕ ವಿಜೇತರು, 32 ಕ್ರೀಡಾಪಟುಗಳಿಗೆ ಆಹ್ವಾನ

ಪ್ರಜಾವಾಣಿ ವಾರ್ತೆ

ನವದೆಹಲಿ: ದೆಹಲಿಯ ಕೆಂಪುಕೋಟೆಯಲ್ಲಿ ಭಾನುವಾರ ನಡೆಯಲಿರುವ 75ನೇ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ರಾಷ್ಟ್ರಧ್ವಜಾರೋಹಣ ನೆರವೇರಿಸಲಿದ್ದು, ಈ ಸಂದರ್ಭದಲ್ಲಿ ಇದೇ ಮೊದಲ ಬಾರಿಗೆ ಭಾರತೀಯ ವಾಯುಪಡೆಯ (ಐಎಎಫ್) ಎರಡು ಐಎಎಫ್ ಮಿ–17 1ವಿ ಹೆಲಿಕಾಪ್ಟರ್‌ಗಳು ಪುಷ್ಪವೃಷ್ಟಿ ಮಾಡಲಿವೆ.

'ಈ ಬಾರಿಯ ಸ್ವಾತಂತ್ರ್ಯೋತ್ಸವ ದಿನಾಚರಣೆಯು ಅಮೃತ ಮಹೋತ್ಸವದ ಸಂಭ್ರಮದಲ್ಲಿದೆ. ಹಾಗಾಗಿ, ಪ್ರಧಾನಿ ಅವರು ರಾಷ್ಟ್ರಧ್ವಜಾರೋಹಣ ಮಾಡಿದ ತಕ್ಷಣ ಹೆಲಿಕಾಪ್ಟರ್‌ಗಳು ಪುಷ್ಪವೃಷ್ಟಿ ಮಾಡಲಿವೆ. ಮೊದಲ ಹೆಲಿಕಾಪ್ಟರ್ ಅನ್ನು ಕ್ಯಾಪ್ಟನ್ ವಿಂಗ್ ಕಮಾಂಡರ್ ಬಲದೇವ್ ಸಿಂಗ್ ಬಿಷ್ತ್ ಹಾಗೂ ಎರಡನೇ ಹೆಲಿಕಾಪ್ಟರ್ ಅನ್ನು ವಿಂಗ್ ಕಮಾಂಡರ್ ನಿಖಿಲ್ ಮೆಹ್ರೋತ್ರಾ ಅವರು ನಿರ್ವಹಿಸಲಿದ್ದಾರೆ. ಪುಷ್ಪವೃಷ್ಟಿಯ ನಂತರ ಪ್ರಧಾನಿ ಅವರು ಭಾಷಣ ಮಾಡುವರು' ಎಂದು ರಕ್ಷಣಾ ಸಚಿವಾಲಯವು ಶನಿವಾರ ತಿಳಿಸಿದೆ.

'75ನೇ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮಕ್ಕೆ ಒಲಿಂಪಿಕ್ಸ್ ಚಿನ್ನದ ಪದಕ ವಿಜೇತ ಜಾವೆಲಿನ್ ಎಸೆತಗಾರ ನೀರಜ್ ಚೋಪ್ರಾ ಅವರನ್ನೊಳಗೊಂಡಂತೆ ಒಲಿಂಪಿಕ್ಸ್ ಪದಕ ವಿಜೇತರು, 32 ಕ್ರೀಡಾಪಟುಗಳು ಮತ್ತು ಭಾರತೀಯ ಕ್ರೀಡಾ ಪ್ರಾಧಿಕಾರದ ಇಬ್ಬರು ಅಧಿಕಾರಿಗಳನ್ನು ಆಹ್ವಾನಿಸಲಾಗಿದೆ. ಆದರೆ, ನೀರಜ್ ಚೋಪ್ರಾ ಅವರು ಜ್ವರದಿಂದ ಬಳಲುತ್ತಿದ್ದು ಅವರು ಹಾಜರಾಗುವ ಕುರಿತು ಇನ್ನೂ ಖಚಿತವಾಗಿಲ್ಲ' ಎಂದೂ ಸಚಿವಾಲಯವು ಮಾಹಿತಿ ನೀಡಿದೆ.

'ಸುಮಾರು 240 ಒಲಿಂಪಿಯನ್‌ಗಳು, ಸಹಾಯಕ ಸಿಬ್ಬಂದಿ, ಎಸ್‌ಎಐ ಮತ್ತು ಕ್ರೀಡಾ ಫೆಡರೇಷನ್ ಅಧಿಕಾರಿಗಳನ್ನೂ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮಕ್ಕೆ ಆಹ್ವಾನಿಸಲಾಗಿದೆ. ಕೋವಿಡ್–19 ಸಾಂಕ್ರಾಮಿಕ ರೋಗದ ವಿರುದ್ಧ ಹೋರಾಡುವಲ್ಲಿ ಮುಂಚೂಣಿ ಯೋಧರಾಗಿ ಕಾರ್ಯನಿರ್ವಹಿಸಿದ ಆರೋಗ್ಯ ಕಾರ್ಯಕರ್ತರನ್ನು ಗೌರವಿಸಲಾಗುವುದು. ಅವರಿಗಾಗಿಯೇ ಕೆಂಪು ಕೋಟೆಯ ದಕ್ಷಿಣ ಭಾಗದಲ್ಲಿ ಪ್ರತ್ಯೇಕ ಬ್ಲಾಕ್ ಅನ್ನು ರಚಿಸಲಾಗಿದೆ' ಎಂದೂ ಸಚಿವಾಲಯ ತಿಳಿಸಿದೆ.

ಬಿಗಿಭದ್ರತೆ: ಸ್ವಾತಂತ್ರ್ಯ ದಿನಾಚರಣೆ ನಿಮಿತ್ತ ಕೆಂಪುಕೋಟೆಯ ಸುತ್ತಮುತ್ತಲು ಭಾರಿ ಬಿಗಿಭದ್ರತೆ ಮಾಡಲಾಗಿದೆ. ಯಾವುದೇ ಅಹಿತಕರ ಘಟನೆ ನಡೆಯದಂತೆ ವಿವಿಧ ಭದ್ರತಾ ಪಡೆ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ.

ಗೋವಾ ದ್ವೀಪದಲ್ಲಿ ಧ್ವಜಾರೋಹಣ ರದ್ದುಪಡಿಸಿದ ನೌಕಾಪಡೆ

ಪಣಜಿ (ಪಿಟಿಐ): ಸ್ಥಳೀಯರ ವಿರೋಧದ ಹಿನ್ನೆಲೆಯಲ್ಲಿ ದಕ್ಷಿಣ ಗೋವಾದ ಸಾವೊ ಜಸಿಂಟೊ ದ್ವೀಪದಲ್ಲಿ ಸ್ವಾತಂತ್ರ್ಯ ದಿನದಂದು ನಿಗದಿಪಡಿಸಿದ್ದ ರಾಷ್ಟ್ರಧ್ವಜಾರೋಹಣ ಕಾರ್ಯಕ್ರಮವನ್ನು ರದ್ದುಪಡಿಸಿರುವುದಾಗಿ ನೌಕಾಪಡೆ ತಿಳಿಸಿದೆ.

ಈ ಬೆಳವಣಿಗೆಗಳ ನಡುವೆ, 'ನಿಗದಿತ ಕಾರ್ಯಕ್ರಮದಂತೆ ತ್ರಿವರ್ಣ ಧ್ವಜಾರೋಹಣ ನೆರವೇರಿಸುವಂತೆ ನೌಕಾಪಡೆ ಅಧಿಕಾರಿಗಳಿಗೆ ನಾನು ಮನವಿ ಮಾಡಿದ್ದೇನೆ. ಈ ಕಾರ್ಯಕ್ರಮಕ್ಕೆ ಗೋವಾ ಪೊಲೀಸರು ಸಂಪೂರ್ಣ ಸಹಕಾರ ನೀಡುವರು. ಇಂಥ ದೇಶ ವಿರೋಧಿ ಚಟುವಟಿಕೆಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂದು ಮುಖ್ಯಮಂತ್ರಿ ಪ್ರಮೋದ್ ಸಾವಂತ್ ತಿಳಿಸಿದ್ದಾರೆ.

75ನೇ ಸ್ವಾತಂತ್ರ್ಯೋತ್ಸವದ ನೆನಪಿಗಾಗಿ ನಡೆಸುತ್ತಿರುವ 'ಆಜಾದಿ ಕಾ ಅಮೃತ್ ಮಹೋತ್ಸವ'ವದ ಭಾಗವಾಗಿ ಆಗಸ್ಟ್ 13 ಮತ್ತು 15ರ ನಡುವೆ ದ್ವೀಪಗಳಲ್ಲಿ ರಾಷ್ಟ್ರಧ್ವಜಾರೋಹಣ ನೆರವೇರಿಸಲು ರಕ್ಷಣಾ ಸಚಿವಾಲಯ ಯೋಜಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದಕ್ಷಿಣ ಗೋವಾ ಜಿಲ್ಲೆಯ ವಾಸ್ಕೊ ಸಮೀಪದಲ್ಲಿ ಜಸಿಂಟೊ ದ್ವೀಪವಿದೆ.

ಮತ್ತೆ 4 ಜೌಗು ಪ್ರದೇಶಗಳು 'ರಾಮ್‌ಸರ್' ತಾಣಗಳು

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದಲ್ಲಿನ ನಾಲ್ಕು ಜೌಗು ಪ್ರದೇಶಗಳನ್ನು ರಾಮ್‌ಸರ್ ತಾಣಗಳೆಂದು ಅಂತರರಾಷ್ಟ್ರೀಯ ಮಾನ್ಯತೆ ದೊರೆತಿದೆ.

ಇದರಿಂದ ದೇಶದಲ್ಲಿ ರಕ್ಷಿಸಲಾದ ಇಂತಹ ತಾಣಗಳ ಸಂಖ್ಯೆ 46ಕ್ಕೇರಿದೆ. 20 ರಾಜ್ಯಗಳಲ್ಲಿನ 11 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಇಂತಹ ತಾಣಗಳು ವ್ಯಾಪಿಸಿಕೊಂಡಿವೆ.

ಗುಜರಾತ್‌ನ ಥೋಲ್ ಮತ್ತು ವಧ್ವಾನಾ ಹಾಗೂ ಹರಿಯಾಣದ ಸುಲ್ತಾನಪುರ ಮತ್ತು ಭಿಂದವಾಸ್ ಜಲಮೂಲಗಳು ಹೊಸದಾಗಿ ಸೇರ್ಪಡೆಯಾದ ತಾಣಗಳು.

ಹರಿಯಾಣಕ್ಕೆ ಇದೇ ಮೊದಲ ಬಾರಿ ರಾಮಸರ್ ತಾಣದ ಮಾನ್ಯತೆ ದೊರೆತಿದೆ. ಗುಜರಾತ್‌ನಲ್ಲಿನ ನಲಸರೋವರಕ್ಕೆ 2012ರಲ್ಲಿ ಈ ಮಾನ್ಯತೆ ದೊರೆತಿತ್ತು. ಹೀಗಾಗಿ ಆ ರಾಜ್ಯದಲ್ಲಿ ಒಟ್ಟು ಮೂರು ತಾಣಗಳಿಗೆ ಮಾನ್ಯತೆ ದೊರೆತಂತಾಗಿದೆ ಎಂದು ಪರಿಸರ ಸಚಿವಾಲಯ ತಿಳಿಸಿದೆ.

ಹರಿಯಾಣದಲ್ಲಿ ಭಿಂದವಾಸ್ ವನ್ಯಜೀವಿ ಅಭಯಾರಣ್ಯವು ಹರಿಯಾಣದಲ್ಲಿನ ಅತಿ ದೊಡ್ಡ ಜೌಗು ಪ್ರದೇಶವಾಗಿದೆ. 250ಕ್ಕೂ ಹೆಚ್ಚು ವಿಭಿನ್ನ ಜಾತಿಯ ಪಕ್ಷಿಗಳು ಇಡೀ ವರ್ಷ ಈ ತಾಣವನ್ನು ಉಪಯೋಗಿಸಿಕೊಳ್ಳುತ್ತವೆ. ವಿನಾಶದ ಅಂಚಿನಲ್ಲಿರುವ ಹಲವು ತಳಿಗಳಿಗೂ ಈ ಸ್ಥಳ ಆಶ್ರಯ ನೀಡಿದೆ.

ಸುಲ್ತಾನಪುರ ರಾಷ್ಟ್ರೀಯ ಉದ್ಯಾನ ಸಹ 220ಕ್ಕೂ ಹೆಚ್ಚು ವಿಭಿನ್ನ ಜಾತಿಯ ಪಕ್ಷಗಳಿಗೆ ಆಶ್ರಯ ನೀಡಿದೆ.

ಥೋಲ್ ಸರೋವರ ವನ್ಯಜೀವಿ ಅಭಯಾರಣ್ಯದಲ್ಲಿ 320ಕ್ಕೂ ಹೆಚ್ಚು ವಿಭಿನ್ನ ಜಾತಿಯ ಪಕ್ಷಿಗಳು ಆಶ್ರಯ ಪಡೆದಿವೆ. ವಧ್ವಾನ ಪ್ರದೇಶವು ಅಂತರರಾಷ್ಟ್ರೀಯವಾಗಿ ಪ್ರಮುಖ ಸ್ಥಳವಾಗಿದೆ. ಸುಮಾರು 80 ಜಾತಿಗಳ ವಲಸೆ ಹಕ್ಕಿಗಳಿಗೂ ಇದು ಪ್ರಮುಖ ತಾಣವಾಗಿದೆ.

'ದೇಶದ ನಾಲ್ಕು ಸ್ಥಳಗಳಿಗೆ ರಾಮ್‌ಸರ್ ಮಾನ್ಯತೆ ದೊರೆತಿರುವುದು ಹೆಮ್ಮೆಯ ವಿಷಯ' ಎಂದು ಪ್ರಧಾನಿ ನರೇಂದ್ರ ಮೋದಿ ಟ್ವೀಟ್ ಮಾಡಿದ್ದಾರೆ.

ತರೀಭೂಮಿಗಳನ್ನುಳಿಸಲು ಪ್ರಥಮ ಬಾರಿಗೆ ಒಪ್ಪಂದವೇರ್ಪಟ್ಟಿದ್ದರಿಂದ ತರೀಭೂಮಿಗಳನ್ನು ರಾಮ್‌ಸರ್ ತಾಣ ಎನ್ನುತ್ತೇವೆ.

ನಮ್ಮಲ್ಲಿರುವ ಅರವತ್ತೈದು ಸಾವಿರ ಕೃತಕ ಮತ್ತು 2 ಸಾವಿರದ ಇನ್ನೂರು ನೈಸರ್ಗಿಕ ಜೌಗು ಪ್ರದೇಶಗಳ ಪೈಕಿ 42 ನ್ನು ರಾಮ್‌ಸರ್ ತಾಣಗಳೆಂದು ಗುರುತಿಸಿ, 'ಕೇಂದ್ರೀಯ ಜೌಗು ಭೂಮಿ ನಿಯಂತ್ರಣ ಪ್ರಾಧಿಕಾರ' ರಚಿಸಿ ಅವುಗಳ ನಾಶ, ಒತ್ತುವರಿ ಮತ್ತು ದುರ್ಬಳಕೆ ತಡೆಯಲು ಹಲವು ಕಾನೂನುಗಳನ್ನು ರೂಪಿಸಲಾಗಿದೆ.

ಭಾರತ-ಬಾಂಗ್ಲಾದೇಶ ಗಡಿಯಲ್ಲಿ ಹೈ ಅಲರ್ಟ್

ಧುಬ್ರಿ, ಅಸ್ಸಾಂ(ಪಿಟಿಐ): ದೇಶದ 75ನೇ ಸ್ವಾತಂತ್ರ್ಯ ದಿನಾಚರಣೆ ಹಿನ್ನೆಲೆಯಲ್ಲಿ ಭಾರತ-ಬಾಂಗ್ಲಾದೇಶದ ಗಡಿಯಲ್ಲಿ ಬಿಎಸ್‌ಎಫ್ ಪಡೆಯು ಕಟ್ಟೆಚ್ಚರವಹಿಸಿದೆ.

'ಸ್ವಾತಂತ್ರ್ಯ ದಿನಾಚರಣೆಯಂದು ನೆರೆ ರಾಷ್ಟ್ರದ ಇಸ್ಲಾಮಿಕ್ ಭಯೋತ್ಪಾದಕರು ಮತ್ತು ಅಂತರರಾಷ್ಟ್ರೀಯ ಗಡಿಗೆ ಹೊಂದಿಕೊಂಡಿರುವ ರಾಜ್ಯಗಳಲ್ಲಿನ ದಂಗೆಕೋರರು ದಾಳಿಗಳನ್ನು ನಡೆಸುವ ಸಾಧ್ಯತೆಗಳಿವೆ ಎಂಬ ಮಾಹಿತಿ ಇದೆ. ಈ ಹಿನ್ನೆಲೆಯಲ್ಲಿ ಭಾರತ-ಬಾಂಗ್ಲಾದೇಶದ ಗಡಿಯಲ್ಲಿ 'ಹೈ ಅಲರ್ಟ್' ಘೋಷಿಸಲಾಗಿದೆ' ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

'ಅಸ್ಸಾಂನ ಭಾರತ-ಬಾಂಗ್ಲಾದೇಶ ಗಡಿ ಮತ್ತು ಪಶ್ಚಿಮ ಬಂಗಾಳದ ಕೂಚ್‌ಬಿಹಾರ್ ಜಿಲ್ಲೆಯಲ್ಲಿ ಕಟ್ಟುನಿಟ್ಟಿನ ನಿಗಾವಹಿಸಲಾಗಿದೆ. ಅಂತರರಾಷ್ಟ್ರೀಯ ಗಡಿಯಲ್ಲಿ ಶಾಂತಿ ಕದಡಲು ಪ್ರಯತ್ನಿಸಿದವರ ವಿರುದ್ಧ ಕಠಿಣ ಕ್ರಮಕೈಗೊಳ್ಳುವಂತೆ ಆದೇಶ ಹೊರಡಿಸಲಾಗಿದೆ' ಎಂದು ಬಿಎಸ್‌ಎಫ್‌ನ ಪ್ರಾದೇಶಿಕ ಕೇಂದ್ರದ ಡಿಐಜಿ ಶೈಲೇಂದ್ರ ಕುಮಾರ್ ಸಿನ್ಹಾ ಅವರು ಶನಿವಾರ ಹೇಳಿದರು.

'ಅಂತರರಾಷ್ಟ್ರೀಯ ಗಡಿಯಲ್ಲಿ ಬಿಎಸ್‌ಎಫ್ 'ಆಪರೇಷನ್ ಅಲರ್ಟ್' ಆರಂಭಿಸಿದೆ. ಈ ಕಾರ್ಯಾಚರಣೆಯಲ್ಲಿ ಅರೆಸೇನಾ ಪಡೆಯ ಎಲ್ಲಾ ವಿಭಾಗಗಳ ಅಧಿಕಾರಿಗಳು, ಸೈನಿಕರು ಭಾಗವಹಿಸಿದ್ದಾರೆ. ಇದು ಆಗಸ್ಟ್ 16ರವರೆಗೆ ನಡೆಯಲಿದೆ' ಎಂದು ಅವರು ಮಾಹಿತಿ ನೀಡಿದರು.

ಭಾರತ–ಬಾಂಗ್ಲಾದೇಶದ ಗಡಿಯಲ್ಲಿ ಕಟ್ಟೆಚ್ಚರ

ಶಸ್ತ್ರಾಸ್ತ್ರ ಕಳ್ಳಸಾಗಣೆ: ಏಳು ಸ್ಥಳಗಳಲ್ಲಿ ಎನ್‌ಐಎ ಶೋಧ

ಚೆನ್ನೈ(ಪಿಟಿಐ) ಇರಾನ್ ಮತ್ತು ಪಾಕಿಸ್ತಾನದಿಂದ ಶ್ರೀಲಂಕಾಕ್ಕೆ ಶಸ್ತ್ರಾಸ್ತ್ರ, ಮದ್ದುಗುಂಡು ಮತ್ತು ಮಾದಕ ವಸ್ತುಗಳ ಕಳ್ಳ ಸಾಗಾಣಿಕೆಯಲ್ಲಿ ತೊಡಗಿರುವವರ ನಿವಾಸಗಳನ್ನು ಗುರಿಯಾಗಿಸಿಕೊಂಡು ತಮಿಳುನಾಡು ಮತ್ತು ಕೇರಳದ ಏಳು ಸ್ಥಳಗಳಲ್ಲಿ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಶನಿವಾರ ಶೋಧ ನಡೆಸಿದೆ.

ತಮಿಳುನಾಡಿನ ಚೆನ್ನೈ ಮತ್ತು ತಿರುವಳ್ಳೂರು ಜಿಲ್ಲೆಗಳು ಮತ್ತು ಕೇರಳದ ಎರ್ನಾಕುಲಂ ಜಿಲ್ಲೆಯಲ್ಲಿ ಶೋಧ ನಡೆಸಲಾಗಿದೆ ಎಂದು ತನಿಖಾ ಸಂಸ್ಥೆಯ ಅಧಿಕಾರಿಯೊಬ್ಬರು ತಿಳಿಸಿದರು.

ಶೋಧದ ವೇಳೆ ನಿಷೇಧಿತ ಭಯೋತ್ಪಾದಕ ಸಂಘಟನೆ ಎಲ್‌ಟಿಟಿಇ(ಲಿಬರೇಶನ್ ಟೈಗರ್ಸ್ ಆಫ್ ತಮಿಳ್ ಈಲಮ್) ಗೆ ಸಂಬಂಧಿಸಿದ ಪುಸ್ತಕಗಳು, ಮೊಬೈಲ್ ಫೋನ್‌ಗಳು, ಸಿಮ್ ಕಾರ್ಡ್‌ಗಳು ಮತ್ತು ಟ್ಯಾಬ್ಲೆಟ್‌ಗಳು ಸೇರಿ ಏಳು ಡಿಜಿಟಲ್ ಸಾಧನಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಎನ್‌ಐಎ ಅಧಿಕಾರಿ ಹೇಳಿದರು.

ಶಾಲೆ ಪುನರಾರಂಭ: ವಿದ್ಯಾರ್ಥಿ 'ಸುಪ್ರೀಂ' ಮೊರೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಶಾಲೆಗಳನ್ನು ಪುನರಾರಂಭಿಸುವ ಕುರಿತು ಕಾಲಮಿತಿಯಲ್ಲಿ ನಿರ್ಧಾರ ತೆಗೆದುಕೊಳ್ಳುವಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ನಿರ್ದೇಶನ ನೀಡಬೇಕೆಂದು ಕೋರಿ ದೆಹಲಿಯ ಮೂಲದ 12ನೇ ತರಗತಿಯ ವಿದ್ಯಾರ್ಥಿಯೊಬ್ಬ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದಾರೆ.

ದೆಹಲಿ ನಿವಾಸಿಯಾದ ಅಮರ್ ಪ್ರೇಮ್ ಪ್ರಕಾಶ್, ವಿದ್ಯಾರ್ಥಿ ಸಮುದಾಯದ ಭಾವನೆಗಳನ್ನು ಮತ್ತು ದೇಶದ ಭ್ರಾತೃತ್ವವನ್ನು ಪ್ರತಿಧ್ವನಿಸುತ್ತಿದ್ದು, ವಿಶೇಷವಾಗಿ ಹಿಂದುಳಿದ ಮತ್ತು ಧ್ವನಿ ಇಲ್ಲದ ಮಕ್ಕಳನ್ನು ಪ್ರತಿನಿಧಿಸುತ್ತಿರುವುದಾಗಿ ಹೇಳಿಕೊಂಡಿದ್ದಾರೆ.

ವಕೀಲ ಪ್ರೇಮ್ ಪ್ರಕಾಶ್ ಮೆಹ್ರೋತ್ರಾ ಅವರ ಮೂಲಕ ಸಲ್ಲಿಸಲಾದ ಅರ್ಜಿಯಲ್ಲಿ, ಶಾಲಾ ಮಕ್ಕಳನ್ನು ಭೌತಿಕವಾಗಿ ಶಾಲೆಗೆ ಹಾಜರಾಗದಂತೆ ದೂರವಿಡುವುದರಿಂದ ಅವರ ಮೇಲೆ ಉಂಟಾಗುತ್ತಿರುವ ಮಾನಸಿಕ ಮತ್ತು ವಾಸ್ತವಿಕ ಅರಿವಿನ ಅಭಾವದ ದುಷ್ಪರಿಣಾಮಗಳ ವಿಷಯವನ್ನು ಪ್ರಸ್ತಾಪಿಸಲು ಪ್ರಯತ್ನಿಸುತ್ತಿರುವುದಾಗಿ ಹೇಳಲಾಗಿದೆ.

'ಸಹಜ ಮತ್ತು ಶೈಕ್ಷಣಿಕ ವಾತಾವರಣದಲ್ಲಿ ನಡೆಯುತ್ತಿದ್ದ ನಿಯಮಿತ ಶಾಲೆ ಮತ್ತು ಬೋಧನೆಯ ಅಭಾವವು ವಿದ್ಯಾರ್ಥಿ ಸಮುದಾಯದ ಮನಸ್ಸಿನಲ್ಲಿ ಅಳಿಸಲಾಗದ ಬರೆ ಎಳೆದಿದೆ. ವರ್ಚುವಲ್ ತರಗತಿಗಳು ವಿದ್ಯಾರ್ಥಿಗಳ ಹಿತಾಸಕ್ತಿಗೆ ಹಾನಿಕಾರಕ ಮಾತ್ರವಲ್ಲ, ತಾರತಮ್ಯ ಮತ್ತು ಅನ್ಯಾಯದ ವರ್ತನೆಗೆ ಸಮಾನವಾಗಿದೆ ಎನ್ನುವುದು ಕೂಡ ಸಾಬೀತಾಗಿದೆ' ಎಂದು ಅರ್ಜಿಯಲ್ಲಿ ಹೇಳಲಾಗಿದೆ.

ದಿನಾಚರಣೆಯಂದು ಜಮ್ಮುವಿನಲ್ಲಿ ಸ್ಫೋಟದ ಸಂಚು

ನಾಲ್ವರು ಜೆಇಎಂ ಉಗ್ರರ ಬಂಧನ

ನವದೆಹಲಿ (ಪಿಟಿಐ): ಸ್ವಾತಂತ್ರ್ಯ ದಿನಾಚರಣೆ ದಿನದಂದು ದಾಳಿಗೆ ಸಂಚು ರೂಪಿಸಿದ್ದ ಪಾಕ್ ಮೂಲದ ಜೈಷ್-ಇ-ಮೊಹಮ್ಮದ್ ಉಗ್ರ ಸಂಘಟನೆಯ ನಾಲ್ವರು ಭಯೋತ್ಪಾದಕರನ್ನು ಜಮ್ಮು ಮತ್ತು ಕಾಶ್ಮೀರದ ಪೊಲೀಸರು ಶನಿವಾರ ಬಂಧಿಸಿದ್ದಾರೆ.

ಬಂಧಿತ ಉಗ್ರರಲ್ಲಿ ಉತ್ತರಪ್ರದೇಶದ ಒಬ್ಬ ನಿವಾಸಿಯೂ ಇದ್ದಾನೆ. ಸ್ವಾತಂತ್ರ್ಯ ದಿನಾಚರಣೆಯಂದು ಜಮ್ಮುವಿನಲ್ಲಿ ವಾಹನದಲ್ಲಿ ಐಇಡಿ ಇಟ್ಟು ಸ್ಫೋಟಿಸಲು ಮತ್ತು ದೇಶದ ಇತರೆಡೆ ದಾಳಿ ನಡೆಸಲು ಸಂಚು ರೂಪಿಸಿದ್ದರು. ಅಲ್ಲದೇ, ಡ್ರೋನ್ ಮೂಲಕ ಬರುವ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿ ಕಾಶ್ಮೀರದಲ್ಲಿರುವ ಜೆಇಎಂ ಉಗ್ರರಿಗೆ ರವಾನಿಸುತ್ತಿದ್ದರು ಎಂದು ಪೊಲೀಸ್ ವಕ್ತಾರರು ತಿಳಿಸಿದ್ದಾರೆ.

ಜೆಇಎಂ ಉಗ್ರ ಸಂಘಟನೆಯ ಸದಸ್ಯ ಮುಂಟಾಜೀರ್ ಮಂಜೂರ್ ಅಲಿಯಾಸ್ ಸೈಫುಲ್ಲಾನನ್ನು ಪ್ರಿಚೂ ಪುಲ್ವಾಮಾದಲ್ಲಿ ಮೊದಲು ಬಂಧಿಸಲಾಯಿತು. ಆತನಿಂದ ಒಂದು ಪಿಸ್ತೂಲ್, ಒಂದು ಪತ್ರಿಕೆ, ಎಂಟು ಜೀವಂತ ಗುಂಡುಗಳು, ಎರಡು ಚೀನಿ ಹ್ಯಾಂಡ್ ಗ್ರೆನೇಡ್‌ಗಳನ್ನು ಹಾಗೂ ಕಾಶ್ಮೀರಕ್ಕೆ ಶಸ್ತ್ರಾಸ್ತ್ರಗಳನ್ನು ಸಾಗಿಸಲು ಉಗ್ರರು ಬಳಸುತ್ತಿದ್ದ ಟ್ರಕ್ ಅನ್ನು ವಶಪಡಿಸಿಕೊಳ್ಳಲಾಗಿದೆ ಎಂದು ವಕ್ತಾರರು ತಿಳಿಸಿದ್ದಾರೆ.

ನಂತರ ಉತ್ತರ ಪ್ರದೇಶದ ಶಾಮ್ಲಿ ಜಿಲ್ಲೆಯ ಕಂದಾಲದ ಮಿರ್ದನ್ ಮೊಹಲ್ಲಾದ ಇಜಹಾರ್ ಖಾನ್ ಅಲಿಯಾಸ್ ಸೋನು ಖಾನ್ ಸೇರಿ ಇನ್ನೂ ಮೂವರು ಭಯೋತ್ಪಾದಕರನ್ನು ಬಂಧಿಸಲಾಯಿತು ಎಂದು ವಕ್ತಾರರು ತಿಳಿಸಿದ್ದಾರೆ.

ಖಾನ್ ಪಾಣಿಪತ್ ತೈಲ ಸಂಸ್ಕರಣಾಗಾರದ ವಿಡಿಯೊಗಳನ್ನು ಪಾಕಿಸ್ತಾನಕ್ಕೆ ಕಳುಹಿಸಿದ್ದ. ನಂತರ ಆತನಿಗೆ ಅಯೋಧ್ಯೆ ರಾಮ ಜನ್ಮಭೂಮಿಯ ವಿಡಿಯೊ ಕಳುಹಿಸುವ ಕೆಲಸವನ್ನು ಪಾಕ್‌ನಲ್ಲಿರುವ ಜೆಇಎಂ ಕಮಾಂಡರ್ ಮುನಜೀರ್ ಅಲಿಯಾಸ್ ಶಾಹಿದ್ ಎಂಬಾತ ವಹಿಸಿದ್ದ. ಆ ಕಾರ್ಯ ಸಾಧಿಸುವ ಮೊದಲು ಈ ಉಗ್ರರನ್ನು ಬಂಧಿಸಲಾಗಿದೆ ಎಂದು ವಕ್ತಾರರು ಹೇಳಿದ್ದಾರೆ.

ಆರ್‌ಪಿಜಿ ಲಾಂಚರ್ ವಶ

ಶ್ರೀನಗರ: ಕಾಶ್ಮೀರದ ಭದ್ರತಾ ಪಡೆಗಳು ವಶಪಡಿಸಿಕೊಂಡಿರುವ 'ರಾಕೆಟ್ ಪ್ರೊಪೆಲ್ಡ್ ಗ್ರೆನೇಡ್ (ಆರ್‌ಪಿಜಿ) ಲಾಂಚರ್'ಗಳು ಆತಂಕ ಉಂಟು ಮಾಡಿವೆ. ಇವುಗಳಿಗೆ ಸಾಕಷ್ಟು ಸಾವುನೋವು ಉಂಟುಮಾಡಬಲ್ಲ ಸಾಮರ್ಥ್ಯವಿದೆ.

ಶಸ್ತ್ರಾಸ್ತ್ರಗಳ ಕೊರತೆಯಿರುವ ಪ್ರದೇಶದಲ್ಲಿ ಈ ಲಾಂಚರ್‌ಗಳು ಇತ್ತೀಚಿನ ದಿನಗಳಲ್ಲಿ ಗಮನಾರ್ಹವಾದ ಸಂಖ್ಯೆಯಲ್ಲಿ ಹೆಚ್ಚುತ್ತಿರುವುದು ಆತಂಕ ಹೆಚ್ಚಿಸಿದೆ. ಇವು ಶಸ್ತ್ರಸಜ್ಜಿತ ವಾಹನಗಳನ್ನು ಸಹ ಹಾನಿ ಮಾಡುವ ಸಾಮರ್ಥ್ಯವನ್ನು ಹೊಂದಿರುವ ಮಾರಣಾಂತಿಕ ಆಯುಧಗಳು. ಗುರುವಾರ ಸಂಜೆ ದಕ್ಷಿಣ ಕಾಶ್ಮೀರದ ಕುಲ್ಗಾಮ್ ಜಿಲ್ಲೆಯಲ್ಲಿ ಗಡಿ ಭದ್ರತಾ ಪಡೆಯ ಮೇಲೆ ದಾಳಿ ನಡೆಸಲು ಯತ್ನಿಸಿದ ಉಗ್ರರಿಂದ ಆರ್‌ಪಿಜಿ ಲಾಂಚರ್ ಮತ್ತು ಅದರ ಎರಡು ಸ್ಫೋಟಕಗಳನ್ನು ಸೇನೆ ವಶಪಡಿಸಿಕೊಂಡಿದೆ. ಪಾಕಿಸ್ತಾನದ ಉಸ್ಮಾನ್ ಎಂದು ಗುರುತಿಸಲಾಗಿರುವ ಉಗ್ರ ಗುಂಡಿನ ಚಕಮಕಿಯಲ್ಲಿ ಮೃತಪಟ್ಟಿದ್ದರೆ, ಇನ್ನೊಬ್ಬ ತಪ್ಪಿಸಿಕೊಂಡಿದ್ದಾನೆ.

'ಬಹಳ ಸಮಯದ ನಂತರ ಉಗ್ರರು ಆರ್‌ಪಿಜಿಯನ್ನು ಬಳಸಿದ್ದಾರೆ. ವಶಪಡಿಸಿಕೊಂಡ ಲಾಂಚರ್‌ಗಳನ್ನು ಗಮನಿಸಿದರೆ, ಉಗ್ರರು ಎಷ್ಟು ದೊಡ್ಡ ದಾಳಿಗೆ ಯೋಜಿಸಿದ್ದರು ಎಂಬುದು ತಿಳಿಯುತ್ತದೆ' ಎಂದು ಕಾಶ್ಮೀರ ಪೊಲೀಸ್ ಮುಖ್ಯಸ್ಥ ವಿಜಯ್ ಕುಮಾರ್ ಹೇಳಿದ್ದಾರೆ. ಬಹಳ ಸಮಯದ ನಂತರ ಉಗ್ರರು ದಾಳಿ ನಡೆಸಲು ಇಂತಹ ಮಾರಣಾಂತಿಕ ಆಯುಧವನ್ನು ಬಳಸಿದ್ದರು. ಆದರೂ ಶೋಧ ಕಾರ್ಯಾಚರಣೆಯಲ್ಲಿ ಇಂತಹ ಕೆಲವು ತುಕ್ಕು ಹಿಡಿದ ಆಯುಧಗಳನ್ನು ಪತ್ತೆ ಮಾಡಲಾಗಿದೆ.

ಲಾಂಚರ್‌ಗಳು ಪತ್ತೆಯಾದ ಬಳಿಕ, ಕಾಶ್ಮೀರದಲ್ಲಿ ಉಗ್ರರು ನಿಜವಾಗಿಯೂ ವಿನಾಶಕಾರಿ ಶಸ್ತ್ರಾಸ್ತ್ರಗಳನ್ನು ಹೊಂದಿದ್ದಾರೆ ಎಂಬ ಸಂಶಯ ಮತ್ತಷ್ಟು ಬಲವಾಗಿದೆ. ಇದು ಎಚ್ಚರಿಕೆಯ ಗಂಟೆ ಎಂದು ವಿಶ್ಲೇಷಿಸಲಾಗಿದೆ.

ಸಿಎಎ ವಿರೋಧಿ ಕವಿಗಳಿಗೆ ಆಹ್ವಾನ ನೀಡಿದ್ದಕ್ಕೆ ಆಕ್ಷೇಪ

ಕವಿಗೋಷ್ಠಿ ರದ್ದುಪಡಿಸಿದ ಅಲಹಾಬಾದ್ ವಿವಿ

ಪ್ರಜಾವಾಣಿ ವಾರ್ತೆ

ಲಖನೌ: ಕಳೆದ ವರ್ಷ ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ವಿರುದ್ಧದ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಕೆಲವು ಕವಿಗಳಿಗೆ ಆಹ್ವಾನ ನೀಡಿರುವುದಕ್ಕೆ ಆಕ್ಷೇಪ ವ್ಯಕ್ತವಾಗಿದ್ದರಿಂದ ಅಲಹಾಬಾದ್ ಕೇಂದ್ರೀಯ ವಿಶ್ವವಿದ್ಯಾನಿಲಯವು ಆಯೋಜಿಸಿದ್ದ 'ಮುಶೈರಾ' (ಕವಿಗೋಷ್ಠಿ) ರದ್ದುಗೊಳಿಸಲಾಗಿದೆ.

ಮೂಲಗಳ ಪ್ರಕಾರ, ಉತ್ತರ ಪ್ರದೇಶ ಉರ್ದು ಅಕಾಡೆಮಿ, ವಿಶ್ವವಿದ್ಯಾನಿಲಯದ ಉರ್ದು ವಿಭಾಗ ಮತ್ತು ಅದರ ಕೇಂದ್ರ ಸಾಂಸ್ಕೃತಿಕ ಸಮಿತಿಯು ಜಂಟಿಯಾಗಿ ವಿ.ವಿಯಲ್ಲಿ 'ಮುಶೈರಾ'ವನ್ನು ಶುಕ್ರವಾರ ಸಂಜೆ ಆಯೋಜಿಸಿದ್ದವು.

ಈ ಗೋಷ್ಠಿಯ ಔಪಚಾರಿಕ ಉದ್ಘಾಟನೆಗೆ ಕೆಲವು ನಿಮಿಷಗಳ ಮೊದಲು, ವಿಶ್ವವಿದ್ಯಾಲಯದ ಅಧಿಕಾರಿಗಳು ಯಾವುದೇ ಕಾರಣ ನೀಡದೆ ಕಾರ್ಯಕ್ರಮ ರದ್ದುಗೊಳಿಸುವುದಾಗಿ ಘೋಷಿಸಿದರು. ಆಗ ದೇಶದ ವಿವಿಧ ಭಾಗಗಳಿಂದ ಆಗಮಿಸಿದ್ದ ಕವಿಗಳು ಕವಿಗೋಷ್ಠಿಯಲ್ಲಿ ಆಸೀನರಾಗಿದ್ದರು.

ಕವಿಗೋಷ್ಠಿ ರದ್ದತಿಯ ಹಿಂದಿರುವ ಕಾರಣಗಳನ್ನು ಬಹಿರಂಗಪಡಿಸಲು ವಿಶ್ವವಿದ್ಯಾಲಯದ ಆಡಳಿತವು ನಿರಾಕರಿಸಿದರೂ, ಕೇಸರಿ ಸಂಘಟನೆಗಳ ಮತ್ತು ಬಿಜೆಪಿಯ ಕೆಲವು ನಾಯಕರು ದೆಹಲಿಯ ಶಾಹೀನ್ ಬಾಗ್‌ನಲ್ಲಿ ಸಿಎಎ ವಿರೋಧಿ ಪ್ರತಿಭಟನೆಯಲ್ಲಿ ಭಾಗವಹಿಸಿದ ಕೆಲವು ಕವಿಗಳ ಉಪಸ್ಥಿತಿಯನ್ನು ವಿರೋಧಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

'ಕವಿಗೋಷ್ಠಿಗೆ ಆಹ್ವಾನಿಸಿದ್ದ ಕವಿಗಳಲ್ಲಿ ಕನಿಷ್ಠ ಇಬ್ಬರು ಸಿಎಎ ವಿರೋಧಿ ಪ್ರತಿಭಟನೆಗಳಲ್ಲಿ ಭಾಗವಹಿಸಿದ್ದಲ್ಲದೇ, ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಆಕ್ಷೇಪಾರ್ಹ ಹೇಳಿಕೆಗಳನ್ನು ನೀಡಿದ್ದರು' ಎಂದು ಸ್ಥಳೀಯ ಬಿಜೆಪಿ ನಾಯಕರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಆ ಇಬ್ಬರು ಕವಿಗಳ ಉಪಸ್ಥಿತಿ ವಿರೋಧಿಸಿ ಮತ್ತು ಕಾರ್ಯಕ್ರಮ ರದ್ದುಗೊಳಿಸುವಂತೆ ಒತ್ತಾಯಿಸಿ ಕೆಲವರು ಸಾಮಾಜಿಕ ಮಾಧ್ಯಮಗಳಲ್ಲಿ ಸಂದೇಶಗಳನ್ನು ಹಂಚಿಕೊಂಡ ನಂತರ ಈ ವಿಷಯವು ಮುಖ್ಯಮಂತ್ರಿ ಕಚೇರಿಗೆ ತಲುಪಿದೆ' ಎಂದು ಮೂಲಗಳು ತಿಳಿಸಿವೆ.

ಸಿಎಎ ವಿರುದ್ಧ ಮಹಿಳೆಯರು, ಅದರಲ್ಲೂ ಹೆಚ್ಚಾಗಿ ಮುಸ್ಲಿಮರು ಶಾಹೀನ್ ಬಾಗ್‌ನಲ್ಲಿ ಬೃಹತ್ ಪ್ರತಿಭಟನೆಗಳನ್ನು ನಡೆಸಿದ್ದರು. ಡಿಸೆಂಬರ್ 2019ರಲ್ಲಿ ಆರಂಭವಾದ ಪ್ರತಿಭಟನೆಗಳು ನಾಲ್ಕು ತಿಂಗಳುಗಳ ಕಾಲ ನಡೆದವು.

'ಮನೆಯೊಳಗೆ ಗೋಹತ್ಯೆ: ಸಾರ್ವಜನಿಕ ಆದೇಶ ಉಲ್ಲಂಘನೆಯಲ್ಲ'

ಒಂದನೇ ಪುಟದಿಂದ

'ಆದರೆ, ಇದು ಕೂಡ, ಅರ್ಜಿದಾರರು ಮತ್ತು ಇತರ ಸಹ ಆರೋಪಿಗಳ ಈ ಕ್ರಮಕ್ಕೆ ಕಾರಣವಾಗಿರಬಹುದು' ಎಂದು ಕೋರ್ಟ್ ಹೇಳಿದೆ.

'ಈ ಕೃತ್ಯವನ್ನು ಸಾರ್ವಜನಿಕವಾಗಿ ಆಕ್ರಮಣಕಾರಿ ರೀತಿಯಲ್ಲಿ ಇತರ ಸಮುದಾಯದ ಭಾವನೆಗಳಿಗೆ ಧಕ್ಕೆ ತರುವ ರೀತಿ ಮಾಡಲಾಗಿದೆಯೇ ಅಥವಾ ಮರೆಮಾಚುವ ರೀತಿ ಮಾಡಲಾಗಿದೆಯೇ ಎಂಬುದು ಇಲ್ಲಿನ ಪ್ರಶ್ನೆ. ಇದರ ಆಧಾರದ ಮೇಲೆ ಈ ಪ್ರಕರಣವು ಸಾರ್ವಜನಿಕ ಆದೇಶಕ್ಕೆ ಸಂಬಂಧಪಟ್ಟದ್ದೋ ಅಥವಾ ಕಾನೂನು ಮತ್ತು ಸುವ್ಯವಸ್ಥೆಗೆ ಸಂಬಂಧಿಸಿದೆಯೇ ಎಂಬುದನ್ನು ನೋಡಬಹುದು' ಎಂದು ಕೋರ್ಟ್ ಅಭಿಪ್ರಾಯಪಟ್ಟಿದೆ.

ಈ ಒಂದು ಘಟನೆಯಿಂದಲೇ, ಅರ್ಜಿದಾರರು ತಮ್ಮ ಕೃತ್ಯವನ್ನು ಪುನರಾವರ್ತಿಸುತ್ತಾರೆ ಎಂದು ಊಹಿಸಲು ಸಾಧ್ಯವಿಲ್ಲ ಎಂದು ಪ್ರಕರಣವೊಂದರಲ್ಲಿ ಸುಪ್ರೀಂ ಕೋರ್ಟ್ ನೀಡಿದ್ದ ತೀರ್ಪನ್ನು ಉಲ್ಲೇಖಿಸಿ, ಪೀಠ ಹೇಳಿತು.

'ಆಪಾದಿತರು ತಮ್ಮ ಕೆಲಸವನ್ನು ಪುನರಾವರ್ತಿಸಬಹುದೆಂದು ಪೊಲೀಸರು ಊಹಿಸಬಹುದು. ಆದರೆ ಅಂತಹ ತೀರ್ಮಾನವನ್ನು ಸಮರ್ಥಿಸಲು ಕೆಲವು ವಸ್ತು ಮತ್ತು ಸನ್ನಿವೇಶಗಳನ್ನು ದಾಖಲಿಸಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದ್ದಾಗಿ ಪೀಠ ತಿಳಿಸಿತು.

ಕಳೆದ ವರ್ಷ ಉತ್ತರ ಪ್ರದೇಶದ ಸೀತಾಪುರ ಜಿಲ್ಲೆಯ ಬಿಸ್ವಾನ್ ಎಂಬಲ್ಲಿ ಮನೆಯೊಳಗೆ ಗೋಮಾಂಸ ಕತ್ತರಿಸುತ್ತಿರುವುದು ಪತ್ತೆಯಾದ ಕಾರಣ, ಪರ್ವೇಜ್, ಇರ್ಫಾನ್ ಮತ್ತು ರಹಮತ್ ಉಲ್ಲಾ ಎಂಬುವವರನ್ನು ಪೊಲೀಸರು ಬಂಧಿಸಿದ್ದರು.

ಭಾನುವಾರ • ಆಗಸ್ಟ್ 15, 2021 ಪ್ರಜಾವಾಣಿ

‘ನವೀಕರಿಸಬಲ್ಲ ಇಂಧನ ವಲಯದಲ್ಲಿ ಹೂಡಿಕೆ ಮಾಡಿ’

ನವದೆಹಲಿ (ಪಿಟಿಐ): ದೇಶದ ನವೀಕರಿಸಬಲ್ಲ ಇಂಧನ ಮತ್ತು ವಿದ್ಯುತ್ ವಲಯಗಳಲ್ಲಿ ಬಂಡವಾಳ ಹೂಡಿಕೆ ಮಾಡುವಂತೆ ಕೇಂದ್ರ ಸಚಿವ ಆರ್.ಕೆ. ಸಿಂಗ್ ಅವರು ಅಮೆರಿಕದ ಹೂಡಿಕೆದಾರರನ್ನು ಆಹ್ವಾನಿಸಿದ್ದಾರೆ.

ಅಮೆರಿಕ-ಭಾರತ ಉದ್ಯಮ ಮಂಡಳಿಯ (ಯುಎಸ್ಐಬಿಸಿ) ಸದಸ್ಯರೊಂದಿಗೆ ವರ್ಚುವಲ್ ವೇದಿಕೆಯ ಮೂಲಕ ಸಂವಾದ ನಡೆಸಿದ ಅವರು, ನವೀಕರಿಸಬಲ್ಲ ಇಂಧನ ಮತ್ತು ವಿದ್ಯುತ್ ವಲಯಗಳ ಸಾಧನೆಗಳು ಮತ್ತು ಆ ವಲಯಗಳಲ್ಲಿ ಹೂಡಿಕೆಗೆ ಇರುವ ಅವಕಾಶಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ.

ಅಮೆರಿಕದ ಉದ್ಯಮ ಸಮುದಾಯದೊಂದಿಗೆ ಸಂವಾದ ನಡೆಸಲು ಈ ಸಭೆಯು ಅವಕಾಶ ಕಲ್ಪಿಸಿತು. ಕೇಂದ್ರ ಸಚಿವರು ಈ ವಲಯಗಳಲ್ಲಿ ಬಂಡವಾಳ ತೊಡಗಿಸಲು ಜಾಗತಿಕ ಹೂಡಿಕೆದಾರರಿಗೆ ಇರುವ ಅವಕಾಶಗಳ ಬಗ್ಗೆ ಮಾಹಿತಿ ನೀಡಿದ್ದಾರೆ ಎಂದು ಸಚಿವಾಲಯದ ಪ್ರಕಟಣೆಯು ತಿಳಿಸಿದೆ.

ಮಾಹಿತಿ ತಂತ್ರಜ್ಞಾನ, ಮೂಲಸೌಕರ್ಯ ಅಭಿವೃದ್ಧಿ, ನವೀಕರಿಸಬಲ್ಲ ಇಂಧನದ ಸಾಧನಗಳು, ಬ್ಯಾಂಕಿಂಗ್, ವಿಮಾನಯಾನ ಸೇರಿದಂತೆ ವಿವಿಧ ವಲಯಗಳ 50ಕ್ಕೂ ಅಧಿಕ ಉದ್ಯಮಗಳ ಪ್ರಮುಖರು ಈ ಸಭೆಯಲ್ಲಿ ಭಾಗವಹಿಸಿದ್ದರು.

2030ರ ಒಳಗಾಗಿ 450 ಗಿಗಾವಾಟ್‌ಗಳಷ್ಟು ನವೀಕರಿಸಬಲ್ಲ ಇಂಧನ ಉತ್ಪಾದನೆಯ ಗುರಿಯನ್ನು ಸಾಧಿಸುವ ಹಾದಿಯಲ್ಲಿ ಭಾರತವು ಸಾಗುತ್ತಿದೆ. ಉತ್ಪಾದನೆ ಆಧಾರಿತ ಉತ್ತೇಜನ (ಪಿಎಲ್ಐ) ಯೋಜನೆಯಡಿ ಸೋಲಾರ್ ಕೋಶಗಳು, ಮಾದರಿಗಳು ಮತ್ತು ಬ್ಯಾಟರಿಗಳ ತಯಾರಿಕೆಗೆ ಉತ್ತೇಜನ ನೀಡಲಾಗಿದೆ ಎಂದು ಎಂದು ಸಿಂಗ್ ಅವರು ಹೂಡಿಕೆದಾರರಿಗೆ ಹೇಳಿರುವುದಾಗಿ ಸಚಿವಾಲಯದ ಪ್ರಕಟಣೆಯು ತಿಳಿಸಿದೆ.

ಕೇಂದ್ರದ ಹೊಸ ನೀತಿ: ಆತಂಕದಲ್ಲಿ ಹಳೇ ಕಾರು, ಲಾರಿ ಮಾಲೀಕರು

ಗುಜರಿ ಬಾಗಿಲಿಗೆ 40 ಲಕ್ಷ ವಾಹನ!

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಹಳೆಯ ವಾಹನಗಳನ್ನು ಗುಜರಿಗೆ ಹಾಕುವ ನೀತಿಯನ್ನು ಕೇಂದ್ರ ಸರ್ಕಾರ ಜಾರಿ ತಂದಿದ್ದು, ಅದರ ಪ್ರಕಾರ ರಾಜ್ಯದಲ್ಲಿರುವ 2.46 ಕೋಟಿ ವಾಹನಗಳಲ್ಲಿ 40 ಲಕ್ಷಕ್ಕೂ ಹೆಚ್ಚು ವಾಹನಗಳು ಗುಜರಿ ಸೇರುವುದಕ್ಕೆ ಅರ್ಹವಾಗಿವೆ.

ಹಳೆಯ ವಾಹನಗಳನ್ನು ಸ್ವಯಂ ಪ್ರೇರಿತವಾಗಿ ಗುಜರಿಗೆ ಹಾಕಿಸಿ ಹೊಸ ವಾಹನಗಳ ಖರೀದಿಗೆ ಜನರನ್ನು ಪ್ರೇರೇಪಿಸುವುದು ಇದರ ಉದ್ದೇಶ. 15 ವರ್ಷ ಮೇಲ್ಪಟ್ಟ ಮ್ಯಾಕ್ಸಿಕ್ಯಾಬ್, ಕಾರು, ಆಟೋರಿಕ್ಷಾ, ಬಸ್ ಮತ್ತು ಲಾರಿಗಳು ಸೇರಿ 9 ಲಕ್ಷಕ್ಕೂ ಹೆಚ್ಚು ವಾಹನಗಳು ರಾಜ್ಯದಲ್ಲಿವೆ. 20 ವರ್ಷ ದಾಟಿದ 31 ಲಕ್ಷಕ್ಕೂ ಹೆಚ್ಚು ದ್ವಿಚಕ್ರ ವಾಹನಗಳು ರಾಜ್ಯದಲ್ಲಿವೆ.

ಈ ನೀತಿ ಪ್ರಕಾರ ಈ ವಾಹನಗಳು ಗುಜರಿ ಬಾಗಿಲಲ್ಲಿ ನಿಲ್ಲಲು ಅರ್ಹತೆ ಪಡೆದಿವೆ. ವಾಹನ ಮಾಲೀಕರು ಸ್ವಯಂ ಪ್ರೇರಿತವಾಗಿ ಗುಜರಿಗೆ ಈ ವಾಹನಗಳನ್ನು ಹಾಕಬಹುದು. ಅಥವಾ ಮೂರು ಬಾರಿ ಯೋಗ್ಯತಾ ಪರೀಕ್ಷೆಯಲ್ಲಿ(ಎಫ್‌ಸಿ) ವಿಫಲವಾದರೆ ಸಾರಿಗೆ ಇಲಾಖೆಯೇ ಅವುಗಳನ್ನು ಗುಜರಿಗೆ ತಳ್ಳಲಿದೆ. ಒಂದು ವೇಳೆ ಪರೀಕ್ಷೆಯಲ್ಲಿ ಯಶಸ್ವಿಯಾದರೂ ಹಸಿರು ತೆರಿಗೆ ಪಾವತಿಸಬೇಕು.

‘ಒಂದು ವಾಹನ ಎಷ್ಟು ವರ್ಷಗಳ ನಂತರ ಗುಜರಿ ಸೇರಬೇಕು ಎಂಬುದರ ಬಗ್ಗೆ ದೇಶದಲ್ಲಿ ನಿಯಮ ಇರಲಿಲ್ಲ. ಹೊರ ದೇಶಗಳಲ್ಲಿ ಈಗಾಗಲೇ ಇದೆ. ಈ ನಿಯಮ ಬರಲೇಬೇಕಿತ್ತು. ಜಾರಿಗೆ ಬರುವುದರಿಂದ ಮಾಲಿನ್ಯ ಕಡಿಮೆಯಾಗಲಿದೆ’ ಎಂದು ಸಾರಿಗೆ ಇಲಾಖೆ ಹಿರಿಯ ಅಧಿಕಾರಿಗಳು ಹೇಳುತ್ತಾರೆ.

‘ಆದರೆ, ಈ ನೀತಿ ಹಳೇ ಕಾರು ಮತ್ತು ಲಾರಿಗಳನ್ನು ಹೊಂದಿದವರನ್ನು ಆತಂಕದಲ್ಲಿ ಮುಳುಗುವಂತೆ ಮಾಡಿದೆ. ಹಳೇ ಕಾರುಗಳನ್ನು ಲಕ್ಷಗಟ್ಟಲೆ ಕೊಟ್ಟು ಖರೀದಿಸಿದ್ದವರು ಈಗ ಬರಿಗೈ ಆಗುವ ಸಾಧ್ಯತೆ ಇದೆ. ಹಳೇ ಕಾರು ಮತ್ತು ದ್ವಿಚಕ್ರ ವಾಹನ ವ್ಯಾಪಾರ ನಡೆಸುವ ಉದ್ಯಮದ ಮೇಲೂ ಇದರ ಪರಿಣಾಮ ಬೀರಲಿದೆ. ದುಬಾರಿ ವೆಚ್ಚ ಭರಿಸಿ ಹೊಸ ಕಾರು ಖರೀದಿಸಲು ಸಾಧ್ಯವಾಗದವರು ಜೀವನದಲ್ಲಿ ಒಂದು ಹಳೇ ಕಾರನ್ನಾದರೂ ಖರೀದಿಸಬೇಕು ಎಂದುಕೊಂಡವರು ಕನಸುಗಳು ಕನಸಾಗಿಯೇ ಉಳಿಯಲಿದೆ’ ಎಂದು ಹಳೇ ಕಾರುಗಳ ವ್ಯಾಪಾರ ನಡೆಸುವ ಮಧು ಹೇಳುತ್ತಾರೆ.

‘ಹಳೇ ವಾಹನಗಳನ್ನು ನಂಬಿಕೊಂಡು ಗ್ಯಾರೇಜ್ ನಡೆಸುತ್ತಿರುವ ಮೆಕ್ಯಾನಿಕ್‌ಗಳ ಜೀವನಕ್ಕೂ ಈ ಹೊಸ ನೀತಿ ಕಲ್ಲು ಹಾಕುವ ಸಾಧ್ಯತೆ ಇದೆ. ಶೋರೂಂಗಳಲ್ಲೇ ರಿಪೇರಿ ಆಗಬೇಕಿರುವ ಬಿಎಸ್–6 ವಾಹನಗಳು ರಸ್ತೆಗೆ ಇಳಿದ ಬಳಿಕ ರಸ್ತೆ ಬದಿಯ ಮೆಕ್ಯಾನಿಕ್‌ಗಳು ಚಿಂತೆಗೀಡಾಗಿದ್ದರು. ಕಾರು ಅಥವಾ ಬೈಕ್ ಮೆಕ್ಯಾನಿಕ್‌ಗಳು ರಿಪೇರಿ ಕೆಲಸದ ಜತೆಗೆ ಹಳೇ ವಾಹನಗಳ ವ್ಯಾಪಾರವನ್ನೂ ಸಣ್ಣದಾಗಿ ನಡೆಸುತ್ತಾರೆ. ಈಗ ಹಳೇ ವಾಹನಗಳು ಗುಜರಿಗೆ ಸೇರಿದರೆ ರಿಪೇರಿ ಕೆಲಸವೂ ಇಲ್ಲ, ವಾಹನ ಮಾರಾಟದ ವ್ಯಾಪಾರವೂ ಇಲ್ಲವಾಗಲಿದೆ’ ಎಂದು ಅವರು ಆತಂಕ ವ್ಯಕ್ತಪಡಿಸಿದರು.

ವಾಹನಗಳೆಷ್ಟು

ವಾಹನಗಳು	ಒಟ್ಟು	ಗುಜರಿ ಸೇರಲಿರುವ ವಾಹನಗಳು
ದ್ವಿಚಕ್ರ ವಾಹನಗಳು	1.65 ಕೋಟಿ	23.10 ಲಕ್ಷ
ಸ್ವಂತ ಬಳಕೆ ಕಾರು, ಜೀಪುಗಳು	28.90 ಲಕ್ಷ	7.90 ಲಕ್ಷ
ವಾಣಿಜ್ಯ ಬಳಕೆ ಟ್ಯಾಕ್ಸಿಗಳು	2.58 ಲಕ್ಷ	54 ಸಾವಿರ
ಮ್ಯಾಕ್ಸಿಕ್ಯಾಬ್	1.11 ಲಕ್ಷ	44 ಸಾವಿರ
ಆಟೋರಿಕ್ಷಾ	5.19 ಲಕ್ಷ	2.90 ಲಕ್ಷ
ಬಸ್‌ಗಳು	1.20 ಲಕ್ಷ	45 ಸಾವಿರ
ಲಾರಿ ಸೇರಿ ಸರಕು ಸಾಗಣೆ ವಾಹನಗಳು	5.30 ಲಕ್ಷ	3.98 ಲಕ್ಷ

‘ಬೀದಿಗೆ ಬೀಳುವ ಲಾರಿ ಮಾಲೀಕರು’

‘ಗುಜರಿ ನೀತಿ ಜಾರಿಗೆ ಬಂದರೆ ಸಾವಿರಾರು ಲಾರಿ ಮಾಲೀಕರ ಕುಟುಂಬಗಳು ಬೀದಿಗೆ ಬೀಳಲಿವೆ’ ಎಂದು ಲಾರಿ ಮಾಲೀಕರ ಸಂಘಗಳ ಒಕ್ಕೂಟದ ಅಧ್ಯಕ್ಷ ಬಿ. ಚನ್ನಾರೆಡ್ಡಿ ಹೇಳಿದರು.

‘10–11 ವರ್ಷ ಹಳೆಯದಾದ ಲಾರಿಗಳು ಸ್ಥಳೀಯವಾಗಿಯೇ ಸಂಚರಿಸುತ್ತವೆ. ರೈಲ್ವೆ ಗೂಡ್ಸ್, ಎಪಿಎಂಸಿಗಳಿಗೆ ಬಾಡಿಗೆ ಓಡುತ್ತವೆ. 10 ವರ್ಷ ಕಳೆದ ನಂತರ ಲಾರಿಗಳ ದಿನದ ವಹಿವಾಟು ₹3 ಸಾವಿರ ದಾಟುವುದಿಲ್ಲ. ಅಂತಹ ಲಾರಿಗಳ ಮಾಲೀಕರು ಈಗ ಬೀದಿಗೆ ಬೀಳಬೇಕಾಗುತ್ತದೆ. ಆಟೊಮೊಬೈಲ್ ಲಾಬಿಗೆ ಮಣಿದು ಸರ್ಕಾರ ಈ ಹೊಸ ನೀತಿ ಜಾರಿಗೆ ತಂದಿದೆ’ ಎಂದರು.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹420
12 ಮೊಟ್ಟೆಗೆ	₹58

ಮೈಸೂರು

100 ಮೊಟ್ಟೆಗೆ	₹421

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1520 (1520)
ಸೋಯಾ (ರಿಫೈನ್ಡ್)	₹1415 (1400)
ಸೂರ್ಯಕಾಂತಿ (ರಿಫೈನ್ಡ್)	₹1490(1480)
ಪಾಮೋಲಿನ್	₹1290 (1276)

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	600-6500
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400

ಕಾಳು ಮೆಣಸು	380
ರಾಮನಗರ ರೇಷ್ಮೆಗೂಡು	
ಮಿಶ್ರತಳಿ	310-479
ದ್ವಿತಳಿ	315-528

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	13000	12650	186.55 ಸೆಂಟ್ಸ್
ಎಸಿ	---	4800	5100	
ಆರ್‌ಪಿ	---	5950	6100	ಲಂಡನ್
ಆರ್‌ಸಿ	---	3400	3475	1849 ಡಾಲರ್ಸ್

HUBBALLI – DHARWAD MUNICIPAL CORPORATION
Executive Engineer (IT) Department, it.hdmc@gmail.com, 0836-2251955
Official Website: www.hdmc.mrc.gov.in

No. HDMC:HDMC:15:02:271:2021-22/39 Dated: 13.08.2021

Recruitment on Outsourced basis
Applications Are Invited From Eligible Candidates- Call-2

Hubballi-Dharwad Municipal Corporation invites for below posts from Interested and suitably qualified Technical Skilled Professional (related to Information Technology field) candidates.

1) Software Engineer: B.E in Computer science/B.E in Information science/M.C.A (Regular) in computer applications of regular Degree from an accredited recognized University/Institute. Relevant field experience of minimum 03 years

2) Network Administrator: B.E in Computer science/B.E in Electronics & communication Engg. /M.C.A(Regular) in computer applications of regular Degree from an accredited, recognized University/Institute. Relevant field experience of minimum 03 years.

3) Junior Programmer : Regular Degree in B.Sc (C.S) /B.C.A/ M.Sc (CS) (Regular), an accredited, recognized University/Institute (Having knowledge in Java/c++/Python/GIS). Relevant field experience of minimum 02 years

Candidates selected for above posts have to work in the offices of HDMC of Hubli and Dharwad Division and the payment for the above posts will be paid by the contractor assigned by the HDMC. Last date for applying/submission of application: 24th August 2021 Interested **candidates applying for above posts must submit their bio-data along with information as per ANNEXURE-A** at: **misprojectcell@gmail.com** or in person to this office.

ANNEXURE-A and other details related to roles and responsibility of the above position, number of posts, related terms and conditions can be downloaded through **https://hdmc.mrc.gov.in** from 16.08.2021 onwards. In future any communication with regards to recruitment on out source applicants are required to check the website regularly.

Sd/- Executive Engineer (IT)
HDMC, Hubballi,

DIPR/DWD/420/2021-22/DESHPANDEPUBLICITY

ಒಎನ್‌ಜಿಸಿ ಲಾಭ ₹ 4,335 ಕೋಟಿ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮತ್ತು ನೈಸರ್ಗಿಕ ಅನಿಲ ನಿಗಮವು (ಒಎನ್‌ಜಿಸಿ) ಪ್ರಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ₹ 4,335 ಕೋಟಿ ನಿವ್ವಳ ಲಾಭ ಗಳಿಸಿದೆ.

ಕೋವಿಡ್ ನಿಯಂತ್ರಿಸಲು ಜಾರಿಗೊಳಿಸಿದ್ದ ಲಾಕ್‌ಡೌನ್ ಕಾರಣದಿಂದಾಗಿ ಬೇಡಿಕೆ ಮತ್ತು ಬೆಲೆಯು ಕುಸಿತ ಕಂಡಿತ್ತು. ಹೀಗಾಗಿ ಹಿಂದಿನ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ₹ 497 ಕೋಟಿ ಲಾಭ ಆಗಿತ್ತು. ಇದಕ್ಕೆ ಹೋಲಿಸಿದರೆ ನಿವ್ವಳ ಲಾಭವು ಶೇ 772.2ರಷ್ಟು ಹೆಚ್ಚಾಗಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಕಂಪನಿಯ ಸರಾಸರಿ ವರಮಾನವು ಶೇ 77ರಷ್ಟು ಹೆಚ್ಚಾಗಿದು ₹ 23,022 ಕೋಟಿಗೆ ಏರಿಕೆ ಆಗಿದೆ.

‘ಉಡುಪು ರಫ್ತು ಉತ್ತಮ ಬೆಳವಣಿಗೆ’

ನವದೆಹಲಿ (ಪಿಟಿಐ): ಅಮೆರಿಕ, ಯುರೋಪ್, ಇಂಗ್ಲೆಂಡ್, ಸೌದಿ ಅರೇಬಿಯಾ, ಕೆನಡಾ, ಜಪಾನ್ ಮತ್ತು ಆಸ್ಟ್ರೇಲಿಯಾದಂತಹ ಪ್ರಮುಖ ಮಾರುಕಟ್ಟೆಗಳಲ್ಲಿ ದೇಶದ ಉಡುಪು ರಫ್ತು ವಹಿವಾಟು ಉತ್ತಮ ಬೆಳವಣಿಗೆ ಕಾಣುತ್ತಿದೆ ಎಂದು ಉಡುಪು ರಫ್ತು ಉತ್ತೇಜನ ಮಂಡಳಿಯು (ಎಇಪಿಸಿ) ಹೇಳಿದೆ.

ಮಂಡಳಿಯ ವಾರ್ಷಿಕ ಸಭೆಯನ್ನು ಉದ್ದೇಶಿಸಿ ಶನಿವಾರ ಮಾತನಾಡಿದ ಅಧ್ಯಕ್ಷ ಎ. ಶಕ್ತಿವೇಲ್ ಅವರು, 2020ರ ಜನವರಿ–ಮೇ ಅವಧಿಗೆ ಹೋಲಿಸಿದರೆ 2021ರ ಜನವರಿ–ಮೇ ಅವಧಿಯಲ್ಲಿ ಅಮೆರಿಕಕ್ಕೆ ರಫ್ತು ಶೇ 22ರಷ್ಟು ಹೆಚ್ಚಾಗಿದೆ ಎಂದು ಮಾಹಿತಿ ನೀಡಿದರು.

ಕೋವಿಡ್ ಹೆಚ್ಚಿದ್ದರೆ ತರಗತಿ ಬಂದ್

ಒಂದನೇ ಪುಟದಿಂದ

ಗಡಿಯಲ್ಲಿ ಸಂಪೂರ್ಣ ಪರೀಕ್ಷೆ: ಕೇರಳ ಮತ್ತು ಮಹಾರಾಷ್ಟ್ರ ಗಡಿಭಾಗದಿಂದ 10 ಕಿ.ಮೀ. ದೂರದವರೆಗಿನ ಪ್ರದೇಶಗಳಲ್ಲಿ ಎಲ್ಲರಿಗೂ ಕೋವಿಡ್ ಪರೀಕ್ಷೆ ನಡೆಸಲಾಗುವುದು. ಅಲ್ಲಿನ ಎಲ್ಲ ಜನರಿಗೂ ಕೋವಿಡ್ ಲಸಿಕೆ ನೀಡಲು ತೀರ್ಮಾನಿಸಲಾಗಿದೆ ಎಂದು ಮುಖ್ಯಮಂತ್ರಿ ತಿಳಿಸಿದರು.

ರಾಯಚೂರು, ಕಲಬುರ್ಗಿ, ಬಳ್ಳಾರಿ, ಕೊಪ್ಪಳ, ಬೀದರ್, ಹಾವೇರಿ, ವಿಜಯಪುರ, ತುಮಕೂರು, ಚಿಕ್ಕಮಗಳೂರು, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಕೋವಿಡ್ ಪರೀಕ್ಷೆಯ ಪ್ರಮಾಣ ಹೆಚ್ಚಿಸಲಾಗುವುದು. ಕೋವಿಡ್ ದೃಢಪ್ರಮಾಣ ದರ ಹೆಚ್ಚಾಗಿರುವ ದಕ್ಷಿಣ ಕನ್ನಡ, ಉಡುಪಿ, ಹಾಸನ, ಕೊಡಗು, ಬೆಂಗಳೂರು ಗ್ರಾಮಾಂತರ, ಚಾಮರಾಜನಗರ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಲಸಿಕೆ ನೀಡುವ ಪ್ರಮಾಣ ಹೆಚ್ಚಿಸಲಾಗುವುದು ಎಂದು ವಿವರ ನೀಡಿದರು.

ಜಿಲ್ಲಾವಾರು ಯೋಜನೆ: ಕೋವಿಡ್ ಪರಿಸ್ಥಿತಿ ಜಿಲ್ಲೆಯಿಂದ ಜಿಲ್ಲೆಗೆ ವಿಭಿನ್ನವಾಗಿದೆ. ಈ ಕಾರಣದಿಂದ ಜಿಲ್ಲಾವಾರು ಕೋವಿಡ್ ನಿರ್ವಹಣಾ ಯೋಜನೆಗಳನ್ನು ರೂಪಿಸಲು ಸಭೆಯಲ್ಲಿ ನಿರ್ಧರಿಸಲಾಗಿದೆ ಎಂದರು.

ಕೇರಳ ಮತ್ತು ಮಹಾರಾಷ್ಟ್ರ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಸಮಾಧಾನಕರ ಪರಿಸ್ಥಿತಿ ಇದೆ
ಡಾ.ದೇವಿಪ್ರಸಾದ್ ಶೆಟ್ಟಿ,
ತಜ್ಞರ ಸಮಿತಿ ಮುಖ್ಯಸ್ಥ

‘ರಾಜ್ಯದಲ್ಲಿ ಈವರೆಗೆ 4 ಕೋಟಿ ಡೋಸ್ ಲಸಿಕೆ ನೀಡಲಾಗಿದೆ. ಸದ್ಯ 14.89 ಲಕ್ಷ ಡೋಸ್ ಲಸಿಕೆ ದಾಸ್ತಾನು ಇದೆ. ಮುಂದಿನ ವಾರ ಆರೋಗ್ಯ ಸಚಿವ ಸುಧಾಕರ್ ಜತೆ ದೆಹಲಿಗೆ ತೆರಳಿ ಕೇಂದ್ರ ಆರೋಗ್ಯ ಸಚಿವರನ್ನು ಭೇಟಿಮಾಡಲಾಗುವುದು. ಲಸಿಕೆ ಪೂರೈಕೆಯ ಪ್ರಮಾಣವನ್ನು 65 ಲಕ್ಷ ಡೋಸ್‌ನಿಂದ ಒಂದು ಕೋಟಿ ಡೋಸ್‌ ಗೆ ಹೆಚ್ಚಿಸುವಂತೆ ಮನವಿ ಮಾಡಲಾಗುವುದು’ ಎಂದು ಬೊಮ್ಮಾಯಿ ತಿಳಿಸಿದರು.

ಸಚಿವರಾದ ಡಾ.ಸಿ.ಎನ್. ಅಶ್ವತ್ಥರಾನಾಯಣ, ಡಾ.ಕೆ. ಸುಧಾಕರ್, ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ, ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್, ಡಾ.ದೇವಿಪ್ರಸಾದ್ ಶೆಟ್ಟಿ, ಡಾ. ಸುದರ್ಶನ್ ಸೇರಿದಂತೆ ಸಲಹಾ ಸಮಿತಿ ಹಾಗೂ ತಜ್ಞರ ಸಮಿತಿಯ ಸದಸ್ಯರು ಸಭೆಯಲ್ಲಿದ್ದರು.

ಆರು ಜಿಲ್ಲೆಗಳಲ್ಲಿ ಪ್ರಯೋಗಾಲಯ

‘ಡೆಲ್ಟಾ ಮತ್ತು ಡೆಲ್ಟಾ ಪ್ಲಸ್ ರೂಪಾಂತರಿ ಕೊರೊನಾ ವೈರಾಣುಗಳ ಕುರಿತು ಅಧ್ಯಯನ ನಡೆಸಲು ಬೆಂಗಳೂರು, ಮೈಸೂರು, ಶಿವಮೊಗ್ಗ, ಕಲಬುರ್ಗಿ, ಬೆಳಗಾವಿ ಮತ್ತು ಹುಬ್ಬಳ್ಳಿಯಲ್ಲಿ ಮೂರು ವಾರದೊಳಗೆ ಜಿನೋಮ್ ಸೀಕ್ವೆನ್ಸಿಂಗ್ ಪರೀಕ್ಷಾ ಪ್ರಯೋಗಾಲಯ ಆರಂಭಿಸಲಾಗುವುದು. ಸೋಮವಾರವೇ ಈ ಸಂಬಂಧ ಆದೇಶ ಹೊರಡಿಸಲಾಗುವುದು’ ಎಂದು ಮುಖ್ಯಮಂತ್ರಿ ಬೊಮ್ಮಾಯಿ ತಿಳಿಸಿದರು.

ಬಿಬಿಎಂಪಿ ಆಯುಕ್ತರಿಗೆ ಅಧಿಕಾರ: ‘ಬೆಂಗಳೂರಿನಲ್ಲಿ ಸದ್ಯ ಕೋವಿಡ್ ದೃಢಪ್ರಮಾಣ ದರ ಶೇ 0.75ರಷ್ಟಿದೆ. ಅದು ಶೇ 2 ತಲುಪಿದರೆ ಹಾಗೂ ಆಮ್ಲಜನಕ ಪೂರೈಕೆಯ ಹಾಸಿಗೆಗಳು ಶೇ 40ರಷ್ಟು ಭರ್ತಿಯಾದರೆ ಹೆಚ್ಚುವರಿ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳುವ ಅಧಿಕಾರವನ್ನು ಬಿಬಿಎಂಪಿ ಮುಖ್ಯ ಆಯುಕ್ತರಿಗೆ ನೀಡಲಾಗಿದೆ’ ಎಂದು ಬೊಮ್ಮಾಯಿ ಹೇಳಿದರು.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ರಂಗಭೂಮಿಯ ಕಾಲ ಮುಗಿಯಿತೆ?: ಒಂದು ಗಂಭೀರ ಚರ್ಚೆ, ಭಾಗವಹಿಸುವವರು: **ಅಡ್ಡಂಡ ಕಾರ್ಯಪ್ಪ**, ನಿರ್ದೇಶಕ, ಮೈಸೂರು ರಂಗಾಯಣ., **ಜೆ.ಲೋಕೇಶ್**, ಮಾಜಿ ಅಧ್ಯಕ್ಷ, ಕರ್ನಾಟಕ ನಾಟಕ ಅಕಾಡೆಮಿ., **ರಜನಿ ಗರುಡ**, ನಟಿ, ನಿರ್ದೇಶಕಿ., **ಮಲ್ಲಿಕಾರ್ಜುನ ಸ್ವಾಮಿ ಮಹಾಮನೆ**, ನಿರ್ದೇಶಕ,. **ಮಲ್ಲಿಕಾರ್ಜುನ ಕಡಕೋಳ**, ವೃತ್ತಿ ರಂಗಭೂಮಿ ತಜ್ಞ. ಮತ್ತು ನೀವು

ಕ್ಲಬ್ ಹೌಸ್ ಪ್ರಜಾವಾಣಿ ಆಲದಮರ
ಬೆಳಿಗ್ಗೆ 10.30 ರಿಂದ 12.30

ಸ್ವಾತಂತ್ರ್ಯದ ಅಮೃತ ಮಹೋತ್ಸವ: ರಾಜ್ಯದ ಮೂಲೆ ಮೂಲೆಯ ಚಿಣ್ಣರ ಹಾಡು.,
ಕಾರ್ಯಕ್ರಮ ವಿನ್ಯಾಸ: **ಶ್ರೀನಿವಾಸ ಜಿ ಕಪ್ಪಣ್ಣ.**
ಸಂಗೀತ ವಿನ್ಯಾಸ: **ರಮಾ ಪುಸ್ತಕಂ.**
ಸಂಘಟನೆ-ಸಮನ್ವಯ: **ಡಾ.ನಿರಂಜನಾರಾಧ್ಯ ವಿ.ಪಿ.,**
ಸಹಕಾರ: **ರಾಜ್ಯ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ಸಮನ್ವಯ ವೇದಿಕೆ.**
ಬೆಳಿಗ್ಗೆ 10ರಿಂದ

ಪಾಡ್‌ಕಾಸ್ಟ್: ಇಂದಿನ ವಿಶೇಷ: **ವೈದ್ಯಮಿತ್ರ,**
ಪ್ರತೀ ದಿನ: **ವಚನವಾಣಿ, ದಿನದ ಸೂಕ್ತಿ, ಪ್ರಜಾವಾಣಿ ವಾರ್ತೆ, ಸಂಪಾದಕೀಯ, ಪ್ರಚಲಿತ**
ಪ್ರಜಾವಾಣಿ ಕನ್ನಡ ಧ್ವನಿ

ನಾಳೆ

ಸಂವಾದ ಬೆಳಿಗ್ಗೆ 11ರಿಂದ 12

ರಾಜಕೀಯದಲ್ಲಿ ಅಪರಾಧೀಕರಣ:
ಸುಪ್ರೀಂ ಕೋರ್ಟ್ ತೀರ್ಪಿನ ಬಳಿಕ..
ಬಸವರಾಜ ರಾಯರಡ್ಡಿ, ಮಾಜಿ ಸಚಿವ, ಕಾಂಗ್ರೆಸ್.,
ತೇಜಸ್ವಿನಿ ಗೌಡ, ವಿಧಾನ ಪರಿಷತ್ ಸದಸ್ಯೆ, ಬಿಜೆಪಿ,.
ಪೃಥ್ವಿ ರೆಡ್ಡಿ, ಆಮ್ ಆದ್ಮಿ ಪಾರ್ಟಿ, ರಾಜ್ಯ ಸಂಚಾಲಕ,.
ಮುನೀರ್ ಕಾಟಿಪಳ್ಳ, ಡಿವೈಎಫ್ ಐ ರಾಜ್ಯ ಅಧ್ಯಕ್ಷ

‘ಆಗಸ್ಟ್ 14- ವಿಭಜನೆಯ ಕರಾಳ ನೆನಪಿನ ದಿನ’

ಒಂದನೇ ಪುಟದಿಂದ

ಅವರ ಹೋರಾಟ ಹಾಗೂ ತ್ಯಾಗದ ಸ್ಮರಣೆಗಾಗಿ ಆಚರಿಸುವ ಈ ದಿನವು, ಸಮಾಜ ವಿಭಜಿಸುವ, ಸಾಮರಸ್ಯವನ್ನು ಕದಡುವಂಥ ವಿಷವನ್ನು ತೆಗೆದುಹಾಕುವ ಅಗತ್ಯವನ್ನು ನೆನಪಿಸುತ್ತದೆ ಹಾಗೂ ನಮ್ಮ ಏಕತೆಯ ಭಾವಕ್ಕೆ, ಸಾಮಾಜಿಕ ಸಾಮರಸ್ಯ ಮತ್ತು ಮಾನವ ಸಬಲೀಕರಣಕ್ಕೆ ಬಲ ತುಂಬಲಿದೆ’ ಎಂದು ಹೇಳಿದ್ದಾರೆ.

ದೇಶ ವಿಭಜನೆಯಾದ ದಿವಸದಂದು (ಆ. 14) ಪಾಕಿಸ್ತಾನದಲ್ಲಿ ಸ್ವಾತಂತ್ರ್ಯ ದಿನ ಆಚರಿಸಲಾಗುತ್ತಿದೆ. ಭಾರತವು, ಇಂದು (ಆ.15) ಸ್ವಾತಂತ್ರ್ಯೋತ್ಸವ ಆಚರಿಸುತ್ತಿದೆ.

ಈ ದಿನವು, ‘ವಿಭಜನೆಯ ಸಂದರ್ಭದಲ್ಲಿ ಮೃತಪಟ್ಟವರಿಗೆ ಹಾಗೂ ತಮ್ಮ ಬೇರಿನಿಂದ ದೂರ ಆದವರಿಗೆ ಸಲ್ಲಿಸುವ ಗೌರವ’ ಎಂದು ವಾರ್ತಾ ಮತ್ತು ಪ್ರಸಾರ ಸಚಿವಾಲಯ ಹೇಳಿದೆ. ಜೊತೆಗೆ, ವಿಭಜನೆಯ ಸಂದರ್ಭದಲ್ಲಿ ಜನರು ಅನುಭವಿಸಿದ ನೋವು–ಸಂಕಟವನ್ನು ದೇಶದ ಈಗಿನ ಹಾಗೂ ಮುಂಬರುವ ಪೀಳಿಗೆಗೆ ನೆನಪು ಮಾಡುತ್ತಿರುತ್ತದೆ’ ಎಂದು ಅಭಿಪ್ರಾಯಪಟ್ಟಿದೆ.

‘ಯಾವುದೇ ದೇಶಕ್ಕೆ, ಸ್ವಾತಂತ್ರ್ಯದಿನವೆಂಬುದು ಸಂಭ್ರಮದ ಹಾಗೂ ಹೆಮ್ಮೆಯ ಸಂದರ್ಭ. ಆದರೆ, ನಾವು ಆ.15ರಂದು ಆಚರಿಸುತ್ತಿರುವ ಸ್ವಾತಂತ್ರ್ಯದ ಈ ಸಿಹಿಯೊಂದಿಗೆ ದೇಶ ವಿಭಜನೆಯ ಗಾಯವೂ ಇದೆ. ವೇದನೆಯ ಈ ಗಾಯ, ಲಕ್ಷಾಂತರ ಭಾರತೀಯರಲ್ಲಿ ಮಾಸದ ಕಲೆಗಳನ್ನು ಉಳಿಸಿದೆ’ ಎಂದು ಹೇಳಿದೆ.

‘ವಿಭಜನೆ ಹೊತ್ತಿಸಿದ ಹಿಂಸಾಚಾರದಲ್ಲಿ ಜೀವ ಕಳೆದುಕೊಂಡವರ ಮಕ್ಕಳಿಗೂ, ಸ್ವಾತಂತ್ರ್ಯದ ದಿನ ಆಚರಿಸುವ ಈ ಸಂದರ್ಭದಲ್ಲಿ ದೇಶವು ವಂದಿಸುತ್ತದೆ’ ಎಂದು ತಿಳಿಸಿದೆ.

ಪ್ರಧಾನಿ ನಿರ್ಧಾರವನ್ನು ಶ್ಲಾಘಿಸಿರುವ ಬಿಜೆಪಿ, ‘ಕಾಂಗ್ರೆಸ್’ ಮಹತ್ವಾಕಾಂಕ್ಷೆಯಿಂದ ನೋವುಂಡವರಿಗೆ ಸಲ್ಲಿಸುವ ಸೂಕ್ತ ಗೌರವ ಎಂದಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ, ಇಂಥದ್ದೊಂದು ಸಂವೇದನಾಶೀಲ ನಿರ್ಧಾರ ತೆಗೆದುಕೊಂಡಿದ್ದಕ್ಕಾಗಿ ಪ್ರಧಾನಿಯನ್ನು ಅಭಿನಂದಿಸುವುದಾಗಿ ಹೇಳಿದ್ದಾರೆ. ಕೇಂದ್ರ ಸಚಿವರಾದ ರಾಜನಾಥ್ ಸಿಂಗ್, ಧರ್ಮೇಂದ್ರ ಪ್ರಧಾನ್ ಕೂಡ ಪ್ರಧಾನಿ ನಿರ್ಧಾರಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ
ಪರಸ್ಪರ ಅಂತರ ಕಾಯ್ದುಕೊಳ್ಳಿ

ರಿಲಯನ್ಸ್: ಫುಲ್ ಪೈಸಾ ವಸೂಲ್ ಮಾರಾಟ ಮೇಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಿಲಯನ್ಸ್ ರಿಟೇಲ್ ಕಂಪನಿಯು ಶನಿವಾರದಿಂದ ಬುಧವಾರದವರೆಗೆ ‘ಫುಲ್ ಪೈಸಾ ವಸೂಲ್ ಸೇಲ್’ ಹೆಸರಿನಲ್ಲಿ ದಿನಸಿ ವಸ್ತುಗಳ ಮಾರಾಟ ಮೇಳ ಆಯೋಜಿಸಲಾಗಿದೆ.

ಕಂಪನಿಯ ಇ–ಮಾರುಕಟ್ಟೆಯಾದ ಜಿಯೊಮಾರ್ಟ್‌ನಲ್ಲಿ ಈ ಮೇಳ ನಡೆಯುತ್ತಿದೆ. ಅಲ್ಲದೆ, ಸುಪರ್ ಸ್ಮಾರ್ಟ್ ಸ್ಟೋರ್‌ಗಳಲ್ಲಿ, ರಿಲಯನ್ಸ್ ಫ್ರೆಶ್‌ನಲ್ಲಿ, ಸ್ಮಾರ್ಟ್ ಪಾಯಿಂಟ್‌ಗಳಲ್ಲಿ ಕೂಡ ಖರೀದಿಸಬಹುದಾಗಿದೆ. ಮೇಳದಲ್ಲಿ ಭಾರಿ ಉಳಿತಾಯ ಮಾಡುವ ಅವಕಾಶಗಳು ಗ್ರಾಹಕರಿಗೆ ಲಭ್ಯವಾಗಲಿವೆ ಎಂದು ಪ್ರಕಟಣೆಯಲ್ಲಿ ತಿಳಿಸಿವೆ.

ಬಿಸ್ಕತ್, ಚಾಕೊಲೇಟ್ ಮತ್ತು ಶಾಂಪು ಮೇಲೆ ಶೇ 50ರವರೆಗೆ ರಿಯಾಯಿತಿ, ತಂಪು ಪಾನೀಯಗಳು, ತೂತ್‌ಪೇಸ್ಟ್ ಮತ್ತು ಸೋಪ್ ಮೇಲೆ ಕನಿಷ್ಠ ಶೇ 33ರಷ್ಟು ರಿಯಾಯಿತಿ ಸಿಗಲಿದೆ. ಜಿಯೊಮಾರ್ಟ್‌ನ ಮೂಲಕ ಖರೀದಿ ಮಾಡುವವರಿಗೆ, ವಸ್ತುಗಳನ್ನು ಉಚಿತವಾಗಿ ಅವರ ಮನೆಗೆ ತಲುಪಿಸಲಾಗುತ್ತದೆ. ಕನಿಷ್ಠ ಮೊತ್ತದ ವಸ್ತುಗಳನ್ನು ಖರೀದಿಸಬೇಕು ಎಂದು ಷರತ್ತು ಇಲ್ಲ ಎಂದು ಹೇಳಿದೆ.

ಗುಂಡಣ್ಣ



25 ವರ್ಷಗಳ ಹಿಂದೆ — ಗುರುವಾರ, 15-8-1996

● **ಬಚಾವತ್ ತೀರ್ಪು ಅಂತಿಮ: ಪಟೇಲ್**

ಬೆಂಗಳೂರು, ಆಗಸ್ಟ್ 14– ‘ಕೃಷ್ಣಾ ನದಿ ನೀರಿನ ಹಂಚಿಕೆಗೆ ಬಚಾವತ್ ಆಯೋಗದ ತೀರ್ಪು ಅಂತಿಮ. ಇದನ್ನು ಯಾರೂ ಉಲ್ಲಂಘಿಸಲು ಸಾಧ್ಯವಿಲ್ಲ. ರಾಜ್ಯದ ಹಿತಕ್ಕೆ ಯಾರಿಂದಲೂ ಧಕ್ಕೆ ಬರುವುದಿಲ್ಲ. ತೀರ್ಪಿನ ಪ್ರಕಾರ ಬಂದಿರುವ ನೀರಿನಲ್ಲಿ ಒಂದೇ ಒಂದು ಹನಿಯನ್ನೂ ನಾವು ಬಿಡುವುದಿಲ್ಲ. ಹಾಗೆಯೇ ಬೇರೆಯವರ ಪಾಲಿನ ಹನಿ ನೀರೂ ನಮಗೆ ಬೇಕಿಲ್ಲ’ ಎಂದು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಪುನರುಚ್ಚರಿಸಿದರು.

ಪ್ರಧಾನಿ ಎಚ್.ಡಿ. ದೇವೇಗೌಡರು ಕಳೆದ ಹತ್ತರಂದು ದೆಹಲಿಯಲ್ಲಿ ಕರೆದಿದ್ದ ಕರ್ನಾಟಕ, ಆಂಧ್ರ ಹಾಗೂ ಮಹಾರಾಷ್ಟ್ರ ಮುಖ್ಯಮಂತ್ರಿಗಳ ಸಭೆಯಲ್ಲಿ ಭಾಗವಹಿಸಿದ ನಂತರ ಮಂಗಳವಾರ ಬೆಂಗಳೂರಿಗೆ ಹಿಂತಿರುಗಿದ ಮುಖ್ಯಮಂತ್ರಿಗಳು ವಿಧಾನಪರಿಷತ್ತಿನಲ್ಲಿ ಇಂದು ಅಡ್ಡಿ, ಆಕ್ಷೇಪ– ವಾಗ್ವಾದ, ಆರೋಪ–ಪ್ರತ್ಯಾರೋಪಗಳ ನಡುವೆಯೇ ವಿವರವಾದ ಹೇಳಿಕೆ ನೀಡಿ ‘ಆಲಮಟ್ಟಿ ಕೆಲಸ ನಿಲ್ಲುವುದಿಲ್ಲ. ಯಾರೂ ಕೆಲಸ ನಿಲ್ಲಿಸಲು ಆಗುವುದಿಲ್ಲ’ ಎಂದು ಘೋಷಿಸಿದರು.

50 ವರ್ಷಗಳ ಹಿಂದೆ — ಭಾನುವಾರ, 15-8-1971

● **ಬಾಂಗ್ಲಾದೇಶ: ವಿಶ್ವದ ಮನಃಸಾಕ್ಷಿಯ ಸತ್ವಪರೀಕ್ಷೆ**

ನವದೆಹಲಿ, ಆಗಸ್ಟ್ 14– ಬಾಂಗ್ಲಾದೇಶದ ಪರಿಸ್ಥಿತಿಯು ‘ಈ ರಾಷ್ಟ್ರ ಮತ್ತು ಖಂಡದ ಮಾತ್ರವಲ್ಲದೆ ವಿಶ್ವದ ಭವಿಷ್ಯದ ಮೇಲೆಯೇ ಪರಿಣಾಮ ಬೀರಬಲ್ಲ ಇಡೀ ಮಾನವ ಸಮುದಾಯದ ಮನಃಸಾಕ್ಷಿಯ ಸತ್ವ ಪರೀಕ್ಷೆ’ ವಿಷಯವೆಂದು ರಾಷ್ಟ್ರಪತಿ ವಿ.ವಿ.ಗಿರಿ ಅವರು ವರ್ಣಿಸಿದ್ದಾರೆ.

ಈ ಸಮಸ್ಯೆ ಕುರಿತು ವ್ಯವಹರಿಸುವಾಗ ‘ನಾವು ಸದ್ಯದ ಪ್ರೇರೇಪಣೆಗಳನ್ನು ದೂರದೃಷ್ಟಿಯೊಂದಿಗೆ ಮಿಳಿತಗೊಳಿಸಬೇಕು’ ಎಂದು ಹೇಳಿದರು.

24ನೇ ಸ್ವಾತಂತ್ರ್ಯೋತ್ಸವದ ಹಿಂದಿನ ದಿನವಾದ ಇಂದು ರಾಷ್ಟ್ರವನ್ನು ಉದ್ದೇಶಿಸಿ ಅವರು ಮಾತನಾಡಿದರು.

ಎಚ್ಚರಿಕೆ: ‘ಕಷ್ಟದ ಕಾಲ’ ಮುಂದಿದೆಯೆಂದು ಎಚ್ಚರಿಸಿದ ಗಿರಿ ಅವರು, ‘ನಯವಾದ ದಿನಗಳು ಕಳೆದು ಹೋದವು. ನಾವಿನ್ನು ವಿದೇಶೀ ನೆರವನ್ನು ಆಸರೆಯಾಗಿ ಹೊಂದಿರಲಾಗದು. ಕಷ್ಟಪಟ್ಟು ಕೆಲಸ ಮಾಡಿ ಸರಳ ಜೀವನ ನಡೆಸುವ ಸಂಕಲ್ಪ ಮಾಡಿ’ ಎಂದು ಜನತೆಗೆ ಸಲಹೆ ನೀಡಿದರು.

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ, ವಿಭಾಗ ಕಲಬುರಗಿ
ದೂರವಾಣಿ : 08472 –220196, www.midnglb@rediffmail.com.

ಐಎಫ್‌ಟಿ. ನಂ: ಕಾನಿಅ/ಸನೀಅಅವಿ/ಕ/ಯೋಶಾ–2/ಕೆ.ಡಬ್ಲ್ಯೂ–4/2021–22/2530 ದಿನಾಂಕ: 13–08–2021

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಡಬ್ಲ್ಯೂ–4)

1) ಕಾಮಗಾರಿ ವಿವರ : ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ ಕಾರ್ಯಾಲಯದಿಂದ ಅರ್ಹ ಗುತ್ತಿಗೆದಾರರಿಂದ 2019–20ನೇ ಸಾಲಿನ 4702 – ಅಣೆಕಟ್ಟು ಪಿಕಪ್ & ಬಂದರಾ ಯೋಜನೆ ಕಾಮಗಾರಿಗಳಿಗಾಗಿ ಇ–ಟೆಂಡರ ಮುಖಾಂತರ ಕರೆಯಲಾಗಿದೆ. 2) ಕಾಮಗಾರಿ ಅಂದಾಜು ಮೊತ್ತ : ರೂ. **131,06,810.33**, 3) ಗುತ್ತಿಗೆದಾರರ ಅರ್ಹತೆ ವಿವರ : 1ನೇ ದರ್ಜೆ ಹಾಗೂ ಮೇಲ್ಪಟ್ಟು, 4) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ : ಅರ್ಜಿಂಯು ಬೆಲೆ ಹಾಗೂ ಇ.ಎಂ.ಡಿ. ಇ–ಪ್ರೊಕ್ಯೂರಮೆಂಟನಂತೆ, 5) ಪ್ರೀ ಬಿಡ್ ಮಿಟಿಂಗ್ ದಿನಾಂಕ : 30–08–2021 ಬೆಳಿಗ್ಗೆ 11.00 ಗಂಟೆಯವರೆಗೆ, 6) ಟೆಂಡರ್ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಶನ್ ಕೊನೆಯ ದಿನಾಂಕ : 31–08–2021 ಬೆಳಿಗ್ಗೆ 11.00 ಗಂಟೆಯ ವರೆಗೆ, 7) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ: 01–09–2021 ಸಾಯಂಕಾಲ 16.00 ಗಂಟೆಯ ವರೆಗೆ, 8) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 02–09–2021 ಸಾಯಂಕಾಲ 17.00 ಗಂಟೆಯ ವರೆಗೆ, 9) ಆರ್ಥಿಕ ಬಿಡ್ ತೆರೆಯುವ ದಿನಾಂಕ : 04–09–2021 ಸಾಯಂಕಾಲ 11.00 ಗಂಟೆಯ ವರೆಗೆ, 10) ಹೆಚ್ಚಿನ ವಿವರಗಳಿಗೆ : ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕಲಬುರಗಿ. 11) ಅಂತರಜಾಲ ತಾಣದ ವಿಳಾಸ : www.e-proc.karnataka.gov.in

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/544/ಎಂ.ಸಿ.&ಎ/2021–22

ಕರ್ನಾಟಕ ಸರ್ಕಾರ
(ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಶಿವಮೊಗ್ಗ

No: EE/RWSS/Dvn/SMG/JE/JJM/E-Proc/2021-22/1168 Date : 13.08.2021

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಉಲ್ಲೇಖ : 1. ಈ ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ **EE/RWSS/Dvn/SMG/JE/JJM/E-Proc/2021-22/737,** ದಿನಾಂಕ : 08.07.2021

ಕರ್ನಾಟಕ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕ ಅಧಿನಿಯಮ 2000ರ ಪ್ರಕಾರ ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ, ಶಿವಮೊಗ್ಗ ವ್ಯಾಪ್ತಿಯಲ್ಲಿ ಭದ್ರಾವತಿ ತಾಲ್ಲೂಕು ಕಂಬದಾಳ್ ಹೊಸೂರು ಮತ್ತು ಇತರೆ 21 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯ ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ ಮೊದಲನೇ ವರ್ಷದ ಮೊತ್ತಕ್ಕೆ ಟೆಂಡರ್ ಆಹ್ವಾನಿಸಿ, 5 ವರ್ಷದವರೆಗೆ ಮುಂದುವರೆಸಲು ಉದ್ದೇಶಿಸಿ ಉಲ್ಲೇಖಿತ (1)ರಲ್ಲಿ ಕರೆಯಲಾದ ಟೆಂಡರ್ ಅನ್ನು ತಾಂತ್ರಿಕ ದೋಷದಿಂದ ರದ್ದುಪಡಿಸಿ ಮರು ಟೆಂಡರ್ ಕರೆಯಲಾಗಿದೆ.

ಇಂಟೆಂಟ್ ಸಂಖ್ಯೆ : **1) 34186/Call2**

ಟೆಂಡರ್ ವಿವರಗಳು, ಷರತ್ತುಗಳು ಮತ್ತು ತಿದ್ದುಪಡಿಗಳು ಅಥವಾ ಬದಲಾವಣೆಗಳು **https://www.eproc.karnataka.gov.in** ಜಾಲತಾಣದಲ್ಲಿ ಲಭ್ಯವಿದ್ದು, ಅರ್ಹ ಗುತ್ತಿಗೆದಾರರು/ಬಿಡ್ಡುದಾರರು ಅಗತ್ಯ ದಾಖಲೆಗಳನ್ನು ಮತ್ತು ತಮ್ಮ ಬಿಡ್ ಅನ್ನು ಸದರಿ ಜಾಲತಾಣದಲ್ಲಿಯೇ ಸಲ್ಲಿಸುವುದು.

ಟೆಂಡರ್‌ನ ಕೆಲವು ಷರತ್ತುಗಳು

1) ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : **21.08.2021ರ ಸಂಜೆ 5.30** 2) ದ್ವಿಲಕೋಟೆಯ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **23.08.2021**. 4) ದ್ವಿಲಕೋಟೆಯ ಆರ್ಥಿಕ ಬಿಡ್ ತೆರೆಯುವ ದಿನಾಂಕ : **25.08.2021**. 5) ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗಧಿಪಡಿಸಿದ ಕಾಲಾವಧಿ : **12 ತಿಂಗಳು (365 ದಿನಗಳು)**.

ವಾ.ಸಾ.ಸಂ.ಇ./ಶಿ/ನಂ.55–08
ಝೇಂಕಾರ್/2021–22

ಸಹಿ/– ಕಾರ್ಯಪಾಲಕ ಇಂಜಿನಿಯರರು, ಗ್ರಾ. ಕು. ನೀ & ನೈ ವಿಭಾಗ, ಶಿವಮೊಗ್ಗ

ಮುಂಬೈ ಧಾರಣೆ

ಶೇಂಗಾ

14-8-2021

ಜಾವಾ 70/80(ಹೊಸ)	10050-10100
ಜಾವಾ 80/90(ಹೊಸ)	9150-9200
ದಪ್ಪ ಮಧ್ಯಪ್ರದೇಶ(ಹೊಸ)	9650-9700
ದಪ್ಪ ಗುಜರಾತ್(ಹೊಸ)	9400-9450

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1530 (1530)
ಒಂದು ವಾರದ ಡೆಲಿವರಿ	1525 (1525)
ಸೋಯಾ ಕಚ್ಚಾ	1385 (1365)
ಪಾಮ್ ವಾರದ ಡೆಲಿವರಿ	1288 (1274)
ಸೂರ್ಯಕಾಂತಿ ಎಣ್ಣೆ ಕಚ್ಚಾ	1440 (1430)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
46,950 (46,600)
ಬೆಳ್ಳಿ ಕೆ.ಜಿ 63,500 (62,650)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದಿನ ಭವಿಷ್ಯ

ಭಾನುವಾರ ಆಗಸ್ಟ್ 15, 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಶ್ರಾವಣ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಆಶ್ಲೇಷ ಸಪ್ತಮಿ ಗಂ. 8-30 (ಬೆ. 9-38) ಭಾನುವಾರ ನಿತ್ಯ ನಕ್ಷತ್ರ ಸ್ವಾತಿ ಗಂ. 0-51 (ಬೆ. 6-35) ಉಪರಿ ವಿಶಾಖಾ ಗಂ. 55-56 (ರಾ. 4-57) ಶುಕ್ಲ ನಾಮ ಯೋಗ ಗಂ. 9-54 ವಣಿಜ ಕರಣ ಗಂ. 8-30 ವಿಷ ಗಂ. 13-54 ಅಮೃತ ಗಂ. 36-17: ರಾಹುಕಾಲ: ಮ. ಗಂ. 4-30 ರಿಂದ 6-00 ಗುಳಿಕ ಮ. ಕಾಲ ಗಂ 3-00ರಿಂದ 4-30 ಯಮಗಂಡ ಕಾಲ ಮ. ಗಂ 12-00 ರಿಂದ 1-30 : ಸೂರ್ಯೋದಯ: 6-11 ಸೂರ್ಯಾಸ್ತ: 6-38 ಅದೃಷ್ಟ ಸಂಖ್ಯೆ 5, 8

ಮೇಷ: ವೈಯಕ್ತಿಕ ಜೀವನದಲ್ಲಿ ಅಭಿವೃದ್ಧಿ. ಸಾಮಾಜಿಕ ಚಿಂತನೆಗಳಿಂದ ಗೌರವಾದರಗಳನ್ನು ಹೊಂದುವಿರಿ. ಕೃಷಿ ಕ್ಷೇತ್ರದಲ್ಲಿ ಧನ ಧಾನ್ಯಾಭಿವೃದ್ಧಿ. ವೃತ್ತಿಯಲ್ಲಿನ ಸಮಸ್ಯೆಗಳಿಗೆ ಪರಿಹಾರ. ಸಂಗಾತಿಯಿಂದ ಸಂತಸದ ಸುದ್ದಿ.

ವೃಷಭ: ಪರಸ್ಪರ ಭಿನ್ನಾಭಿಪ್ರಾಯಗಳು ಪರಿಹಾರವಾಗಿ ಸುಖದಾಂಪತ್ಯ ಜೀವನಕ್ಕೆ ನಾಂದಿ. ಶುಭ ಸಮಾರಂಭಗಳಲ್ಲಿ ಭಾಗಿಯಾಗುವ ಸಾಧ್ಯತೆ. ಕೆಲಸ ಕಾರ್ಯಗಳಲ್ಲಿ ಆತುರತೆ ಬೇಡ. ವ್ಯವಹಾರದಲ್ಲಿ ಆರ್ಥಿಕ ನಷ್ಟ ಸಾಧ್ಯತೆ.

ಮಿಥುನ: ಇಂದಿನ ಮಟ್ಟಿಗೆ ದೂರ ಪ್ರಯಾಣಗಳನ್ನು ಮುಂದೂಡುವುದು ಸೂಕ್ತ. ಸಂಗಾತಿಯ ಸಹಕಾರದಿಂದಾಗಿ ಸಾಂಸಾರಿಕ ನೆಮ್ಮದಿ. ವಿವಾಹಾಕಾಂಕ್ಷಿಗಳಿಗೆ ವಿವಾಹ ಸಂಬಂಧಗಳು ಕೂಡಿಬರಲಿವೆ. ಆಪ್ತರ ಆಗಮನ.

ಕರ್ಕಾಟಕ: ಆರ್ಥಿಕ ಸಂಪನ್ಮೂಲಗಳ ಅಭಿವೃದ್ಧಿಯಿಂದಾಗಿ ಸಂತೃಪ್ತಿ. ಕುಟುಂಬದ ಹಿರಿಯರ ಮನೋಭಿಲಾಷೆಗಳು ಈಡೇರುವವು. ಸಂಗಾತಿಯ ಆರೋಗ್ಯದಲ್ಲಿ ವ್ಯತ್ಯಯ ಸಾಧ್ಯತೆ. ಪ್ರಾಪ್ತವಯಸ್ಕರಿಗೆ ವಿವಾಹ ನಿಶ್ಚಯ ಸಾಧ್ಯತೆ.

ಸಿಂಹ: ಹೊಸ ಸಂಬಂಧಿಗಳಿಂದ ಹೊಸ ಯೋಜನೆಗಳಿಗೆ ಉತ್ಸಾಹ ಮೂಡುವುದು. ಶುಭಕಾರ್ಯಗಳ ಸಂಕಲ್ಪ ಈಡೇರಿ ಸಂತಸ. ಅವಸರದ ನಿರ್ಧಾರಗಳು ಸೂಕ್ತವಲ್ಲ. ಮಹಿಳೆಯರಿಗೆ ಗೌರವ ಪ್ರಾಪ್ತಿ.

ಕನ್ಯಾ: ವೈಯಕ್ತಿಕ ತೊಂದರೆಯಿಂದ ಮುಕ್ತರಾಗುವಿರಿ. ಆರ್ಥಿಕ ಸಮಸ್ಯೆಗಳು ಪರಿಹಾರವಾಗಿ ನೆಮ್ಮದಿ. ಸಾರ್ವಜನಿಕರೊಡನೆ ಬೆರೆಯುವ ಸಾಧ್ಯತೆ. ಸ್ಥಿರಾಸ್ತಿ ಖರೀದಿ ಸಾಧ್ಯತೆ. ಉದ್ಯೋಗದಲ್ಲಿ ಪ್ರಗತಿ. ಪತ್ನಿಯ ಆರೋಗ್ಯದಲ್ಲಿ ವ್ಯತ್ಯಯ.

ತುಲಾ: ಸಾಮಾಜಿಕ ಕಾರ್ಯಕರ್ತರಿಗೆ ಇರಿಸುಮುರಿಸು. ಸಮಾರಂಭಗಳಲ್ಲಿ ಭಾಗಿಯಾಗುವಿರಿ. ಮನೆಯಲ್ಲಿ ವಸ್ತ್ರಾಭರಣ ಖರೀದಿ ಸಾಧ್ಯತೆ. ಶತ್ರುಬಾಧೆ ಉಲ್ಬಣಗೊಳ್ಳುವ ಸಾಧ್ಯತೆ. ವಿದ್ಯಾಭ್ಯಾಸಕ್ಕಾಗಿ ದೂರಪ್ರಯಾಣ.

ವೃಶ್ಚಿಕ: ಅನಾವಶ್ಯಕ ಪ್ರಯಾಣದಿಂದಾಗಿ ಧನ ನಷ್ಟ. ಮನರಂಜನಾ ಕಾರ್ಯಕ್ರಮದಲ್ಲಿ ಭಾಗಿಯಾಗುವ ಸಾಧ್ಯತೆ. ಪ್ರಿಯ ವ್ಯಕ್ತಿಗಳ ಆಗಮನ. ಮಕ್ಕಳ ಶ್ರೇಯೋಭಿವೃದ್ಧಿಯಿಂದಾಗಿ ಮಾನಸಿಕ ತೃಪ್ತಿ. ಸಂತೋಷದ ವಾತಾವರಣ.

ಧನು: ಆರ್ಥಿಕ ವಿಷಯಗಳಲ್ಲಿ ಎಚ್ಚರಿಕೆ ಅಗತ್ಯ. ಉದ್ಯೋಗದಲ್ಲಿ ಪ್ರಗತಿ ಉಂಟಾಗುವುದು. ಕುಟುಂಬದಲ್ಲಿ ಸೌಹಾರ್ದತೆ ಮೂಡಿ ಸಂತಸ ಮೂಡುವುದು. ಸಹೋದರರಿಂದ ಸಹಕಾರ.

ಮಕರ: ಅನಾವಶ್ಯಕ ಮಾತುಗಳಿಂದಾಗಿ ನಿಷ್ಠೂರಕ್ಕೊಳಗಾಗುವ ಸಾಧ್ಯತೆ. ಉದ್ಯೋಗಾಕಾಂಕ್ಷಿಗಳಿಗೆ ಉತ್ತಮ ಅವಕಾಶಗಳು ದೊರಕಲಿದೆ. ಉದ್ಯೋಗದಲ್ಲಿರುವವರಿಗೆ ಪದೋನ್ನತಿ. ಇಷ್ಟದೇವತಾ ದರ್ಶನದಿಂದ ನೆಮ್ಮದಿ.

ಕುಂಭ: ಅನಾವಶ್ಯಕ ವ್ಯವಹಾರಗಳಲ್ಲಿ ತಲೆ ಹಾಕದಿರುವುದೇ ಉತ್ತಮ. ಸರ್ಕಾರಿ ನೌಕರಿಯಲ್ಲಿರುವವರಿಗೆ ಬಡ್ತಿ. ಹೊಸ ಯೋಜನೆಯನ್ನು ನಿರೂಪಿಸುವಲ್ಲಿ ಯಶಸ್ಸು. ಮಾತೃವರ್ಗದವರಿಂದ ಸಹಕಾರ. .

ಮೀನ: ವಿದ್ಯಾರ್ಥಿಗಳಿಗೆ ಓದಿನಲ್ಲಿ ವಿಶೇಷ ಪ್ರಗತಿ. ಮಾತಿನಿಂದ ಗೌರವ ಪ್ರಾಪ್ತವಾಗುವುದು. ಸರ್ಕಾರದಿಂದಾಗುವ ಕೆಲಸ ಕಾರ್ಯಗಳು ಸುಗಮವಾಗುವವು. ಜನ ಸಮೂಹದೊಂದಿಗೆ ಬೆರೆಯಲಿದ್ದೀರಿ. ಉದ್ಯೋಗ ನಿಮಿತ್ತ ಪ್ರಯಾಣ.

ನಿಮ್ಮ ಜನ್ಮದಿನ 15-ಆಗಸ್ಟ್: ಇಂದು ಅತ್ಯಂತ ಶುಭದಾಯಕ. ವ್ಯವಹಾರದಲ್ಲಿ ಏರುಪೇರುಗಳ ನಡುವೆಯೇ ಪ್ರಗತಿಯ ಆಶಾಕಿರಣ ಮೂಡಿಬರಲಿದೆ. ಉದ್ಯೋಗಸ್ಥರಿಗೆ ಸಹೋದ್ಯೋಗಿಗಳಿಂದ ಉತ್ತಮ ಸಹಕಾರದೊಂದಿಗೆ ಬಡ್ತಿ ದೊರಕುವ ಸಾಧ್ಯತೆ. ಆರೋಗ್ಯ ಭಾಗ್ಯ ನಿಮ್ಮದಾಗಲಿದೆ. ಸಾಮರಸ್ಯದ ದಾಂಪತ್ಯ ಜೀವನದಿಂದಾಗಿ ಸಂತೋಷ.

ಮರ್ಫಿ ಟೌನ್ ಫೈನಲ್‌ಗೆ

ಬೆಂಗಳೂರು: ಮರ್ಫಿ ಟೌನ್ ತಂಡವು ರಾಜ್ಯ ಫುಟ್‌ಬಾಲ್ ಸಂಸ್ಥೆ ಮತ್ತು ಬೆಂಗಳೂರು ಜಿಲ್ಲಾ ಫುಟ್‌ಬಾಲ್ ಸಂಸ್ಥೆಯ ಸ್ಥಳೀಯ ಅಂತರ ತಂಡಗಳ ಟೂರ್ನಿಯಲ್ಲಿ ಹಿರಿಯರ ಮತ್ತು ಯೂತ್ ವಿಭಾಗಗಳ ಫೈನಲ್ ಪ್ರವೇಶಿಸಿತು.

ಹಿರಿಯರ ವಿಭಾಗದ ಸೆಮಿಫೈನಲ್‌ನಲ್ಲಿ ಜೀವನಹಳ್ಳಿ ತಂಡವನ್ನು 1–0ಯಿಂದ ಮರ್ಫಿಟೌನ್ ಮಣಿಸಿತು. 40 + 2ನೇ ನಿಮಿಷದಲ್ಲಿ ಸತೀಶ್ ಗೋಲು ಗಳಿಸಿದರು. ಮತ್ತೊಂದು ಪಂದ್ಯದಲ್ಲಿ ಶಾಂತಿನಗರ ತಂಡ 2–0ಯಿಂದ ಪೆರಿಯಾರ್ ನಗರ ತಂಡವನ್ನು ಸೋಲಿಸಿತು. 16 ಮತ್ತು 40 + 1ನೇ ನಿಮಿಷಗಳಲ್ಲಿ ಲಾರೆನ್ಸ್ ಚೆಂಡನ್ನು ಗುರಿ ಮುಟ್ಟಿಸಿದರು.

ಯೂತ್ ವಿಭಾಗದ ಫೈನಲ್ ಪಂದ್ಯ ಭಾನುವಾರ ಬೆಳಿಗ್ಗೆ ಎಂಟು ಗಂಟೆಗೆ ನಡೆಯಲಿದ್ದು ಮರ್ಫಿ ಟೌನ್ ಮತ್ತು ಗೌತಮಪುರ ತಂಡಗಳು ಸೆಣಸಲಿವೆ. ಒಂಬತ್ತು ಗಂಟೆಗೆ ಹಿರಿಯರ ಹಣಾಹಣಿ ನಡೆಯಲಿದೆ. 11 ಗಂಟೆಗೆ ನಡೆಯಲಿರುವ 'ಸಿ' ಡಿವಿಷನ್ ಟೂರ್ನಿಯ ಫೈನಲ್‌ನಲ್ಲಿ ಬೆಂಗಳೂರು ಪ್ಯಾಂಥರ್ಸ್ ಎಫ್‌ಸಿ ಮತ್ತು ರೊನಾಲ್ಡೊ ಎಫ್‌ಸಿ ಮುಖಾಮುಖಿಯಾಗಲಿವೆ.

10 ಗಂಟೆಗೆ ಸ್ವಾತಂತ್ರ್ಯೋತ್ಸವದ ಧ್ವಜಾರೋಹಣ ನಡೆಯಲಿದೆ ಎಂದು ಕೆಎಸ್‌ಎಫ್‌ಎ–ಬಿಡಿಎಫ್‌ಎ ತಿಳಿಸಿದೆ.

ವೆಸ್ಟ್ ಇಂಡೀಸ್‌ಗೆ ಇನಿಂಗ್ಸ್ ಮುನ್ನಡೆ

ಕಿಂಗ್ಸ್‌ಟನ್: ನಾಯಕ ಕ್ರೇಗ್ ಬ್ರಾಥ್‌ವೇಟ್ ಹಾಕಿದ ಅಡಿಪಾಯದ ಮೇಲೆ ವೆಸ್ಟ್ ಇಂಡೀಸ್ ತಂಡವು ಪಾಕಿಸ್ತಾನದ ವಿರುದ್ಧದ ಟೆಸ್ಟ್ ಪಂದ್ಯದಲ್ಲಿ ಮೊದಲ ಇನಿಂಗ್ಸ್ ಮುನ್ನಡೆ ಗಳಿಸಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಪಾಕಿಸ್ತಾನ: 70.3 ಓವರ್‌ಗಳಲ್ಲಿ 217, **ವೆಸ್ಟ್ ಇಂಡೀಸ್:** 89.4 ಓವರ್‌ಗಳಲ್ಲಿ 253 (ಕ್ರೇಗ್ ಬ್ರಾಥ್‌ವೇಟ್ 97, ಜೇಸನ್ ಹೋಲ್ಡರ್ 58; ಮೊಹಮ್ಮದ್ ಅಬ್ಬಾಸ್ 42ಕ್ಕೆ3, ಶಾಹೀನ್ ಆಫ್ರಿದಿ 59ಕ್ಕೆ2).

ನಾಲ್ಕನೇ ವಿಕೆಟ್‌ಗೆ 121 ರನ್‌ಗಳ ಜೊತೆಯಾಟ; ಮೊಹಮ್ಮದ್ ಸಿರಾಜ್‌ಗೆ ನಾಲ್ಕು ವಿಕೆಟ್

ಜೋ ರೂಟ್ ಶತಕದ ಸೊಬಗು

ಲಂಡನ್ (ಪಿಟಿಐ): ಮೊಹಮ್ಮದ್ ಸಿರಾಜ್ ಮತ್ತು ಇಶಾಂತ್ ಶರ್ಮಾ ಅವರ ಪರಿಣಾಮಕಾರಿ ದಾಳಿಯನ್ನು ಎದುರಿಸಿ ನಿಂತ ಇಂಗ್ಲೆಂಡ್ ತಂಡದ ನಾಯಕ ಜೋ ರೂಟ್ ಸುಂದರ ಶತಕ ದಾಖಲಿಸಿದರು.

ಲಾರ್ಡ್ಸ್ ಅಂಗಳದಲ್ಲಿ ಶನಿವಾರ ರೂಟ್ (ಔಟಾಗದೆ 180; 321ಎ, 18 ಬೌಂ) ದಿಟ್ಟ ಹೋರಾಟದ ಫಲವಾಗಿ ಆತಿಥೇಯ ತಂಡವು 128 ಓವರ್‌ಗಳಲ್ಲಿ 391 ರನ್ ಗಳಿಸಿ 27 ರನ್‌ಗಳ ಮೊದಲ ಇನಿಂಗ್ಸ್ ಮುನ್ನಡೆ ಗಳಿಸಿತು. ಕೆ.ಎಲ್. ರಾಹುಲ್ ಶತಕದ ಬಲದಿಂದ ಭಾರತ ತಂಡವು ಮೊದಲ ಇನಿಂಗ್ಸ್‌ನಲ್ಲಿ 364 ರನ್ ಗಳಿಸಿತ್ತು.

ಶುಕ್ರವಾರ ಮೂರು ವಿಕೆಟ್‌ಗಳನ್ನು ಕಳೆದುಕೊಂಡಿದ್ದ ಇಂಗ್ಲೆಂಡ್ ತಂಡಕ್ಕೆ ಮೂರನೇ ದಿನದಾಟದ ಮೊದಲೆರಡು ಅವಧಿಗಳಲ್ಲಿ ರೂಟ್ ಮತ್ತು ಜಾನಿ ಬೆಸ್ಟೊ ಜೊತೆಯಾಟದಿಂದ ರನ್‌ಗಳು ಹರಿದುಬಂದವು.

ಬೌಲರ್‌ಗಳನ್ನು ಇಬ್ಬರೂ ಬ್ಯಾಟ್ಸ್‌ಮನ್‌ಗಳು ಸರಾಗವಾಗಿ ಎದುರಿಸಿದರು. ಶಾರ್ಟ್ ಎಸೆತಗಳನ್ನು ಪ್ರಯೋಗಿಸಿದ ಸಿರಾಜ್ ಪಶ್ಚಾತ್ತಾಪ ಪಡಬೇಕಾಯಿತು.

ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 121 ರನ್‌ಗಳನ್ನು ಸೇರಿಸಿದರು. ಇವರಿಬ್ಬರ ಜೊತೆಯಾಟಕ್ಕೆ ಸಿರಾಜ್ ಅವರೇ ಕಡಿವಾಣ ಹಾಕಿದರು. 79ನೇ ಓವರ್‌ನಲ್ಲಿ ಜಾನಿ ಬೆಸ್ಟೊ (57; 107ಎ) ವಿಕೆಟ್ ಪಡೆದ ಸಿರಾಜ್ ಸಂಭ್ರಮಿಸಿದರು.

ಆದರೆ, ರೂಟ್ ಆಟಕ್ಕೆ ತಡೆಯೊಡ್ಡಲು ಸಾಧ್ಯವಾಗಲಿಲ್ಲ. ಅವರು 200 ಎಸೆತಗಳಲ್ಲಿ ಶತಕ ಪೂರೈಸಿದರು. ಅದರಲ್ಲಿ ಒಂಬತ್ತು ಬೌಂಡರಿಗಳು ಇದ್ದವು.

ಮೊದಲ ಪಂದ್ಯದಲ್ಲಿಯೂ ಅವರು ಶತಕ ಬಾರಿಸಿದ್ದರು. 30 ವರ್ಷದ ರೂಟ್ ಅವರಿಗೆ ಇದು 23ನೇ ಶತಕವಾಗಿದೆ. ಶನಿವಾರ ಅವರು ಒಂಬತ್ತು ಸಾವಿರ ರನ್ ಪೂರೈಸಿದರು. ಟೆಸ್ಟ್ ಕ್ರಿಕೆಟ್‌ನಲ್ಲಿ ಈ ಸಾಧನೆ ಮಾಡಿದ ಎರಡನೇ ಅತಿ ಕಿರಿಯ ವಯಸ್ಸಿನ ಬ್ಯಾಟ್ಸ್‌ಮನ್ ಎನಿಸಿಕೊಂಡರು.

ಬೆಸ್ಟೊ ಔಟಾದ ನಂತರ ಕ್ರೀಸ್‌ಗೆ ಬಂದ ಜೊಸ್ ಬಟ್ಲರ್ (23 ರನ್) ಮತ್ತು ಮೋಯಿನ್ ಅಲಿ (27 ರನ್) ಅವರು ಹೆಚ್ಚು ಹೊತ್ತು ಆಡಲು ಇಶಾಂತ್ ಶರ್ಮಾ ಅವಕಾಶ ನೀಡಲಿಲ್ಲ. ಸ್ಯಾಮ್ ಕರನ್‌ಗೂ ಇಶಾಂತ್ ತಡೆಯೊಡ್ಡಿದರು. ಒಲಿ ರಾಬಿನ್ಸನ್ ವಿಕೆಟ್ ಗಳಿಸಿದ ಸಿರಾಜ್ ಸಂಭ್ರಮಿಸಿದರು. ಕೊನೆಯ ನಾಲ್ವರು ಎರಡಂಕಿ ಮೊತ್ತ ದಾಟಲಾಗದೆ ಔಟಾಗಿ ಮರಳಿದರು.

ಸ್ಕೋರ್ ಕಾರ್ಡ್

ಭಾರತ (ಮೊದಲ ಇನಿಂಗ್ಸ್) 364
ಇಂಗ್ಲೆಂಡ್ (ಮೊದಲ ಇನಿಂಗ್ಸ್) 128 ಓವರ್‌ಗಳಲ್ಲಿ 391
(ಶುಕ್ರವಾರ 3 ವಿಕೆಟ್‌ಗಳಿಗೆ 119)
ರೂಟ್ ಔಟಾಗದೆ 180 (321ಎ, 4X18), ಬೇಸ್ಟೊ ಸಿ ಕೊಹ್ಲಿ ಸಿರಾಜ್ 57(107 ಎ, 4X7), ಬಟ್ಲರ್ ಬಿ ಇಶಾಂತ್ 23 (42ಎ, 4X4), ಮೊಯಿನ್ ಸಿ ಕೊಹ್ಲಿ ಬಿ ಇಶಾಂತ್ 27 (72ಎ, 4X4), ಸ್ಯಾಮ್ ಸಿ ರೋಹಿತ್ ಬಿ ಇಶಾಂತ್ 0 (1ಎ), ರಾಬಿನ್ಸನ್ ಎಲ್‌ಬಿಡಬ್ಲ್ಯು ಸಿರಾಜ್ 6 (22ಎ), ವುಡ್ ರನೌಟ್ (ಜಡೇಜ/ಪಂತ್) 5 (23ಎ), ಆ್ಯಂಡರ್ಸನ್ ಬಿ ಶಮಿ 0 (16 ಎ)
ಇತರೆ (ಬೈ 5, ಲೆಗ್‌ಬೈ 6, ನೋಬಾಲ್ 17, ವೈಡ್ 5) 33
ವಿಕೆಟ್ ಪತನ: 4–229 (ಜಾನಿ ಬೆಸ್ಟೊ, 78.4), 5–283, ಜೋಸ್ ಬಟ್ಲರ್, 90.6), 6–341 (ಮೊಯಿನ್ ಅಲಿ, 110.5), 7–341 (ಸ್ಯಾಮ್ ಕರನ್, 110.6), 8–357 (ಒಲಿ ರಾಬಿನ್ಸನ್, 116.6), 9–371 (ಮಾರ್ಕ್ ವುಡ್, 124.3), 10–391 (ಜೇಮ್ಸ್ ಆ್ಯಂಡರ್ಸನ್, 127.6)
ಬೌಲಿಂಗ್: ಇಶಾಂತ್ ಶರ್ಮಾ 24–4–69–3, ಜಸ್‌ಪ್ರೀತ್ ಬೂಮ್ರಾ 26–6–79–0, ಮೊಹಮ್ಮದ್ ಶಮಿ 26–3–95–2, ಮೊಹಮ್ಮದ್ ಸಿರಾಜ್ 30–7–94–4, ರವೀಂದ್ರ ಜಡೇಜ 22–1–43–0.

ರಾಹುಲ್‌ಗೆ ಬಾಟಲಿ ಮುಚ್ಚಳ ಎಸೆದ ಕಿಡಿಗೇಡಿಗಳು!

ಲಾರ್ಡ್ಸ್ ಮೈದಾನದಲ್ಲಿ ಬೌಂಡರಿ ಲೈನ್ ಬಳಿ ಫೀಲ್ಡಿಂಗ್ ಮಾಡುತ್ತಿದ್ದ ಭಾರತದ ಆಟಗಾರ ಕೆ.ಎಲ್ ರಾಹುಲ್ ಅವರ ಮೇಲೆ ಶಾಂಪೇನ್ ಬಾಟಲಿಯ ಮುಚ್ಚಳವನ್ನು (ಬಾಟಲ್ ಕಾರ್ಕ್) ಕಿಡಿಗೇಡಿಗಳು ಎಸೆದಿದ್ದಾರೆ.

ಇಂಗ್ಲೆಂಡ್ ಇನಿಂಗ್ಸ್‌ನ 69ನೇ ಓವರ್‌ನ ವೇಳೆ, ಮೊಹಮದ್ ಶಮಿ ಅವರು ಬೌಲಿಂಗ್ ಮಾಡುತ್ತಿದ್ದಾಗ, ಪ್ರೇಕ್ಷಕರ ಗ್ಯಾಲರಿಯಿಂದ ರಾಹುಲ್ ಮೇಲೆ ಶಾಂಪೇನ್ ಬಾಟಲಿ ಮುಚ್ಚಳ ಎಸೆಯಲಾಗಿದೆ.


ಕೆ.ಎಲ್ ರಾಹುಲ್

ಘಟನೆಯಿಂದ ವಿರಾಟ್ ಕೊಹ್ಲಿ ಬೇಸರಗೊಂಡರು. ಘಟನೆ ಹಿನ್ನೆಲೆಯಲ್ಲಿ ಭಾರತದ ಆಟಗಾರರು ಅಂಪೈರ್‌ಗಳಾದ ಮೈಕೆಲ್ ಗೌ ಮತ್ತು ರಿಚರ್ಡ್ ಇಲ್ಲಿಂಗ್‌ವರ್ತ್ ಅವರೊಂದಿಗೆ ಮಾತುಕತೆ ನಡೆಸಿದರು. ಹೀಗಾಗಿ ಪಂದ್ಯ ಕೆಲಕಾಲ ಸ್ಥಗಿತಗೊಂಡಿತ್ತು.

ಜೋ ರೂಟ್ ಅವರ ಶತಕದ ಸಂಭ್ರಮ –ಎಎಫ್‌ಪಿ ಚಿತ್ರ

ಸುದ್ದಿ 2 ನಿಮಿಷ

ನಾಲ್ಕರ ಘಟ್ಟಕ್ಕೆ ಮೆಡ್ವೆಡೆವ್

ಟೊರಾಂಟೊ (ಎಪಿ): ಅಗ್ರಶ್ರೇಯಾಂಕದ ಆಟಗಾರ ಡೇನಿಯಲ್ ಮೆಡ್ವೆಡೆವ್ ಅವರು ಹುಬರ್ಟ್ ಹರ್ಕಾಜ್ ಸವಾಲು ಮೀರಿ ನ್ಯಾಷನಲ್ ಬ್ಯಾಂಕ್ ಓಪನ್ ಟೆನಿಸ್ ಟೂರ್ನಿಯ ಸೆಮಿಫೈನಲ್‌ಗೆ ಲಗ್ಗೆಯಿಟ್ಟಿದ್ದಾರೆ. ಶನಿವಾರ ನಡೆದ ಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ ಅವರು 2-6, 7-6 (6), 7-6 (5) ಎಲ್ಲಿ ಜಯ ಸಾಧಿಸಿದರು.

ರಷ್ಯಾದ 25 ವರ್ಷದ ಮೆಡ್ವೆಡೆವ್, ಈ ವರ್ಷ ಮಲ್ಲೋರ್ಕಾ ಮತ್ತು ಮಾರ್ಸೆಲಿ ಟೂರ್ನಿಗಳಲ್ಲಿ ಪ್ರಶಸ್ತಿ ಜಯಿಸಿದ್ದಾರೆ. ವಿಂಬಲ್ಡನ್ ಟೂರ್ನಿಯ ನಾಲ್ಕನೇ ಸುತ್ತಿನಲ್ಲಿ ಹುಬರ್ಟ್ ಎದುರು ಎಡವಿದ್ದರು. ಈ ಪಂದ್ಯದಲ್ಲಿ ಮೆಡ್ವೆಡೆವ್ 23 ಏಸ್‌ಗಳನ್ನು ಸಿಡಿಸುವ ಮೂಲಕ ಎದುರಾಳಿಯನ್ನು ತಬ್ಬಿಬ್ಬುಗೊಳಿಸಿದರು. ಮೂರನೇ ಶ್ರೇಯಾಂಕದ ಸ್ಟೆಫಾನೊಸ್ ಸಿಟ್ಸಿಪಾಸ್ ಅವರು ಮತ್ತೊಂದು ಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ 6-1, 6-4ರಿಂದ ನಾರ್ವೆಯ ಕಾಸ್ಪರ್ ರುಡ್ ಅವರನ್ನು ಮಣಿಸಿದರು. ಎಂಟರಘಟ್ಟದ ಮತ್ತೊಂದು ಪಂದ್ಯದಲ್ಲಿ ಅಮೆರಿಕದ ಜಾನ್ ಇಸ್ನೆರ್ 7-6 (5), 6-4ರಿಂದ ಫ್ರಾನ್ಸ್‌ನ ಗಾಲ್ ಮೊನ್‌ಫಿಲ್ಸ್ ಅವರನ್ನು ಸೋಲಿಸಿದರು.

ಸೆಮಿಗೆ ಸಬಲೆಂಕಾ: ಮಾಂಟ್ರಿಯಲ್ (ಎಪಿ): ತಮ್ಮದೇ ದೇಶದ ವಿಕ್ಟೋರಿಯಾ ಅಜರೆಂಕಾ ಅವರನ್ನು ಮಣಿಸಿದ ಬೆಲಾರಸ್‌ನ ಅರಿನಾ ಸಬಲೆಂಕಾ ಅವರು ಮಾಂಟ್ರಿಯಲ್‌ನಲ್ಲಿ ನಡೆಯುತ್ತಿರುವ ನ್ಯಾಷನಲ್ ಬ್ಯಾಂಕ್ ಓಪನ್ ಟೂರ್ನಿಯ ಸೆಮಿಫೈನಲ್ ತಲುಪಿದರು. ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಅಗ್ರಶ್ರೇಯಾಂಕದ ಸಬಲೆಂಕಾ 6-2, 6-4ರಿಂದ ಎದುರಾಳಿಯನ್ನು ಸೋಲಿಸಿದರು. ಸೆಮಿಫೈನಲ್‌ನಲ್ಲಿ ಸಬಲೆಂಕಾ ಅವರು ಜೆಕ್ ಗಣರಾಜ್ಯದ ಕರೋಲಿನಾ ಪ್ಲಿಸ್ಕೊವಾ ಅವರನ್ನು ಎದುರಿಸುವರು. ಮತ್ತೊಂದು ಸೆಣಸಾಟದಲ್ಲಿ ಪ್ಲಿಸ್ಕೊವಾ 6-4, 6-0ರಿಂದ ಸ್ಪೇನ್‌ನ ಸಾರಾ ಸಾರಿಬಸ್ ಟೊರ್ಮೊ ಎದುರು ಗೆದ್ದರು.

ಸ್ನೇಹಾಶಿಷ್ ಗಂಗೂಲಿಗೆ ಅನಾರೋಗ್ಯ

ಕೋಲ್ಕತ್ತ (ಪಿಟಿಐ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಅಧ್ಯಕ್ಷ ಸೌರವ್ ಗಂಗೂಲಿ ಅವರ ಅಣ್ಣ, ಬಂಗಾಳ ಕ್ರಿಕೆಟ್ ಸಂಸ್ಥೆಯ ಕಾರ್ಯದರ್ಶಿ ಸ್ನೇಹಾಶಿಷ್ ಗಂಗೂಲಿ ಅವರು ಅನಾರೋಗ್ಯದ ಕಾರಣ ಶನಿವಾರ ಆಸ್ಪತ್ರೆಗೆ ದಾಖಲಾಗಿದ್ದಾರೆ.

'ಸ್ನೇಹಾಶಿಷ್ ಅವರಲ್ಲಿ ಜಠರದ ಸೋಂಕು ಕಾಣಿಸಿಕೊಂಡಿದೆ. ಅವರ ಕೋವಿಡ್ ವರದಿ ನೆಗೆಟಿವ್ ಬಂದಿದೆ' ಎಂದು ಆಸ್ಪತ್ರೆಯ ಮೂಲಗಳು ಹೇಳಿವೆ.

53 ವರ್ಷದ ಸ್ನೇಹಶಿಷ್ ಈ ವರ್ಷದ ಆರಂಭದಲ್ಲಿ ಆ್ಯಂಜಿಯೊಪ್ಲಾಸ್ಟಿ ಮಾಡಿಸಿಕೊಂಡಿದ್ದರು. ಶುಕ್ರವಾರ ಅವರಲ್ಲಿ ವಾಂತಿ ಸಮಸ್ಯೆ ಕಾಣಿಸಿಕೊಂಡಿತು. ಮುಂಜಾಗ್ರತಾ ಕ್ರಮವಾಗಿ ಶನಿವಾರ ಮುಂಜಾನೆ ಮೂರು ಗಂಟೆಗೆ ಆಸ್ಪತ್ರೆಗೆ ದಾಖಲಿಸಲಾಯಿತು ಎಂದು ಸ್ನೇಹಶಿಷ್ ಅವರ ಆಪ್ತ ಮೂಲಗಳು ಹೇಳಿವೆ.

ಸೌರವ್ ಅವರು ಸದ್ಯ ಪತ್ನಿ ಡೋನಾ ಜೊತೆ ಲಂಡನ್‌ನಲ್ಲಿದ್ದು ಅಣ್ಣನ ಆರೋಗ್ಯದ ಪರಿಸ್ಥಿತಿಯ ಬಗ್ಗೆ ಗಮನವಹಿಸಿದ್ದಾರೆ. ಬಂಗಾಳದ ಮಾಜಿ ಬ್ಯಾಟ್ಸ್‌ಮನ್ ಆಗಿರುವ ಸ್ನೇಹಶಿಷ್, 59 ಪ್ರಥಮದರ್ಜೆ ಪಂದ್ಯಗಳನ್ನು ಆಡಿದ್ದು, 2534 ರನ್ ಗಳಿಸಿದ್ದಾರೆ. 18 ಲಿಸ್ಟ್ ಎ ಪಂದ್ಯಗಳಲ್ಲಿ 275 ರನ್ ಕಲೆಹಾಕಿದ್ದಾರೆ.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡ ಭಾರತದ ಕ್ರೀಡಾಪಟುಗಳಿಗಾಗಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು ಸ್ವಾತಂತ್ರ್ಯೋತ್ಸವದ ಮುನ್ನಾ ದಿನವಾದ ಶನಿವಾರ ಏರ್ಪಡಿಸಿದ್ದ ಚಹಾ ಕೂಟದಲ್ಲಿ ಹಾಕಿ ತಂಡದ ಆಟಗಾರರನ್ನು ನಾಯಕ ಮನ್‌ಪ್ರೀತ್ ಸಿಂಗ್ ಪರಿಚಯಿಸಿದರು –ಪಿಟಿಐ ಚಿತ್ರ

ಬಿಎಫ್‌ಸಿಗೆ ಈಗಲ್ಸ್ ಸವಾಲು

ಮಾಲೆ, ಮಾಲ್ಡೀವ್ಸ್ (ಪಿಟಿಐ): ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ತಂಡವು ಎಎಫ್‌ಸಿ ಕಪ್ ಪ್ಲೇ ಆಫ್ ಹಣಾಹಣಿಯಲ್ಲಿ ಭಾನುವಾರ ಕ್ಲಬ್ ಈಗಲ್ಸ್ ವಿರುದ್ಧ ಸೆಣಸಲಿದೆ.

ಪಂದ್ಯದಲ್ಲಿ ಜಯ ಸಾಧಿಸಿದ ತಂಡವು ಎಎಫ್‌ಸಿ ಕಪ್ ಟೂರ್ನಿಯ 'ಡಿ' ಗುಂಪಿಗೆ ಮುನ್ನಡೆಯಲಿದೆ.

ಏಪ್ರಿಲ್‌ನಲ್ಲಿ ನಡೆದ ಆರಂಭದ ಸುತ್ತಿನಲ್ಲಿ ಸುನಿಲ್ ಚೆಟ್ರಿ ನಾಯಕತ್ವದ ಬಿಎಫ್‌ಸಿ 5–0ಯಿಂದ ನೇಪಾಳದ ತ್ರಿಭುವನ್ ಆರ್ಮಿ ತಂಡವನ್ನು ಪರಾಭವಗೊಳಿಸಿತ್ತು. ಕ್ಲಬ್ ಈಗಲ್ಸ್ 2–0ಯಿಂದ ಥಿಂಪು ಎಫ್‌ಸಿಗೆ ಸೋಲುಣಿಸಿತ್ತು.

ರೋಹಿತ್ ಕುಮಾರ್, ಹರ್ಮನ್‌ಪ್ರೀತ್ ಸಿಂಗ್, ಜಯೇಶ್ ರಾಣೆ, ಡ್ಯಾನಿಶ್ ಫಾರೂಕ್ ಮತ್ತು ಸಾರ್ಥಕ್ ಗೋಲುಯ್ ಮೇಲೆ ಬಿಎಫ್‌ಸಿಯ ಮುಖ್ಯ ಕೋಚ್ ಮಾರ್ಕೊ ಪೆಜ್ಜೊಲಿ ಭರವಸೆ ಇರಿಸಿದ್ದಾರೆ.

ಈ ಬಾರಿಯ ಐಎಸ್‌ಎಲ್ ಟೂರ್ನಿಯಲ್ಲಿ ಚೆಟ್ರಿ ಬಳಗ ಏಳನೇ ಸ್ಥಾನ ಗಳಿಸಿತ್ತು. ಆದರೆ ಎಎಫ್‌ಸಿ ಕಪ್ ಟೂರ್ನಿಯಲ್ಲಿ ತಂಡದ ದಾಖಲೆ ಉತ್ತಮವಾಗಿದೆ. 2016ರಲ್ಲಿ ರನ್ನರ್ ಅಪ್ ಆಗಿದ್ದ ಬಿಎಫ್‌ಸಿ, 2017ರಲ್ಲಿ ಇಂಟರ್‌ಜೋನಲ್ ಫೈನಲ್, ಮರು ವರ್ಷ ಸೆಮಿಫೈನಲ್ ತಲುಪಿತ್ತು.

ಈಗಲ್ಸ್ ತಂಡವು ಈ ಪಂದ್ಯದಲ್ಲಿ ಪ್ರಮುಖ ಆಟಗಾರ ಅಹಮದ್ ರಿಜ್ವಾನ್ ಅನುಪಸ್ಥಿತಿಯಲ್ಲಿ ಕಣಕ್ಕಿಳಿಯುತ್ತಿದೆ ಎಂದು ಕೋಚ್ ಮೊಹಮ್ಮದ್ ಶಾಜ್ಲಿ ತಿಳಿಸಿದ್ದಾರೆ.

ಅಲಿ ಆಶ್ಫಾಕ್, ಅಕ್ರಂ ಅಬ್ದುಲ್ ಘಣಿ, ಅಲಿ ಫಾಸಿರ್, ಮೊಹಮ್ಮದ್ ಆರಿಫ್, ಇಸ್ಮಾಯಿಲ್ ಈಸಾ, ಅಹಮದ್ ಹಸನ್ ಅವರ ಅನುಭವದ ಬಲ ತಂಡಕ್ಕಿದೆ. ಹೀಗಾಗಿ ಉಭಯ ತಂಡಗಳ ನಡುವೆ ಜಿದ್ದಾಜಿದ್ದಿ ನಿರೀಕ್ಷಿಸಬಹುದು.

ಪಂದ್ಯ ಆರಂಭ: ಬೆಳಿಗ್ಗೆ 8.30
ಸ್ಥಳ: ಮಾಲ್ಡೀವ್ಸ್ ರಾಷ್ಟ್ರೀಯ ಫುಟ್‌ಬಾಲ್ ಕ್ರೀಡಾಂಗಣ

ಕ್ಷಮೆ ಯಾಚಿಸಿದ ವಿನೇಶಾ ಪೋಗಟ್

ನವದೆಹಲಿ (ಪಿಟಿಐ): ದುರ್ವರ್ತನೆ ತೋರಿದ ಆರೋಪದ ಮೇಲೆ ತಾತ್ಕಾಲಿಕವಾಗಿ ಅಮಾನತುಗೊಂಡಿರುವ ಕುಸ್ತಿಪಟು ವಿನೇಶಾ ಪೋಗಟ್ ಅವರು ಭಾರತ ಕುಸ್ತಿ ಫೆಡರೇಷನ್‌ನ (ಡಬ್ಲ್ಯುಎಫ್‌ಐ) ಕ್ಷಮೆ ಕೋರಿದ್ದಾರೆ. ಆದರೂ ಫೆಡರೇಷನ್ ಅವರಿಗೆ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಸ್ಪರ್ಧಿಸಲು ಅವಕಾಶ ನೀಡುವ ಸಾಧ್ಯತೆಯಿಲ್ಲ.

ಒಲಿಂಪಿಕ್ಸ್‌ನಲ್ಲಿ ತಂಡದ ಜೊತೆ ತರಬೇತಿಗೆ ವಿನೇಶಾ ಒಪ್ಪಿರಲಿಲ್ಲ. ಭಾರತ ತಂಡಕ್ಕೆ ಪ್ರಾಯೋಜಕತ್ವ ನೀಡಿರುವ ಕಂಪನಿಯ ಪೋಷಾಕು ಧರಿಸಲೂ ನಿರಾಕರಿಸಿದ್ದ ಕಾರಣಕ್ಕಾಗಿ ಅವರಿಗೆ ನೋಟಿಸ್ ನೀಡಲಾಗಿದೆ. ಇದೇ 16ರೊಳಗೆ ಉತ್ತರಿಸುವಂತೆ ಸೂಚಿಸಲಾಗಿತ್ತು.

'ಡಬ್ಲ್ಯುಎಫ್‌ಐ ವಿನೇಶಾ ಅವರ ಪತ್ರ ಸ್ವೀಕರಿಸಿದೆ. ಅವರು ಕ್ಷಮೆ ಕೋರಿದ್ದಾರೆ' ಎಂದು ಮೂಲಗಳು ಹೇಳಿವೆ.

ಆರ್ಚರಿ: ಭಾರತಕ್ಕೆ 3 ಚಿನ್ನ

ರೋಕ್ಲೊ, ಪೋಲೆಂಡ್ (ಪಿಟಿಐ): ಭಾರತದ ಆರ್ಚರಿಪಟುಗಳು ಯೂತ್ ವಿಶ್ವ ಚಾಂಪಿಯನ್‌ಷಿಪ್‌ನ ಕಾಂಪೌಂಡ್ ವಿಭಾಗದಲ್ಲಿ ಮೂರು ಚಿನ್ನ, ತಲಾ ಒಂದು ಬೆಳ್ಳಿ ಹಾಗೂ ಕಂಚಿನ ಪದಕ ಗೆಲ್ಲುವ ಮೂಲಕ ಶ್ರೇಷ್ಠ ಸಾಧನೆ ತೋರಿದ್ದಾರೆ.

ಪ್ರಮುಖ ರಾಷ್ಟ್ರಗಳಾದ ಕೊರಿಯಾ ಹಾಗೂ ಚೀನಾ ಈ ಚಾಂಪಿಯನ್‌ಷಿಪ್‌ನಲ್ಲಿ ಸ್ಪರ್ಧಿಗಳನ್ನು ಕಣಕ್ಕಿಳಿಸಿಲ್ಲ. ಹೀಗಾಗಿ ಭಾರತ ಪಾರಮ್ಯ ಸಾಧಿಸಿತು. ಕೆಡೆಟ್ ವಿಭಾಗದ ಪುರುಷ ಮತ್ತು ಮಹಿಳಾ ತಂಡಗಳು ವಿಶ್ವ ಚಾಂಪಿಯನ್ ಆಗಿ ಹೊರಹೊಮ್ಮಿದವು. ವೈಯಕ್ತಿಕ ವಿಭಾಗದಲ್ಲಿ ಮೆಕ್ಸಿಕೊದ ಸೆಲೆನೆ ರಾಡ್ರಿಗಸ್ ಎದುರು ಸೋತ ಪ್ರಿಯಾ ಗುರ್ಜರ್ (136–139) ಅವರು ಸ್ವಲ್ಪವೇ ಅಂತರದಲ್ಲಿ ಚಿನ್ನ ತಪ್ಪಿಸಿಕೊಂಡರು. ಅವರಿಗೆ ಬೆಳ್ಳಿ ಒಲಿಯಿತು.

ಆದರೆ ಪ್ರಿಯಾ, ಪರ್ಣೀತ್ ಕೌರ್ ಹಾಗೂ ರಿಧು ಸೆಂಥಿಲ್ ಕುಮಾರ್ ಒಟ್ಟಾರೆ ವಿಶ್ವದಾಖಲೆ ಸ್ಕೋರ್ (2067) ಗಳಿಸಿದರು.

ಈ ವಿಭಾಗದಲ್ಲಿ ಪರ್ಣೀತ್ ಕೌರ್ ಕಂಚಿನ ಪದಕ ಗೆದ್ದುಕೊಂಡರು.

ಹವಾಮಾನ ವೈಪರೀತ್ಯ– ವಿಶ್ವ ಸಂಸ್ಥೆಯ ವರದಿಯಲ್ಲಿದೆ ಭವಿಷ್ಯದ ಆತಂಕ

2030ಕ್ಕೆ ಮಳೆ ಪ್ರಮಾಣ ಶೇ 25ರಷ್ಟು ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹವಾಮಾನ ವೈಪರೀತ್ಯದಿಂದಾಗಿ ಮುಂದಿನ 30 ವರ್ಷಗಳಲ್ಲಿ ರಾಜ್ಯದ ಈಶಾನ್ಯ ಭಾಗದಲ್ಲಿ ಬಹಳ ದೊಡ್ಡ ಹಾನಿ ಉಂಟಾಗಲಿದೆ. ಅಲ್ಲದೆ, ಕಡಿಮೆ ಅವಧಿಯಲ್ಲಿ ಭಾರಿ ಮಳೆ ಸುರಿದು ಪಶ್ಚಿಮಘಟ್ಟ ಪ್ರದೇಶದಲ್ಲಿ ಭೂ ಕುಸಿತದಂಥ ಅನಾಹುತಗಳು ಸಂಭವಿಸುವ ಸಾಧ್ಯತೆಗಳಿವೆ' ಎಂದು ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್) ನಿವೃತ್ತ ಪ್ರಾಧ್ಯಾಪಕರಾದ ಪ್ರೊ.ಎನ್.ಎಚ್. ರವೀಂದ್ರನಾಥ್ ಮತ್ತು ಪ್ರೊ.ಜಿ. ಬಾಲ ಅಭಿಪ್ರಾಯಪಟ್ಟರು.

'ಬೆಂಗಳೂರು ಕ್ಲೈಮೇಟ್ ಚೇಂಜ್ ಇನಿಷಿಯೇಟಿವ್– ಕರ್ನಾಟಕ (ಬಿಸಿಸಿಐ–ಕೆ)' ಆಯೋಜಿಸಿದ್ದ ಸಂವಾದದಲ್ಲಿ ಮಾತನಾಡಿದ ಈ ಇಬ್ಬರು, 'ಹವಾಮಾನ ಬದಲಾವಣೆಯಿಂದ ಮುಂದಿನ ದಿನಗಳಲ್ಲಿ ಎದುರಾಗಬಹುದಾದ ಪರಿಣಾಮಗಳನ್ನು ಪರಿಗಣಿಸಿ ರಾಜ್ಯ ಸರ್ಕಾರ ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳಬೇಕು' ಎಂದು ಸಲಹೆ ನೀಡಿದರು.

ಹವಾಮಾನ ವೈಪರೀತ್ಯ ಮತ್ತು ಬದಲಾವಣೆಗೆ ಸಂಬಂಧಿಸಿದಂತೆ ವಿಶ್ವ ಸಂಸ್ಥೆಯ ಐಪಿಸಿಸಿ (ಇಂಟರ್ ಗವರ್ನ್‌ಮೆಂಟಲ್ ಪ್ಯಾನಲ್ ಆನ್ ಕ್ಲೈಮೇಟ್ ಚೇಂಜ್) ತಂಡ 'ಕ್ಲೈಮೇಟ್ ಚೇಂಜ್–2020: ದಿ ಫಿಸಿಕಲ್ ಸೈನ್ಸ್ ಬೇಸಿಸ್' ವರದಿ ಸಿದ್ಧಪಡಿಸಿ ಸಲ್ಲಿಸಿದೆ. ಐಐಎಸ್‌ನ ಈ ಇಬ್ಬರು ಪ್ರಾಧ್ಯಾಪಕರು ತಂಡದಲ್ಲಿ ಇದ್ದರು.

ವಿಶ್ವದಾದ್ಯಂತ ಇತ್ತೀಚೆಗೆ ಭೀಕರ ಪ್ರವಾಹ, ಉಷ್ಣ ಹವೆ, ಕಾಡ್ಗಿಚ್ಚು ಸೇರಿದಂತೆ ನಾನಾ ಬಗೆಯ ಪ್ರಕೃತಿ ವಿಕೋಪಗಳು ಹೆಚ್ಚುತ್ತಿದೆ. ಈ ವಿಕೋಪಗಳಿಗೆ ಕಾರಣವಾಗಿರುವ ಜಾಗತಿಕ ತಾಪಮಾನ ಹೆಚ್ಚಳವನ್ನು ಹತೋಟಿಗೆ ತರುವ ಸಂಬಂಧ ಈ ವರದಿಯನ್ನು 159 ದೇಶಗಳು ಒಪ್ಪಿಕೊಂಡಿವೆ.

'ಹವಾಮಾನ ವೈಪರೀತ್ಯದಿಂದ ಕರ್ನಾಟಕಕ್ಕೆ ಹೆಚ್ಚಿನ ಹಾನಿ ಉಂಟಾಗಲಿದೆ. 2050ರ ವೇಳೆಗೆ ಪಶ್ಚಿಮಘಟ್ಟದಲ್ಲಿ ಶೇ 33ರಷ್ಟು ಜೀವವೈವಿಧ್ಯ ವಿನಾಶದ ಅಂಚಿಗೆ ಹೋಗಲಿದೆ. ಹೀಗೆ ನಾಶವಾದರೆ, ಅದಕ್ಕೆ ಪರ್ಯಾಯ ಇಲ್ಲ. 2030ರ ಮಧ್ಯಂತರದ ವೇಳೆಗೆ ರಾಜ್ಯದ ನಾನಾ ಜಿಲ್ಲೆಗಳ ವ್ಯಾಪ್ತಿಯಲ್ಲಿ ಬೀಳುವ ಮಳೆಯ ಪ್ರಮಾಣ ಶೇ 10ರಿಂದ ಶೇ 25ರಷ್ಟು ಹೆಚ್ಚಾಗಲಿದೆ. ಈ ರೀತಿ ಬೀಳುವ ಅಕಾಲಿಕ ಮಳೆಯಿಂದ ರಾಜ್ಯ ಏಕಕಾಲದಲ್ಲಿ ಪ್ರವಾಹ ಮತ್ತು ಬರಗಾಲಕ್ಕೆ ತುತ್ತಾಗಲಿದೆ. ಮನ್ಸೂನ್ ಮಳೆಯು ಕೆಲವು ಭಾಗಗಳಲ್ಲಿ ಅತಿಯಾಗಿ ಬೀಳುವುದು ಮತ್ತು ಇನ್ನೂ ಕೆಲವು ಪ್ರದೇಶಗಳಲ್ಲಿ ಮಳೆಯ ಕೊರತೆ ಎದುರಾಗಲಿದೆ' ಎಂದು ರವೀಂದ್ರನಾಥ್ ಅವರು ಅಭಿಪ್ರಾಯಪಟ್ಟರು.

'ಪ್ರಕೃತಿಯ ಮೇಲೆ ಮನುಷ್ಯ ನಡೆಸಿದ ಕೃತ್ಯಗಳಿಂದಾಗಿ ಮುಂದಿನ 20 ವರ್ಷಗಳಲ್ಲಿ ಜಾಗತಿಕ ತಾಪಮಾನ 1.5 ಡಿಗ್ರಿ ಸೆಲ್ಸಿಯಸ್ ಏರಿಕೆ ಆಗಲಿದೆ. ಇದರಿಂದ ಉಷ್ಣ ಹವೆ, ಪ್ರವಾಹ, ಹಿಮನದಿಗಳು ಕುಗ್ಗುವಿಕೆ, ನೀರ್ಗಲ್ಲುಗಳು ಮತ್ತು ಹಿಮ ಪರ್ವತಗಳ ಕರಗುವಿಕೆ ಹೆಚ್ಚಳಗೊಂಡು, ಸಮುದ್ರದ ಮಟ್ಟದಲ್ಲಿ ಏರಿಕೆ ಆಗಲಿದೆ' ಎಂದರು.

'ಪರಿಸರದಲ್ಲಿ ಇಂಗಾಲದ (ಸಿಒ–2) ಹೊರಸೂಸುವಿಕೆಯ ಪ್ರಮಾಣ ತಗ್ಗಿಸುವುದು, ಹವಾಮಾನ ವೈಪರೀತ್ಯಗಳನ್ನು ನಿಯಂತ್ರಿಸಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ವರದಿಯಲ್ಲಿ ವಿವರವಾಗಿ ತಿಳಿಸಲಾಗಿದೆ. ಈಗಾಗಲೇ ಭೂಮಿಯ ಉಷ್ಣಾಂಶ 1.2 ಡಿಗ್ರಿ ಸೆಲ್ಸಿಯಸ್ ಮೀರಿದೆ. ಮುಂದಿನ 20ರಿಂದ 30 ವರ್ಷಗಳಲ್ಲಿ ಪರಿಸರಕ್ಕೆ ಇಂಗಾಲದ ಹೊರಸೂಸುವಿಕೆ ಪ್ರಮಾಣವನ್ನು ಸಂಪೂರ್ಣವಾಗಿ ತಗ್ಗಿಸುವ ಮೂಲಕ ಜಾಗತಿಕ ತಾಪಮಾನ 2 ಡಿಗ್ರಿ ಸೆಲ್ಸಿಯಸ್ ಮೀರದಂತೆ ತಡೆಯುವುದು ದೊಡ್ಡ ಸವಾಲಾಗಿದೆ' ಎಂದು ಜಿ. ಬಾಲ ಹೇಳಿದರು.

ಪ್ರೊ. ಜಿ. ಬಾಲ, ಪ್ರೊ. ಬಿ.ಕೆ. ಚಂದ್ರಶೇಖರ್, ಪ್ರೊ. ಎನ್. ಎಚ್. ರವೀಂದ್ರನಾಥ್

ಹೆಚ್ಚು ಅನುದಾನ ಅಗತ್ಯ– ಬಿಕೆಸಿ

'ಹವಾಮಾನ ಬದಲಾವಣೆ ಕುರಿತ ಅಧ್ಯಯನಗಳಿಗೆ ಕೇಂದ್ರ ಸರ್ಕಾರ ರಾಜ್ಯಮಟ್ಟದಲ್ಲಿ ಅನುದಾನ ನೀಡಬೇಕು' ಎಂದು ಬಿಸಿಸಿಐ–ಕೆ ಅಧ್ಯಕ್ಷ ಪ್ರೊ. ಬಿ.ಕೆ. ಚಂದ್ರಶೇಖರ್ ಪ್ರತಿಪಾದಿಸಿದರು.

'ಭವಿಷ್ಯದ ಅನಾಹುತ, ಆತಂಕಗಳ ಬಗ್ಗೆ ಎಚ್ಚರಿಕೆ ನೀಡಿದರೂ, ಕೇಂದ್ರ ಸರ್ಕಾರ 2–3 ವರ್ಷಗಳಿಗೊಮ್ಮೆ ₹ 20 ಲಕ್ಷ ಮಾತ್ರ ಮಂಜೂರು ಮಾಡುತ್ತಿದೆ. ಕೇಂದ್ರ ಸರ್ಕಾರ ಎಚ್ಚೆತ್ತುಕೊಳ್ಳಬೇಕಾದ ಸಮಯವಿದು. ಜೊತೆಗೆ, ಅರಣ್ಯ ನಾಶಕ್ಕೆ ಮುಂದಾಗದಂತೆ ರಾಜಕೀಯ ನಾಯಕರನ್ನು ಜನರು ಎಚ್ಚರಿಸಬೇಕಾದ ಕಾಲವೂ ಬಂದಿದೆ' ಎಂದರು.

ಅವಧಿಗೆ ಮುನ್ನ ಬಿಡುಗಡೆ ಹಕ್ಕು: ಏಕಮಾದರಿ ಮಾರ್ಗಸೂಚಿಗೆ ಸುಪ್ರೀಂ ಕೋರ್ಟ್ ಒಲವು

ನವದೆಹಲಿ (ಪಿಟಿಐ): ಅವಧಿಗೆ ಮುನ್ನವೇ ಬಿಡುಗಡೆ ಹೊಂದಲು ಕೈದಿಗಳಿಗಿರುವ ಕಾನೂನು ಬದ್ಧ ಹಕ್ಕನ್ನು ರಕ್ಷಿಸಲು, ದೇಶದಾದ್ಯಂತ ಏಕರೂಪಿ, ಮಾದರಿ ಮಾರ್ಗಸೂಚಿ ರೂಪಿಸುವ ಬಗ್ಗೆ ಪರಿಶೀಲಿಸುವಂತೆ ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ(ಎನ್‌ಎಎಲ್‌ಎಸ್‌ಎ) ಸುಪ್ರೀಂ ಕೋರ್ಟ್ ಹೇಳಿದೆ.

ಕೊಲೆ ಪ್ರಕರಣದಲ್ಲಿ ವ್ಯಕ್ತಿಯೊಬ್ಬನಿಗೆ ಅಹಮದಾಬಾದ್ ಹೈಕೋರ್ಟ್ ನೀಡಿದ್ದ ಜೀವಾವಧಿ ಶಿಕ್ಷೆಯನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ತಿರಸ್ಕರಿಸಿತ್ತು. ಆದರೆ, ಆಗ್ರಾ ಜೈಲು ಆಡಳಿತ ಹೊರಡಿಸಿರುವ ಬಂಧನ ಪ್ರಮಾಣಪತ್ರದಲ್ಲಿ ಆ ಅಪರಾಧಿಗೆ ರಿಯಾಯಿತಿಯೊಂದಿಗೆ 16 ವರ್ಷಗಳ ಜೈಲು ಶಿಕ್ಷೆಯನ್ನು ನೀಡಲಾಗಿದೆ ಎಂಬುದನ್ನು ನ್ಯಾಯಾಲಯ ಉಲ್ಲೇಖಿಸಿತು.

ಅಪರಾಧಿಗೆ ಕಾನೂನುಬದ್ಧವಾಗಿ ಸಿಗಬೇಕಾದ ಹಕ್ಕಿನ ಕುರಿತು ಮಾಹಿತಿ ನೀಡುವಂತೆ, ಜೈಲು ಅಧಿಕಾರಿಗೆ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ಎಂ.ಆರ್. ಶಾ ಅವರಿದ್ದ ಪೀಠ ನಿರ್ದೇಶನ ನೀಡಿತು. ಅಲ್ಲದೇ ಉತ್ತರ ಪ್ರದೇಶ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ಸೂಚನೆ ನೀಡಿದ ನ್ಯಾಯಪೀಠ, ವಕೀಲರ ತಂಡ ಎಲ್ಲಾ ಜೈಲುಗಳಿಗೂ ಭೇಟಿ ನೀಡಿ, ಅಪರಾಧಿಗಳು ಯಾವ ರೀತಿಯ ಅಪರಾಧಗಳಿಗೆ ಶಿಕ್ಷೆ ಪಡೆಯುತ್ತಿದ್ದಾರೆ ಮತ್ತು ಅವರಿಗೆ ನೀಡಲಾಗಿರುವ ಶಿಕ್ಷೆಯ ಅವಧಿ ಕುರಿತು ಮಾಹಿತಿ ಪಡೆಯಬೇಕು. ಜೊತೆಗೆ, ಅವಧಿಗೂ ಮುನ್ನ ಬಿಡುಗಡೆ ಪಡೆಯಲು ಅರ್ಜಿ ಸಲ್ಲಿಸುವ ಕುರಿತು ಅಪರಾಧಿಗಳಿಗೆ ತಿಳಿವಳಿಕೆ' ನೀಡಬೇಕು ಎಂದಿದೆ.

ಈ ಸಂದರ್ಭದಲ್ಲಿ ಅಪರಾಧಿಗಳು ಕಾನೂನು ಸಲಹೆ ಕೇಳಿದರೆ, ಅದರ ಬಗ್ಗೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ (ಡಿಎಲ್‌ಎಸ್‌ಎ) ಹಿರಿಯ ಜೈಲು ಅಧೀಕ್ಷಕರು ಎರಡು ವಾರಗಳ ಒಳಗೆ ತಿಳಿಸಬೇಕು. ಅಪರಾಧಿಗೆ ಅಗತ್ಯವಿರುವ ನೆರವನ್ನು ಡಿಎಲ್‌ಎಸ್‌ಎ ನೀಡಬೇಕು. ಅದರ ಪ್ರತಿಯನ್ನು ಉತ್ತರ ಪ್ರದೇಶ ಕಾನೂನು ಪ್ರಾಧಿಕಾರ, ಎನ್‌ಎಲ್‌ಎಸ್‌ಎಯ ಕಾರ್ಯದರ್ಶಿ ಮತ್ತು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ನೀಡಬೇಕು ಎಂದು ಕೋರ್ಟ್ ನಿರ್ದೇಶಿಸಿದೆ.

ರಾಷ್ಟ್ರಪತಿ ರಾಮನಾಥ್ ಕೋವಿಂದ್ ಭಾಷಣ

'ಸಾಂಕ್ರಾಮಿಕದ ತೀವ್ರತೆ ಕಡಿಮೆ ಆಗಿರಬಹುದು, ದೂರವಾಗಿಲ್ಲ'

ನವದೆಹಲಿ (ಪಿಟಿಐ): ಕೊರೊನಾ ವೈರಸ್‌ನ ವಿನಾಶಕಾರಿ ಪರಿಣಾಮಗಳಿಂದ ದೇಶ ಇನ್ನೂ ಹೊರಬಂದಿಲ್ಲ, ಹೀಗಾಗಿ ಹೆಚ್ಚಿನ ಕಾಳಜಿ ಮತ್ತು ಎಚ್ಚರಿಕೆಯಲ್ಲೇ ಇರಬೇಕಿದೆ ಎಂದು ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು ಶನಿವಾರ ಹೇಳಿದ್ದಾರೆ.

ಸ್ವಾತಂತ್ರ್ಯೋತ್ಸವದ ಮುನ್ನಾದಿನ ದೇಶವನ್ನುದ್ದೇಶಿಸಿ ಭಾಷಣ ಮಾಡಿದ ಅವರು, ಸಾಂಕ್ರಾಮಿಕದ ತೀವ್ರತೆ ಕಡಿಮೆಯಾಗಿರಬಹುದು, ಆದರೆ ದೂರವಾಗಿಲ್ಲ ಎಂದು ಎಚ್ಚರಿಸಿದರು.

'ಎರಡನೇ ಅಲೆಯು ದೇಶದ ಸಾರ್ವಜನಿಕ ಆರೋಗ್ಯ ಮೂಲ ಸೌಕರ್ಯದ ಮೇಲೆ ಭಾರಿ ಒತ್ತಡ ಹೇರಿತು. ಸದೃಢ ಮೂಲಸೌಕರ್ಯಗಳು, ಮುಂದುವರಿದ ಆರ್ಥಿಕತೆ ಹೊಂದಿದ್ದ ದೇಶಗಳೂ ಈ ಅಗಾಧ ಪ್ರಮಾಣದ ಬಿಕ್ಕಟ್ಟನ್ನು ತಡೆದುಕೊಳ್ಳಲಿಲ್ಲ. ಹೀಗಾಗಿ ನಾವು ಎಚ್ಚರಿಕೆ ತಪ್ಪಬಾರದು. ಲಸಿಕೆಗಳು ವಿಜ್ಞಾನವು ನಮಗೆ ನೀಡಿರುವ ಅತ್ಯುತ್ತಮ ರಕ್ಷಣೆ' ಎಂದು ಅವರು ಹೇಳಿದರು.

'ನಾಯಕತ್ವಕ್ಕೆ ಈ ಬಿಕ್ಕಟ್ಟು ಒಂದು ಸವಾಲಾಯಿತು. ಸರ್ಕಾರವು ಯುದ್ಧೋಪಾದಿಯಲ್ಲಿ ಕೆಲಸ ಮಾಡಿತು. ರಾಜ್ಯಗಳು, ಖಾಸಗಿ ವಲಯದ ಆರೋಗ್ಯ ಸೌಲಭ್ಯಗಳು, ನಾಗರಿಕ ಸಮಾಜ ಮತ್ತು ಇತರರ ಪ್ರಯತ್ನಗಳು ಸರ್ಕಾರದ ಜತೆ ಪೂರಕವಾಗಿ ಕೆಲಸ ಮಾಡಿದವು' ಎಂದರು.


ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು ದೇಶವನ್ನುದ್ದೇಶಿಸಿ ಭಾಷಣ ಮಾಡಿದರು –ಪಿಟಿಐ ಚಿತ್ರ

ಭಾಷಣದ ಪ್ರಮುಖ ಅಂಶಗಳು

- ಕೆಳ-ಮಧ್ಯಮ ವರ್ಗ, ಬಡವರು ಹಾಗೂ ಸಣ್ಣ–ಮಧ್ಯಮ ಪ್ರಮಾಣದ ಕೈಗಾರಿಕೆಗಳ ಬಗ್ಗೆ ಸರ್ಕಾರ ಕಾಳಜಿ ಹೊಂದಿದೆ
- ಈ ವರ್ಷ ಕೂಡ ಸರ್ಕಾರವು ಮೇ ಮತ್ತು ಜೂನ್ ತಿಂಗಳಲ್ಲಿ ಸುಮಾರು 80 ಕೋಟಿ ಜನರಿಗೆ ಆಹಾರ ಧಾನ್ಯಗಳನ್ನು ವಿತರಿಸಿದೆ. ಈ ಪ್ರಯೋಜನವನ್ನು ದೀಪಾವಳಿಯವರೆಗೆ ವಿಸ್ತರಿಸಲಾಗಿದೆ
- ಆಯ್ದ ಕೋವಿಡ್ ಪೀಡಿತ ವಲಯಗಳನ್ನು ಉತ್ತೇಜಿಸಲು ಸರ್ಕಾರವು ₹6.28 ಲಕ್ಷ ಕೋಟಿ ಮೌಲ್ಯದ ಹೊಸ ಉತ್ತೇಜನ ಪ್ಯಾಕೇಜ್ ಘೋಷಿಸಿದೆ. ಒಂದು ವರ್ಷದಲ್ಲಿ ₹23.220 ಕೋಟಿ ಖರ್ಚು ಮಾಡಲಾಗುತ್ತಿದೆ
- ಎಲ್ಲಾ ಸಂಕಷ್ಟಗಳ ನಡುವೆಯೇ ಗ್ರಾಮೀಣ ಭಾರತ, ವಿಶೇಷವಾಗಿ ಕೃಷಿ ವಲಯವು ಅಭಿವೃದ್ಧಿ ಕಾಣುತ್ತಿರುವುದು ಹೃದಯಸ್ಪರ್ಶಿ ವಿಚಾರ
- ಸರ್ಕಾರ ಜಾರಿಗೊಳಿಸಿದ ಕೃಷಿ ಮಾರುಕಟ್ಟೆ ಸುಧಾರಣೆಗಳು ನಮ್ಮ ಅನ್ನದಾತ ರೈತರನ್ನು ಸಬಲಗೊಳಿಸುತ್ತವೆ. ಅವರು ಬೆಳೆದ ಉತ್ಪನ್ನಗಳಿಗೆ ಉತ್ತಮ ಬೆಲೆ ಪಡೆಯಲು ಸಹಾಯ ಮಾಡುತ್ತವೆ.

ಹೈಟಿಯಲ್ಲಿ ಭೂಕಂಪ: ಕನಿಷ್ಠ 29 ಸಾವು

ಪೋರ್ಟ್–ಔ– ಪ್ರಿನ್ಸ್ (ಎಪಿ): ದ್ವೀಪ ರಾಷ್ಟ್ರ ಹೈಟಿಯ ಕರಾವಳಿ ಪ್ರದೇಶದಲ್ಲಿ ಶನಿವಾರ 7.2ರಷ್ಟು ತೀವ್ರತೆಯ ಭೂಕಂಪ ಸಂಭವಿಸಿದ್ದು ಕನಿಷ್ಠ 29 ಮಂದಿ ಸಾವನ್ನಪ್ಪಿದ್ದಾರೆ. ಅಲ್ಲದೇ ಸುನಾಮಿ ಭೀತಿಯೂ ಎದುರಾಗಿದೆ.

ಭೂಕಂಪದ ಕೇಂದ್ರಬಿಂದು ಸೇಂಟ್ ಲೂಯಿಸ್ ಸೂದ್‌ನಿಂದ ಈಶಾನ್ಯಕ್ಕೆ 12 ಕಿ.ಮೀ. ದೂರದ ಪ್ರದೇಶವೆಂದು ಗುರುತಿಸಲಾಗಿದೆ. ರಾಜಧಾನಿ ಪೋರ್ಟ್–ಔ–ಪ್ರಿನ್ಸ್‌ನ ಜನರು ಭೂಮಿ ಕಂಪಿಸಿದ ಅನುಭವವಾಗಿದೆ ಎಂದು ತಿಳಿಸಿದ್ದಾರೆ. 'ಹಾಸಿಗೆಯಲ್ಲಿ ಮಲಗಿದ್ದ ನನಗೆ ಇದ್ದಕ್ಕಿದ್ದಂತೆ ಭೂಮಿ ನಡುಗಿದ್ದರ ಅನುಭವವಾಯಿತು. 2010ರಲ್ಲಿ ಸಂಭವಿಸಿದ್ದ ಭೂಕಂಪದಲ್ಲಿ ನಮ್ಮ ಕುಟುಂಬ ಬದುಕುಳಿದಿದೆ. ತಕ್ಷಣವೇ ಮನೆಬಿಟ್ಟು ಹೊರಬಂದೆ. ಮನೆಯೊಳಗೆ ತಾಯಿ ಮತ್ತು ನನ್ನ ಇಬ್ಬರು ಮಕ್ಕಳು ಇರುವುದು ನೆನಪಾಯಿತು. ಪಕ್ಕದ ಮನೆಯವರು ಅವರಿಗೆ ಮನೆಯಿಂದ ಹೊರಬರಲು ಹೇಳಿದರು. ಎಲ್ಲರೂ ಹೊರಬಂದು ಬೀದಿಯತ್ತ ಓಡಿದೆವು' ಎಂದು ಸ್ಥಳೀಯ ನಿವಾಸಿ ನಯೋಮಿ ವೆರ್ನಿಯಸ್ ತಮ್ಮ ಅನುಭವ ಹಂಚಿಕೊಂಡಿದ್ದಾರೆ.

ಕಲಾ ನಿರ್ದೇಶಕ ಸಾವು: ನೈತಿಕ ಪೊಲೀಸ್‌ಗಿರಿ ಆರೋಪ

ತಿರುವನಂತಪುರ: ಕೇರಳದಲ್ಲಿ ಕಲಾ ನಿರ್ದೇಶಕರೊಬ್ಬರ ಮೃತದೇಹ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದು, ನೈತಿಕ ಪೊಲೀಸ್‌ಗಿರಿಯೇ ಇವರ ಸಾವಿಗೆ ಕಾರಣ ಎಂದು ಆರೋಪಿಸಲಾಗಿದೆ.

ಸುರೇಶ್ ಚಾಲಿಯತ್ತ್ (44)ಅವರ ಮೃತದೇಹ ಮಲಪ್ಪುರಂ ಜಿಲ್ಲೆಯ ವೇಂಗರ ಸಮೀಪದ ಆಶಾರಿಪ್ಪಡಿಯಲ್ಲಿರುವ ಅವರ ಸ್ವಗೃಹದಲ್ಲಿ ಪತ್ತೆಯಾಗಿದೆ.

'ಮಹಿಳೆಯೊಬ್ಬರೊಂದಿಗೆ ಮಾತನಾಡಿದ ಕಾರಣಕ್ಕೆ ಕೆಲ ದಿನಗಳ ಹಿಂದೆ ಗುಂಪೊಂದು ಸುರೇಶ್ ಅವರ ಮೇಲೆ ಹಲ್ಲೆ ನಡೆಸಿತ್ತು' ಎಂದು ಸಂಬಂಧಿಕರು ತಿಳಿಸಿದ್ದಾರೆ.

ವಿಶ್ವಸಂಸ್ಥೆ ಮಹಾ ಅಧಿವೇಶನ: ಮೋದಿ ಭಾಗವಹಿಸುವ ನಿರೀಕ್ಷೆ

ವಿಶ್ವಸಂಸ್ಥೆ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಸೆಪ್ಟೆಂಬರ್ 25 ರಂದು ನಡೆಯಲಿರುವ ವಿಶ್ವಸಂಸ್ಥೆಯ ವಾರ್ಷಿಕ ಮಹಾ ಅಧಿವೇಶನದಲ್ಲಿ ಭೌತಿಕವಾಗಿ ಪಾಲ್ಗೊಂಡು, ಭಾಷಣ ಮಾಡುವ ನಿರೀಕ್ಷೆ ಇದೆ.

76ನೇ ಮಹಾ ಅಧಿವೇಶನವನ್ನು ಉದ್ದೇಶಿಸಿ ಮಾತನಾಡುವವರ ತಾತ್ಕಾಲಿಕ ಪಟ್ಟಿಯನ್ನು ವಿಶ್ವಸಂಸ್ಥೆ ಬಿಡುಗಡೆ ಮಾಡಿದ್ದು, ಮೋದಿಯವರ ಹೆಸರು ಈ ಪಟ್ಟಿಯಲ್ಲಿದೆ. ಅಮೆರಿಕ ಹಾಗೂ ಇತರ ರಾಷ್ಟ್ರಗಳಲ್ಲಿ ಕೊರೊನಾ ವೈರಸ್‌ನ ರೂಪಾಂತರ ಡೆಲ್ಟಾ ತಳಿಯ ಸೋಂಕಿನ ಪ್ರಸರಣ ತೀವ್ರವಾಗುತ್ತಿದೆ. ಹೀಗಾಗಿ, ಜಾಗತಿಕ ನಾಯಕರ ಪೈಕಿ ಯಾರೆಲ್ಲಾ ಪಾಲ್ಗೊಳ್ಳುತ್ತಾರೆ ಹಾಗೂ ಸೋಂಕಿನ ತೀವ್ರತೆಯ ಆಧಾರದಲ್ಲಿ ಅಧಿವೇಶನದ ಕಾರ್ಯಕ್ರಮದಲ್ಲಿ ಬದಲಾವಣೆಯಾಗುವ ಸಾಧ್ಯತೆ ಇದೆ ಎಂದು ವಿಶ್ವಸಂಸ್ಥೆ ತಿಳಿಸಿದೆ.2019ರಲ್ಲಿ ನ್ಯೂಯಾರ್ಕ್‌ಗೆ ತೆರಳಿದ್ದ ಮೋದಿ, ವಿಶ್ವಸಂಸ್ಥೆಯ ಮಹಾ ಅಧಿವೇಶನದಲ್ಲಿ ಭಾಗವಹಿಸಿದ್ದರು.

ನರೇಂದ್ರ ಮೋದಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಲಾಲಿಗಾ: ವಲೆನ್ಸಿಯಾಗೆ ಗೆಲುವಿನ ಸಂಭ್ರಮ

ವಲೆನ್ಸಿಯ, ಸ್ಪೇನ್ (ರಾಯಿಟರ್ಸ್): ಪೆನಾಲ್ಟಿ ಕಾರ್ನರ್‌ನಲ್ಲಿ ಮಿಡ್‌ಫೀಲ್ಡರ್ ಕಾರ್ಲೋಸ್ ಸಲೆರ್ ಗಳಿಸಿದ ಗೋಲಿನ ನೆರವಿನಿಂದ ವಲೆನ್ಸಿಯಾ ತಂಡಕ್ಕೆ ಲಾ ಲಿಗಾ ಫುಟ್‌ಬಾಲ್ ಟೂರ್ನಿಯ ಮೊದಲ ಪಂದ್ಯದಲ್ಲಿ ಗೆಲುವು ತಂದುಕೊಟ್ಟಿತು. ಶನಿವಾರ ನಡೆದ ಪಂದ್ಯದಲ್ಲಿ ಗೆಟಾಫಿ ತಂಡವನ್ನು ವಲೆನ್ಸಿಯಾ 1–0ಯಿಂದ ಮಣಿಸಿತು.

ಆತಿಥೇಯ ತಂಡಕ್ಕೆ ಮೂರನೇ ನಿಮಿಷದಲ್ಲೇ ಆಘಾತ ಕಾದಿತ್ತು. ಡಿಫೆಂಡರ್ ಹ್ಯೂಗೊ ಗುಲಾಮೊನ್ ಅವರು ರೆಡ್ ಕಾರ್ಡ್ ಪಡೆದು ಹೊರ- ನಡೆದಿದ್ದರು.

ಎದುರಾಳಿ ತಂಡದ ಮಿಡ್‌ಫೀಲ್ಡರ್ ನೆಮಾಂಜ ಮಕ್ಸಿಮೊವಿಚ್ ಅವರನ್ನು ನೆಲಕ್ಕೆ ಬೀಳಿಸಿದ್ದಕ್ಕಾಗಿ ಅವರನ್ನು ಹೊರಗೆ ಕಳುಹಿಸಲಾಗಿತ್ತು. ಹೀಗಾಗಿ 10 ಮಂದಿಯ ತಂಡ ಪಂದ್ಯದುದ್ದ- ಕ್ಕೂ ಸೆಣಸಾಡಿತು. ಮೊದಲಾರ್ಧದ ಕೊನೆಯ ಹಂತದಲ್ಲಿ ವಲೆನ್ಸಿಯಾ ಅಮೋಘ ಆಟವಾಡಿ ಮುನ್ನಡೆ ಹೆಚ್ಚಿಸಲು ಪ್ರಯತ್ನಿಸಿತು.

ಆದರೆ ಗೋಲ್‌ಕೀಪರ್ ಡೇವಿಡ್ ಸೋರಿಯಾ ಅತ್ಯುತ್ತಮ ಆಟ ಪ್ರದರ್ಶಿ- ಸಿದರು. 36ನೇ ನಿಮಿಷದಲ್ಲಿ ಡೆನಿಸ್ ಚೆರಿಶೆವ್ ಅವರ ಆಕ್ರಮಣವನ್ನು ತಡೆದು ಗೆಟಾಫೆಯ ಆತಂಕ ಕಡಿಮೆ ಮಾಡಿದರು.

ದ್ವಿತೀಯಾರ್ಧದಲ್ಲಿ ಗೆಟಾಫೆ ತಂಡ ಸಮಬಲ ಸಾಧಿಸಲು ಭಾರಿ ಪ್ರಯತ್ನ ನಡೆಸಿತು. ಮೌರೊ ಅರಂಬರಿ ಎರಡು ಬಾರಿ ಪ್ರಬಲ ಆಕ್ರಮಣ ನಡೆಸಿದರು. ಆದರೆ ಚೆಂಡು ಗುರಿ ಸೇರಲು ವಲೆನ್ಸಿಯಾದ ರಕ್ಷಣಾ ವಿಭಾಗದ ಆಟಗಾರರು ಅವಕಾಶ ನೀಡಲಿಲ್ಲ. ಪಂದ್ಯದ ಮುಕ್ತಾಯಕ್ಕೆ 14 ನಿಮಿಷಗಳು ಬಾಕಿ ಇರುವಾಗ ಡೇವಿಡ್ ಸೋರಿಯಾ ಅವರಿಗೂ ರೆಡ್ ಕಾರ್ಡ್ ತೋರಿಸಲಾಯಿತು. ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಲು ವಲೆನ್ಸಿಯಾಗೆ ಸಾಧ್ಯವಾಗಲಿಲ್ಲ.



ಲಯೊನೆಲ್ ಮೆಸ್ಸಿ

‘ಬಾರ್ಸಿಲೋನಾಗೆ ‘ವರ್ತಮಾನ’ ಮುಖ್ಯ: ಕೋಚ್

ಲಯೊನೆಲ್ ಮೆಸ್ಸಿ ತಂಡವನ್ನು ತೊರೆದದ್ದು ಬೇಸರದ ವಿಷಯ. ಆದರೆ ಅದು ಈಗ ಮುಗಿದುಹೋದ ವಿಷಯ. ಕ್ಲಬ್‌ಗೆ ವರ್ತಮಾನವೇ ಮುಖ್ಯವಾಗಿದ್ದು ಬಲಿಷ್ಠ ತಂಡ ಕಟ್ಟಲು ಮುಂದಾಗುವುದಾಗಿ ಕೋಚ್ ರೊನಾಲ್ಡ್ ಕೊಯ್ಮನ್ ಹೇಳಿದರು.

ನೀರಜ್ ಚೋಪ್ರಾಗೆ ಜ್ವರ

ನವದೆಹಲಿ (ಪಿಟಿಐ): ಟೋಕಿಯೊ ಒಲಿಂಪಿಕ್ಸ್ ಚಿನ್ನದ ಪದಕ ವಿಜೇತ ಜಾವೆಲಿನ್ ಥ್ರೋ ಪಟು ಭಾರತದ ನೀರಜ್ ಚೋಪ್ರಾ ತೀವ್ರ ಜ್ವರದಿಂದ ಬಳಲುತ್ತಿದ್ದಾರೆ. ಟೋಕಿಯೊದಿಂದ ತವರಿಗೆ ಮರಳಿದ ಬಳಿಕ ಅವರಿಗೆ ಜ್ವರ ಬಾಧಿಸಿದೆ. ಕೋವಿಡ್ ಟೆಸ್ಟ್ ಮಾಡಿಸಿಕೊಂಡಿದ್ದು ವರದಿ ‘ನೆಗೆಟಿವ್’ ಬಂದಿದೆ.

ನೀರಜ್

23 ವರ್ಷದ ನೀರಜ್, ಒಲಿಂಪಿ- ಕ್ಸ್‌ನಲ್ಲಿ ವೈಯಕ್ತಿಕ ವಿಭಾಗದಲ್ಲಿ ಚಿನ್ನ ಗೆದ್ದ ಭಾರತದ ಎರಡನೇ ಕ್ರೀಡಾಪಟು ಎನಿಸಿಕೊಂಡಿದ್ದರು.

‘ನೀರಜ್ ಅವರ ಕೋವಿಡ್ ವರದಿ ನೆಗೆಟಿವ್ ಬಂದಿದೆ. ಸದ್ಯಕ್ಕೆ ಯಾವುದೇ ಕಾರ್ಯಕ್ರಮಗಳಲ್ಲಿ ಅವರು ಭಾಗವಹಿ- ಸುತ್ತಿಲ್ಲ‘ ಎಂದು ಮೂಲಗಳು ತಿಳಿಸಿವೆ.

ನೀರಜ್ ಸೇರಿದಂತೆ ಒಲಿಂಪಿಕ್ಸ್‌ನಲ್ಲಿ ಪದಕವಿಜೇತ ಎಲ್ಲರನ್ನೂ ಸರ್ಕಾರ ಸೋಮವಾರ ಸನ್ಮಾನಿಸಿತ್ತು.

ಮರುದಿನ ಭಾರತ ಅಥ್ಲೆಟಿಕ್ಸ್ ಫೆಡರೇಷನ್ (ಎಎಫ್‌ಐ) ಕೂಡ ಗೌರವಾರ್ಪಣೆ ಕಾರ್ಯಕ್ರಮ ಆಯೋಜಿಸಿತ್ತು.

ಗುರುವಾರ ಮತ್ತು ಶುಕ್ರವಾರ ಕ್ರಮವಾಗಿ ಪಂಜಾಬ್ ಹಾಗೂ ಹರಿಯಾಣ ಸರ್ಕಾರಗಳು ಹಮ್ಮಿಕೊಂಡಿದ್ದ ಎರಡೂ ಕಾರ್ಯಕ್ರಮಗಳ- ಲ್ಲಿ ನೀರಜ್ ಭಾಗವಹಿಸಿರಲಿಲ್ಲ. ಭಾರತ ಒಲಿಂಪಿಕ್ ಸಂಸ್ಥೆಯು ಭಾನುವಾರ ಆಯೋಜಿಸಿರುವ ಕಾರ್ಯಕ್ರಮಕ್ಕೆ ಹಾಜರಾಗುತ್ತಾರೊ ಇಲ್ಲವೊ ಎಂಬುದು ಗೊತ್ತಾಗಿಲ್ಲ.

ಕೆಎಸ್‌ಸಿಎ ಕ್ರಿಕೆಟ್: ಅಭಿನವ್, ಲಿಯಾನ್ ಶತಕ

ಬೆಂಗಳೂರು: ಅಭಿನವ್ ಮನೋಹರ್ (ಔಟಾಗದೆ 145; 122 ಎಸೆತ, 10 ಬೌಂಡರಿ, 10 ಸಿಕ್ಸರ್) ಹಾಗೂ ಲಿಯಾನ್ ಖಾನ್ (130; 136 ಎ, 14 ಬೌಂ, 3 ಸಿ.) ಅವರ ಅಮೋಘ ಶತಕಗಳ ನೆರವಿನಿಂದ ಬೆಂಗಳೂರು ಯುನೈಟೆಡ್ ಕ್ರಿಕೆಟ್ ಕ್ಲಬ್ (1) ಜಯ ಸಾಧಿಸಿತು.

ಶುಕ್ರವಾರ ಇಲ್ಲಿ ನಡೆದ ಸರ್ ಮಿರ್ಜಾ ಇಸ್ಮಾಯಿಲ್ ಮೊದಲ ಡಿವಿಷನ್ ಲೀಗ್ ಒಂದನೇ ಗುಂಪಿನ ಪಂದ್ಯದಲ್ಲಿ 134 ರನ್‌ಗಳಿಂದ ವಲ್ಚರ್ಸ್ ಕ್ರಿಕೆಟ್ ಕ್ಲಬ್ ತಂಡವನ್ನು ಸೋಲಿಸಿತು.

ಸಂಕ್ಷಿಪ್ತ ಸ್ಕೋರುಗಳು: ಬೆಂಗಳೂರು ಯುನೈಟೆಡ್ ಸಿಸಿ (1): 50 ಓವರ್‌ಗಳಲ್ಲಿ 3 ವಿಕೆಟ್‌ಗೆ 312 (ಲಿಯಾನ್ ಖಾನ್ 130, ಅಭಿನವ್ ಮನೋಹರ್ ಔಟಾಗದೆ 145). **ವಲ್ಚರ್ಸ್ ಕ್ರಿಕೆಟ್ ಕ್ಲಬ್:** 41.1 ಓವರ್‌ಗಳಲ್ಲಿ 178 (ಜೆ. ಸುಚಿತ್ 50, ಅಭಿಮನ್ಯು ಮಿಥುನ್ 36; ಸಮರ್ಥ್ ಶ್ರೀನಿವಾಸ್ 40ಕ್ಕೆ 4). **ಫಲಿತಾಂಶ:** ಬೆಂಗಳೂರು ಯುನೈಟೆಡ್ ಸಿಸಿಗೆ (1) 134 ರನ್‌ಗಳ ಜಯ.

ಸ್ವಸ್ತಿಕ್ ಯೂನಿಯನ್ ಸಿಸಿ (1): 50 ಓವರ್‌ಗಳಲ್ಲಿ 4ಕ್ಕೆ 304 (ಆರ್. ಸಮರ್ಥ್ 76, ಕೆ.ವಿ.ಸಿದ್ಧಾರ್ಥ್ 43, ರಕ್ಷಿತ್ ಎಸ್. 123). ಮಾಡರ್ನ್ ಕ್ರಿಕೆಟ್ ಕ್ಲಬ್: 45 ಓವರ್‌ಗಳಲ್ಲಿ 4ಕ್ಕೆ 249 (ಮೊಹಮ್ಮದ್ ಅಕಿಬ್ ಜಾವೇದ್ 86, ಮಿಲಿಂದ್ ರಮೇಶ್ ಔಟಾಗದೆ 102; ಕೆ.ಎಸ್.ದೇವಯ್ಯ 58ಕ್ಕೆ3). **ಫಲಿತಾಂಶ:** ಸ್ವಸ್ತಿಕ್ ಯೂನಿಯನ್ ಸಿಸಿಗೆ (1) 25 ರನ್‌ಗಳ ಜಯ. (ಪಂದ್ಯಕ್ಕೆ ಮಂದಬೆಳಕು ಅಡ್ಡಿ, ಗುರಿ 45 ಓವರ್‌ಗಳಲ್ಲಿ 275). **ಚಿಂತಾಮಣಿ ಸ್ಪೋರ್ಟ್ಸ್ ಅಸೋಸಿಯೇಷನ್, ಚಿಂತಾಮಣಿ:** 50 ಓವರ್‌ಗಳಲ್ಲಿ 9ಕ್ಕೆ 219 (ತೋಟಾ ಮೊಹಮ್ಮದ್ ಅಜಾನ್ 55, ಸ್ವಪ್ನಿಲ್ ಯಳವೆ 44). **ಸೋಷಿಯಲ್ ಕ್ರಿಕೆಟರ್ಸ್:** 42 ಓವರ್‌ಗಳಲ್ಲಿ 2ಕ್ಕೆ 221 (ಆದರ್ಶ್ ಪ್ರಜ್ವಲ್ ಎಸ್. 45, ಅನೀಶ್ ಕೆ.ವಿ. ಔಟಾಗದೆ 91, ಅಕ್ಷಯ್ ಬಲ್ಲಾಳ್ ಔಟಾಗದೆ 59). **ಫಲಿತಾಂಶ:** ಸೋಷಿಯಲ್ ಕ್ರಿಕೆಟರ್ಸ್‌ಗೆ 8 ವಿಕೆಟ್‌ಗಳ ಜಯ.

ಸರ್ ಸಯ್ಯದ್ ಕ್ರಿಕೆಟರ್ಸ್: 50 ಓವರ್‌ಗಳಲ್ಲಿ 7ಕ್ಕೆ 238 (ಶ್ರೀಕರ 66, ಎಂ.ಎಸ್.ಭಾಂಡಗೆ 81). **ಸ್ವಸ್ತಿಕ್ ಯೂನಿಯನ್ ಸಿಸಿ (2):** 42.1 ಓವರ್‌ಗಳಲ್ಲಿ 167 (ಡೇವಿಡ್ ಮಥಿಯಾಸ್ 67). **ಫಲಿತಾಂಶ:** ಸರ್.ಸಯ್ಯದ್ ಕ್ರಿಕೆಟರ್ಸ್‌ಗೆ 71 ರನ್‌ಗಳ ಜಯ.

ರಾಜಾಜಿನಗರ ಕ್ರಿಕೆಟರ್ಸ್: 50 ಓವರ್‌ಗಳಲ್ಲಿ 9ಕ್ಕೆ 236 (ಎಂ. ಕ್ರಾಂತಿ ಕುಮಾರ್ 102). ಕೆಂಬ್ರಿಡ್ಜ್ ಕ್ರಿಕೆಟ್ ಕ್ಲಬ್: 50 ಓವರ್‌ಗಳಲ್ಲಿ 9ಕ್ಕೆ 233 (ರಾಜ್ ಕುಮಾರ್ ಎಸ್.ಎಂ. 69, ಶುಭಾಂಗ್ ಹೆಗ್ಡೆ 63; ಎಂ.ಕ್ರಾಂತಿ ಕುಮಾರ್ 49ಕ್ಕೆ 3). **ಫಲಿತಾಂಶ:** ರಾಜಾಜಿನಗರ ಕ್ರಿಕೆಟರ್ಸ್‌ಗೆ ಮೂರು ರನ್ ಜಯ.

ಫ್ರೆಂಡ್ಸ್ ಯೂನಿಯನ್ ಸಿಸಿ (1): 48 ಓವರ್‌ಗಳಲ್ಲಿ 233 (ರಿಷಿ ಬೋಪಣ್ಣ ಎಸ್.ಎ. 51; ಮೋಹಿತ್ ಕುಮಾರ್ ಎ. 26ಕ್ಕೆ 3, ಮೊಹಮ್ಮದ್ ಸಾದಿಕ್ 38ಕ್ಕೆ 2, ಶೀತಲ್ ಕುಮಾರ್ 46ಕ್ಕೆ 2). ಮೌಂಟ್ ಜಾಯ್ ಕ್ರಿಕೆಟ್ ಕ್ಲಬ್: 48.5 ಓವರ್‌ಗಳಲ್ಲಿ 8 ವಿಕೆಟ್‌ಗೆ 234 (ಶರತ್ ಬೇಲೂರು ರವಿ 30, ಮುನಿಮ್ ಮೆಹದಿ 105, ಧುರಿ 33; ಸ್ಟಾಲಿನ್ ಹೂವರ್ 37ಕ್ಕೆ 3, ರಿಷಿ ಬೋಪಣ್ಣ ಎಸ್.ಎ. 35ಕ್ಕೆ 2). ಫಲಿತಾಂಶ: ಮೌಂಟ್ ಜಾಯ್ ಕ್ರಿಕೆಟ್ ಕ್ಲಬ್‌ಗೆ ಎರಡು ವಿಕೆಟ್‌ಗಳ ಜಯ.

ಹೈದರಾಬಾದ್ ರೇಸ್

ಸಲಜಾರ್ ಗೆಲ್ಲುವ ನಿರೀಕ್ಷೆ

ನಿಜಾಮ್ಸ್ ಗೋಲ್ಡ್ ಕಪ್ ಭಾನುವಾರದ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಸಲಜಾರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಜಾಯ್ ಓ ಜಾಯ್ 8, ಅಶ್ವ ಪುಸ್ಕಿನ್ 6, ವ್ಯಾಲಪ್ ಆ್ಯಂಡ್ ಗ್ಯಾಲಪ್ 5
2ನೇ ರೇಸ್: ಜೀನ್ ಲಾಫಿಟ್ಟೆ 1, ಮಿಸ್ ಲಿಟ್ಲ್ ಏಂಜೆಲ್ 8, ಸ್ಪೆಷಲ್ ಎಫರ್ಟ್ 3
3ನೇ ರೇಸ್: ಲಾಗೋಸ್ 2, ಸ್ಕಾಟ್ರಮೈಟ್ 5, ಎಕ್ಸ್‌ಫಿನಿಟಿ 4
4ನೇ ರೇಸ್: ಫ್ಯಾಷನ್ ಯೂನಿವರ್ಸ್ 5, ಜಸ್ಟ್ ಇಂಕ್ರೆಡಿಬಲ್ 2, ಲೈಟ್ನಿಂಗ್ ಫೇರಿ 13
5ನೇ ರೇಸ್: ಬೈ ದಿ ಬೇ 1, ಗುಡ್ ಕನೆಕ್ಷನ್ 4, ಸಿಯವಾಶ್ 3
6ನೇ ರೇಸ್: ಸಲಜಾರ್ 1, ಅಲ್ಯುರಿಂಗ್ ಸಿಲ್ವರ್ 6, ಪಾಯಿಂಟ್ ಟು ಪ್ರೂವ್ 3
7ನೇ ರೇಸ್: ಅಲ್ಲೂರೀಸ್ ಪ್ರೈಡ್ 1, ಬಕ್ರಿಲ್ಲ 5, ಹರಿಕೇನ್ 2

ಉತ್ತಮ ಬೆಟ್: ಬೈ ದಿ ಬೇ

ಜಾಕ್‌ಪಾಟ್	1ನೇ ಮಿನಿಜಾಕ್	2ನೇ ಮಿನಿಜಾಕ್
4,5,6,7,8	1,2,3,4	4,5,6,7

1ನೇ ಟ್ರಿಬಲ್	2ನೇ ಟ್ರಿಬಲ್
2,3,4	5,6,7



ಸ್ವಾತಂತ್ರ್ಯದ ಅಮೃತ ಮಹೋತ್ಸವ

ಕಲೆ: ಶೇಖರ್ ಬಳ್ಳಾರಿ

ಕಾಡಿನೂರಿನ ಸ್ವಾತಂತ್ರ್ಯ ಕ್ರಾಂತಿ

ಕಾಡತಾವ ನೆನಪು!

ಶಿವಾನಂದ ಕಳವೆ

ನೂರಾರು ಮೈಲಿಯಾಚೆಯ ನೇತಾರರ ನುಡಿಗಳು ಕಾಡಿನೂರಿಗೆ ತಲುಪಿ ಗ್ರಾಮ ಭಾರತ ಚಳವಳಿಗೆ ಒಂದಾಗಿ ಎದ್ದು ನಿಲ್ಲುತ್ತದೆ. ಹದಿಮೂರು ವರ್ಷದ ಬಾಲಕಿಯೊಬ್ಬಳು ಬ್ರಿಟಿಷ್ ಗವರ್ನರ್ ವಿರುದ್ಧ ಧಿಕ್ಕಾರ ಕೂಗುತ್ತಾಳೆ. ಬಾಲ ವಿಧವೆಯೊಬ್ಬಳು ಆಶ್ರಮದಲ್ಲಿ ಬೆಳೆದು ಚಳವಳಿಗೆ ಜತೆಯಾಗಿ ನಿಲ್ಲುತ್ತಾಳೆ. ಬಿಟ್ಟಿಗಾಡಿ ಸೇವೆ ವಿರುದ್ಧ ರೈತನೊಬ್ಬ ತೊಡೆತಟ್ಟಿ ನಿಲ್ಲುತ್ತಾನೆ. ಹೌದು, ಸಂಗ್ರಾಮದ ಇಂತಹ ಹತ್ತು-ಹಲವು ಅಮರ ಕಥೆಗಳನ್ನು ನೆನಪಿಸಿಕೊಳ್ಳಲು ಇದು 'ಅಮೃತ' ಸಮಯ...

ಅದು 1930ರ ಮೇ ತಿಂಗಳು. ಉಪ್ಪಿನ ಸತ್ಯಾಗ್ರಹ ಚಳವಳಿ ಸಂದರ್ಭ. ಗುಜರಾತಿನ ಧರಸನ ಮತ್ತು ಮಹಾರಾಷ್ಟ್ರದ ವಡಾಲದಲ್ಲಿ ಸತ್ಯಾಗ್ರಹ ನಿಶ್ಚಯವಾಗಿತ್ತು. ದೇಶದ ವಿವಿಧ ಭಾಗಗಳಿಂದ ಹೋರಾಟಗಾರರು ಅಲ್ಲಿಗೆ ಬಂದು ಸೇರುತ್ತಿದ್ದರು. ಹುಬ್ಬಳ್ಳಿಯ ಸೇವಾದಳದ ಸೇನಾಪತಿ ಡಾ. ನಾ.ಸು. ಹರ್ಡಿಕರ್ ಅವರು ಕರ್ನಾಟಕದ ಸತ್ಯಾಗ್ರಹಿಗಳನ್ನು ಮುಂಬೈಗೆ ಕಳಿಸಲು ಸಿದ್ಧತೆ ನಡೆಸಿದ್ದರು. ಕಾರ್ಯಕರ್ತ ವಿ.ಟಿ. ಮಾಗಡಿ ಅವರನ್ನು ಕರೆದು, 'ನೀನು ಶಿರಸಿಗೆ ಹೋಗು. ಅಲ್ಲಿ ಮಾರಿಕಾಂಬಾ ದೇವಾಲಯದಲ್ಲಿ ಸತ್ಯಾಗ್ರಹ ಶಿಬಿರ ಇದೆ. ಅಲ್ಲಿಂದ 50 ಜನರನ್ನು ಆರಿಸಿಕೊಂಡು ನಾಳೆ ಸಂಜೆಯ ಒಳಗಡೆ ಹುಬ್ಬಳ್ಳಿಗೆ ಬಾ. ಅವರನ್ನೆಲ್ಲ ಮುಂಬೈಗೆ ಕರೆದುಕೊಂಡು ಹೋಗಬೇಕು' ಎಂದಿದ್ದರು.

ಮಾಗಡಿಯವರು ಬಸ್ಸಿನಲ್ಲಿ ಶಿರಸಿ ತಲುಪಿದರು. ಮಾರಿಕಾಂಬಾ ದೇಗುಲ ಸೇರುವ ಹೊತ್ತಿಗೆ ಸಂಜೆಯಾಗಿ ಅಲ್ಲಿದ್ದ ಕಾರ್ಯಕರ್ತರು ಊರಿಗೆ ಹೋಗಿದ್ದರು. '25 ಮೈಲಿ ದೂರದ ಸಿದ್ದಾಪುರದ ಶಿಬಿರದಲ್ಲಿ ಜನರಿದ್ದಾರೆ. ಅವರು ಬರಬಹುದು...' ಎಂದು ಯಾರೋ ಸಲಹೆ ನೀಡಿದರು. ಸಿದ್ದಾಪುರದ ಕೊನೆಯ ಬಸ್ಸು ಹೊರಟುಹೋಗಿತ್ತು. ಆದರೂ ಅಲ್ಲಿಗೆ ಹೋಗಲು ನಿರ್ಧರಿಸಿದ ಮಾಗಡಿಯವರು ಬಾಡಿಗೆ ಸೈಕಲ್ ಪಡೆದರು. ಟಾರ್ಚ್ ಬೆಳಕಿನಲ್ಲಿ ಸೈಕಲ್ ತುಳಿಯಲು ಆರಂಭಿಸಿದರು. ಮಿತ್ರರೊಬ್ಬರು ಅವರ ನೆರವಿಗೆ ಬಂದರು. ತ್ಯಾಗಲಿ ಎಂಬ ಹಳ್ಳಿಗೆ ಹೋಗುವ ಹೊತ್ತಿಗೆ ಟಾರ್ಚ್ ಹಾಳಾಯಿತು! ಕತ್ತಲಿನಲ್ಲಿ ಸೈಕಲ್ ಯಾತ್ರೆ ಮಾಡುವುದೆಂತು? ಅಲ್ಲಿನ ಮನೆಯವರೊಬ್ಬರಲ್ಲಿ ಹಣ ಠೇವಣಿ ಇಟ್ಟು ಲಾಟೀನು ಪಡೆದರು. ಕೊನೆಗೆ ಸಿದ್ದಾಪುರ ತಲುಪಿದಾಗ ರಾತ್ರಿ 12 ಗಂಟೆ. ಅಲ್ಲಿ ಗಂಗಾಧರ ಶಾನಭಾಗ್, ಶಂಕರ ಗುಲ್ವಾಡಿ, ಮಹಾಬಲ ಭಟ್ಟರು ಸಿಕ್ಕರು. ಅವರು 50 ಜನ ಸ್ವಯಂ ಸೇವಕರನ್ನು ಮುಂಬೈಗೆ ಕಳಿಸಲು ಒಪ್ಪಿದರು.

ಉಪ್ಪಿನ ಸತ್ಯಾಗ್ರಹಕ್ಕೆ 50 ಸ್ವಯಂಸೇವಕರು ಬರುತ್ತಾರೆಂದು ಹರ್ಡಿಕರ್‌ರಿಗೆ ತಿಳಿಸುವ ಉತ್ಸಾಹ ಮಾಗಡಿಯವರದು. ಬೇರೆ ಮಾರ್ಗವಿಲ್ಲದೇ ಮುಂಜಾನೆ ಮೂರು ಗಂಟೆಗೆ ಪುನಃ ಸೈಕಲ್ ತುಳಿಯಲು ನಿರ್ಧರಿಸಿದರು. ಸಿದ್ದಾಪುರದಿಂದ ನಸುಕಿನ 3.30ಕ್ಕೆ ಹೊರಟವರು ಸೂರ್ಯೋದಯದ ಹೊತ್ತಿಗೆ ಶಿರಸಿ ತಲುಪಿದರು. ಬರೋಬ್ಬರಿ 50 ಮೈಲಿಯ ರಾತ್ರಿಯ ಯಾತ್ರೆ ಅದು. ಅಲ್ಲಿಂದ ಹುಬ್ಬಳ್ಳಿ ಬಸ್ಸಿಗೆ ಪ್ರಯಾಣ ಮಾಡಿ ಹರ್ಡಿಕರ್‌ರಿಗೆ ವಿಷಯ ತಿಳಿಸಿದರು. ಈ ಸಾಹಸ ಯಾತ್ರೆಯ ಕುರಿತು ಕೇಳಿ ಹರ್ಡಿಕರ್ ಬಹಳ ಅಚ್ಚರಿಪಟ್ಟರು.

ಬ್ರಿಟಿಷರ ಕಣ್ತಪ್ಪಿಸಿ ನಡೆಸುವ ಕಾರ್ಯಾಚರಣೆಗೆ ಬಹುತೇಕ ರಾತ್ರಿಯೇ ಪ್ರಶಸ್ತ ಸಮಯವಾಗಿತ್ತು. ಜೋರು ಮಳೆ, ಪ್ರವಾಹ, ಇಂಬಳಗಳ ಕಡಿತ, ಹಾವು, ಹುಲಿಗಳ ಭಯ – ಇಂತಹ ಸಂಕಷ್ಟಗಳ ಮಧ್ಯೆ ನಡುರಾತ್ರಿ ಹಳ್ಳಿಯಿಂದ ಹಳ್ಳಿಗೆ ಸುದ್ದಿ ತಲುಪಿಸುವ ಕಾರ್ಯಕರ್ತರ ದೊಡ್ಡ ಜಾಲವಿತ್ತು. ಮುದ್ರಿತ ಪತ್ರಿಕೆಯನ್ನು ಪ್ರಕಟಣಾಪೂರ್ವ ಪರಿಶೀಲನೆಗೆ ಒಪ್ಪಿಸಬೇಕೆಂಬ ಕಟ್ಟಾಜ್ಞೆಯಿಂದ ಪತ್ರಿಕೆಗಳೂ ಪ್ರಕಟವಾಗುತ್ತಿರಲಿಲ್ಲ. ಕಾಡಿನ ಗುಹೆ, ನೆಲಮಾಳಿಗೆಗಳಲ್ಲಿ ಭೂಗತ ಪತ್ರಿಕೆ ಮುದ್ರಿಸಿ ಯುದ್ಧ ಮಂಡಲಗಳಿಗೆ ತಲುಪಿಸುವ ನಿತ್ಯದ ಕೆಲಸ ನಡೆಯುತ್ತಿತ್ತು.

ಸಿದ್ದಾಪುರ ಜೈಲಿನಲ್ಲಿದ್ದ ಶಂಕರ ಗುಲ್ವಾಡಿಯವರಿಗೆ ನಿತ್ಯ ಸಾಂತಪ್ಪ ನಾಯ್ಕ್ ಕರಪತ್ರ ಒದಗಿಸುತ್ತಿದ್ದ ರೀತಿ ವಿಶೇಷ. ಆಗ ಜೈಲಿನಲ್ಲಿ ಶೌಚಾಲಯ ಇರಲಿಲ್ಲ. ಬೆಳಿಗ್ಗೆ ಶೌಚಕಾರ್ಯಕ್ಕೆ ಕೈದಿಗಳನ್ನು ಹೊರಗಡೆ ಬಿಡುತ್ತಿದ್ದರು. ಮಾವಿನ ಮರದ ಬುಡದಲ್ಲಿ ಬೈಸಿಕಲ್ ಟ್ಯೂಬಿನ ಒಳಗಡೆ ಕರಪತ್ರವನ್ನು ಸಾಂತಪ್ಪ ರಾತ್ರಿ ಬಚ್ಚಿಡುತ್ತಿದ್ದರು. ಶೌಚಕ್ಕೆ ಬಂದ ಗುಲ್ವಾಡಿಯವರು ಅದನ್ನು ಓದುತ್ತಿದ್ದರು. ನಂತರ ಹೋರಾಟದ ಸ್ಥಿತಿಗತಿಗಳನ್ನು ಜೈಲಿನ ಒಳಗಡೆ ಇದ್ದವರಿಗೆ ಗುಟ್ಟಾಗಿ ಹೇಳುತ್ತಿದ್ದರು. ಹಾಗೆಯೇ ಅಂಕೋಲೆಯ ಮಾಣಿದೇವಿ ಎಂಬ ಬಡ ಮಹಿಳೆ ತನ್ನ ಕಟ್ಟಿಗೆ ಹೊರೆಯಲ್ಲಿ ಕರಪತ್ರ ಸಾಗಿಸಿ ಹಳ್ಳಿ ಹಳ್ಳಿಗೆ ತಲುಪಿಸಿದವಳು. ಪೊಲೀಸರು ಇವಳಿಗೆ ಹಿಂಸೆ ನೀಡಿ ಕಣ್ಣಿಗೆ ಕಾರದ ಪುಡಿ ಹಾಕಿದರೂ ಹಿಂಜರಿಯದ ಸಾಹಸಿ, ಅಪ್ಪಟ ರಾಷ್ಟ್ರಪ್ರೇಮಿಯಾಗಿದ್ದಳು ಆಕೆ.

ಸಾಗರ ಪಟ್ಟಣ ಆಗ ಮೈಸೂರು ಆಳ್ವಿಕೆಯಲ್ಲಿತ್ತು. ಉತ್ತರ ಕನ್ನಡದ ಪೊಲೀಸರು ಅಲ್ಲಿಗೆ ಹೋಗಿ ಹೋರಾಟಗಾರರನ್ನು ಬಂಧಿಸುವುದಕ್ಕೆ ಆ ರಾಜ್ಯದ ಪೂರ್ವಾನುಮತಿ ಪಡೆಯಬೇಕಿತ್ತು. ಈ ಅವಕಾಶ ಬಳಸಿಕೊಂಡು ತಡಗಳಲೆ ಹಳ್ಳಿ ಹೋರಾಟದ ಗುಪ್ತ ಕಾರ್ಯಾಚರಣೆಯ ಪ್ರಮುಖ ಕೇಂದ್ರವಾಯಿತು. 1932ರಲ್ಲಿ ಈ ಹಳ್ಳಿಯಲ್ಲಿ ನಡೆದ ಸಭೆಯೊಂದರಲ್ಲಿ 200 ಭೂಗತ ಕಾರ್ಯಕರ್ತರು ಭಾಗವಹಿಸಿದ್ದನ್ನು ಗಮನಿಸಿದರೆ ಹೋರಾಟದ ತಂತ್ರ ಅಚ್ಚರಿ ಮೂಡಿಸದಿರದು. ಅಂಕೋಲೆಯ ಹೋರಾಟಗಾರರು ರಾತ್ರಿ ಕಾಡಿನಲ್ಲಿ ಅವಿತು ಕಾರ್ಯಾಚರಣೆ ನಡೆಸುವಾಗ ಸುತ್ತಲೂ ಬೆಂಕಿ ಹಾಕಿಕೊಂಡು ಕೂತಿದ್ದರು. ಕಾಡಿನ ಎರಡು ಹುಲಿಗಳು ಇವರು ಕುಳಿತ ಸನಿಹದಲ್ಲಿಯೇ ಮಲಗಿ ಬೆಂಕಿ ಕಾಯಿಸುತ್ತಿದ್ದ ಘಟನೆಯೂ ನಡೆದಿತ್ತು!

ಸಾಗರದ ಕಾನ್ಲೆಯ ವಿಶ್ವೇಶ್ವರಯ್ಯ ಎಂಟು ಮೈಲಿ ದೂರಕ್ಕೆ ಒಂದೂವರೆ ಗಂಟೆಯಲ್ಲಿ ಕಾಲ್ನಡಿಗೆಯಲ್ಲಿ ಹೋಗುತ್ತಿದ್ದರಿಂದ ಅವರನ್ನು 'ಅಮೃತ ಮಹಲ್' ತಳಿಯೆಂದು ತಮಾಷೆ ಮಾಡಲಾಗುತ್ತಿತ್ತು. ಮಲೆನಾಡಿನಲ್ಲಿ ಆಗ ದೂರದ ಪ್ರಯಾಣವು ಕಾಲ್ನಡಿಗೆ ಇಲ್ಲವೆ ಚಕ್ಕಡಿ ಗಾಡಿಯನ್ನು ಅವಲಂಬಿಸಿತ್ತು. ಉತ್ತರ ಕನ್ನಡ ಜಿಲ್ಲೆಯ ಸಂಘಟನೆಯ ಹೊಣೆ ಹೊತ್ತಿದ್ದ ಸರ್ದಾರ್ ವೆಂಕಟ್ರಾಮಯ್ಯ ಬೆಂಗಳೂರಿನಿಂದ ಹಾವೇರಿಗೆ ರೈಲಿನಲ್ಲಿ ಬಂದು ನಂತರ ಎತ್ತಿನ ಗಾಡಿಯಲ್ಲಿ ಶಿರಸಿ, ಸಿದ್ದಾಪುರಕ್ಕೆ ಬರುತ್ತಿದ್ದರು. ಇವರು ಬೆಂಗಳೂರಿಗೆ ಹೋಗುವಾಗ ಬರುವಾಗ ಸುಗಾವಿಯ ಸುಬ್ಬಣ್ಣಭಟ್ಟರ ಮನೆಯಲ್ಲಿ ಇರುತ್ತಿದ್ದರು. ಇದಕ್ಕೆ ಮುಖ್ಯ ಕಾರಣ ಕೊರ್ಲಕಟ್ಟೆಯ ದತ್ತೋಬರಾವ್ ಅವರಲ್ಲಿ ಇದ್ದ ಕುಲದೆತ್ತುಗಳಂತೆ! ಆ ಎತ್ತಿನ ಗಾಡಿ ಗಂಟೆಗೆ ನಾಲ್ಕು ಮೈಲಿ ವೇಗದಲ್ಲಿ ಹೋಗುತ್ತಿತ್ತು. ರಾತ್ರಿ 12 ಗಂಟೆಗೆ ಪಯಣ ಆರಂಭಿಸಿದರೆ ಮುಂಜಾನೆ ನಿಗದಿತ ಸ್ಥಳ ತಲುಪುತ್ತಿತ್ತು.

ಒಮ್ಮೆ ಮುಂಬೈಯಿಂದ ಬ್ರಿಟಿಷ್ ಗವರ್ನರ್ ಕಾರವಾರಕ್ಕೆ ಬರುವವರಿದ್ದರು. ಈ ಸಂದರ್ಭದಲ್ಲಿ ಅವರಿಗೆ ಸನ್ಮಾನ ಮಾಡಿ ಎರಡು ಸಾವಿರ ರೂಪಾಯಿ ಹಮ್ಮಿಣಿ ನೀಡಲು ಡಿಸ್ಟ್ರಿಕ್ ಲೋಕಲ್ ಬೋರ್ಡಿನವರು ನಿರ್ಧರಿಸಿದ್ದರು. ಕರನಿರಾಕರಣೆ ವಿರುದ್ಧ ಇಡೀ ಜಿಲ್ಲೆ ಹೋರಾಡಿ ಎಲ್ಲರೂ ಆಸ್ತಿ ಮನೆಗಳನ್ನು ಕಳಕೊಂಡು ನಿರ್ಗತಿಕರಾಗಿ ಸಂಕಷ್ಟದಲ್ಲಿ ಇರುವಾಗ ನಮ್ಮದೇ ಜನ ಗವರ್ನರ್‌ಗೆ ಸನ್ಮಾನ ಮಾಡಲು ಮುಂದಾಗಿದ್ದು ತೀವ್ರ ವಿರೋಧಕ್ಕೆ ಕಾರಣವಾಯಿತು. ಶಿರಸಿ, ಸಿದ್ದಾಪುರ, ಅಂಕೋಲಾದಲ್ಲಿ 'ಗೋ ಬ್ಯಾಕ್ ಗವರ್ನರ್' ಎಂದು ಹೋರಾಟ ನಡೆಯಿತು. ಚಳವಳಿಗಾರರು ಕಾರವಾರಕ್ಕೆ ಹೊರಟಾಗ ಎಲ್ಲರನ್ನೂ ಬಂಧಿಸಲಾಯಿತು. ಅಂಕೋಲಾದಲ್ಲಿಯೂ ಪೊಲೀಸರ ಕಾರ್ಯಾಚರಣೆಯಿಂದ ಪ್ರತಿಭಟನೆ ಹತ್ತಿಕ್ಕುವ ಕೆಲಸ ನಡೆಯಿತು. ಆಗ ಕಾಣೇ ಬೊಮ್ಮಕ್ಕ ಎಂಬ 13 ವರ್ಷದ ಬಾಲಕಿ ನಡುರಾತ್ರಿ ಗುಡ್ಡ ಇಳಿದು ಕಾರವಾರ ತಲುಪಿದಳು. ಪೊಲೀಸ್ ಕಟ್ಟುನಿಟ್ಟಿನ ಕಾವಲಿನಲ್ಲಿ ನುಸುಳಿ ಕಪ್ಪುಬಟ್ಟೆ ಪ್ರದರ್ಶಿಸಿ 'ಗೋ ಬ್ಯಾಕ್ ಗವರ್ನರ್' ಎಂದು ಕರಪತ್ರ ಹಂಚಿದಳು.

ಕ್ರಿ.ಶ. 1932ರ ಆಗಸ್ಟ್‌ನಲ್ಲಿ ಮುಂಬೈಯಲ್ಲಿ ಅಲ್ಲಿನ ಸತ್ಯಾಗ್ರಹಿಗಳ ಮೇಲೆ ಪೊಲೀಸರು ಲಾಠಿ ಪ್ರಹಾರ ನಡೆಸಿದ್ದರು. ಮುಂಬೈಗೆ ಹೋಗಿದ್ದ ಸರ್ದಾರ್ ವೆಂಕಟ್ರಾಮಯ್ಯರ ಜೊತೆಗೆ ಮಾತಾಡುತ್ತ ಹೋರಾಟಗಾರ ಸೂಟಿ ಬಾಟಿವಾಲಾ ಒಂದು ವಿಷಯ ಗಮನಕ್ಕೆ ತಂದರು. 'ಮುಂಬೈ ಸರ್ಕಾರದಲ್ಲಿ ಕೊಂಕಣಿ, ಮರಾಠಿ ಮಾತಾಡುವ ಕಾರವಾರದ ಪೊಲೀಸರು ಜಾಸ್ತಿ. ಇವರು ಲಾಠಿ ಪ್ರಹಾರದಲ್ಲಿ ತೊಡಗಿದ್ದಾರೆ. ಇವರಿಗೆ ದೇಶದ ಹೋರಾಟದ ಅರಿವು ಸ್ವಲ್ಪವೂ ಇಲ್ಲ' ಎಂದು ಅವರು ಹೇಳಿದ್ದರು. ಸರ್ದಾರ್ ವೆಂಕಟ್ರಾಮಯ್ಯ ಊರಿಗೆ ಮರಳಿದವರು ಕಾರವಾರ, ಗೋಕರ್ಣ, ಅಂಕೋಲಾ ಸುತ್ತಾಡಿ ಸ್ಥಳೀಯ ಕಾರ್ಯಕರ್ತರ ಜೊತೆಗೆ ಮಾತಾಡಿ, ಕೊಂಕಣಿಯಲ್ಲಿ ಮಹಾಭಾರತ, ರಾಮಾಯಣ ಕಥೆ ಹೇಳುವ ಜನರನ್ನು ಗುರುತಿಸಿದರು.

14ನೇ ಪುಟಕ್ಕೆ...

ನೆಲಮೂಲದ ಹೋರಾಟಕ್ಕೆ ಮಾದರಿ

ಕರನಿರಾಕರಣೆ ಚಳವಳಿಯಲ್ಲಿ ರಾಜ್ಯದ ಉತ್ತರ ಕನ್ನಡ ಜಿಲ್ಲೆ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಹೋರಾಟ ಅನುಪಮವಾದುದು. ರಾಷ್ಟ್ರದ ಹಲವು ಮಹಾನಾಯಕರು ಇಲ್ಲಿಗೆ ಭೇಟಿ ನೀಡಿದ್ದರು. ಇದು ದಕ್ಷಿಣದ ಬಾರ್ಡೋಲಿ ಎಂದು ಹೆಸರಾಗಿದೆ. ಶಿರಸಿ, ಸಿದ್ದಾಪುರ, ಅಂಕೋಲಾ ಸೇರಿದಂತೆ ಇಲ್ಲಿನ ವಿವಿಧ ಪ್ರದೇಶ ಚಳವಳಿಯ ನೆಲ. ಇಡೀ ಕುಟುಂಬಕ್ಕೆ ಕುಟುಂಬವೇ ಹೋರಾಟಕ್ಕೆ ಹೋಗಿ ಜೈಲು ಶಿಕ್ಷೆ ಅನುಭವಿಸಿವೆ, ಸಾವಿರಾರು ಕುಟುಂಬಗಳು ಮನೆ, ಪಾತ್ರೆ, ಭೂಮಿ ಕಳಕೊಂಡಿವೆ. ಇಪ್ಪತ್ತು ಗಿದ್ನ (70 ಕಿಲೊ) ಭತ್ತಕ್ಕೆ ಆಗ ಏಳು ರೂಪಾಯಿ ಬೆಲೆ. ಆದರೆ ಜನಕ್ಕೆ ಇಷ್ಟು ದುಡ್ಡು ಕೊಟ್ಟು ಖರೀದಿಸಲು ಹಣವಿರಲಿಲ್ಲ. ಭತ್ತದ ಬೇಸಾಯದ ಬನವಾಸಿ ಅಲ್ಲಿಂದ ಸುಮಾರು 45 ಕಿಲೊಮೀಟರ್ ದೂರ. ಮುಂಜಾನೆ ಅಲ್ಲಿಗೆ ಕಾಲ್ನಡಿಗೆಯಲ್ಲಿ ಹೋಗಿ ಭತ್ತ ಖರೀದಿಸಿ ತಲೆ ಹೊರೆಯಲ್ಲಿ ಹೊತ್ತು ನಡೆಯುತ್ತಿದ್ದರು. ಇದಕ್ಕೆ ಕಾರಣ ಈ ಪ್ರಮಾಣದ ಭತ್ತ ಬನವಾಸಿಯಲ್ಲಿ 6 ರೂಪಾಯಿಗೆ ಸಿಗುತ್ತಿತ್ತು! ಒಂದೇ ಒಂದು ರೂಪಾಯಿ ಉಳಿಸಲು ಬರೋಬ್ಬರಿ ತೊಂಬತ್ತು ಕಿಲೊಮೀಟರ್ ನಡೆಯುವ ಅನಿವಾರ್ಯ ಜನಕ್ಕೆ ಇತ್ತು ಎಂದು ಸ್ವಾತಂತ್ರ್ಯ ಹೋರಾಟಗಾರ ದಿ. ಮಗೇಗಾರ್ ನರಸಿಂಹ ಹೆಗಡೆ ನೆನಪಿಸಿಕೊಂಡಿದ್ದರು. ಅಂಕೋಲಾ ಕರನಿರಾಕರಣೆ ಚಳವಳಿಯಲ್ಲಿ 400 ಖಾತೆದಾರರ 625 ಎಕರೆ ಭತ್ತದ ಗದ್ದೆ ಸರ್ಕಾರದ ಪಾಲಾಗಿತ್ತು. ಸಿದ್ದಾಪುರದಲ್ಲಿ 420 ಖಾತೆದಾರರ 1,400 ಎಕರೆ ಭೂಮಿ ಸರ್ಕಾರದ ವಶವಾಗಿತ್ತು. ಮನೆಯ ಹಿರಿಯರೆಲ್ಲ ಜೈಲಿಗೆ ಹೋದಾಗ ಮಕ್ಕಳು ಶಿವಮೊಗ್ಗ ಬಾಲಿಕಾಶ್ರಮ ಸೇರಿದರು. ವೀರ ನೆಲದ ವಿಶೇಷವೆಂದರೆ ಹಿರಿಯರು, ಮಹಿಳೆಯರು, ಮಕ್ಕಳು ಎಲ್ಲರೂ ಚಳವಳಿಯಲ್ಲಿ ಭಾಗಿಯಾದವರು. ರಾಷ್ಟ್ರ ರಾಜಕೀಯದ ವಿಷಯಗಳನ್ನು ಭಾಷಣ, ಕರಪತ್ರಗಳ ಮೂಲಕ ಅರಿತವರು ನೆಲಮೂಲದಲ್ಲಿ ಹೋರಾಟ ಸಂಘಟಿಸಿದ ರೀತಿಯೇ ಅನೂಹ್ಯವಾದುದು.

ಕಮಲಾದೇವಿ ಚಟ್ಟೋಪಾಧ್ಯಾಯ

ಉಮಾಬಾಯಿ ಕುಂದಾಪುರ

ಯಶೋಧರಾ ದಾಸಪ್ಪ

ಚಳವಳಿ ಹಿಂದಿನ 'ಸ್ತ್ರೀಶಕ್ತಿ'

ಗಾಯತ್ರಿ ನಾವಡ

ಭಾರತದ ಸ್ವಾತಂತ್ರ್ಯ ಚಳವಳಿಯ ಇತಿಹಾಸವನ್ನು ಅವಲೋಕಿಸಿದರೆ, ಮಹಿಳಾ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ನಮ್ಮ ರಾಜಕೀಯ ದಾಖಲೆಗಳಲ್ಲಿ ಕಾಣಸಿಗುವುದು ಅನಿಬೆಸೆಂಟ್, ಸರೋಜಿನಿ ನಾಯ್ಡು, ಕಮಲಾದೇವಿ ಚಟ್ಟೋಪಾಧ್ಯಾಯ, ವಿಜಯಲಕ್ಷ್ಮಿ ಪಂಡಿತ್ ಅವರಂತಹ ನಾಲ್ಕಾರು ಪ್ರಮುಖ ಹೆಸರುಗಳು. ಇವರು ಪುರುಷ ಮಾದರಿಯ ರಾಜಕೀಯ ಚಳವಳಿಯಲ್ಲಿ ಪಾಲ್ಗೊಂಡವರು ಎನ್ನುವುದು ಗಮನಾರ್ಹ. ಅಂದರೆ ನಮ್ಮ ಚಳವಳಿಯ ತಾತ್ವಿಕತೆಯು ಪುರುಷ ಹೋರಾಟಗಾರರು ಮತ್ತು ಅವರ ಹೋರಾಟದ ವಿಧಾನವನ್ನು ಪ್ರಧಾನವಾಗಿ ಗ್ರಹಿಸಿದೆ ಮತ್ತು ದಾಖಲಿಸಿದೆ.

ಸ್ವಾತಂತ್ರ್ಯ ಚಳವಳಿಯಲ್ಲಿ ನೇರವಾಗಿ ಭಾಗಿಯಾದ ಕರ್ನಾಟಕದ ಮಹಿಳೆಯರ ಸಂಖ್ಯೆ ಕಡಿಮೆ ಎನಿಸಿದರೂ ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಇಲ್ಲಿನ ಮಹಿಳೆಯರದೇ ಪ್ರಧಾನ ಪಾತ್ರವಾಗಿತ್ತು. ರಾಷ್ಟ್ರೀಯ ಚಳವಳಿಯ ವಿಧಾಯಕ ಕಾರ್ಯಕ್ರಮಗಳಾದ ಖಾದಿ ಪ್ರಚಾರ, ಪಾನನಿಷೇಧ, ಹಿಂದಿ ಪ್ರಚಾರ, ಸ್ವದೇಶಿ ಚಳವಳಿ, ಅಸ್ಪೃಶ್ಯತಾ ನಿವಾರಣೆ, ಸ್ತ್ರೀ ಜಾಗೃತಿ ಚಳವಳಿಯಲ್ಲಿ ಮಹಿಳೆಯರು ಸ್ಪಷ್ಟವಾದ ಭೂಮಿಕೆಯನ್ನು ನಿರ್ವಹಿಸಿದರು. ಮಹಿಳೆಯರ ಈ ನೆಲೆಯ ಸಾಮೂಹಿಕ ಪಾಲ್ಗೊಳ್ಳುವಿಕೆ ಇಲ್ಲದಿದ್ದಲ್ಲಿ ಭಾರತದ ಸ್ವಾತಂತ್ರ್ಯ ಇತಿಹಾಸ ಬೇರೆ ರೀತಿಯೇ ಆಗಿರುತ್ತಿತ್ತು ಎನ್ನುವುದನ್ನು ನಾವು ಗಮನಿಸಬೇಕು.

ವಾಸ್ತವವಾಗಿ ಜನಸಾಮಾನ್ಯರು, ಮಹಿಳೆಯರು ರಾಜಕೀಯ ಹಾಗೂ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ಮೂಲಕ ಈ ಚಳವಳಿಯನ್ನು ಒಂದು ಜನಾಂದೋಲನವಾಗಿ ರೂಪಿಸಿದರು. ಹಾಗೆ ನೋಡಿದರೆ ಈ ಜನಾಂದೋಲನವೇ ಬ್ರಿಟಿಷರನ್ನು ಕಂಗಾಲುಗೊಳಿಸಿದ್ದು. ಯಾಕೆಂದರೆ ಬ್ರಿಟಿಷರಿಗೆ ಶಸ್ತ್ರಾಸ್ತ್ರ ಯುದ್ಧ, ಹಿಂಸೆಯ ಯುದ್ಧತಂತ್ರ ಪರಿಚಿತವಾಗಿತ್ತೇ ಹೊರತು ಭಾರತೀಯ ಅಹಿಂಸೆ, ಉಪವಾಸ ಸತ್ಯಾಗ್ರಹ, ಸಾಮೂಹಿಕತೆಯನ್ನು ಎದುರಿಸುವ ತಂತ್ರಗಾರಿಕೆ ತಿಳಿದಿರಲಿಲ್ಲ.

ಈ ಸೈದ್ಧಾಂತಿಕತೆಯಲ್ಲಿ ಸ್ವಾತಂತ್ರ್ಯ ಚಳವಳಿಯಲ್ಲಿ ಕರ್ನಾಟಕದ ಮಹಿಳಾ ಹೋರಾಟವನ್ನು ಮೂರು ಮುಖಗಳಲ್ಲಿ ಕಂಡುಕೊಳ್ಳಬಹುದು. 1. ರಾಜಕೀಯ ಚಳವಳಿಗಾರರಾಗಿ 2. ರಚನಾತ್ಮಕ ಕಾರ್ಯಕ್ರಮದ ನಿರ್ವಾಹಕರಾಗಿ 3. ಈ ಎರಡೂ ಚಳವಳಿಗಳ ಪೂರಕ ಪಾತ್ರಗಳಾಗಿ.

ಮೊದಲ ಹಂತದಲ್ಲಿ ಕಮಲಾದೇವಿ ಚಟ್ಟೋಪಾಧ್ಯಾಯ, ಯಶೋಧರಾ ದಾಸಪ್ಪ, ಉಮಾಬಾಯಿ ಕುಂದಾಪುರ, ಕಾರ್ನಾಡು ಸೋದರಿಯರು, ಕೃಷ್ಣಾಬಾಯಿ ಪಂಜೀಕರ್, ಸುಬ್ಬಮ್ಮ ಜೋಯಿಸ, ಶಾಂತಾಬಾಯಿ ಕರಮರಕರ ಅವರಂತಹ ಮೇಲು ನೆಲೆಯ ಮಹಿಳೆಯರು ರಾಷ್ಟ್ರ ನಾಯಕರ ಪ್ರಭಾವಕ್ಕೆ ಒಳಗಾಗಿ ರಾಷ್ಟ್ರೀಯ ಚಳವಳಿಗೆ ಧುಮುಕಿದರು. ಕರಾವಳಿ ನೆಲವು ಉಪ್ಪಿನ ಸತ್ಯಾಗ್ರಹದ ಆರಂಭ ಕೇಂದ್ರವಾಯಿತು. ಉತ್ತರ ಕನ್ನಡದಲ್ಲಿ ಶಾಂತಾಬಾಯಿ ಕರಮರಕರ, ಉಮಾಬಾಯಿ ಕುಂದಾಪುರ, ಸೀತಾಬಾಯಿ ಸರಾಫ್, ಆನಂದಿಬಾಯಿ ಹಮ್ಮತೀಕರ, ಅಥಣಿಯ ಅಂಬಕ್ಕ ಬಳೆಗಾರ, ಅವಿಭಜಿತ ದಕ್ಷಿಣ ಕನ್ನಡ ಭಾಗದಲ್ಲಿ ಕಮಲಾದೇವಿ, ರಾಧಾ ಕಾರ್ನಾಡ್, ಸುಗುಣಾ ಕಾರ್ನಾಡ್ ಮೊದಲಾದವರು ಈ ಚಳವಳಿಯ ಮುನ್ನೆಲೆಯಲ್ಲಿದ್ದರು. ಉಪ್ಪಿನ ತಯಾರಿ ಹಾಗೂ ಮಾರಾಟಗಳಲ್ಲಿ ಮಹಿಳೆಯರು ಸಾಮೂಹಿಕವಾಗಿ ಪಾಲ್ಗೊಂಡರು.

ಕರನಿರಾಕರಣ ಹಾಗೂ ಕಾನೂನುಭಂಗ ಚಳವಳಿಯ ಸಂದರ್ಭದಲ್ಲಿ ಧಾರವಾಡ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಮಹಿಳಾ ಚಳವಳಿ ತೀವ್ರ ಸ್ವರೂಪವನ್ನು ಪಡೆದುಕೊಂಡಿತು. ಕರ ನಿರಾಕರಣಗಾರರನ್ನು ಬಂಧಿಸಿ ಸರ್ಕಾರ ಅವರ ಆಸ್ತಿಪಾಸ್ತಿಯನ್ನು ವಶಪಡಿಸಿಕೊಂಡು ಕುಟುಂಬಗಳನ್ನು ಹೊರಹಾಕಿದಾಗ, ಗ್ರಾಮೀಣ ಮಹಿಳೆಯರು ಸಾಂಘಿಕ ನೆಲೆಯಲ್ಲಿ ಚಳವಳಿಗೆ ಇಳಿದರು. ಹರಾಜಿನ ಸಂದರ್ಭಗಳಲ್ಲಿ ಸರ್ಕಾರದ ವಿರುದ್ಧ ಹಾಗೂ ಹರಾಜಿನಲ್ಲಿ ವಸ್ತುಗಳನ್ನು ಕೊಂಡವರ ಮನೆಗಳ ಮುಂದೆ ಉಪವಾಸ ಸತ್ಯಾಗ್ರಹ ನಡೆಸಿದರು. ಉತ್ತರ ಕನ್ನಡ ಭಾಗದಲ್ಲಿ ರಮಾಬಾಯಿ ಪ್ರಭು, ಭಾಗೀರಥಿ ಬಾಯಿ ಪುರಾಣಿಕ, ದೇವಯಾನಿ ಹರಿ ಪೈ, ಲಕ್ಷ್ಮೀಬಾಯಿ ರಂಗಪ್ಪ, ಮಹಾದೇವಿ ನಾರಾಯಣ ಹೆಗಡೆ ಮುಂತಾದವರು, ಶಿವಮೊಗ್ಗ ಜಿಲ್ಲೆಯ ಗೌರಮ್ಮ, ಕಾವೇರಮ್ಮ, ದುಗ್ಗಮ್ಮ, ಭಾಗೀರಥಿಯಮ್ಮ, ಸುಬ್ಬಮ್ಮ ಜೋಯಿಸರು ನಡೆಸಿದ ಹೋರಾಟ ಅತ್ಯಂತ ಯಶಸ್ವಿಯಾಯಿತು.

ಅರಣ್ಯ ಕಾಯ್ದೆ, ಈಚಲು ಮರ ಕಡಿಯುವ ಪ್ರಕ್ರಿಯೆಯಲ್ಲಿ ಕರ್ನಾಟಕದ ಮಹಿಳೆಯರು ಸ್ಪಷ್ಟ ಪಾತ್ರ ವಹಿಸಿದರು. ಅರಣ್ಯ ಕಾನೂನನ್ನು ಮುರಿದು ಮರ ಕಡಿದ ಬಿಸಿಲಕೊಪ್ಪ ಮುಕ್ಕುಂಟೆಯವರನ್ನು ದಸ್ತಗಿರಿ ಮಾಡಿದಾಗ ಅವರ ಹೆಂಡತಿ ತಾವೂ ಒಂದು ಮರ ಕಡಿದು ತನ್ನನ್ನೂ ದಸ್ತಗಿರಿ ಮಾಡಬೇಕೆಂದು ಹಟ ತೊಟ್ಟರು.

15ನೇ ಪುಟಕ್ಕೆ...

ಭಾರತ ಮರೆತ 'ದಲಿತ' ಕ್ರಿಕೆಟ್ ಕಲಿ

ಡಿ.ಉಮಾಪತಿ

ಗೆದ್ದವರು ಬರೆದದ್ದೇ ಚರಿತ್ರೆ ಎಂಬುದು ಕಠೋರ ಸತ್ಯ. ಹರಿಯುವ ಹಳ್ಳದಗುಂಟ ಮೇಲ್ಭಾಗದಲ್ಲಿ ಕುಳಿತ ತೋಳವು, ಕೆಳಭಾಗದಲ್ಲಿ ನೀರು ಕುಡಿದ ಕುರಿಮರಿಯ ಮೇಲೆ ಎಂಜಲು ಮಾಡುತ್ತಿದ್ದಿ ಎಂದು ಆರೋಪಿಸಿ ತಿಂದು ಹಾಕಿದಂತಹ ಇತಿಹಾಸವಿದು. ತುಳಿಸಿಕೊಂಡವರ ಕಣ್ಣುಗಳಿಂದ ನೋಡಿದ ಇತಿಹಾಸದ ರಚನೆಯಾಗಿಲ್ಲ. ಆಗಿರುವ ಅಲ್ಪಸ್ವಲ್ಪವನ್ನು ಮುಖ್ಯಧಾರೆಯೆಂಬುದು ಹತ್ತಿರ ಬಿಟ್ಟುಕೊಂಡೇ ಇಲ್ಲ.

ದಲಿತ ದ್ವೇಷದ ಅಪರಾಧಗಳು, ದಮನ ದೌರ್ಜನ್ಯ ತರತಮಗಳು ನಿತ್ಯ ಬದುಕಿನ ರೀತಿ ರಿವಾಜುಗಳೇ ಆಗಿ ಹೋಗಿವೆ. ಗ್ರಾಮಗಳಲ್ಲಿ ಅವರನ್ನು ಊರ ಹೊರಗಿನ 'ಹೊಲಗೇರಿ'ಗಳಲ್ಲಿ ಇಡಲಾಗಿದೆ. ಪೇಟೆ ಪಟ್ಟಣ ನಗರಗಳಲ್ಲಿ ಅವರನ್ನು 'ಮನೋನಿರ್ಮಿತ ಹೊಲಗೇರಿ'ಗಳಿಗೆ ಅಟ್ಟಲಾಗಿದೆ. ಸಮಾಜವೆಂಬುದು ಅವರ ಪಾಲಿಗೆ ಅಗೋಚರ ಕಾರಾಗೃಹ. ಎತ್ತರೆತ್ತರಕ್ಕೆ ಎದ್ದು ನಿಂತು ಗಹಗಹಿಸಿ ಕಬಳಿಸುವ ಬಗೆ ಬಗೆಯ ಅಸ್ಪೃಶ್ಯತೆಯ ತಡೆಗೋಡೆಗಳ ನಡುವೆ ಅವರು ವಿನಾಕಾರಣ ಕಳಂಕಿತ ಕೈದಿಗಳು. ಈ ಅಮಾನುಷ ನಡವಳಿಕೆಯು ಭಾರತದ ಆತ್ಮವನ್ನು ಗಾಯಗೊಳಿಸಿದೆ. ಶತಮಾನಗಳ ಕೀವು ಪಿತಗುಟ್ಟಿದೆ. ಈ ಗಾಯವ ತೊಳೆದು ಮದ್ದು ತುಂಬಿ ಪಟ್ಟಿ ಕಟ್ಟುವುದು ಪೆಟ್ಟು ನೀಡುತ್ತಿರುವವರ ಕರ್ತವ್ಯ. ಆದರೆ ಅವರು ನಿರಾಕರಣೆ ನಿರ್ಲಕ್ಷ್ಯಗಳಲ್ಲಿ ಮುಳುಗಿದ್ದಾರೆ. ಮದ್ದು ಅರೆಯುವ ಬದಲಿಗೆ ನಂಜು ಕಾರತೊಡಗಿದ್ದಾರೆ. ಉಪ್ಪು ಉಜ್ಜತೊಡಗಿದ್ದಾರೆ. ಭಾರತದ ಆತ್ಮದ ಗಾಯವು ತಮ್ಮ ಆತ್ಮಗಳಿಗೆ ಅಂಟಿರುವ ಕೊನೆಯಿಲ್ಲದ ವ್ಯಾಧಿ ಎಂಬುದನ್ನು ಕಾಣದಾಗಿದ್ದಾರೆ. ಖುದ್ದು ದಲಿತ ದ್ವೇಷದ 'ಕೈದಿ'ಗಳಾಗಿರುವ ಅರಿವೂ ಅವರಿಗಿಲ್ಲ. ದಲಿತ ಸಮುದಾಯಗಳ ವಿಮೋಚನೆಯಲ್ಲಿ ತಮ್ಮ ಬಿಡುಗಡೆಯೂ ಅಡಗಿದೆ ಎಂಬ ನಿಜವನ್ನು ನಿರಾಕರಿಸಿದ್ದಾರೆ.

ವಂದನಾ ಕಟಾರಿಯಾ ಎಂಬ ಒಲಿಂಪಿಕ್ಸ್ ಹಾಕಿ ದಲಿತ ಪ್ರತಿಭೆಯನ್ನು ಜಾತಿವಾದಿ ಶಕ್ತಿಗಳು ಅವಹೇಳನಕ್ಕೆ ಗುರಿ ಮಾಡಿದವು. ಈ ಅವಮಾನ ಮೊದಲನೆಯದಲ್ಲ, ಕೊನೆಯದೂ ಆಗುವ ಸೂಚನೆಯಿಲ್ಲ. ಅದ್ಭುತ ಆಟದ ಮೂಲಕವೇ ಅವಹೇಳನಕ್ಕೆ ಜವಾಬು ನೀಡಿದ ವಂದನಾ ಹಿಂದೆ ತಿರುಗಿ ನೋಡಿದರೆ ತಾವು ಒಬ್ಬಂಟಿಯಲ್ಲ ಎಂಬುದು ಗೊತ್ತಾಗುತ್ತದೆ. ಅವಹೇಳನವನ್ನು ಪ್ರತಿಭೆಯಿಂದ ಗೆಲ್ಲುವ ಸಿರಿವಂತ ಪರಂಪರೆಯೊಂದು ಆಕೆಯ ಬೆನ್ನಿಗಿದೆ.

ಶತಮಾನದ ಹಿಂದೆ ಪಲ್ವಂಕರ್ ಬಾಲೂ ಎಂಬ ಅಸ್ಪೃಶ್ಯ ಜಾತಿಗೆ ಸೇರಿದ ಕ್ರೀಡಾಳು ಒಬ್ಬರಿದ್ದರು. ಅವರೇ ಭಾರತದ ಮೊತ್ತಮೊದಲ ಮಹಾನ್ ಕ್ರಿಕೆಟ್ ಆಟಗಾರನೆಂದು ಬಣ್ಣಿಸುತ್ತಾರೆ ಜನಪರ ಇತಿಹಾಸಕಾರ ಮತ್ತು ಅಂಕಣಕಾರ ರಾಮಚಂದ್ರ ಗುಹಾ. ಭಾರತ ಮೊದಲ ಅಧಿಕೃತ ಕ್ರಿಕೆಟ್ ಟೆಸ್ಟ್ ಆಡಿದ್ದು 1932ರಲ್ಲಿ. ದೇಶದ ಕ್ರಿಕೆಟ್ ಇತಿಹಾಸವನ್ನು ಬಹುತೇಕ ಇತಿಹಾಸಕಾರರು ಅಲ್ಲಿಂದ ದಾಖಲಿಸುತ್ತ ಬಂದಿದ್ದಾರೆ. 1932ರ ಹಿಂದಿನ ಕ್ರಿಕೆಟ್ ಕ್ರೀಡೆಯ ಇತಿಹಾಸ ತೀವ್ರ ಅವಗಣನೆಗೆ ಈಡಾಗಿದೆ. ಹೀಗಾಗಿ ಪಲ್ವಂಕರ್ ಬಾಲೂ ಅವರ ಮಹಾನತೆ ಕೂಡ ಇತಿಹಾಸದ ಅಂಧಕಾರದ ಆಳದಲ್ಲಿ ಹೂತುಹೋಗಿದೆ. ಒಂದೊಮ್ಮೆ ಡಾ.ಬಾಬಾಸಾಹೇಬ ಅಂಬೇಡ್ಕರ್ ಪಾಲಿನ 'ಹೀರೊ' ಆಗಿದ್ದ ಬಾಲೂ ಅವರನ್ನು ದಲಿತ ಬುದ್ಧಿಜೀವಿ ವರ್ಗ ಲಕ್ಷಿಸಿದಂತಿಲ್ಲ.

'ವಿಶಿಷ್ಟವಾದ ಏನನ್ನಾದರೂ ಸಾಧಿಸು' (ಕಹಿಂತಾರಿ ನವೇಚ್ ಕರಾ) ಎಂಬ ಮರಾಠಿ ಪುಸ್ತಕ ಮಾಲಿಕೆಯಡಿ ಅನೇಕ ಮಹಾಮಹಿಮ ವ್ಯಕ್ತಿತ್ವಗಳ ಕುರಿತು ಪುಸ್ತಿಕೆಗಳು 1959ರಲ್ಲಿ ಹೊರಬಿದ್ದಿದ್ದವು. ಧ್ಯಾನ್‌ಚಂದ್, ರಾಜಾ ರವಿವರ್ಮ, ರವೀಂದ್ರನಾಥ ಟ್ಯಾಗೋರ್, ಸ್ಪಾರ್ಟಕಸ್, ಮೈಕಲೆಂಜಲೋ, ಬೆಂಜಮಿನ್ ಫ್ರ್ಯಾಂಕ್ಲಿನ್, ಲಾರೆನ್ಸ್ ಆಫ್ ಅರೇಬಿಯಾ, ಸೂಯೆಜ್ ಕಾಲುವೆಯ ನಿರ್ಮಾತೃ ಫರ್ಡಿನೆಂಡ್ ಲೆಸಪ್ಸ್ ಅವರಿಗೆ ಹೆಗಲೆಣೆಯಾಗಿ ಬಾಲೂ ಪಲ್ವಂಕರ್ ಕುರಿತ ಮೂವತ್ತು ಪುಟಗಳ ಪುಸ್ತಿಕೆಯೂ ಪ್ರಕಟವಾಗಿತ್ತು.

ಬಾಲೂ ಬಾಂಬೆಯಲ್ಲಿ ನೆಲೆಯೂರಿದ್ದು 1896-97ರಲ್ಲಿ. ಸರಿಯಾಗಿ ನೂರು ವರ್ಷಗಳ ತರುವಾಯ ಬಾಲೂ ಹೆಜ್ಜೆ ಗುರುತುಗಳ ಅರಸಿ ಈ ಮಹಾನಗರಕ್ಕೆ ಕಾಲಿಡುತ್ತಾರೆ ಸಾಮಾಜಿಕ ಇತಿಹಾಸಕಾರ ರಾಮಚಂದ್ರ ಗುಹಾ. ಎಂಟು ವರ್ಷಗಳ ನಂತರ ಭಾರತೀಯ ಕ್ರಿಕೆಟ್ ಇತಿಹಾಸ ಕುರಿತ ಅವರ ಪುಸ್ತಕ 'A CORNER OF A FOREIGN FIELD' ಪ್ರಕಟವಾಗುತ್ತದೆ. ಒಂದು ರೀತಿಯಲ್ಲಿ ಬಾಲೂ ಪಲ್ವಂಕರ್ ಅವರೇ ಈ ಕೃತಿಯ ಕೇಂದ್ರ ವ್ಯಕ್ತಿ. ಆತ್ಮಚರಿತ್ರೆಯನ್ನು ಇತಿಹಾಸದೊಂದಿಗೆ ಅಸಾಧಾರಣ ತಾಳಮೇಳದೊಂದಿಗೆ ಹೆಣೆಯಲಾಗಿರುವ ಅದ್ಭುತ ಕೃತಿಯಿದು. ಈ ನೆಲದ ಪಾಲಿನ ಅತಿಕ್ರೂರ ಶಾಪವೆನಿಸಿದ ಜಾತಿಪದ್ಧತಿಯ ತರತಮದ ವಿರುದ್ಧ ಭಾರತದ ಮೊದಲ ಮಹಾನ್ ನಿಧಾನಗತಿಯ ಎಡಗೈ ಬೌಲರ್ ಪಲ್ವಂಕರ್ ಬಾಲೂ ಅವರ ಹೋರಾಟದ ಮನೋಜ್ಞ ಚಿತ್ರಣವನ್ನು ಗುಹಾ ಕಟ್ಟಿಕೊಟ್ಟಿದ್ದಾರೆ.

ಈ ಪುಸ್ತಕದ ಸುಧಾರಿತ ಮರುಮುದ್ರಣ 2014ರಲ್ಲಿ ಹೊರಬಿದ್ದಿದೆ. ಬಾಲೂ ಮತ್ತು ಅವರ ಮೂವರು ಸೋದರರು ಅಸ್ಪೃಶ್ಯತೆಯ ವಿರುದ್ಧ ಕ್ರೀಡೆಯ ಮೂಲಕ ನಡೆಸಿದ ವಿಶಿಷ್ಟ ಹೋರಾಟ ಮತ್ತು ಗೆಲುವುಗಳ ಮೇಲೆ ಗುಹಾ ಬೆಳಕು ಚೆಲ್ಲಿ 19 ವರ್ಷಗಳೇ ಉರುಳಿವೆ. ಆದರೂ ಇಂದಿನ ರಾಜಕೀಯ-ಸಾಮಾಜಿಕ-ಸಾಂಸ್ಕೃತಿಕ ಬದುಕಿನ ಪಾಲಿಗೆ ಪಲ್ವಂಕರ್ ಮತ್ತು ಸೋದರರು ಬಹುತೇಕ ಅಪರಿಚಿತರಾಗಿಯೇ ಉಳಿದಿರುವುದು ವಿಚಿತ್ರವೂ ಅತೀವ ವೇದನೆಯ ವಿಷಯವೂ ಆಗಿದೆ. ಅವೈದಿಕ ಅಸ್ಮಿತೆಗಳನ್ನು ನಾಶ ಮಾಡುತ್ತಲೇ ಬಂದಿರುವ ನಮ್ಮ ನೆಲದಲ್ಲಿ ಈ ವೇದನೆ ನಿರಂತರ ರೂಪವನ್ನೇ ಧರಿಸಿ ಬೇರುಬಿಟ್ಟಿದೆ.

13ನೇ ಪುಟಕ್ಕೆ...



ಪಲ್ವಂಕರ್ ಬಾಲೂ
ಕಲೆ: ಸುಜಾತಾ ಶೆಟ್ಟಿ

ಈ ಕ್ರಿಕೆಟಿಗನ ಸಾಧನೆಯನ್ನು ಬರಿ ಯಶಸ್ವಿ ಆಟಗಾರನ ಕಥೆ ಎಂದು ನೋಡಲಾಗದು. ಈ ನೆಲದ ಪಾಲಿನ ಅತಿಕ್ರೂರ ಶಾಪವೆನಿಸಿದ ಜಾತಿಪದ್ಧತಿಯ ವಿರುದ್ಧ ಹೋರಾಟ ನಡೆಸಿದ ಅಪ್ರತಿಮ ಸೇನಾನಿಯ ಕಥೆಯಾಗಿಯೂ ಸ್ವತಂತ್ರ ಭಾರತ ಅದನ್ನು ನೆನಪಿಸಿಕೊಳ್ಳುವುದು ಮುಖ್ಯವಾಗಿದೆ



ಬ್ರಿಟಿಷ್ ಆಡಳಿತದ ಕಾಲದಲ್ಲಿ ಬಹುದೊಡ್ಡ ಸೇನಾ ಬಿಡಾರವಾಗಿದ್ದ ಡಾಲ್‌ಹೌಸಿಯ ಪ್ರಾಕೃತಿಕ ಸೌಂದರ್ಯ ಅನುಪಮವಾದುದು. ಭಾರತದ ಸ್ವಿಟ್ಜರ್ಲೆಂಡ್ ಎಂದೇ ಖ್ಯಾತಿಯಾದ ಖಜ್ಜಿಯಾ ಇರುವುದು ಇಲ್ಲಿಯೇ. ಸುಭಾಷ್‌ಚಂದ್ರ ಬೋಸ್ ಅವರು ತಿಂಗಳುಪರ್ಯಂತ ವಿಶ್ರಾಂತಿ ಪಡೆದ ಪ್ರದೇಶವೂ ಇಲ್ಲಿದೆ. ಇತಿಹಾಸದ ಮೆಲುಕು ಹಾಕುತ್ತಾ ಈ ರಮಣೀಯ ತಾಣದಲ್ಲಿ ಸುತ್ತಾಡುವ ಮಜವೇ ಬೇರೆ

ಕಾಲಾಟಾಪ್‌ನ ಅರಣ್ಯ ವಿಶ್ರಾಂತಿಧಾಮ

ಡಾಲ್‌ಹೌಸಿ ಚೆಲುವಿನ ಚಿತ್ರಗಳ ಅರಸಿ

ಕೆ.ಆರ್.ಉಮಾದೇವಿ ಉರಾಳ

ಪ್ರವಾಸ

ಹಿಮಾಚಲ ಪ್ರದೇಶದ ಚಂಬಾ ಜಿಲ್ಲೆಯ ಹಲವು ಗಿರಿಧಾಮಗಳಲ್ಲಿ ಡಾಲ್‌ಹೌಸಿ ತುಂಬಾ ಪ್ರಸಿದ್ಧ. ಬ್ರಿಟಿಷರು ತಮ್ಮ ಸೇನಾ ತುಕಡಿಗಳಿಗೆ ಆರೋಗ್ಯಕರ ವಸತಿ ನೆಲೆಯನ್ನು ಹುಡುಕುತ್ತಿದ್ದಾಗ ಹಿಮಾಲಯದ ತಪ್ಪಲಲ್ಲಿನ ಪ್ರಕೃತಿ ಸೌಂದರ್ಯ ಮತ್ತು ತಂಪಾದ ಹಿತಕರ ಹವಾಮಾನದ ಡಾಲ್‌ಹೌಸಿ ಅವರನ್ನು ಸೆಳೆದಿತ್ತು. ಬ್ರಿಟಿಷರ ಅಧೀನದಲ್ಲಿದ್ದ ಚಂಬಾ ರಾಜನ ಆಡಳಿತಕ್ಕೊಳಪಟ್ಟಿದ್ದ ಈ ಪ್ರದೇಶವನ್ನು ತಮ್ಮ ವಶಕ್ಕೆ ಪಡೆದು 1854ರಲ್ಲಿ ಇದನ್ನು ಸೇನಾ ನೆಲೆಯಾಗಿಯೂ ಗಿರಿಧಾಮವಾಗಿಯೂ ರೂಪಿಸಿದರು. ಭಾರತದ ಆಗಿನ ಗವರ್ನರ್ ಜನರಲ್ ಡಾಲ್‌ಹೌಸಿಯಾದ್ದರಿಂದ ಅವನದೇ ಹೆಸರಿನಿಂದ ಇದನ್ನು ಕರೆಯಲಾಯಿತು. ಹಿಮಾವೃತ ದೌಲಾಧರ್ ಶ್ರೇಣಿಗಳೆಡೆಯಲ್ಲಿ ಐದು ಬೆಟ್ಟ ಪ್ರದೇಶಗಳನ್ನೊಳಗೊಂಡಿರುವ ಡಾಲ್‌ಹೌಸಿಯು ಹಸಿರು ಮುಕ್ಕಳಿಸುವ ದಟ್ಟ ಕಾಡುಗಳು, ಕಣಿವೆಗಳು, ಹುಲ್ಲುಗಾವಲುಗಳು, ಜಲಪಾತಗಳಿಂದ ಮನಸ್ಸನ್ನು ಮೋಡಿಗೊಳಪಡಿಸುವ ತಾಣ.

ಎಲ್ಲೆಲ್ಲಿ ನೋಡಿದರೂ ಸೂಚಿಪರ್ಣ ಮರಗಳನ್ನು ಹೊತ್ತ ಬೆಟ್ಟಗಳನ್ನೇ ಹೊಂದಿರುವ ಡಾಲ್‌ಹೌಸಿಯ ಸಮೀಪದಲ್ಲಿ ಅಪರೂಪವೆಂಬಂತಿರುವ ವಿಶಾಲ ಮೈದಾನದ ಪ್ರದೇಶವೇ ಖಜ್ಜಿಯಾರ್. ಈ ಮೈದಾನದ ಬಳಿ ಪಚ್ಚೆ ಹಾಸಿನಂತಹ ಸರೋವರವಿದೆ. ಇದರ ಸುತ್ತ ಬೆಳೆದಿರುವ ಜೊಂಡಿನ ಮೇಲೆ ನಡೆಯುವಾಗ ವೆಲ್ವೆಟ್ ಹಾಸಿನ ಮೇಲೆ ನಡೆದಂತೆನಿಸುತ್ತದೆ. ಕಣ್ಣಿಗೆ ತಂಪೆನಿಸುವ ಹಸಿರು ಪಚ್ಚೆಯ ತರಹದ ಈ ವಿಶಾಲ

ಮೈದಾನದಲ್ಲಿ ನಡೆದಾಡುತ್ತಾ, ಹುಲ್ಲಿನ ಮೇಲೆ ಉರುಳಾಡುತ್ತಾ ಪ್ರಕೃತಿಯ ಮಡಿಲ ಮಗುವಾಗಿ ಪ್ರವಾಸಿಗರು ಸಂಭ್ರಮಿಸುತ್ತಾರೆ.

ಬೆತ್ತದ ಬುಟ್ಟಿಗಳಲ್ಲಿ ಹೂಗಳ ನಡುವೆ ಮುದ್ದಾದ ಮೊಲಗಳನ್ನಿರಿಸಿ, ಅವುಗಳನ್ನು ಹಿಡಿದುಕೊಂಡು ಫೋಟೊ ತೆಗೆಸಿಕೊಳ್ಳಿರೆಂದು ಒತ್ತಾಯಿಸುವವರು ಇಲ್ಲಿದ್ದಾರೆ. ಹಿಮಾಚಲ ಪ್ರದೇಶದ ಸಾಂಪ್ರದಾಯಿಕ ದಿರಿಸು ಧರಿಸಿಯೂ ಫೋಟೊ ತೆಗೆಸಿಕೊಳ್ಳಬಹುದು. ಹಸುಗಳು, ಕುರಿಗಳು ಹಾಯಾಗಿ ಹುಲ್ಲು ಮೇಯುತ್ತಿರುತ್ತವೆ. ಇಲ್ಲಿ ಹಲವಾರು ಬಾಲಿವುಡ್ ಸಿನಿಮಾಗಳ ಚಿತ್ರೀಕರಣ ನಡೆದಿದೆ. 1992ರಲ್ಲಿ ಇಲ್ಲಿಗೆ ಬಂದಿದ್ದ ವಿಲ್ಲಿ ಟಿ ಬ್ಲೇಜರ್ ಎಂಬ ಸ್ವಿಟ್ಜರ್ಲೆಂಡಿನ ವೈಸ್ ಕೌನ್ಸಿಲರ್, ಖಜ್ಜಿಯಾರನ್ನು ಮಿನಿ ಸ್ವಿಟ್ಜರ್ಲೆಂಡ್ ಎಂದು ಘೋಷಿಸಿದ ಘೋಷಣಾ ಫಲಕ ಸಮೀಪದ ಕಾಲಾಟಾಪ್‌ನಲ್ಲಿದೆ.

ಖಜ್ಜಿಯಾರ್ ಸರೋವರದ ಸಮೀಪದಲ್ಲಿ ಖಜ್ಜಿನಾಗ್ ದೇವಾಲಯವಿದೆ. ಇದರಿಂದಲೇ ಸ್ಥಳವು ಖಜ್ಜಿಯಾರ್ ಎನಿಸಿಕೊಂಡಿರುವುದು. ಚಿನ್ನಲೇಪಿತ ಗುಮ್ಮಟದೊಂದಿಗೆ ಹಿಂದೂ ಮುಸ್ಲಿಂ ಸಮ್ಮಿಶ್ರಣ ಶೈಲಿಯ ಶಿಲ್ಪಕಲೆಯ ದೇಗುಲದಲ್ಲಿ ಸುಂದರವಾದ ಮರದ ಕೆತ್ತನೆಗಳಲ್ಲಿ ಪಾಂಡವರು ಕೌರವರ ವಿಗ್ರಹಗಳಿವೆ. ಶಿವನೊಂದಿಗೆ ಇಲ್ಲಿ ಹಿಡಿಂಬೆಗೂ ಪೂಜೆಯಿದೆ.

ಖಜ್ಜಿಯಾರಿಂದ ಮೂರು ಕಿ.ಮೀ. ದೂರದಲ್ಲಿ ಸಮುದ್ರ ಮಟ್ಟದಿಂದ 2500 ಮೀ. ಎತ್ತರದಲ್ಲಿರುವ ಕಾಲಾಟಾಪ್ ವನ್ಯಜೀವಿಧಾಮಕ್ಕೆ ಚಾರಣ ಪ್ರಿಯರು ನಡೆದೇ ಹೋಗುತ್ತಾರೆ. ಎತ್ತರೆತ್ತರಕ್ಕೇರುವ ದೇವದಾರು, ಪೈನ್, ಓಕ್ ಮರಗಳನ್ನೊಳಗೊಂಡ ಬೆಟ್ಟದ ದಾರಿ, ಏಕಮುಖ ಸಂಚಾರ ಮಾತ್ರ ಸಾಧ್ಯವಾಗುವಂಥದ್ದು. ಕರಡಿ, ಚಿರತೆಗಳಿವೆ ಎಂಬ ಎಚ್ಚರಿಕೆಯ ಫಲಕಗಳನ್ನು ಹೊತ್ತ ದೂಳಿನ ರಸ್ತೆಯ ಇನ್ನೊಂದು ಬದಿ ತಳ ಕಾಣದಂಥ ಪ್ರಪಾತ. ಸೂರ್ಯಕಿರಣ ಇಲ್ಲಿ ನೆಲ ತಾಕುತ್ತಿರಲಿಲ್ಲವಾದುದರಿಂದಲೇ ಕಾಲಾಟಾಪ್ ಎಂಬ ಹೆಸರಂತೆ. ಹಸಿರ ಸಾಮ್ರಾಜ್ಯದಲ್ಲಿ ದೂರದಲ್ಲಿ ಹಿಮಾವೃತ ಬೆಳ್ಳಿ ಬೆಟ್ಟಗಳ ಸರಣಿ ಕಣ್ಮನ ತುಂಬುತ್ತದೆ. 1925ರಲ್ಲಿ ಸ್ಥಾಪಿತವಾದ, ಒಳ್ಳೆಯ ನಿರ್ವಹಣೆ ಇರುವ ಒಂದು ಅರಣ್ಯ ವಿಶ್ರಾಂತಿಧಾಮ ಇಲ್ಲಿದ್ದು ಪ್ರವಾಸಿಗರಿಗೆ ದುಬಾರಿಯಲ್ಲದ ಬೆಲೆಗೆ ಬಾಡಿಗೆಗೆ ಸಿಗುತ್ತದೆ.

ಡಾಲ್‌ಹೌಸಿ ಸಮೀಪದಲ್ಲಿ ಫೂಲ್‌ಪುಂಜ ಎಂಬ ಸ್ಥಳವಿದ್ದು, ಇಲ್ಲಿ ಸುಭಾಷ್‌ಚಂದ್ರಬೋಸರು 1937ರಲ್ಲಿ ಆರೋಗ್ಯ ಸುಧಾರಣೆಗಾಗಿ ಐದು ತಿಂಗಳು ತಂಗಿದ್ದರು. ಇದಕ್ಕಾಗಿ ಅವರನ್ನು ಸೆರೆಮನೆಯಿಂದ ಬಿಡುಗಡೆ ಮಾಡಲಾಗಿತ್ತು. ಡಾಲ್‌ಹೌಸಿಯಿಂದ ಒಂದು ಕಿ.ಮೀ. ದೂರದಲ್ಲಿ ಇಂದು ಸುಭಾಷ್ ಬೌಲಿ ಎಂದೇ ಕರೆಯಲಾಗುವ ಸ್ಥಳವಿದೆ. ಸುಭಾಷ್‌ಚಂದ್ರಬೋಸರು ಫೂಲ್‌ಪುಂಜದಿಂದ ಕಾಲ್ನಡಿಗೆಯಲ್ಲಿ ಪ್ರತಿದಿನವೂ ಬೆಳಿಗ್ಗೆ ಬಂದು, ಇಲ್ಲಿನ ನೈಸರ್ಗಿಕ ಚಿಲುಮೆಯ ನೀರನ್ನೇ ಕುಡಿದು, ಇಲ್ಲಿ ಕುಳಿತು ಧ್ಯಾನ ಮಾಡುತ್ತಿದ್ದರಂತೆ. ಆ ಸ್ಥಳದಲ್ಲಿ ಒಂದು ಸ್ಮಾರಕ ನಿರ್ಮಿಸಲಾಗಿದೆ. ಆ ಕುರಿತ ಒಂದು ಫಲಕವಿದೆ.

ನಾವು ಡಾಲ್‌ಹೌಸಿಯಿಂದ ಸುಭಾಷ್ ಬೌಲಿಗೆ ನಡೆದೇ ಬಂದೆವು. ದಟ್ಟಕಾಡಿನ ನಡುವಿನ ನಿರ್ಜನವಾದ ಇಕ್ಕಟ್ಟಾದ ಕಚ್ಚಾ ರಸ್ತೆ. ಎಡಕ್ಕೆ ಆಳವಾದ ಪ್ರಪಾತ. ಬೆಳಗಿನಿಂದ ಪ್ರವಾಸ ಮಾಡಿ ದಣಿದಿದ್ದೆವು. ಹಿಂದಿರುಗುವ ಸಮಯದಲ್ಲಿ ಸಂಜೆಗತ್ತಲೂ ಆವರಿಸುತ್ತಿದ್ದಾಗ ವಾಹನ ತಾರದೇ ತಪ್ಪು ಮಾಡಿದೆವು ಎಂದು ಮಾತಾಡಿಕೊಳ್ಳುತ್ತಿದ್ದಾಗಲೇ ನಮ್ಮ ಪಕ್ಕದಲ್ಲಿ ದೊಡ್ಡದೊಂದು ಇನ್ನೋವಾ ಕಾರು ಬಂದು ನಿಂತಿತು. ಕಾರನ್ನು ಚಲಾಯಿಸುತ್ತಿದ್ದಾತ ನಗುಮುಖದಿಂದ 'ಹತ್ತಿಕೊಳ್ಳುತ್ತೀರಾ' ಎಂದಾಗ ಇಬ್ಬರು ಚಿಕ್ಕ ಮಕ್ಕಳನ್ನೊಳಗೊಂಡು ಎಂಟು ಜನರೂ ಹತ್ತಿಕೊಂಡೆವು. ಆತ್ಮೀಯವಾಗಿ ಮಾತನಾಡುತ್ತಾ ನಮ್ಮ ರೆಸಾರ್ಟ್ ಬಳಿಯೇ ಇಳಿಸಿ ಬೀಳ್ಕೊಂಡ ಅವರ ಸೌಜನ್ಯಕ್ಕೆ ಮಾರುಹೋದೆವು.

ಡಾಲ್‌ಹೌಸಿ ನಗರದ ಮಾಲ್ ರೋಡ್‌ನಲ್ಲಿ ಪ್ರಸಿದ್ಧವಾದದ್ದು ಗಾಂಧಿಚೌಕ. ಚೌಕದ ಗಾಂಧಿ ಪ್ರತಿಮೆಯ ಎದುರಲ್ಲೇ 1863ರಲ್ಲಿ ನಿರ್ಮಿಸಿದ ಸೇಂಟ್ ಜಾನ್ಸ್ ಚರ್ಚ್ ಇದೆ. ಸುತ್ತ ವೈವಿಧ್ಯಮಯ ಅಂಗಡಿಗಳು, ಕಾಫಿಕೆಫೆ, ಬೇಕರಿಗಳು. ಪ್ರವಾಸಿಗರು ಲಗ್ಗೆಯಿಡುವುದು ಇಂಡೊ ಟಿಬೆಟನ್ ಮಾರ್ಕೆಟ್‌ಗೆ. ರಸ್ತೆಯ ಎರಡೂ ಪಕ್ಕಗಳಲ್ಲಿ ರೈಲು ಡಬ್ಬಿಗಳನ್ನು ಜೋಡಿಸಿಟ್ಟಂತಿರುವ ಅಂಗಡಿಗಳಲ್ಲಿ ಆಕರ್ಷಕವಾದ ವಿಧವಿಧದ ವಸ್ತುಗಳನ್ನು ಮಾರಾಟ ಮಾಡಲಾಗುತ್ತದೆ.

ನಗರದಲ್ಲಿ ನೇತಾಜಿ ಜನ್ಮ ಶತಮಾನೋತ್ಸವ ಸಂದರ್ಭದಲ್ಲಿ ನಿರ್ಮಿಸಿದ ಅಮೃತಶಿಲೆಯ ಎತ್ತರದ ಪೀಠದ ಮೇಲೆ ಸುಭಾಷ್ ಚಂದ್ರಬೋಸರ ಭವ್ಯ ಪ್ರತಿಮೆ ಇದೆ. 'ಸ್ವಾತಂತ್ರ್ಯವೆಂದರೆ ರಾಜಕೀಯ ಪಾರತಂತ್ರ್ಯದಿಂದ ಮುಕ್ತಿ ಮಾತ್ರವೇ ಅಲ್ಲ; ವರ್ಗಭೇದ, ಜಾತಿಭೇದ, ಮತೀಯ ಭೇದಗಳ ನಿರ್ಮೂಲನವೇ ಸ್ವಾತಂತ್ರ್ಯ' ಎಂಬ, ಪೀಠದಲ್ಲಿ ಕೆತ್ತಿರುವ ಅವರ ಮಾತು ಇನ್ನೂ ಈಡೇರಬೇಕಾದ ಆಶಯವಾಗಿಯೇ ಉಳಿದಿದೆಯಲ್ಲ ಎಂಬ ವಿಷಾದವುಂಟಾಗುತ್ತದೆ.

ಡಾಲ್‌ಹೌಸಿ ಭಾರತ ಸೇನೆಯ ಪ್ರಮುಖ ನೆಲೆಗಳಲ್ಲೊಂದು. ರಾವಿ ನದಿ ದಡದ ಚಂಬಾ ಮಿಲಿಟರಿ ಪ್ರದೇಶದಲ್ಲಿ ಪ್ರಯಾಣಿಸುತ್ತಿದ್ದಾಗ ಅಲ್ಲಿನ ಅಚ್ಚುಕಟ್ಟಾದ ರಸ್ತೆ, ಕಟ್ಟಡಗಳು, ತಾನೇತಾನಾಗಿ ಬೆಳೆವ ಹೂವು, ಹಸಿರು ಗಿಡಗಳು ಸಾಲದೆಂಬಂತೆ ಮರದ ಪಟ್ಟಿಕೆಗಳ ಚೌಕಾಕಾರದ ಪೆಟ್ಟಿಗೆಗಳಲ್ಲಿ ಹೂಕುಂಡಗಳನ್ನಿಟ್ಟು ಸರಪಳಿಗಳ ಮೂಲಕ ಅವನ್ನು ನೇತು ಹಾಕಿದ ಮರದ ಸ್ಟ್ಯಾಂಡುಗಳು ಕಂಡುಬಂದವು.

ಡಾಲ್‌ಹೌಸಿಗೆ ಬರಲು ಪಠಾಣ್‌ಕೋಟ್, ಕಾಂಗ್ರಾ, ಧರ್ಮಶಾಲಾ, ಅಮೃತಸರದಿಂದ ನೂರಾರು ಕಿ.ಮೀ.ನ ರಸ್ತೆ ಸಂಚಾರ ಅನಿವಾರ್ಯ. ಪರ್ವತ ಶ್ರೇಣಿಗಳ ಘಟ್ಟದ ಮಾರ್ಗದಲ್ಲಿ ಕಚ್ಚಾ ರಸ್ತೆಯಲ್ಲಿನ ಪ್ರಯಾಣ ಸ್ವಲ್ಪಮಟ್ಟಿಗೆ ಮೂಳೆಗಳನ್ನು ಪದ ಹೇಳಿಸುವುದಾದರೂ, ಡಾಲ್‌ಹೌಸಿ ತಲುಪುತ್ತಲೇ ಇಲ್ಲಿನ ವನರಾಶಿ, ಕಣಿವೆಗಳು, ಕಣಿವೆಗಳೆಡೆಯಲ್ಲಿನ ಕಟ್ಟಡಗಳು, ಮನೆಗಳು ರಾತ್ರಿಯಲ್ಲಿ ಬೀರುವ ಬೆಳಕಿನಿಂದ ನಕ್ಷತ್ರ ಲೋಕವನ್ನೇ ಧರೆಗಿಳಿಸಿದಂತಹ ದೃಶ್ಯಗಳು ಪಟ್ಟ ಕಷ್ಟಗಳನ್ನೆಲ್ಲ ನಗಣ್ಯವಾಗಿಸಿಬಿಡುತ್ತವೆ. ಡಾಲ್‌ಹೌಸಿ ಮನದಲ್ಲಿ ಮರೆಯಲಾಗದ ಮುದ ನೀಡುವ ನೆನಪುಗಳನ್ನುಳಿಸುವ ತಾಣ.

ಚಿತ್ರಗಳು: ಕೆ.ಎನ್.ದಿವಿಜ

ಜೋರ್ಬಿಂಗ್-ದೊಡ್ಡ ಚೆಂಡೊಳಗೆ ತೂರಿ ಉರುಳಾಡುವ ಆಟ

ಭಾರತ ಮರೆತ 'ದಲಿತ' ಕ್ರಿಕೆಟ್ ಕಲಿ

12ನೇ ಪುಟದಿಂದ...

ಉತ್ತರ ಗೋವಾದ ಪಲ್ವನ್ ಗ್ರಾಮದ ಚಮ್ಮಾರ ಕುಲದವರು ಬಾಲೂ. 1875ರಲ್ಲಿ ಹುಟ್ಟಿದ್ದು ಕನ್ನಡ ನಾಡಿನ ಧಾರವಾಡದಲ್ಲಿ. ತಂದೆಗೆ ಪುಣೆಯಲ್ಲಿ ಸೇನಾ ನೆಲೆಯಲ್ಲಿ ಉದ್ಯೋಗ. ಸೇನಾ ಅಧಿಕಾರಿಗಳು ಆಡಿ ಎಸೆದ ಹಳೆಯ ದಾಂಡು, ಚೆಂಡು, ವಿಕೆಟ್ಟುಗಳನ್ನಿಟ್ಟುಕೊಂಡು ಕ್ರಿಕೆಟ್ ಕಲಿತರು ಬಾಲೂ ಮತ್ತು ಅವರ ತಮ್ಮ ಶಿವರಾಮ್. ಸ್ಥಳೀಯ ಪಾರ್ಸಿ ಕ್ರಿಕೆಟ್ ಕ್ಲಬ್‌ನಲ್ಲಿ ಪಿಚ್ ಗುಡಿಸಿ ರೋಲರ್ ಎಳೆವುದು ಮತ್ತು ಆಗಾಗ ಬೌಲ್ ಮಾಡುವುದು ಬಾಲೂಗೆ ಸಿಕ್ಕ ಮೊದಲ ಚಾಕರಿ. ಸಂಬಳ ತಿಂಗಳಿಗೆ ಮೂರು ರೂಪಾಯಿ. ಅಲ್ಲಿಂದ ಐರೋಪ್ಯರ ತಂಡಕ್ಕೆ ಇದೇ ಸೇವೆ. ಕಾಲಕ್ರಮೇಣ ಬಾಲೂ ಅವರ ಎಡಗೈ ಸ್ಪಿನ್ ಬೌಲಿಂಗ್ ಪ್ರತಿಭೆಯನ್ನು ಗುರುತಿಸಿದಾತ ಆ ಕಾಲದ ಪ್ರಮುಖ ಇಂಗ್ಲಿಷ್ ಕ್ರಿಕೆಟಿಗ ಜೆ.ಜಿ. ಗ್ರೇಗ್.

ಐರೋಪ್ಯರ ತಂಡಕ್ಕೆ ಸವಾಲೆಸೆಯುವ ಸ್ಥಳೀಯರು ಹಿಂದೂ ಕ್ಲಬ್ ಕಟ್ಟಿಕೊಂಡಿದ್ದರು. ಚುಚ್ಚುಮಾತಿನ ಗ್ರೇಗ್ ಶಿಫಾರಸು ಕೆಲಸ ಮಾಡಿತ್ತು. ಬಾಲೂಗೆ ಆಟಗಾರನಾಗಿ ಹಿಂದೂ ಕ್ಲಬ್‌ಗೆ ಪ್ರವೇಶ ದೊರೆತಿತ್ತು. ಆದರೆ ಷರತ್ತುಗಳಿದ್ದವು. ಮೈದಾನದಲ್ಲಿ ಬಾಲೂ ಮುಟ್ಟಿದ ಚೆಂಡನ್ನು ಸವರ್ಣೀಯ ಹಿಂದೂ ಆಟಗಾರರೂ ಮುಟ್ಟುತ್ತಿದ್ದರು. ಆದರೆ ಆಟದ ಅಂಗಳದಾಚೆಗೆ ಅಸ್ಪೃಶ್ಯತೆ ಆಚರಣೆಯಲ್ಲಿತ್ತು. ಬಾಲೂಗೆ ಪೆವಿಲಿಯನ್ ಪ್ರವೇಶ ನಿಷಿದ್ಧ. ಚಹಾ ವಿರಾಮದಲ್ಲಿ ಹೊರಗೆ ನಿಂತೇ ಚಹಾ ಸೇವಿಸಬೇಕಿತ್ತು, ಅದೂ ಕುಡಿದ ನಂತರ ಎಸೆಯಬಹುದಾದ ಮಣ್ಣಿನ ಕುಡಿಕೆಯಲ್ಲಿ. ಇತರರಿಗೆ ಪಿಂಗಾಣಿ ಬಟ್ಟಲುಗಳು. ಬಾಲೂ ಮುಖ ಕೈ ತೊಳೆಯಬೇಕಿದ್ದರೆ ಮೈದಾನದ ಅಂಚಿಗೆ ಅಸ್ಪೃಶ್ಯ ಆಳೊಬ್ಬ ನೀರು ಒಯ್ದು ಹನಿಸುತ್ತಿದ್ದ. ಬಾಲೂ ಊಟವೂ ಪ್ರತ್ಯೇಕ. ಬೇರೆಯದೇ ಮೇಜು.

ಆದರೆ ಬಾಲೂ ಈ ತರತಮವನ್ನು ನುಂಗಿಕೊಂಡೇ ವಿಕೆಟ್ ಕಬಳಿಸುವ ಶ್ರೇಷ್ಠ ಆಟಗಾರನಾಗಿ ರೂಪುಗೊಂಡರು. ಏಳು ವಿಕೆಟ್ ಪಡೆದ ಸತಾರಾದ ಪಂದ್ಯವೊಂದರ ನಂತರ ಬಾಲೂ ಅವರನ್ನು ಆನೆಯ ಮೇಲೆ ಕೂರಿಸಿ ಮೆರವಣಿಗೆ ಮಾಡಲಾಗಿತ್ತು. ಮತ್ತೊಮ್ಮೆ ವಿದ್ವಾಂಸ, ಸಮಾಜಸುಧಾರಕ ಮಹಾದೇವ ಗೋವಿಂದ ರಾನಡೆ ಅವರೇ ಹೂಮಾಲೆ ತೊಡಿಸಿ ಸನ್ಮಾನಿಸಿದ್ದರು. ಇನ್ನೊಂದು ಸಮಾರಂಭದಲ್ಲಿ ಖುದ್ದು ಬಾಲಗಂಗಾಧರ ತಿಲಕರೇ ಮೆಚ್ಚಿ ಮಾತಾಡಿದ್ದರು. ಹಿನ್ನೆಲೆಯಲ್ಲಿ ಜ್ಯೋತಿಬಾ ಫುಲೆ ಅವರ ಸತ್ಯಶೋಧಕ ಸಮಾಜ ಅಸ್ತಿತ್ವಕ್ಕೆ ಬಂದಿತ್ತು.

ಪುಣೆಯ ಜಾತಿವಾದಿ ಕಬಂಧಬಾಹುಗಳಿಂದ ತಪ್ಪಿಸಿಕೊಳ್ಳಲು ಬಾಲೂ ಕುಟುಂಬ ಸಮೇತ ಬಾಂಬೆಗೆ ತೆರಳಿದರು. ಅವರ ಪ್ರತಿಭೆ ಗರಿಕಟ್ಟಿತ್ತು. ಪರಮಾನಂದದಾಸ್ ಜೀವನದಾಸ್ ಹಿಂದೂ ಜಿಮ್‌ಖಾನಾಗೆ ಆಡಿದರು. ಬಾಂಬೆಯ ಅಂದಿನ ಪ್ರಮುಖ ತಂಡಗಳ ನಡುವೆ ನಡೆಯುತ್ತಿದ್ದ ಪಂದ್ಯಾವಳಿಗಳಲ್ಲಿ ಹೇರಳ ವಿಕೆಟ್ ಉರುಳಿಸಿದರು. ಭಾರತದ ವಿಲ್ಫ್ರೆಡ್ ರೋಡ್ಸ್ ಎಂದು ಕರೆಯಿಸಿಕೊಂಡರು. ನವಾನಗರದ ಜಾಮ್ ಸಾಹೇಬ್ ಎಂದು ಹೆಸರಾಗಿದ್ದ ಯುವರಾಜ ಮತ್ತು ಖ್ಯಾತ ಕ್ರಿಕೆಟ್‌ಪಟು ರಣಜಿತ್ ಸಿಂಗ್ ಅವರ ವಿಕೆಟ್ ಪಡೆದು ಸೈ ಎನಿಸಿಕೊಂಡರು. 1902-03ರಲ್ಲಿ ಭಾರತ ಪ್ರವಾಸ ಮಾಡಿದ Oxford Authentics ಎಂಬ ಇಂಗ್ಲಿಷ್ ತಂಡದ ವಿರುದ್ಧದ ಪಂದ್ಯವೊಂದರಲ್ಲಿ ಐದು ವಿಕೆಟ್‌ಗಳನ್ನು ಎಗರಿಸಿದರು. ರನ್ ಗಳಿಕೆಯಲ್ಲೂ ಮೊದಲಿಗರೆನಿಸಿದರು. ಓವರಿನ ಆರು ಎಸೆತಗಳನ್ನು ಬ್ಯಾಟ್ಸ್‌ಮನ್ ಪಾಲಿಗೆ ಆರು ಭಿನ್ನ ಭಯಾನಕ ಎಸೆತಗಳನ್ನಾಗಿ ರೂಪಿಸಬಲ್ಲ ಸಾಮರ್ಥ್ಯ ಬಾಲು ಅವರದಾಗಿತ್ತು.

ಬಾಲು ಅವರಿಗಿಂತ ಏಳು ವರ್ಷ ಸಣ್ಣವರಿದ್ದ ಅವರ ತಮ್ಮ ಶಿವರಾಮ್ ಕೂಡ ಆಲ್‌ರೌಂಡರ್ ಎನಿಸಿಕೊಂಡು ಅಣ್ಣನನ್ನು ಸೇರಿಕೊಂಡರು. 1907ರಲ್ಲಿ ಐರೋಪ್ಯರ ತಂಡದ ವಿರುದ್ಧದ ಪಂದ್ಯವೊಂದರಲ್ಲಿ ಬಾಲೂ 13 ವಿಕೆಟ್ ಪಡೆದು ಐವತ್ತು ರನ್ ಗಳಿಸಿದ್ದರು. ಗೋಖಲೆ, ತಿಲಕ್, ಲಾಲಾ ಲಜಪತ್ ರಾಯ್ ಸ್ವಾತಂತ್ರ್ಯ ಹೋರಾಟದ ಮುನ್ನೆಲೆಗೆ ಬಂದಿದ್ದ ದಿನಗಳಲ್ಲಿ ಪಲ್ವಂಕರ್ ಸೋದರರು ಆಡಿದ 1906-1907ರ ಹಿಂದೂ ಕ್ರಿಕೆಟ್ ಗೆಲುವುಗಳು ಅಸಾಧಾರಣ ಗಮನ ಸೆಳೆದವು.

1911ರ ಇಂಗ್ಲೆಂಡ್ ಪ್ರವಾಸದಲ್ಲಿ ಆಡಿದ ಕೌಂಟಿ ಪಂದ್ಯಗಳಲ್ಲಿ ಮಿಂಚಿದರು. 114 ವಿಕೆಟ್‌ಗಳನ್ನು ಉರುಳಿಸಿದ್ದರು. ಬಾಲೂ ಅವರನ್ನು ಬಿಟ್ಟರೆ ಪ್ರಥಮದರ್ಜೆ ಪಂದ್ಯಗಳಲ್ಲಿ ಇಂಗ್ಲೆಂಡ್ ನೆಲದಲ್ಲಿ ನೂರಕ್ಕೂ ಹೆಚ್ಚು ವಿಕೆಟ್ ಗಳಿಸಿದವರು ವಿನೂ ಮಂಕಡ್ ಅವರೊಬ್ಬರೇ. ಯಾರ್ಕ್ ಶೈರ್, ಲಂಕಾಶೈರ್, ವಾರ್ವಿಕ್ ಶೈರ್, ಆಕ್ಸ್‌ಫರ್ಡ್, ಕೇಂಬ್ರಿಜ್, ಸರ್ರೇ,, ಎಂ.ಸಿ.ಸಿ., ಲಿಸ್ಟರ್ ಶೈರ್ ವಿರುದ್ಧದ ಪಂದ್ಯಗಳಲ್ಲಿ ಸಿಂಹಪಾಲಿನ ವಿಕೆಟ್ ಗಳಿಕೆ ಅವರದಾಗಿತ್ತು. ತಮ್ಮ ಶಿವರಾಮ್ ಬ್ಯಾಟಿಂಗ್‌ನಲ್ಲಿ ಗಮನ ಸೆಳೆದರು. ಆ ವೇಳೆಗೆ ಬಾಲೂ ಅವರಿಗೆ 36ರ ವಯಸ್ಸು. ಆರು ವರ್ಷಗಳ ಹಿಂದೆಯೇ ತಮ್ಮನ್ನು ಇಂಗ್ಲೆಂಡಿಗೆ ಕಳಿಸಿದ್ದರೆ ಇನ್ನೂ ಹೆಚ್ಚು ಸಾಧಿಸಬಹುದಿತ್ತು ಎಂದು ಟೈಮ್ಸ್ ಆಫ್ ಇಂಡಿಯಾಗೆ ನೀಡಿದ ಸಂದರ್ಶನವೊಂದರಲ್ಲಿ ಹೇಳಿದ್ದಾರೆ. ಸ್ವದೇಶಕ್ಕೆ ಮರಳಿದ ಬಾಲೂ ಅವರನ್ನು ಬಾಂಬೆಯ ಡಿಪ್ರೆಸ್ಡ್ ಕ್ಲಾಸಸ್ ಅಸೋಸಿಯೇಷನ್ ತಮ್ಮವನೆಂದು ಹೆಮ್ಮೆಯಿಂದ ಸನ್ಮಾನಿಸುತ್ತದೆ. ತಮ್ಮೊಡನೆ ಇಂಗ್ಲೆಂಡಿಗೆ ತೆರಳಿದ್ದ ಬ್ರಾಹ್ಮಣ, ಮುಸ್ಲಿಮ್, ಪಾರ್ಸಿ ಆಟಗಾರರು ಮತ್ತು ಯುವರಾಜರಾಗಿದ್ದ ಆಟಗಾರರಿಗಿಂತ ಉತ್ತಮ ಆಟವಾಡಿದ್ದರು ಬಾಲೂ. ಈ ಸಭೆಯಲ್ಲಿ ಬಾಲೂ ಅವರಿಗೆ ಸನ್ಮಾನಪತ್ರ ನೀಡಿ ಸ್ವಾಗತಿಸಿದವರು ಬಾಬಾಸಾಹೇಬ ಅಂಬೇಡ್ಕರ್.

ಆನಂತರದ ವರ್ಷಗಳಲ್ಲಿ ಬಾಲೂ ಕಾಲಕ್ರಮೇಣ ಹಿನ್ನೆಲೆಗೆ ಸರಿಯುತ್ತಾರೆ. ಅವರ ಇತರ ತಮ್ಮಂದಿರಾದ ಗಣಪತ್ ಮತ್ತು ವಿಠ್ಠಲ್ ಪಲ್ವಂಕರ್ ಕ್ರಿಕೆಟ್ ದಿಗಂತದ ತಾರೆಗಳಾಗುತ್ತಾರೆ. 1913ರಲ್ಲಿ ನಾಲ್ಕೂ ಮಂದಿ ಸೋದರರು ಹಿಂದೂ ತಂಡದಲ್ಲಿ ಆಡುತ್ತಾರೆ. ಎಲ್ಲ ದೃಷ್ಟಿಯಿಂದ ಅರ್ಹರಾಗಿದ್ದರೂ ಜಾತಿಯ ಕಾರಣ ಬಾಲೂ ಅವರಿಗೆ ತಂಡದ ನಾಯಕತ್ವ ದಕ್ಕುವುದಿಲ್ಲ. ಹಿಂದೂ ತಂಡಕ್ಕೆ ಬಾಲೂ ಸಲ್ಲಿಸಿದ ಸೇವೆಯನ್ನು ಬಾಂಬೆ ಕ್ರಾನಿಕಲ್ ಪತ್ರಿಕೆ ಕೊಂಡಾಡಿ ಸಂಪಾದಕೀಯ ಬರೆಯುತ್ತದೆ. ನಾಯಕತ್ವ ನೀಡದ ಕುರಿತು ಸಾರ್ವಜನಿಕ ಆಕ್ರೋಶಕ್ಕೆ ಈ ಪತ್ರಿಕೆ ಅಕ್ಷರ ರೂಪ ನೀಡುತ್ತದೆ. ತಮ್ಮ ನಲವತ್ತನಾಲ್ಕನೆಯ ವಯಸ್ಸಿನಲ್ಲೂ ಚೆಂಡನ್ನು ತಿರುಗಿಸುವ ಬಾಲೂ ಕೈಚಳಕ ಕರಗಿರುವುದಿಲ್ಲ.



ಪಲ್ವಂಕರ್ ಬಾಲೂ

ಬಾಲೂಗೆ ಸಿಗದ ನಾಯಕತ್ವದ ಸಮ್ಮಾನ ಅವರ ಕಿರಿಯ ತಮ್ಮ ವಿಠ್ಠಲ್‌ಗೆ ದೊರೆಯುತ್ತದೆ. 1923ರಿಂದ 1926ರ ನಡುವಣ ನಾಲ್ಕು ವರ್ಷಗಳ ಅವಧಿಯಲ್ಲಿ ಪಲ್ವಂಕರ್ ವಿಠ್ಠಲ್ ಅವರು ಹಿಂದೂ ತಂಡವನ್ನು ಮೂರು ಗೆಲುವುಗಳತ್ತ ಮುನ್ನಡೆಸುತ್ತಾರೆ. ಮೂರನೆಯ ಪಂದ್ಯವಂತೂ ಜಾತಿವಾದಿಗಳ ಭದ್ರನೆಲೆಯೆನಿಸಿದ್ದ ಪುಣೆಯಲ್ಲಿ ಜರುಗಿತ್ತು. ಅಣ್ಣ ಬಾಲೂ ಬೆವರು ಸುರಿಸಿ ಬೌಲ್ ಮಾಡಿದ್ದ ಅದೇ ಕ್ರೀಡಾಂಗಣ. ಅಸ್ಪೃಶ್ಯ ಬಾಲೂ ಅಣ್ಣನನ್ನು ಹೊರಗಿಡಲಾಗಿದ್ದ ಪೂನಾ ಕ್ಲಬ್ ಪೆವಿಲಿಯನ್. ತಮ್ಮ ವಿಠ್ಠಲ್ ಇದೇ ಪೆವಿಲಿಯನ್‌ನಲ್ಲಿ ಹಿಂದೂ ತಂಡದ ನಾಯಕನಾಗಿ ಟ್ರೋಫಿಯನ್ನು ಸ್ವೀಕರಿಸಿದ್ದು ಸಿಹಿ ಪ್ರತೀಕಾರವೇ ಸರಿ. ವಿಠ್ಠಲ್ ಅವರ ಈ ಗೆಲುವುಗಳು ಅಂಬೇಡ್ಕರ್ ಅವರ ರಾಜಕೀಯ ಪ್ರವೇಶದ ಹೊತ್ತಿನಲ್ಲಿ ಘಟಿಸಿರುತ್ತವೆ. ಅಂಬೇಡ್ಕರ್ 1923ರಲ್ಲಿ ಡಾಕ್ಟರಲ್ ಪದವಿಯೊಂದಿಗೆ ಲಂಡನ್ನಿನಿಂದ ಹಿಂತಿರುಗಿರುತ್ತಾರೆ.

ಪಲ್ವಂಕರ್ ಸೋದರರ ಆಟವನ್ನು ಗಾಂಧೀಜಿ ನೋಡಿರುವುದಿಲ್ಲ. ಆದರೆ ಅಸ್ಪೃಶ್ಯತೆಯ ವಿರುದ್ಧ ಅವರು ಹೂಡಿದ್ದ ಆಂದೋಲನದಿಂದ ಪಲ್ವಂಕರ್ ಸೋದರರು ಪ್ರೇರಿತರಾಗಿ ತಮ್ಮ ಹಕ್ಕುಗಳಿಗಾಗಿ ಹೊಸ ಹುಮ್ಮಸ್ಸಿನಿಂದ ಹೋರಾಡುತ್ತಾರೆ. ಈ ನಡುವೆ ಬಾಲೂ ಮುಂಬೈನ ಕಾರ್ಪೊರೇಷನ್ ಚುನಾವಣೆಗೆ ಹಿಂದೂ ಮಹಾಸಭಾದ ಹುರಿಯಾಳಾಗಿ ಸ್ಪರ್ಧಿಸಿ ಸೋಲುತ್ತಾರೆ. ಬಾಂಬೆ ಪ್ರಾಂತೀಯ ಶಾಸನಸಭೆಗೆ ಮೀಸಲು ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಕಡಿಮೆ ಅಂತರದಿಂದ ಸೋಲುತ್ತಾರೆ. ಅವರ ಪ್ರತಿಸ್ಪರ್ಧಿ ಖುದ್ದು ಬಾಬಾಸಾಹೇಬ ಅಂಬೇಡ್ಕರ್ ಆಗಿರುತ್ತಾರೆ.

1955ರ ಜುಲೈ ತಿಂಗಳಿನಲ್ಲಿ ಕಡೆಯುಸಿರೆಳೆಯುತ್ತಾರೆ. ಕೋಚ್‌ಗಳು, ತರಬೇತಿದಾರರು, ಶಿಬಿರಗಳು ಇಲ್ಲದಿದ್ದ ಕಾಲದಲ್ಲಿ ಕೇವಲ ಬ್ರಿಟಿಷರು ಆಡುವುದನ್ನು ನೋಡಿ, ಅವರಿಗಿಂತ ಚೆನ್ನಾಗಿ ಆಡುವುದನ್ನು ಕಲಿತ ಪಲ್ವಂಕರ್ ಸೋದರರು ನಿಜಕ್ಕೂ ಮಹಾನ್ ಭಾರತೀಯರು. ಬಾಲೂ ಅವರಂತಹ ಮತ್ತೊಬ್ಬ ಬೌಲರ್‌ನನ್ನು ಭಾರತ ಸೃಷ್ಟಿಸುವುದು ಸದ್ಯದ ಭವಿಷ್ಯದಲ್ಲಿ ಸಾಧ್ಯವಿಲ್ಲ ಎನ್ನುತ್ತಾರೆ ಕ್ರಿಕೆಟಿಗ ವಿಜಯ್ ಮರ್ಚೆಂಟ್. ಆ ಕ್ರಿಕೆಟ್ ಸುವರ್ಣಯುಗದ ರಾಷ್ಟ್ರೀಯ ಹೀರೊ ಮತ್ತು ಈ ಆಟದ ಅಸಲಿ ಆಶಯವನ್ನು ಮೈಗೂಡಿಸಿಕೊಂಡಿದ್ದ ಸಜ್ಜನಿಕೆಯ ವ್ಯಕ್ತಿ ಎಂದೂ ಕೊಂಡಾಡುತ್ತಾರೆ.

ಭಾರತದ ಕ್ರಿಕೆಟ್ ಇತಿಹಾಸದಲ್ಲಿ ಮತ್ತು ಅದಕ್ಕಿಂತ ಹೆಚ್ಚಾಗಿ ಭಾರತದ ಸಾಮಾಜಿಕ ಬಿಡುಗಡೆಯ ಹೋರಾಟದಲ್ಲಿ ಪಲ್ವಂಕರ್ ಸೋದರರಿಗೆ ಸಿಗಬೇಕಿದ್ದ ಸ್ಥಾನ ಈಗಲೂ ದಕ್ಕಿಲ್ಲ.

ಮುನ್ನೋಟ 15-08-2021 ರಿಂದ 21-08-2021

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — **ಅಶ್ವಿನಿ, ಭರಣಿ, ಕೃತ್ತಿಕಾ 1**
ನಿಮ್ಮಿಷ್ಟದಂತೆ ಕಾರ್ಯ ನಡೆಯುವುದರಿಂದ ನೆಮ್ಮದಿಯೊಂದಿಗೆ ಆತ್ಮವಿಶ್ವಾಸವೂ ಹೆಚ್ಚುತ್ತದೆ. ವಿವಾಹ ಆಕಾಂಕ್ಷಿಗಳಿಗೆ ಸಂಗಾತಿ ದೊರೆಯುವ ಸಾಧ್ಯತೆ ಹೆಚ್ಚಾಗಿದೆ. ತಾಳ್ಮೆಯಿಂದ ಮತ್ತು ಜಾಗರೂಕತೆಯಿಂದ ಮಾಡಿದ ಕೆಲಸಗಳಲ್ಲಿ ಹೆಚ್ಚು ಫಲ ಇರುತ್ತದೆ. ಸಂಶೋಧನೆ ಮಾಡುತ್ತಿರುವವರಿಗೆ ಹೆಚ್ಚು ಸಹಾಯಧನ ದೊರೆಯುತ್ತದೆ. ಹಣದ ಒಳಹರಿವು ಅಗತ್ಯಕ್ಕೆ ತಕ್ಕಷ್ಟು ಇರುತ್ತದೆ.

ವೃಷಭ — **ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2**
ಯಂತ್ರೋಪಕರಣಗಳನ್ನು ಮಾರಾಟ ಮಾಡಿದ್ದ ಹಣ ಈಗ ಬರಲಾರಂಭಿಸುತ್ತದೆ ಮತ್ತು ಹೊಸ ಯಂತ್ರಗಳಿಗಾಗಿ ಬೇಡಿಕೆ ಬರುತ್ತದೆ. ಪತ್ರಿಕೋದ್ಯಮಿಗಳಿಗೆ ಅನಿರೀಕ್ಷಿತವಾಗಿ ತುರ್ತು ಕೆಲಸಕ್ಕಾಗಿ ದೂರ ಪ್ರಯಾಣ ಮಾಡಬೇಕಾಗಬಹುದು. ಅಲ್ಲಿ ಹೊಸ ಸ್ನೇಹಿತರು ದೊರೆತು ನಿಮ್ಮ ಕೆಲಸಕಾರ್ಯಗಳು ಸರಾಗವಾಗಿ ಆಗುತ್ತವೆ. ವಿದೇಶಿ ವ್ಯವಹಾರ ಮಾಡುವವರಿಗೆ ವ್ಯವಹಾರದಲ್ಲಿ ಅಭಿವೃದ್ಧಿ ಇರುತ್ತದೆ.

ಮಿಥುನ — **ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3**
ಕಾರ್ಯಕ್ಷೇತ್ರದಲ್ಲಿ ಕಾರ್ಮಿಕರಲ್ಲಿ ಒಮ್ಮತ ಮೂಡಿಸಲು ನೀವು ಅನುಸರಿಸಿದ ಮಾರ್ಗದ ಬಗ್ಗೆ ಹಿರಿಯ ಅಧಿಕಾರಿಗಳು ಪ್ರಶಂಸೆಯನ್ನು ವ್ಯಕ್ತಪಡಿಸುವರು. ಉದ್ಯೋಗ ಸ್ಥಳದಲ್ಲಿ ಸ್ಥಾನಮಾನ ಸಿಗುವುದರ ಜೊತೆಗೆ ನಿಮ್ಮ ವರ್ಚಸ್ಸು ಹೆಚ್ಚುತ್ತದೆ. ಧನಾದಾಯ ಉತ್ತಮವಾಗಿರುತ್ತದೆ. ಪಾಲುದಾರಿಕೆಯ ವ್ಯವಹಾರದಲ್ಲಿ ಹಲವರಿಗೆ ನಿಮ್ಮ ಮೇಲಿದ್ದ ಸಂಶಯ ದೂರವಾಗಿ ನಂಬಿಕೆ ಮೂಡುತ್ತದೆ.

ಕಟಕ — **ಪುನರ್ವಸು 4 ಪುಷ್ಯ, ಆಶ್ಲೇಷ**
ಮದುವೆ ಮುಂತಾದ ಮಂಗಳಕರ ಕಾರ್ಯಗಳನ್ನು ಮಾಡುವವರಿಗೆ ಧನಸಹಾಯ ಮಾಡಲೇಬೇಕಾದ ಅನಿವಾರ್ಯ ಇರುತ್ತದೆ. ವಾಣಿಜ್ಯ ಬೆಳೆಗಾರರಿಗೆ ಸ್ವಲ್ಪ ಲಾಭವಿರುತ್ತದೆ. ಭೂಮಿಯ ವ್ಯಾಪಾರದಲ್ಲಿ ಮಧ್ಯವರ್ತಿಗಳಿಗೆ ಕಮಿಷನ್ ದೊರೆಯುತ್ತದೆ. ಕಚೇರಿಯಲ್ಲಿ ಕೆಲಸಗಳು ಸುಗಮವಾಗಿ ನಡೆಯಲು ಸ್ನೇಹಿತರ ಸಹಕಾರ ಕೋರುವಿರಿ. ಸಂಗಾತಿಗೆ ಸೂಕ್ತ ಉದ್ಯೋಗ ದೊರೆಯುವ ಸಾಧ್ಯತೆಯಿದೆ.

ಸಿಂಹ — **ಮಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1**
ದಿನಬಳಕೆಯ ವಸ್ತುಗಳ ಮಾರಾಟಗಾರರಿಗೆ ವ್ಯವಹಾರ ವೃದ್ಧಿಸುತ್ತದೆ. ಆಲಂಕಾರಿಕ ವಸ್ತುಗಳನ್ನು ತಯಾರು ಮಾಡುವವರಿಗೆ ಬೇಡಿಕೆ ಹೆಚ್ಚುತ್ತದೆ. ಯಾವುದೇ ವ್ಯವಹಾರಕ್ಕೆ ಬಂಡವಾಳ ಹೂಡುವ ಮುನ್ನ ಅದರ ಸುತ್ತಲಿನ ವಿದ್ಯಮಾನಗಳನ್ನು ಪರಿಶೀಲಿಸುವುದು ಉತ್ತಮ. ಉದ್ಯಮದ ಅಭಿವೃದ್ಧಿಗಾಗಿ ಕಾರ್ಮಿಕರೊಡನೆ ಕುಳಿತು ಮಾತನಾಡಿ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವಿರಿ.

ಕನ್ಯಾ — **ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2**
ಬದುಕಿಗೊಂದು ಹೊಸ ಆಯಾಮವನ್ನು ಕಂಡುಕೊಳ್ಳುವಿರಿ. ನಿಮ್ಮ ಬದುಕಿನ ತಿರುವಿಗೆ ನಿಮ್ಮ ಬಂಧುಗಳ ಪಾತ್ರ ಬಹಳ ಮಹತ್ವದ್ದಾಗಿರುತ್ತದೆ ಎಂಬುದನ್ನು ಅರಿತುಕೊಳ್ಳುವಿರಿ. ಸ್ಥಗಿತಗೊಂಡಿರುವ ವಿದ್ಯೆ ಅಥವಾ ಅಭ್ಯಾಸವನ್ನು ಮುಂದುವರಿಸಬಹುದು. ವೃತ್ತಿ ಬದಲಾವಣೆಯ ಸಮಸ್ಯೆ ನಿವಾರಣೆಯಾಗಿ ಇರುವ ವೃತ್ತಿಯಲ್ಲಿ ಮುಂದುವರೆಯುವಿರಿ. ಮಕ್ಕಳ ಪರೀಕ್ಷೆಗಳ ಬಗ್ಗೆ ದ್ವಂದ್ವ ನಿಲುವು ಇರುತ್ತದೆ.

ತುಲಾ — **ಚಿತ್ತಾ 3,4 ಸ್ವಾತಿ, ವಿಶಾಖೆ 1,2,3**
ಮನೆಯ ವಿಸ್ತರಣೆ ಅಥವಾ ನವೀಕರಣಕ್ಕಾಗಿ ಹಣ ಖರ್ಚು ಮಾಡುವಿರಿ. ವಿದ್ಯುತ್ ಕಂಪನಿಗಳ ಗುತ್ತಿಗೆದಾರರಿಗೆ ಬರಬೇಕಿದ್ದ ಬಾಕಿ ಹಣದಲ್ಲಿ ಸ್ವಲ್ಪ ಭಾಗ ಬರುತ್ತದೆ. ಮಕ್ಕಳ ಅಭಿವೃದ್ಧಿ ಬಗ್ಗೆ ಒಳ್ಳೆಯ ಮಾತುಗಳನ್ನು ಕೇಳುವಿರಿ. ವಿದ್ಯಾರ್ಥಿಗಳಿಗೆ ಅವರ ಅಧ್ಯಯನದಲ್ಲಿ ಆಸಕ್ತಿ ಮೂಡುತ್ತದೆ. ಕೃಷಿ ಉಪಕರಣಗಳನ್ನು ತಯಾರಿಸುವವರಿಗೆ ಉತ್ತಮ ಬೇಡಿಕೆ ಇರುತ್ತದೆ.

ವೃಶ್ಚಿಕ — **ವಿಶಾಖೆ 4 ಅನೂರಾಧ, ಜ್ಯೇಷ್ಠ**
ಚಿತ್ರಕಲೆ ಮಾಡುವವರಿಗೆ ಪ್ರೋತ್ಸಾಹ ದೊರೆಯುತ್ತದೆ. ಮನೆಮಂದಿಯೊಂದಿಗೆ ಸಂಬಂಧ ವೃದ್ಧಿ ಆಗುತ್ತದೆ. ಆರ್ಥಿಕತೆಯನ್ನು ಸರಿದೂಗಿಸಲು ಹೊಸ ಪ್ರಯತ್ನ ಮಾಡುವಿರಿ. ಈ ಪ್ರಯತ್ನದಲ್ಲಿ ಸ್ವಲ್ಪ ಫಲವನ್ನು ಸಹ ಕಾಣುವಿರಿ. ಆದಾಯಕ್ಕಿಂತ ಖರ್ಚು ಹೆಚ್ಚಿಗೆ ಇರುತ್ತದೆ. ಆಸ್ತಿ ಸಂಬಂಧವಾಗಿ ಇದ್ದ ತಕರಾರುಗಳು ಪರಿಹಾರವಾಗುತ್ತವೆ.

ಧನುಸ್ಸು — **ಮೂಲ, ಪೂರ್ವಾಷಾಢ, ಉತ್ತರಾಷಾಢ 1**
ವೃತ್ತಿಯಲ್ಲಿನ ಬದಲಾವಣೆಯ ಅಥವಾ ಸ್ಥಾನ ಬದಲಾವಣೆಯ ಬಗ್ಗೆ ಸ್ನೇಹಿತರೊಡನೆ ಚರ್ಚೆ ಮಾಡಲಿದ್ದೀರಿ. ವೃತ್ತಿ ಬಿಡುವ ಮುಂಚೆ ಸರಿಯಾಗಿ ನಿರ್ಧರಿಸಿರಿ. ಊರಿನ ವ್ಯಾಜ್ಯವೊಂದರ ಪರಿಹಾರಕ್ಕಾಗಿ ಮಧ್ಯಸ್ಥಿಕೆಯನ್ನು ವಹಿಸಬೇಕಾದ ಸಂದರ್ಭ ಒದಗಿ ಬರಲಿದೆ. ಬಹಳ ಜಾಣ್ಮೆಯಿಂದ ವ್ಯವಹರಿಸುವುದು ಉತ್ತಮ. ಹಣದ ಒಳಹರಿವು ಸಾಮಾನ್ಯವಾಗಿರುತ್ತದೆ.

ಮಕರ — **ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2**
ಭವಿಷ್ಯದ ಯೋಜನೆಗಳ ಬಗ್ಗೆ ಗಮನಹರಿಸುವಿರಿ. ದಿನಸಿ ವ್ಯಾಪಾರಿಗಳಿಗೆ ಉತ್ತಮ ವ್ಯಾಪಾರವಿರಲಿದೆ. ಹೊಸ ವ್ಯಕ್ತಿಗಳ ಪರಿಚಯದಿಂದಾಗಿ ಕವಿಗಳಿಗೆ ಹೆಚ್ಚಿನ ಮನ್ನಣೆ ದೊರೆಯುತ್ತದೆ. ಆತ್ಮೀಯರೊಂದಿಗೆ ಹಣಕಾಸಿನ ವಿಷಯವಾಗಿ ಚರ್ಚೆ ಮಾಡುವಿರಿ. ರಚನಾತ್ಮಕ ಕಾರ್ಯಗಳಿಂದ ಸಮಾಜದಲ್ಲಿ ಗೌರವವನ್ನು ಪಡೆಯುವಿರಿ. ಸರಕು ಸಾಗಣೆ ವ್ಯವಹಾರ ನಡೆಸುವವರಿಗೆ ಲಾಭವಿರುತ್ತದೆ. ಹಣದ ಒಳಹರಿವು ನಿಮ್ಮ ನಿರೀಕ್ಷೆಯನ್ನು ಪೂರ್ಣಗೊಳಿಸುತ್ತದೆ. ಉತ್ತಮ ಆರೋಗ್ಯ ನಿಮ್ಮದಾಗಿರುತ್ತದೆ.

ಕುಂಭ — **ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3**
ಮರಳು, ಜಲ್ಲಿ ಮುಂತಾದ ಕಟ್ಟಡ ನಿರ್ಮಾಣ ಸಾಮಗ್ರಿಗಳನ್ನು ಮಾರುವವರ ವ್ಯಾಪಾರ ಹೆಚ್ಚುತ್ತದೆ. ಲಲಿತಕಲೆಗಳಲ್ಲಿ ತೊಡಗಿಸಿಕೊಂಡಿರುವವರಿಗೆ ಹೆಚ್ಚಿನ ಸ್ಥಾನ ಮತ್ತು ಗೌರವ ದೊರೆಯುತ್ತದೆ. ಬರಹಗಾರರಿಗೆ ಉತ್ತಮ ಅವಕಾಶ ದೊರೆತು ಅವರ ಲೇಖನಗಳು ಪ್ರಕಟಗೊಳ್ಳುತ್ತವೆ. ಧಾನ್ಯಗಳ ಸಗಟು ವರ್ತಕರು ಬೇಕಾದ ಧಾನ್ಯಗಳನ್ನು ಸಂಗ್ರಹ ಮಾಡಬಹುದು. ಹಣದ ಒಳಹರಿವು ನಿಮ್ಮ ಅಗತ್ಯಕ್ಕೆ ತಕ್ಕಷ್ಟು ಇರುತ್ತದೆ.

ಮೀನ — **ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ**
ವೈದ್ಯರಿಗೆ ಬಿಡುವಿಲ್ಲದ ಕೆಲಸದಿಂದಾಗಿ ಆದಾಯದ ಏರಿಕೆಯ ಜೊತೆ ಆಯಾಸವೂ ಹೆಚ್ಚುವುದು. ಕಟ್ಟಡ ನಿರ್ಮಾಣ ಮಾಡುವವರಿಗೆ ಹೊಸ ನಿರ್ಮಾಣ ಕಾರ್ಯಗಳ ಬಗ್ಗೆ ಒಪ್ಪಂದ ಏರ್ಪಟ್ಟು ಸಂತೋಷವಾಗುವುದು. ಸರಕು ಸಾಗಣೆ ವ್ಯವಸ್ಥೆಯನ್ನು ನಡೆಸುತ್ತಿರುವವರಿಗೆ ವ್ಯವಹಾರಗಳು ವೃದ್ಧಿಸುತ್ತವೆ. ಚಿನ್ನ ಬೆಳ್ಳಿ ಮಾರಾಟಗಾರರಿಗೆ ಗಳಿಕೆಯಲ್ಲಿ ಹೆಚ್ಚಳವಾಗುವುದು.

ಪದಬಂಧ 2700



ಮೇಲಿನಿಂದ ಕೆಳಕ್ಕೆ
1. ಜೀವನ ಸಂಜೆಯ ಆಲಾಪನೆ-ಶ್ರುತಿ 4
2. ತಿಳಿಯಾದ ರಕ್ತವರ್ಣ 4
3. ಹೂವಿನ ಬಾಣವನ್ನು ಹಿಡಿದಿರುವವ 6
4. ಅರುಣನಂತೆ ಬೆಳಗುವ ಯುವಜನರ ಸಾಮರ್ಥ್ಯ 5
6. ಮಾರ ರಣದಲ್ಲಿ ಮಾಡುವ ಹೋಮ 3
9. ಮಹಾಶಿವನ ಹಾಡು 4
10. ರಾತ್ರಿಯಾಗಿದ್ದಾಗ ಮಾವನ ಮನೆಗೆ ಬಂದ ಅಳಿಯ ದೇವರು 3
12. ಕೃಷ್ಣನನ್ನು ಅಪವಾದಕ್ಕೆ ಗುರಿ ಮಾಡಿದ ಮಣಿ 4
13. ಈ ಕನ್ನಡ ಕೃತಿ ಅರಸನ ಕಲ್ಪನೆಯ ಹೆದ್ದಾರಿ 6
14. ಆರತಿಯಲ್ಲಿ ಬೆಳಗಿ ಬೆಂಕಿಗೆ ಕರಗುವ ವಸ್ತು 3
15. ನೀರಿನಲ್ಲಿ ಸಾಗುತ್ತಿರುವ ಕುಟುಂಬವೆಂಬ ದೋಣಿ 5
16. ಕೋಪ ತಾಪ ಶಾಪಗಳಿಗೆ ಹೆಸರಾದ ಮುನಿ 3
17. ಪಂಚಭೂತಗಳಲ್ಲಿ ಗಾಳಿ ನೀರು 4
18. ಕಣ್ಣಿವೆ ಬಡಿ 4

ಎಡದಿಂದ ಬಲಕ್ಕೆ
1. ದೇಶದ ಆಡಳಿತವನ್ನು ನಿಯಂತ್ರಿಸುವ ನಿಯಮ ಸೂತ್ರ 4
3. ಅನುಭಾವಿಯ ಒಳ್ಳೆಯ ಮಾತು 4
5. ಜನರಿಗೆ ಸಮಾಚಾರ ತಲುಪಿಸುವ ಪ್ರಜಾಪ್ರಭುತ್ವದ ನಾಲ್ಕನೇ ಅಂಗ 5
7. ಶ್ರವಣ ತಮಿಳಿನಲ್ಲಿ ವಿರಳ ನಾಮ 4
8. ಕೈವಲ್ಯ ಸೇರಿಸಲು ಒದುವ ಹಕ್ಕಿ ಕತೆ 6
11. ಹಣದ ಸಾಮರ್ಥ್ಯ 4
13. ದೀನರಿಗೆ ಅಂತಃಕರಣದಿಂದ ದಯೆ ತೋರುವ ಭಗವಂತನ ಕೈ 5
15. ಸಾಧು ಮಾರ್ಗವನ್ನನುಸರಿಸಿ ಕೃತಿ ರಚಿಸುವವ 4
16. ಹತ್ತಿರವಲ್ಲದ ಮಧುರ ಮಾತಿನ ಕೂಗು 6
19. ಬೆಳದಿಂಗಳು ಮೂಡಿಸುವ ಶಶಿ 4
20. ಆರಾಧ್ಯ ದೈವಕ್ಕೆ ಅಂತರಂಗದಲ್ಲೇ ಸಲ್ಲಿಸುವ ಭಕ್ತಿಪೂರ್ವಕ ತಂತ್ರ 5
21. ಸಾಮಾಜಿಕ ಸ್ಥರಗಳಲ್ಲಿ ತಳದಲ್ಲಿರುವ ಗುಂಪು 4
22. ಮಾನವಿಲ್ಲದ ಈತ ತಲೆತಗ್ಗಿಸುವುದೇ ಇಲ್ಲ 4

ಪದಬಂಧ ಉತ್ತರ -2699

ಮೇಲಿಂದ ಕೆಳಕ್ಕೆ

1.ಆರಂಭ 2.ಯಜಮಾನ 3.ದುಶ್ಯಾಸನ 4.ರಕ್ಷಿಸು 6.ವಸುಧಾ 8.ವಾಹನ 10.ಸಮುದ್ರದೇವಿ 12.ರತಿಮದನ 13.ರಾಜಶ್ರೀ 15.ವಿರಹಿ 19.ನಿಸ್ವಾರ್ಥ 20.ಕಲಕು 22.ಕವಿಭಾವ 23.ದಿತಿಸುತ 24.ಅಳಕು 27.ಲವಣ

ಎಡದಿಂದ ಬಲಕ್ಕೆ

1.ಆನಂದಮಯ 3.ದುರಹಂಕಾರ 5.ಭವ 7.ಮಾನಸ 8.ವಾಸು 9.ಸುಖಾಸನ 11.ನರಸಿಂಹ 13.ರಾಧಾ 14.ನವಿ 16.ದ್ರವ 17.ಘಮ 18.ಶ್ರೀನಿ 20.ಕಹಿ 21.ಸ್ವಾಭಾವಿಕ 23.ದಿನಸಾಲ 24.ಅರ್ಥ 25.ವಿಜಾತಿ 26.ಕುಲ 28.ಕುಲಭಾಂಧವ 29.ತಮೋಹರಣ

ಸಂಶೋಧನಾ ಮಾರ್ಗದಲ್ಲಿ ಹರಡಿದ ಬೆಳಕು

ಮಾಧವ ಚಿಪ್ಪಳಿ

ನಮ್ಮ ಸುತ್ತಲೂ ಪಿಎಚ್.ಡಿ ಪದವಿಗಾಗಿ ಅಧ್ಯಯನ ಮಾಡುತ್ತಿರುವ ಕೆಲವರನ್ನು ಗಮನಿಸಿದರೆ ಒಂದು ವಿಚಿತ್ರವಾದ ಸಂಗತಿ ಗಮನಕ್ಕೆ ಬರುತ್ತದೆ. ಸಂಶೋಧನೆಯನ್ನು ಮಾಡುವ ಮಾರ್ಗ ಈಗಾಗಲೇ ಸ್ಪಷ್ಟವಾಗಿದೆ, ಆ ಮಾರ್ಗವು ಮಾರ್ಗದರ್ಶಿಗೆ ತಿಳಿದಿದೆ, ಸಂಶೋಧನಾ ವಿದ್ಯಾರ್ಥಿಯು ಈಗಾಗಲೇ ಗೊತ್ತಿರುವ ಕ್ರಮದಲ್ಲಿ ಅಧ್ಯಯನ ಮಾಡಿ ಥೀಸಿಸ್ ಬರೆದರೆ ಸಂಶೋಧನೆ ನಡೆಸಿದಂತೆ ಎನ್ನುವ ತಿಳಿವಳಿಕೆಯದು. ಆದರೆ ನಿಜದಲ್ಲಿ ಸಂಶೋಧನೆಯೆನ್ನುವುದು ಹಾಗಿರುವುದಿಲ್ಲ. ಅರ್ಜಿಯೊಂದನ್ನು ತುಂಬುವ ಹಾಗೆ ಈಗಾಗಲೇ ಇರುವ ಸಿದ್ಧ ಮಾದರಿಯ ಮಾರ್ಗದಲ್ಲಿ ವಿವರಗಳನ್ನು ಪೋಣಿಸುವುದು ಮಾತ್ರವಲ್ಲ; ಬದಲಿಗೆ ಓದುವ, ಬರೆಯುವ ಹೊಸ ಮಾರ್ಗವನ್ನು ಶೋಧಿಸಿಕೊಳ್ಳುವುದೇ ಸಂಶೋಧನೆ ಎನ್ನುವುದನ್ನು ನಿತ್ಯಾನಂದ ಶೆಟ್ಟಿ ತಮ್ಮ 'ಮಾರ್ಗಾನ್ವೇಷಣೆ: ಸಾಹಿತ್ಯ ಸಂಶೋಧನೆಯ ರೀತಿ-ನೀತಿ' ಎನ್ನುವ ಪುಸ್ತಕದಲ್ಲಿ ಗಟ್ಟಿಯಾಗಿ ಪ್ರತಿಪಾದಿಸುತ್ತಾರೆ.

ಪಿಎಚ್.ಡಿ ವಿದ್ಯಾರ್ಥಿಗಳನ್ನೇ ಗಮನದಲ್ಲಿ ಇಟ್ಟುಕೊಂಡು, ಪಿಎಚ್.ಡಿ ಎಂದರೇನು, ಪಶ್ಚಿಮದಲ್ಲೂ ಭಾರತದಲ್ಲೂ ಈ ಪದವಿಯ ಇತಿಹಾಸವೇನು, ಸಂಶೋಧನಾ ಪ್ರಸ್ತಾವ ಎಂದರೇನು, ಅದು ಹೇಗಿರಬೇಕು ಎಂದು ಸುದೀರ್ಘವಾಗಿ ಚರ್ಚಿಸುವ ಈ ಕೃತಿ ಅಷ್ಟಕ್ಕೇ ನಿಲ್ಲುವುದಿಲ್ಲ. ಅಧ್ಯಯನ ಮತ್ತು ಸಂಶೋಧನೆಗಳೊಂದಿಗೆ ಪ್ರಭುತ್ವ ಮತ್ತು ಬಂಡವಾಳಶಾಹಿಯ ಕಾಣದ ಕೈಗಳು ಹೇಗೆ ಕೆಲಸ ಮಾಡುತ್ತಿರುತ್ತವೆ, ನಮ್ಮ ಸುತ್ತಲಿನ ಮತ್ತು ನಾವು ಅಧ್ಯಯನ ಮಾಡುತ್ತಿರುವ ಪಠ್ಯವು ರಚನೆಯಾದ ಸಂದರ್ಭದ ರಾಜಕೀಯ ಹೇಗೆ ಸಾಹಿತ್ಯ ಸಂಶೋಧನೆಯನ್ನು ಪ್ರಭಾವಿಸುತ್ತದೆ ಎನ್ನುವುದನ್ನೂ ವಿವರವಾಗಿ ಬಿಡಿಸಿಡುತ್ತದೆ.

ಮಾರ್ಗಾನ್ವೇಷಣೆ
ಲೇ: ನಿತ್ಯಾನಂದ ಶೆಟ್ಟಿ
ಪ್ರ: ಬೆಸುಗೆ ಪಬ್ಲಿಕೇಷನ್ಸ್
ಸಂ: 89701 62207
93538 77377
ಪು: 304
₹350

ಕನ್ನಡ ಸಾಹಿತ್ಯ ಚರಿತ್ರೆಯನ್ನು ಹೇಳುವ ರೀತಿಯಲ್ಲೇ ಕನ್ನಡ ಸಾಹಿತ್ಯ ಸಂಶೋಧನೆಯ ಚರಿತ್ರೆಯನ್ನು ಶೆಟ್ಟರು ಹೇಳುತ್ತಾರೆ. ಹಾಗಾಗಿ ಈ ಕೃತಿಯು ಪಿಎಚ್.ಡಿಯಲ್ಲಿ ಆಸಕ್ತರಾದವರಿಗೆ ಮಾತ್ರವಲ್ಲದೆ ಸಾಹಿತ್ಯ, ಸಂಶೋಧನೆ, ಜ್ಞಾನ ನಿರ್ಮಾಣದ ಕುರಿತು ಕುತೂಹಲ ಹೊಂದಿರುವವರಿಗೂ ಮಾಹಿತಿಯನ್ನು, ಒಳನೋಟಗಳನ್ನು ಒದಗಿಸುತ್ತದೆ. ಜೊತೆಗೆ, ವಿಶ್ವವಿದ್ಯಾಲಯದ ಹೊರಗಿದ್ದುಕೊಂಡು ಸಾಹಿತ್ಯ ಸಂಶೋಧನಾದಿ ಸಂಗತಿಗಳಲ್ಲಿ ಆಸಕ್ತರಾಗಿರುವ ನನ್ನಂಥವರಿಗೆ ವಿಶ್ವವಿದ್ಯಾಲಯಗಳೊಳಗೆ ಈಗ ಏನು ನಡೆಯುತ್ತಿದೆ, ಅದರ ಗುಣ ದೋಷಗಳೇನು ಎನ್ನುವ ಗುಟ್ಟನ್ನು ಕೂಡ ಕಿವಿಯಲ್ಲಿ ಸಣ್ಣದಾಗಿ ಉಸುರುತ್ತದೆ.

ಸಾಹಿತ್ಯ ಸಂಶೋಧನೆ ಎನ್ನುವುದು ಇವತ್ತು ಕೇವಲ ಸಾಹಿತ್ಯಕ್ಕೆ ಸೀಮಿತವಾಗಿ ಉಳಿದಿಲ್ಲ. ಸಾಹಿತ್ಯದ ಅಧ್ಯಯನವು ಹಲವು ಬೇರೆ ಶಿಸ್ತುಗಳ ಜೊತೆಗೆ ಸಮ್ಮಿಳಿತಗೊಂಡಿದೆ ಅಥವಾ ಸಂಕರಗೊಂಡಿದೆ. ಶೆಟ್ಟರು ಸಾಹಿತ್ಯ ಸಂಶೋಧನೆಯನ್ನು ಅದರ ಎಲ್ಲ ಸಂಕೀರ್ಣತೆಯಲ್ಲಿ ಚಿತ್ರಿಸುವಾಗ ಸಂಸ್ಕೃತಿ ಅಧ್ಯಯನ, ಸಮಾಜಶಾಸ್ತ್ರ ಮುಂತಾದ ಶಿಸ್ತುಗಳೊಂದಿಗೆ ಅದು ಇಟ್ಟುಕೊಂಡಿರುವ ಹೊಂದಾಣಿಕೆ, ಹೊಣೆಗಾರಿಕೆ, ಹೊಡೆದಾಟಗಳನ್ನೂ ವಿವರಿಸುತ್ತಾರೆ.

ಕನ್ನಡದ ಕೆಲಸವನ್ನು ಮಾಡಿದ ಮಂಜೇಶ್ವರ ಗೋವಿಂದ ಪೈ, ಸೇಡಿಯಾಪು ಕೃಷ್ಣ ಭಟ್ಟ, ಡಿ.ಆರ್. ನಾಗರಾಜ, ಕೆ.ವಿ. ಸುಬ್ಬಣ್ಣ, ಎಂ.ಎಂ. ಕಲಬುರ್ಗಿ, ಎಚ್.ಎಸ್.ಶ್ರೀಮತಿ, ಡಿ.ಎನ್. ಶಂಕರ ಭಟ್, ರಾಜೇಂದ್ರ ಚೆನ್ನಿ, ಬಿ.ಎನ್. ಸುಮಿತ್ರಾಬಾಯಿ, ರಹಮತ್ ತರೀಕೆರೆ, ವಿಜಯಾ ದಬ್ಬೆ, ಷೆಲ್ಡನ್ ಪೋಲಕ್ ಅಷ್ಟೇ ಅಲ್ಲದೆ ಕನ್ನಡ ಸಂಶೋಧನೆಯ ಕುರಿತ ಮಾತುಕತೆಯಲ್ಲಿ ಅಷ್ಟೆಲ್ಲ ಪ್ರಸ್ತಾಪಕ್ಕೊಳಗಾಗದ, ಆದರೆ ವಿದ್ವತ್ತಿಗೆ ಹೆಸರಾದ, ಸುಂದರ್ ಸರುಕ್ಕೈ, ಜಾರ್ಜ್ ಜೀವರ್ಗೀಸ್ ಜೋಸೆಫ್, ಬ್ರೂಸ್ ಕ್ಯಾಪ್‌ಫೆರರ್ ರೀತಿಯ ನೂರಾರು ಚಿಂತಕರು, ಬರಹಗಾರರನ್ನು ಚುಟುಕಾಗಿಯಾದರೂ ಪರಿಚಯಿಸುವ, ಕೆಲವೊಮ್ಮೆ ವಿವರಿಸುವ, ಕೆಲವೊಮ್ಮೆ ಟೀಕಿಸುವ ಶೆಟ್ಟರ ಪುಸ್ತಕದ ಹರವು ಬಹಳ ವಿಸ್ತಾರವಾದದ್ದು.

ತನ್ನ ಗಮನಕ್ಕೆ ಬಂದ ಚಿಂತನೆಗಳನ್ನು ಬಿಡಿಬಿಡಿಯಾಗಿ ಪ್ರಸ್ತಾಪಿಸದೇ ಅವುಗಳ ನಡುವೆ ಇರುವ ಸಂವಾದಗಳನ್ನು, ಅವು ಮಾಡಿದ ಸಾಹಿತ್ಯಿಕ, ಸಾಮಾಜಿಕ ಪರಿಣಾಮಗಳನ್ನು ಈ ಪುಸ್ತಕವು ಗಮನಿಸಿ ಗುರುತಿಸುತ್ತದೆ. ಸಂದರ್ಭಾನುಸಾರವಾಗಿ ಶೆಟ್ಟರು ಕೊಡುವ ವಿದ್ವಾಂಸರ ಮತ್ತು ಅವರ ಕೃತಿಗಳ ಉದ್ದುದ್ದ ಯಾದಿಗಳು ಓದಿಗೆ ಶುಷ್ಕವೆನ್ನಿಸಿದರೂ ಕನ್ನಡದ ಕುರಿತು ನಡೆದ ಅಗಾಧ ಪ್ರಮಾಣದ ಜ್ಞಾನ ನಿರ್ಮಾಣವನ್ನು ನೆನಪಿಸುವಲ್ಲಿ ಸಫಲವಾಗುತ್ತವೆ.

ಈ ಪುಸ್ತಕವು ಸಾಕಷ್ಟು ಮಾಹಿತಿಯನ್ನು, ಒಳ್ಳೆಯ ಒಳನೋಟಗಳನ್ನು ಹೊಂದಿದೆ ಎನ್ನುವಷ್ಟೇ ಮುಖ್ಯ ಈ ವಿಚಾರಗಳನ್ನು ಶೆಟ್ಟರು ಮಂಡಿಸಿರುವ ರೀತಿ. ಸಂಶೋಧನಾ ಕೃತಿಗಳು, ಸಂಶೋಧನೆಯ ಕುರಿತ ಬರಹಗಳು, ತೀರಾ ವಿಶೇಷ ಉದಾಹರಣೆಗಳನ್ನು ಹೊರತುಪಡಿಸಿದರೆ, ಒಂದು ಪ್ರಬಂಧದ ರೀತಿ ಇರುತ್ತವೆ. ಈ ಕೃತಿಯಲ್ಲಿ ಶೆಟ್ಟರು ಅಪರೂಪವೆನ್ನಿಸುವಂತೆ ಸಂವಾದದ ಮಾರ್ಗವನ್ನು ಆರಿಸಿಕೊಂಡಿದ್ದಾರೆ. ಒಬ್ಬ ಮಾರ್ಗದರ್ಶಕ ಅಥವಾ ಮೇಷ್ಟ್ರು ತನ್ನ ವಿದ್ಯಾರ್ಥಿ ಅಥವಾ ಸಂಶೋಧನಾಸಕ್ತನ ಜೊತೆ ನಡೆಸಿದ ಮಾತುಕತೆಯ ರೂಪದಲ್ಲಿ ಇಡೀ ಪುಸ್ತಕದ ನಿರೂಪಣೆಯಿದೆ.

ಒಳನೋಟ

ಶೈಕ್ಷಣಿಕ ಶಿಸ್ತಿನ ಬರವಣಿಗೆಗಳನ್ನು ಹೆಚ್ಚಾಗಿ ನಿರೂಪಣೆಯರೂಪದಲ್ಲಿಕಂಡಿರುವ ನಮ್ಮ ಓದಿಗೆ ಈ ಸಂವಾದದ ಮಾರ್ಗವು ಒಂದು ಅಗತ್ಯ ಲಘುತ್ವವನ್ನು ತಂದುಕೊಡುತ್ತದೆ. ಸಂಭಾಷಣೆಯ ಪ್ರಸ್ತುತಿಯು ಶೆಟ್ಟರ ಬರವಣಿಗೆಗೆ ಚೆಲುವನ್ನೂ, ಚಲನಶೀಲತೆಯನ್ನೂ, ಚಂಚಲಶೀಲತೆಯನ್ನೂ ತಂದುಕೊಟ್ಟಿದೆ. ಮಾತುಕತೆಯಲ್ಲಿ ಆಗುವಂತೆ ಕೆಲವೊಮ್ಮೆ ಬರವಣಿಗೆಯು ಒಂದು ವಿಚಾರದಿಂದ ಮತ್ತೊಂದಕ್ಕೆ ಹೊರಳುವುದು ಆಕರ್ಷಕವೆನ್ನಿಸಿದರೂ ವಿಷಯಗಳು ಚದುರಿ ಹೋಗುವುದು ಗಮನಕ್ಕೆ ಬಾರದೇ ಹೋಗುವುದಿಲ್ಲ.

'ಹಿಂದ್ ಸ್ವರಾಜ್'ನಲ್ಲಿ ಗಾಂಧಿ ಇದೇ ಸಂಭಾಷಣೆಯ ರೂಪವನ್ನು ಬಳಸುತ್ತಾರಾದರೂ ಅದರಲ್ಲಿ ಬರುವ ಮತ್ತೊಂದು ಪಾತ್ರವು ಪೂರ್ವಪಕ್ಷವನ್ನು ಪ್ರತಿನಿಧಿಸುತ್ತದೆ ಅಥವಾ ಸ್ವವಿಮರ್ಶೆಯ ಮಾರ್ಗವಾಗುತ್ತದೆ. ಅಲ್ಲಿ ಬರುವ 'ಓದುಗ'ನು 'ಸಂಪಾದಕ'ನಷ್ಟು ಒಳನೋಟಗಳನ್ನು ಹೊಂದಿಲ್ಲದಿದ್ದರೂ ಚುರುಕಾದ ಪ್ರಶ್ನೆಗಳನ್ನು ನಿರ್ಭಿಡೆಯಿಂದ ಕೇಳುತ್ತಾನೆ. ಆದರೆ, ಶೆಟ್ಟರ ಕೃತಿಯಲ್ಲಿ ವಿದ್ಯಾರ್ಥಿಯು ಮುಗ್ಧವಾದ ಚುಟುಕು ಪ್ರಶ್ನೆಗಳನ್ನು ಕೇಳುತ್ತಾನೆ. ಅದಕ್ಕೆ ಅಧ್ಯಾಪಕನು ವಿದ್ವತ್ಪೂರ್ಣ ಸುದೀರ್ಘ ಉತ್ತರಗಳನ್ನು ಕೊಡುತ್ತಾನೆ. ಅಧ್ಯಾಪಕನು ಹೇಳುವ ಎಲ್ಲವನ್ನೂ ಅರ್ಥ ಮಾಡಿಕೊಳ್ಳುವ ಶಕ್ತಿಯನ್ನು ಹೊಂದಿದಂತೆ ಕಾಣುವ ಈ ವಿದ್ಯಾರ್ಥಿಯು ಎಲ್ಲಿಯೂ ತನ್ನ ಮೇಷ್ಟ್ರನ್ನು ಎದುರುಹಾಕಿಕೊಳ್ಳುವುದಿಲ್ಲ, ವಿಮರ್ಶಿಸುವುದಿಲ್ಲ. ಬದಲಿಗೆ ಹೇಳಿದ್ದೆಲ್ಲವನ್ನೂ ಒಪ್ಪಿಕೊಳ್ಳುತ್ತಾನೆ, ಪ್ರಶ್ನೆಗಳನ್ನು ಕೇಳಿದಾಗ ಹಲವು ಸಾರಿ 'ಮ್ ಮ್ ಮ್' ಎನ್ನುತ್ತಾನೆ. ಹಾಗಾಗಿ, ಪ್ರಾರಂಭದಲ್ಲಿ ಆಕರ್ಷಣೀಯವಾಗಿ ಕಾಣುವ ಸಂಭಾಷಣೆಯು ಓದುತ್ತಾ ಹೋದಂತೆ ಇದೊಂದು ಬರಿಯ ತಂತ್ರ, ವಿದ್ಯಾರ್ಥಿಯನ್ನು ಎದುರಿಗೆ ಕೂರಿಸಿಕೊಂಡು ಆಡುವ ಸ್ವಗತ ಎನ್ನಿಸಿಬಿಡುತ್ತದೆ.

ನಿಜವಾದ ಸಂಶೋಧನೆಯ ಸಂದರ್ಭದಲ್ಲಿ ಇದು ಬದಲಾಗಬೇಕು, ಮಾರ್ಗದರ್ಶಿ ಅಪ್ಪಣೆ ಮಾಡುವವ, ವಿದ್ಯಾರ್ಥಿ ಅದನ್ನು ಅನುಸರಿಸುವವ ಎನ್ನುವುದು ಹೋಗಿ ಎಲ್ಲರಿಗೂ ಸಮಾನ ಅವಕಾಶ ದೊರೆತಾಗ, ವಿದ್ಯಾರ್ಥಿಯು ಸಹವರ್ತಿಯಾದಾಗ, ಮಾರ್ಗಾನ್ವೇಷಣೆಯು ಹೆಚ್ಚು ಪ್ರಜಾಸತ್ತಾತ್ಮಕವೂ ಫಲಕಾರಿಯೂ ಆಗಬಲ್ಲುದು ಎಂಬ ಇಂಗಿತವನ್ನು ಇಟ್ಟುಕೊಂಡು ಬರೆದಿರುವ ಈ ಪುಸ್ತಕವು ತನ್ನ ವಸ್ತುವಿಷಯದ ಬಲದಿಂದಲೇ ವಿದ್ಯಾರ್ಥಿಗಳನ್ನು ಆ ಮಟ್ಟಕ್ಕೆ ಏರಿಸುವ ಕೆಲಸವನ್ನು ಒಂದಷ್ಟಾದರೂ ಮಾಡುತ್ತದೆ ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ.

ಕಥೆ

ಸತ್ತವರ ಸಂಚಾರದ ದಾರಿ
ಮೂಲ: ಚಿನುವಾ ಅಚಿಬೆ
ಕನ್ನಡಕ್ಕೆ: ಚನ್ನಪ್ಪ ಕಟ್ಟಿ

ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://www.prajavani.net/short-story

ಕವಿತೆ

ಎಂ.ವಿ ಶಶಿಭೂಷಣ ರಾಜು
ಬರೆದ ಕವಿತೆ
ಸ್ವಾತಂತ್ರ್ಯ

ಮೊಬೈಲ್‌ನಲ್ಲಿ ಕವಿತೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://www.prajavani.net/poetry

ಚರಿತ್ರೆಯ ಪುಟಗಳಿಂದ

ಜ್ಯೋತಿಯವರ ಲೇಖನ
ಮರೆತುಹೋದ ಸ್ವಾತಂತ್ರ್ಯ ಹೋರಾಟಗಾರ್ತಿ

ಸಬೀನಾ ಎ. ಅವರ ಲೇಖನ
ಕನ್ನಡ ನಾಡಿನ ಕ್ರಾಂತಿಯ ಪುತ್ರ

ನೋಡಿ: www.prajavani.net

ಭಾವತೀವ್ರತೆಯ ನುಡಿಚಿತ್ರಗಳು

ಎಸ್. ನಟರಾಜ ಬೂದಾಳು

ಮೆಲುದನಿಯಲ್ಲಿ ತನಗಷ್ಟೇ ಕೇಳಿದರೆ ಸಾಕೆಂಬಂತೆ ಹಾಡಿಕೊಳ್ಳುವ ಹಾಡಿನಂತಿರುವ ಮುಕ್ತಾಯಕ್ಕನವರ ಈ ಕವನ ಸಂಕಲನ ತನ್‌ಹಾಯಿಗೆ ಉರ್ದು ಕಾವ್ಯ ಪರಂಪರೆಯ ಜೊತೆಗೆ ಕರುಳಬಳ್ಳಿಯ ನಂಟಿದೆ. ತನ್‌ಹಾಯಿ ಎಂದರೆ ಒಬ್ಬಂಟಿತನ. ಇದು ವಿರಹಕ್ಕಿಂತ ಭಿನ್ನ. ವಿರಹಕ್ಕೆ ಮಿಲನದ ನಂಟಿದೆ. ಆದರೆ, ತನ್‌ಹಾಯಿಗೆ ಇಲ್ಲ. ದಟ್ಟ ವಿಷಾದದ ಒಗರನ್ನು ಮಧುವಾಗಿಸುವ ಪ್ರಯತ್ನದಂತಿರುವ ತನ್‌ಹಾಯಿಯ ಮಂದ್ರಸ್ತರಕ್ಕೆ ಉರ್ದುವಿನ ಆವರಣ ಹೇಳಿಮಾಡಿಸಿದಂತಿದೆ.

ಕಿವಿಗೊಟ್ಟು ಕೇಳುವವರಿಗೆ ಮಾತ್ರ ಉರ್ದು ಗಜಲ್‌ಗಳು ಮತ್ತು ಷೇರ್‌ಗಳು ಹಿಡಿಸುತ್ತವೆ. ಪಾರಾಯಣದ ಗದ್ದಲವನ್ನು ಅಲ್ಲಿ ನಿರೀಕ್ಷಿಸಲಾಗದು. ತಂದೆ ಶಾಂತರಸರಿಂದ ಆ ಪರಂಪರೆಯ ವಾರಸುದಾರಿಕೆಯನ್ನು ಪಡೆದ ಮುಕ್ತಾಯಕ್ಕ ಗಜಲ್ ಕವಯಿತ್ರಿಯೆಂದೇ ಗುರುತಿಸಲ್ಪಟ್ಟವರು. ಇದು ಗಜಲ್‌ಗಳ ಸಂಕಲನವಲ್ಲವಾದರೂ ಅದರ ಛಾಯೆ ಕವಯಿತ್ರಿಯ ಒಪ್ಪಿಗೆಯೊಡನೆ ಸಂಕಲನದುದ್ದಕ್ಕೂ ಚಾಚಿಕೊಂಡಿದೆ. ಲೌಕಿಕದ ತುಂಬುನದಿಯನ್ನು ಈಜಿ ದಾಟಿ ಬಂದರೆ ನಾನು ನಿನ್ನವಳೆನ್ನುವ ಗಜಲ್, ಕವಿಯನ್ನೂ ಕೇಳುಗರನ್ನೂ ಒಮ್ಮೆಗೇ ದಾಟಿಸಬಲ್ಲ ನಾವೆ. ಹುಟ್ಟುಹಾಕುವವರಿಗೆ ಎರಡೂ ದಡಗಳ ಪರಿವೆ ಇರಬೇಕು. ಪ್ರವಾಹಕ್ಕೆ ಎದುರಾಗಿ ಈಜುವ ಛಾತಿ ಇರಬೇಕು.

ಹೆಸರೆಂಬ ತಲೆಬರಹವಿಲ್ಲದ ನೂರಾಇಪ್ಪತ್ತು ಮೆದುಕಾವ್ಯನುಡಿಗಳನ್ನು ಕೇಳಿಸಿಕೊಳ್ಳಲು ಬೇಕಾದ ಸಿದ್ಧತೆಯೆಂದು ಈ ಮೇಲಿನ ಮಾತುಗಳನ್ನು ಪರಿಭಾವಿಸಬಹುದು. ಇವು ಕೇವಲ ಭಾಷಿಕ ನಡೆಗಳಲ್ಲ; ಬದಲಿಗೆ ಅಂತರಂಗದ ನುಡಿಗಳು. ವಿರುದ್ಧಗಳೆಂಬಂತೆ ಗೋಚರಿಸುವ ಸಂಗತಿಗಳಲ್ಲಿಯೂ ಸಮರಸವನ್ನು ಕಾಣಬಲ್ಲವರು ಕೇಳಬಲ್ಲವರು ಒಪ್ಪಬಲ್ಲ ನುಡಿಕಾವ್ಯದ ಮಾದರಿಯೊಂದು ಹೀಗಿದೆ:

ನಿನ್ನನ್ನು ಹುಡುಕಲು/ ಸಮುದ್ರದ ಮೇಲೆ ಗೆರೆಯೊಂದನೆಳೆದಿದ್ದೆ/ ಮರುಭೂಮಿಯಲಿ/ ಹೆಜ್ಜೆಗುರುತು ಮೂಡಿಸಿದ್ದೆ/ ಪರ್ವತವ ದಾಟಿ ಬರಲು/ ಮಳೆಬಿಲ್ಲು ಕಟ್ಟಿದ್ದೆ/ ಚಂದ್ರನ ಮೇಲೇರಿ ಬರಲು/ ಮೋಡಗಳ ಏಣಿ ನೆಟ್ಟಿದ್ದೆ/ಇಷ್ಟೆಲ್ಲ ಏಕೆ?/ 'ಪ್ರೀತಿಯಿಲ್ಲವೆಂದು ಹೇಳಿದ್ದರೆ...'

ಮಿಲನದ ಉತ್ತುಂಗ ವಿರಹವೇ ಆಗಿದೆ. ಆಹ್ವಾನ-ವಿಸರ್ಜನೆಯ ಈ ನಡೆ ನಿಸರ್ಗ ಸಹಜವಾದದ್ದು. ಬೆರೆಯಲು ಎರಡಾಗಬೇಕು ನಿಜ. ಆದರೆ, ಸದಾ ಎರಡೇ ಆಗಿರುವುದು ಬೆರೆಯಲಾರದು. ಇಲ್ಲಿಯ ಒಂಟಿತನದ ಆರ್ತತೆಗೆ ನಿಸರ್ಗದ ಸೆಳೆತಕ್ಕೆ ತನ್ನನ್ನು ಒಪ್ಪಿಸಿಕೊಳ್ಳುವ ತುಡಿತವಿದೆ. ಅಂತಹ ಕಡೆಗಳಲ್ಲಿ ಕಾವ್ಯ ಭಾಷೆಯ ಹಂಗನ್ನು ಮೀರುತ್ತದೆ.

'ಕೊನೆ ಯಾವಾಗಲೂ ಸುಂದರವಾಗಿರುವುದಿಲ್ಲ'/ ನಾನು ಹೇಳಿದೆ. ನೀನಂದೆ,/ 'ಸೂರ್ಯಾಸ್ತ ಸುಂದರವಲ್ಲವೆ?'/ ನಾನು ಸುಮ್ಮನಾದೆ/ ವಿದಾಯದ ಗಳಿಗೆ ಕಂಬನಿತುಂಬಿ ಕೈಬೀಸಿದೆ ನಗುತಲೆ,/ ಬಹುಶಃ ನಿನಗೆ ನನ್ನ ನಗುವಿನಲಿ ಸೂರ್ಯಾಸ್ತದ/ ಕೆಂಪಷ್ಟೆ ಕಾಣಿಸಿರಬಹುದು/ ಹಿಂದೆಯೆ ಬರುವ ಇರುಳಲ್ಲ.

ತನ್‌ಹಾಯಿ
ಲೇ: ಎಚ್.ಎಸ್. ಮುಕ್ತಾಯಕ್ಕ
ಪ್ರ: ಆಶಿಯಾನ ಪ್ರಕಾಶನ
ಸಂ: 8073321430
ಪು: 127
₹100

ಅವಲೋಕನ

ವಿರಹ-ಮಿಲನಗಳು ಶೃಂಗಾರವೆಂಬ ಸ್ಥಾಯಿಭಾವಕ್ಕೆ ದುಡಿಯುವ ನಡೆಗಳು. ಇವುಗಳಿಗೆ ಒತ್ತಿಕೊಂಡಂತಿರುವ ಒಂಟಿತನಕ್ಕೆ ಇವೆರಡೂ ನೆನಪುಗಳು ಮಾತ್ರ.

ಒಮ್ಮೊಮ್ಮೆ ನೀನು ಹತ್ತಿರವಿದ್ದರೂ/ ವಿನಾಕಾರಣ ಉದಾಸಳಾಗುವೆ/ ನಿನ್ನ ಇರುವಿಕೆಯೂ/ ನನ್ನನ್ನು ಸಂತೈಸಲಾರದು/ ಏಕೆಂದರೆ ಆಗ ನಾನು ಅಲ್ಲಿರುವುದಿಲ್ಲ/ ದುರಂತವೆಂದರೆ ನಾನು ಎಲ್ಲಿರುವೆನೋ/ ನನಗೂ ಗೊತ್ತಾಗುವುದಿಲ್ಲ.

ಇಂತಹ ಬಿಡಿಬಿಡಿಯಾದ ನುಡಿಚಿತ್ರಗಳಂತಿರುವ ಇಡೀ ಸಂಕಲನದ ಸ್ಥಾಯೀಭಾವ ಶೃಂಗಾರವಾದರೂ ಇಲ್ಲಿಯ ರಿಕ್ತತೆ ಧ್ಯಾನದ ಮತ್ತೊಂದು ಆವೃತ್ತಿಯಂತೆ ಅನುಭವಕ್ಕೆ ಬರುತ್ತದೆ. ಮರದ ತೊಟ್ಟಿನ ಸಂಬಂಧದ ಹಂಗುಹರಿದಿದ್ದರೂ ಇನ್ನೂ ಅಲ್ಲೇ ತೂಗಾಡುವ ಮಾಗಿದ ಹಣ್ಣಿನಂತಹ ಕೆಲವು ಕವನಗಳು ಮತ್ತೆ ಯಾವುದೋ ಗಜಲ್‌ನ ಷೇರ್ ಒಂದನ್ನು ನೆನಪಿಸಿದರೆ ತಪ್ಪೇನಲ್ಲ.

ಅಲ್ಲಿ ಪರ್ವತಕ್ಕೆ ಕಿರುದಾರಿಯೊಂದು ಹೋಗುವುದಲ್ಲ/ ಅಲ್ಲಿಂದ ಚುಕ್ಕೆಗಳ ಲೋಕಕೆ ಹೋಗಲು ಒಂದು ದಾರಿಯಿದೆ/ ನೀನು ಎಂದಾದರೂ ಭೇಟಿಯಾದರೆ ಕರೆದೊಯ್ಯುತ್ತೇನೆ/ ನಾವು ಕಳೆದುಹೋದ ಜಗದ/ ಬಗೆಗೆ ಮಾತು ಬೇಡ/ ಗುರುತಿಲ್ಲದ ದಾರಿಗುಂಟ ನಡೆವ ಅಪರಿಚಿತರಾಗೋಣ/ ಎಲ್ಲ ಮರೆತು ಹಾಗೆ ಹಾಗೆ ಸಾಗಿ ಹೋಗೋಣ

ಎಂದೋ ಬಂದುಹೋದ ಅಥವಾ ಮುಂದೆಂದೋ ಬರುವ ಜೋಗಿಗೆ ಕಾಯುವ ಒಂಟಿಹೆಣ್ಣಿನ ಸ್ವಗತಕ್ಕೆ ಬಹುಶಃ ಎಲ್ಲ ಭಾಷೆಗಳೂ ನುಡಿಕೊಟ್ಟಿವೆ. ಅದು ಎಲ್ಲ ಬಂಧನಗಳಿಂದ ಹೆಣ್ಣಿನ ಮುಕ್ತಿಗೆ ಲೌಕಿಕವು ಕೊಟ್ಟ ಉಡುಗೊರೆಯಂತೆ ಉರ್ದುಕಾವ್ಯ ಸಂಭ್ರಮಿಸುತ್ತದೆ. ಉಂಡುಬಂದ ಕೈಯ ಪರಿಮಳದಂತೆ ಅದು ಇಲ್ಲೂ ಮುಂದುವರಿದಿದೆ.

ನಾನು ಏಕಾಂತದಲಿ ನನ್ನ/ ಮೃದು ಕನಸುಗಳೊಡನೆ ಮಾತಾಡುತ್ತೇನೆ/ ಹೂ, ಚಿಕ್ಕೆ, ಮಳೆ ಮೋಡಗಳೊಡನೆ ನಗುತ್ತೇನೆ/ ಅವನೊಡನೆ ಕಳೆದ ಕ್ಷಣಗಳೊಡನೆ/ ಕಾಲಕಳೆಯುತ್ತೇನೆ/ ಈ ಎಲ್ಲ ಮಾತುಗಳೇ ಕವಿತೆಗಳು/ ಮತ್ತೆ ಬೇರೇನೂ ಅಲ್ಲ.

ತುಮ್ ಮುಝೆ ಭೂಲಭಿ ಜಾವೋ, ತೋ ಏ ಹಕ್ ಹೈ ತುಮ್‌ಕೊ/ ಮೇರಿಭಾತ್ ಔರ್ ಹೈ ಮೈನೆತೋ ಮೊಹೊಬತ್ ಕೀ ಹೈ, ಎಂಬ ಸಾಹಿರ್ ಲೂಧಿಯಾನ್ವಿಯವರ ಕವಿತೆಯ ಎರಡು ಸಾಲುಗಳೊಡನೆ ಒಳಕ್ಕೆ ಕರೆಯುವ ಈ ಸಂಕಲನ ಕೇಳುಗರು ಇರುವಷ್ಟು ಕಾಲ, ದೀಪದಲ್ಲಿ ಎಣ್ಣೆ ಇರುವಷ್ಟು ಕಾಲ, ಮನದಲ್ಲಿ ಕಾವ್ಯದ ಮತ್ತು ಇರುವಷ್ಟು ಕಾಲ ನಡೆಯುವ ಮೆಹಫಿಲ್ ಮುಗಿದ ಮೇಲಿನ ತಹತಹದಂತೆ ಮುಂದುವರಿಸಬಲ್ಲ ಓದುಗರಿಗಾಗಿ ಕಾಯುತ್ತದೆ. ಕೆಲವು ಕವನಗಳು ಅಲ್ಲಿಯ ನೆಲದ ವೈಶಿಷ್ಟ್ಯವಾದ ಚಿಕಣಿ ಚಿತ್ರಗಳಂತೆ ಮನದ ಭಿತ್ತಿಯಲ್ಲಿ ಮೂಡುತ್ತವೆ.

ಬಾರಮಾಸವೆಂಬ ಪ್ರಕಾರದ ಕಾವ್ಯಾಭಿವ್ಯಕ್ತಿ ಭಾರತದ ಅನೇಕ ಭಾಷೆಗಳಲ್ಲಿದೆ. ಕನ್ನಡದಲ್ಲಿ ಲಿಂಗಣ್ಣಕವಿಯ ಬಾರಮಾಸವನ್ನು ಬಿಟ್ಟರೆ ಮತ್ತೊಂದಿಲ್ಲ (ಅದನ್ನು ಶಾಂತರಸರು ಸಂಪಾದಿಸಿ ಪ್ರಕಟಿಸಿದ್ದಾರೆ). ಅದರ ವಿಶೇಷವೆಂದರೆ ವರ್ಷದ ಹನ್ನೆರಡು ತಿಂಗಳೂ ಪ್ರತಿಕ್ಷಣವೂ ಪ್ರೀತಿಯ ತೀವ್ರತೆಯನ್ನು ಅನುಭವಿಸುತ್ತಲೇ ಇರುವುದು ಅಭಿವ್ಯಕ್ತಿಸುತ್ತಲೇ ಇರುವುದು. ಇದೊಂದು ನಿರಂತರ ಎಚ್ಚರದ ಧ್ಯಾನದಂತೆ. ಅಂತಹ ಭಾವತೀವ್ರತೆಯನ್ನು ಈ ಸಂಕಲನ ಪ್ರತಿಕ್ಷಣವೂ ಧೇನಿಸುತ್ತಲೇ ಇರುತ್ತದೆ. ಇದು ಕವಿಗಾಗಲೀ ಓದುಗನಿಗಾಗಲೀ ಸರಳ ಅಭಿವ್ಯಕ್ತಿ ಕ್ರಮವಲ್ಲ. ಅಂತಹ ತೀವ್ರತೆಯ ಒತ್ತಡ ಕವಿಗೂ ಇರಬೇಕು ಓದುಗನಿಗೂ ಅದು ತಟ್ಟಬೇಕು. ಎರಡೂ ಪ್ರಾಮಾಣಿಕವಾಗಿರಬೇಕು. ಅಂತಹ ನಡೆ ಈ ಸಂಕಲನದ್ದು. ಈ ನುಡಿಚಿತ್ರದೊಂದಿಗೆ ಅದನ್ನು ಮುಂದುವರಿಸಬಹುದು.

ನನ್ನ ಅಸ್ತಿತ್ವವೇ ಇಲ್ಲದಂತೆ/ ನಿನ್ನೊಲವಿನ ಬೆಂಕಿಯಲಿ/ ಉರಿಯಬಯಸುತ್ತೇನೆ/ ಕೊನೆಗೆ ನನ್ನಾತ್ಮವೂ/ ಕರ್ಪೂರದಂತೆ ಉರಿದುಹೋಗಲಿ/ ಯಾವ ಕುರುಹೂ ಬಿಡದಂತೆ/ಎಂದೂ ಮತ್ತೆ ಹುಟ್ಟದಂತೆ.

ಕಾಡುವ 'ಸಕಾರಣ'ದ ಚಿಂತನೆಗಳು

ಎಚ್. ದಂಡಪ್ಪ

ಚಿದಾನಂದ ಸಾಲಿಯವರ 'ಸಕಾರಣ' ಎಂಬ ವಿಮರ್ಶಾ ಕೃತಿಯಲ್ಲಿ ವಿಮರ್ಶೆ, ಕಥಾ ಸಾಹಿತ್ಯ, ಅನುವಾದ, ಕಲೆ, ಗಡಿನಾಡು, ಶಿಕ್ಷಣ, ಗ್ರಾಮೀಣ ಮಕ್ಕಳ ಶೈಕ್ಷಣಿಕ, ಆರ್ಥಿಕ, ಹಸಿವಿನ ಸಮಸ್ಯೆ - ಮುಂತಾದವುಗಳ ಬಗ್ಗೆ ಚಿಂತಿಸಿರುವ ಇಪ್ಪತ್ತೆರಡು ಲೇಖನಗಳು ಇವೆ. ಕಳೆದ ಒಂದೂವರೆ ದಶಕದ ಭಾಷಣ, ಮುನ್ನುಡಿ, ಕೆಲವು ಸಂಪಾದಿತ ಕೃತಿಗಳು ಹಾಗೂ ಪುರವಣಿಗಳಿಗೆ ಬರೆದ ಲೇಖನಗಳು ಎಲ್ಲ ಒಂದೆಡೆ ಸಂಕಲಿತವಾಗಿವೆ. ಈ ಲೇಖನಗಳು ಸಾಂದರ್ಭಿಕವಾಗಿದ್ದರೂ ಅದನ್ನೂ ಮೀರಿ ಸೂಕ್ಷ್ಮವಾದ ಒಳನೋಟಗಳನ್ನು ಒಳಗೊಂಡಿವೆ.

ಸಾಹಿತ್ಯವನ್ನು ಚರಿತ್ರೆ ಮತ್ತು ಸಂಸ್ಕೃತಿಯ ಫಲ ಎಂದು ವ್ಯಾಖ್ಯಾನಿಸುವ ಈ ಕಾಲದಲ್ಲಿ ಒಮ್ಮೊಮ್ಮೆ ನಾವು ಸಾಹಿತ್ಯ ಕೃತಿಯಲ್ಲಿ ಸಾಮಾಜಿಕ ಅಥವಾ ಸಾಂಸ್ಕೃತಿಕ ಅಧ್ಯಯನವನ್ನಷ್ಟೇ ಮಾಡಿಬಿಡುತ್ತೇವೆ. ಇಂತಹ ಕಡೆ ಸಾಹಿತ್ಯದ ಕಲಾತ್ಮಕತೆ ಮತ್ತು ಅದರ ಅನನ್ಯತೆಯನ್ನು ಕಡೆಗಣಿಸಿ ಬಿಡುವುದರಿಂದ ಅದರ ಎಲ್ಲಾ ಅರ್ಥ, ಧ್ವನಿಸಾಧ್ಯತೆಗಳನ್ನು ಮರೆಯುತ್ತೇವೆ. ಆದ್ದರಿಂದ ಅದನ್ನು ಮೀರಿ ನಾವು ಸಾಹಿತ್ಯ ಕೃತಿಯ ಒಳ ಶರೀರದ ಸೂಕ್ಷ್ಮವಾದ ಚರ್ಚೆಗಳೊಂದಿಗೆ ಸಾಂಸ್ಕೃತಿಕ ಅಧ್ಯಯನ ಮಾಡಬೇಕು. ಅಂದರೆ ಆಶಯ ಆಕೃತಿಗಳ ಸಾವಯವ ಸಂಬಂಧದಲ್ಲಿಯೇ ಅಧ್ಯಯನ ಮಾಡಿದಾಗ ಆ ಕೃತಿಯ ಅನಂತ ಅರ್ಥ ಸಾಧ್ಯತೆಗಳು, ಒಳನೋಟಗಳು ದಕ್ಕುತ್ತವೆ. 'ವಿಮರ್ಶೆಯ ಹೊಸ ದಿಕ್ಕು: ಕೆಲವು ಟಿಪ್ಪಣಿಗಳು' ಎಂಬ ಪುಟ್ಟ ಲೇಖನದಲ್ಲಿ ಸಾಲಿಯವರು ಇದನ್ನು ಚರ್ಚಿಸಿದ್ದಾರೆ. ಕೆಲವು ಪ್ರಶ್ನೆಗಳನ್ನು ಎತ್ತಿ ಆಲೋಚನೆ ಮಾಡುವಂತೆ ಪ್ರೇರೇಪಿಸಿದ್ದಾರೆ.



ಸಕಾರಣ
ಲೇ: ಚಿದಾನಂದ ಸಾಲಿ
ಪ್ರ: ಅನ್ನಪೂರ್ಣ ಪ್ರಕಾಶನ, ಸಿರಿಗೇರಿ
ಸಂ:8762479216
ಪು: 132
₹100

ಒಳನೋಟ

ಈ ಕೃತಿಯಲ್ಲಿ ಅನುವಾದಕ್ಕೆ ಸಂಬಂಧಿಸಿದ ಛಂದೋಬದ್ಧ ಪ್ರಕಾರಗಳ ಅನುವಾದ: ಸ್ವರೂಪ ಮತ್ತು ಸವಾಲು, ಅನುವಾದದ ನೆಪದಲ್ಲಿ ಅನುಮಾನಗಳ ಅವಲೋಕನ ಎಂಬ ಎರಡು ಲೇಖನಗಳಲ್ಲಿ, ಅನುವಾದಕನೊಬ್ಬನು ಅನುವಾದ ಮಾಡುವಾಗ ಅದರಲ್ಲೂ ಕಾವ್ಯವನ್ನು ಅನುವಾದ ಮಾಡುವಾಗ ಎದುರಾಗುವ ಸಮಸ್ಯೆಗಳನ್ನು ಚರ್ಚಿಸುತ್ತಾ ಅವುಗಳ ಮಾರ್ಗೋಪಾಯಗಳ ಬಗ್ಗೆಯೂ ವಿಶ್ಲೇಷಣೆ ಮಾಡಲಾಗಿದೆ. ಛಂದೋಬದ್ಧ ಪ್ರಕಾರಗಳಲ್ಲಿ ಚಂಪೂ, ರಗಳೆ, ಷಟ್ಪದಿ, ಸಾಂಗತ್ಯ, ಗಜಲ್ ಮುಂತಾದುವುಗಳ ಬಗ್ಗೆ ಅರಿವಿರಬೇಕು, ಜೊತೆಗೆ ಗುರು, ಲಘು, ಪ್ಲುತ ಇತ್ಯಾದಿಗಳ ಅರಿವೂ ಇರಬೇಕು. ಅಂತಹ ವ್ಯಕ್ತಿ ಅನುವಾದ ಮಾಡಿದರೆ ಮೂಲ ಕೃತಿಗೆ ನ್ಯಾಯ ಸಲ್ಲಿಸಬಹುದು. ಇಲ್ಲದಿದ್ದರೆ ಅಪಾರ್ಥಗಳುಂಟಾಗಿ ಮೂಲಕ್ಕೆ ಧಕ್ಕೆಯುಂಟಾಗುತ್ತವೆ. ಹೊಸಗನ್ನಡ ಕವಿತೆಯನ್ನು ಅನುವಾದ ಮಾಡುವಾಗಲೂ ನಾವು ಅದರ ಲಯದ ವಿನ್ಯಾಸಗಳನ್ನು ಹಿಡಿಯಬೇಕಾಗುತ್ತದೆ. ಜೊತೆಗೆ ಶಿಲ್ಪ, ಆಶಯ, ಅಲ್ಲಿರುವ ಸಂಕೇತ, ಪ್ರತಿಮೆ ಪ್ರತೀಕ, ಚಿತ್ರಗಳು, ಅವುಗಳ ಅರ್ಥ ಸಾಧ್ಯತೆಗಳು ಅನುವಾದಕನಿಗೆ ಗೊತ್ತಿರಲೇಬೇಕು. ಮೂಲಲೇಖಕನಿಗಿಂತ ಅನುವಾದಕನಿಗೆ ಹೆಚ್ಚು ಜವಾಬ್ದಾರಿ ಇದೆ. ಈ ವಿಚಾರಗಳನ್ನು ಈ ಎರಡೂ ಲೇಖನಗಳಲ್ಲಿ ಚರ್ಚಿಸಲಾಗಿದೆ. ಜೊತೆಗೆ ಸಾಹಿತ್ಯಿಕ, ಮಾನವಿಕ, ವೈಜ್ಞಾನಿಕ, ವಾಣಿಜ್ಯಿಕ ಅನುವಾದಗಳ ಬಗ್ಗೆಯೂ ಮಾಹಿತಿ ಇದೆ. 'ಅನುವಾದದ ನೆಪದಲ್ಲಿ ಅನುಮಾನಗಳ ಅವಲೋಕನ' ಎಂಬ ಲೇಖನದಲ್ಲಿ ಗಜಲ್‌ಗಳ ಅನುವಾದದ ಸ್ವರೂಪದ ಬಗ್ಗೆ ಹಲವಾರು ವಿಚಾರಗಳನ್ನು ಸೋದಾಹರಣವಾಗಿ ಚರ್ಚಿಸಲಾಗಿದೆ.

'ಕನ್ನಡ ಗಜಲ್: ಹುಟ್ಟು, ಸ್ವರೂಪ ಮತ್ತು ವಿಕಾಸ' ಎಂಬ ಲೇಖನವು ಈ ಕೃತಿಯಲ್ಲಿರುವ ಲೇಖನಗಳಲ್ಲಿ ದೀರ್ಘವಾದದ್ದು ಮತ್ತು ಮುಖ್ಯವಾದದ್ದು. ಗಜಲ್ ಕುರಿತು ವಿಸ್ತಾರವಾಗಿ ಚರ್ಚಿಸಿರುವ ಈ ಲೇಖನ ಅಧ್ಯಯನಕಾರರಿಗೆ, ಕುತೂಹಲಿಗಳಿಗೆ ಉಪಯುಕ್ತ ಮಾಹಿತಿಯನ್ನು ಒದಗಿಸುತ್ತದೆ. ಇದರ ಜೊತೆಯಲ್ಲಿಯೇ ನಾವು 'ಶಾಂತರಸರ ಗಜಲ್: ಕೆಲವು ಟಿಪ್ಪಣಿಗಳು' ಲೇಖನವನ್ನು ಸೇರಿಸಿಕೊಂಡು ಓದಬಹುದು.

'ಕನ್ನಡ ಕಥಾ ಸಾಹಿತ್ಯದ ಇತ್ತೀಚಿನ ಒಲವುಗಳು' ಎಂಬ ಲೇಖನವು ನವ್ಯೋತ್ತರ ಕಾಲಘಟ್ಟದ ಕಥಾಸಾಹಿತ್ಯದ ಒಲವು ನಿಲುವುಗಳನ್ನು ಚರ್ಚಿಸುತ್ತದೆ. ಬಸವರಾಜ ಕಟ್ಟೀಮನಿಯವರ ಕಥೆಗಳ ಆಶಯವನ್ನು ವ್ಯಾಖ್ಯಾನಿಸುವ ಲೇಖನವೂ ಇಲ್ಲಿದೆ. 'ಜಗನ್ನಾಥ ದಾಸರ ಸಾಮಾಜಿಕ ಮತ್ತು ಅನುಭಾವಿಕ ನೆಲೆಗಳು' ಲೇಖನವು ದಾಸ ಸಾಹಿತ್ಯದ ಪರಂಪರೆಯಲ್ಲಿ ಅವರ ಇತಿಮಿತಿಗಳನ್ನು ಸೋದಾಹರಣವಾಗಿ ವಿಶ್ಲೇಷಣೆ ಮಾಡಿರುವುದು ಸೂಕ್ಷ್ಮ ಒಳನೋಟಗಳಿಗೆ ಕಾರಣವಾಗಿದೆ.

ಪ್ರತೀ ಲೇಖನದಲ್ಲೂ ಮಾಹಿತಿ ಇದೆ. ಹೇಳಿಕೆಗಳಿವೆ. ಆದರೆ, ವಿಶ್ಲೇಷಣೆ ಕಡಿಮೆ. ಮಾಹಿತಿಯೊಂದಿಗೆ ವಿಶ್ಲೇಷಣೆ ಸೇರಿದರೆ ವಿಮರ್ಶೆಗೆ ಅಪಾರವಾದ ಒಳನೋಟಗಳನ್ನು ಒಳಗೊಳ್ಳಲು ಸಾಧ್ಯವಾಗುತ್ತದೆ. 'ಆಳವಾದ ಒಳನೋಟದ ವಿಮರ್ಶಾ ಪ್ರಜ್ಞೆಗಿಂತ ತಕ್ಷಣಕ್ಕೆ ಸ್ಪಂದಿಸುವ ಜರ್ನಲಿಸ್ಟಿಕ್ ಗುಣವೇ ಇಲ್ಲಿ ಢಾಳಾಗಿ ಕಾಣಿಸುತ್ತದೆ' ಎಂದು ಇಲ್ಲಿನ ಲೇಖನಗಳ ಮಿತಿಗಳ ಬಗ್ಗೆ ಲೇಖಕರು ಹೇಳಿಕೊಂಡಿರುವುದು ನಿಜವೇ ಆಗಿದೆ.

ಲಿಂಗತ್ವ ಅಧ್ಯಯನಕ್ಕೆ ಹೊಸಹಾದಿ

ಸುಭಾಷ್ ರಾಜಮಾನೆ

ಭಾರತೀಯ ಸ್ತ್ರೀವಾದವು ಬಹುರೂಪಿ ಆಯಾಮಗಳಲ್ಲಿ ತೆರೆದುಕೊಳ್ಳುತ್ತಿದೆ. ಆದರೆ, ಮಹಿಳೆಯರ ಮೇಲೆ ನಡೆಯುತ್ತಿರುವ ಹಿಂಸೆ, ದೌರ್ಜನ್ಯ, ಅತ್ಯಾಚಾರ, ದಮನ - ಇವು ಏಕರೂಪಿಯಾಗಿರುವುದಿಲ್ಲ. ಇವು ಆಯಾ ಮಹಿಳೆಯರ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ನೆಲೆಗಟ್ಟಿನಿಂದ ನಿರ್ಧಾರಿತವಾಗುತ್ತವೆ. ಇವುಗಳಾಚೆಗೂ ಹಲವು ಪ್ರಶ್ನೆಗಳಿವೆ. ಈ ಹಿನ್ನೆಲೆಯಲ್ಲಿ ಪ್ರಖ್ಯಾತ ಸ್ತ್ರೀವಾದಿ ಚಿಂತಕಿ ಉಮಾ ಚಕ್ರವರ್ತಿಯವರ ಬಹುಚರ್ಚಿತ 'ಜೆಂಡರಿಂಗ್ ಕ್ಯಾಸ್ಟ್: ಥ್ರೂ ಎ ಫೆಮಿನಿಸ್ಟ್ ಲೆನ್ಸ್' ಕೃತಿಯು ಹಲವು ಕಾರಣಗಳಿಂದ ಮಹತ್ವದ್ದಾಗಿದೆ. ಏಕೆಂದರೆ, ಇದು ಭಾರತೀಯ ಸಾಮಾಜಿಕ ಶ್ರೇಣೀಕರಣದಲ್ಲಿ ಹೆಣ್ಣಿನ ಸ್ಥಾನಮಾನದ ಪ್ರಶ್ನೆಗಳನ್ನು ಮುಂಚೂಣಿಗೆ ತಂದಿದೆ. ಇಂತಹ ಗಂಭೀರ ಕೃತಿಯು ಎನ್. ಗಾಯತ್ರಿ ಹಾಗೂ ಆರ್. ಪೂರ್ಣಿಮಾ ಅವರ ಉಸ್ತುವಾರಿಯಲ್ಲಿ 'ಜಾತಿ-ಲಿಂಗತ್ವದ ಒಳನೇಯ್ಗೆ' ಶೀರ್ಷಿಕೆಯಲ್ಲಿ ಕನ್ನಡದಲ್ಲಿ ಓದಲು ಸಿಗುವಂತಾಗಿದೆ.

ಕಾಲಮಾನದ ದೃಷ್ಟಿಯಿಂದ ಈ ಕೃತಿಯ ಹರವು ತುಂಬ ದೊಡ್ಡದು. ಭಾರತದ ಪ್ರಾಚೀನ ಕಾಲದಿಂದ ಹಿಡಿದು 21ನೇ ಶತಮಾನದ ಇಂದಿನವರೆಗೂ ವ್ಯಾಪಿಸಿದೆ. ಉಮಾ ಚಕ್ರವರ್ತಿಯವರು ಮೂಲತಃ ಇತಿಹಾಸದ ಪ್ರಾಧ್ಯಾಪಕರು. ಆದ್ದರಿಂದ ಸಹಜವಾಗಿಯೇ ಅವರ ಅಧ್ಯಯನವು ಚರಿತ್ರೆಗೆ ಸಂಬಂಧಿಸಿರುತ್ತದೆ. ಆದರೆ, ಅವರ ಹುಡುಕಾಟವು ಭಾರತದ ಜಾತಿ ಶ್ರೇಣೀಕರಣದ ವ್ಯವಸ್ಥೆಯು ಹೆಣ್ಣಿನ ಮೂಲಕ ರೂಪುಗೊಂಡು, ಅದು ಹೇಗೆಲ್ಲ ಉಪಖಂಡವನ್ನು ಆವರಿಸಿಕೊಂಡಿತು ಎಂಬುದಾಗಿದೆ. ಆಯಾ ಕಾಲಘಟ್ಟದ ಯಜಮಾನಿಕೆಯು ಹೆಣ್ಣಿನ ಲೈಂಗಿಕತೆಯನ್ನು ಒಂದು ಸಂಪನ್ಮೂಲವಾಗಿ ಬಳಸಿಕೊಳ್ಳಲು ಕಾರಣವಾದ ಸಾಂಸ್ಕೃತಿಕ ರಾಜಕಾರಣವನ್ನು ವಿವಿಧ ಆಕರಗಳಿಂದ ಅವರು ಸಾಬೀತುಪಡಿಸುತ್ತಾರೆ. ಜಾತಿ, ವರ್ಗ, ಲಿಂಗ, ಅಸ್ಪೃಶ್ಯತೆ, ಧರ್ಮ, ಪ್ರಭುತ್ವ-ಇವುಗಳ ಸಂಬಂಧವು ಒಳಗೊಳಗೆ ಹೆಣೆದುಕೊಂಡಿರುವುದನ್ನು ಅವರು ಗುರುತಿಸಲು ಪ್ರಯತ್ನಿಸಿದ್ದಾರೆ.

ಈ ಕೃತಿಯು ಜಾತಿ ವ್ಯವಸ್ಥೆಯನ್ನು 'ಪರಸ್ಪರ ಅವಲಂಬಿತ' ಅಥವಾ 'ವೃತ್ತಿ ಆಧರಿಸಿದ ವಿಭಜನೆ' ಎಂಬುದನ್ನು ನಿರಾಕರಿಸುತ್ತದೆ; ಜಾತಿ ಬಗೆಗಿನ ಶುದ್ಧ-ಅಶುದ್ಧತೆಯ ವಿಶ್ಲೇಷಣೆಯು ಅಸಮರ್ಪಕವೆಂದು ತಿರಸ್ಕರಿಸುತ್ತದೆ; ಜಾತಿಯು 'ಸಾಂಸ್ಥೀಕೃತವಾದ ಅಸಮಾನತೆ' ಎನ್ನುವ ವಾದವು ಕೃತಿಯುದ್ದಕ್ಕೂ ಹಾಸುಹೊಕ್ಕಾಗಿದೆ. ಈ ಹಿನ್ನೆಲೆಯಲ್ಲಿ ಸಾಮಾಜಿಕ ಶ್ರೇಣೀಕರಣಕ್ಕೆ ಲಿಂಗತ್ವವು ಜಾತಿ ಮತ್ತು ವರ್ಗದೊಂದಿಗೆ ತಳಕು ಹಾಕಿಕೊಂಡಿದೆ; ಸ್ವಜಾತಿಗಳಲ್ಲಿಯೇ ನಡೆಯುವ ವಿವಾಹಗಳು ತಂತಮ್ಮ ಜಾತಿಯೊಳಗೆ ಸ್ವಾಯತ್ತತೆಯನ್ನು ಕಾಪಿಡುತ್ತವೆ; ಇದರಿಂದಾಗಿಯೇ ಬೇರೆ ಜಾತಿಗಳ ನಡುವೆ ಶ್ರೇಣೀಕರಣ ನೆಲೆಗೊಳ್ಳುವಂತಾಗುತ್ತದೆ. ಯಾಕೆಂದರೆ ಜಾತಿ ಹಾಗೂ ಲಿಂಗತ್ವದ ನಡುವೆ ಅಂತರ್ ಸಂಬಂಧವಿದೆ. ಆದ್ದರಿಂದ ಜಾತಿ ವ್ಯವಸ್ಥೆಯ ಸ್ಥಿರೀಕರಣದಲ್ಲಿ ಮಹಿಳೆಯರು ಹೆಬ್ಬಾಗಿಲುಗಳಾಗಿದ್ದಾರೆ ಎನ್ನುವ ಅಂಬೇಡ್ಕರರ ವಾದವು ಕೃತಿಯ ಅಡಿಪಾಯವಾಗಿದೆ. ಜಾತಿ ವ್ಯವಸ್ಥೆಯ ಪುನರ್ ಸೃಷ್ಟಿಯಲ್ಲಿ ಮಹಿಳೆಯರ ಪಾತ್ರವು ಮುಖ್ಯವಾಗಿದೆ. ಚರಿತ್ರೆಯಲ್ಲಿ ಹೆಣ್ಣಿನ ಅಧೀನತೆಯ ಪ್ರಶ್ನೆಗಳನ್ನು ಈ ಕೃತಿ ತೀಕ್ಷ್ಣವಾದ ವಿಮರ್ಶೆಗೆ ಗುರಿಪಡಿಸುತ್ತದೆ.

ವಿಮರ್ಶೆ

ಚಾರಿತ್ರಿಕವಾಗಿ ಮಹಿಳೆಯರ ಅಸ್ಮಿತೆಯನ್ನು ತುಚ್ಛೀಕರಣಗೊಳಿಸುವುದರ ಮುಖಾಂತರ ಅವರ ಇರುವಿಕೆಯನ್ನು ಪುರುಷಾಧಿಕಾರಕ್ಕೆ ವಿಧೇಯರನ್ನಾಗಿಸಲಾಗಿದೆ ಎಂಬುದೇ ಉಮಾ ಚಕ್ರವರ್ತಿಯವರ ವಾದದ ಪ್ರಧಾನ ತಿರುಳಾಗಿದೆ. ಇದರ ಸಮರ್ಥನೆಗೆ ಪ್ರಮಾಣಗಳನ್ನು ಒದಗಿಸುವ 'ಮನುಸ್ಮೃತಿ' ಹಾಗೂ 'ಭಗವದ್ಗೀತೆ'ಯಂತಹ ಅನೇಕ ಗ್ರಂಥಗಳನ್ನು ಅವರು ಸಾಕಷ್ಟು ವಿಸ್ತಾರವಾಗಿ ವಿಶ್ಲೇಷಿಸಿದ್ದಾರೆ. ಇವು ಹೆಂಗಸರು ಸಹಜವಾಗಿಯೇ ಅತಿ ಕಾಮಾಸಕ್ತರು, ಪಾಪಾತ್ಮರು, ದುರುಳರು, ಚಂಚಲರು, ಮೋಸಗಾರರು ಎಂದೆಲ್ಲ ಆಪಾದಿಸಿ ಅವರನ್ನು ತಾಯ್ತನ ಮತ್ತು ಪಾತಿವ್ರತ್ಯದ ನೆಲೆಯಲ್ಲಿ ಆದರ್ಶೀಕರಿಸಿದವು; ಅದರಲ್ಲೂ ಮುಖ್ಯವಾಗಿ ಬ್ರಾಹ್ಮಣ ಪುರುಷ ಪ್ರಾಧಾನ್ಯತೆಯು ತಮ್ಮ ಜಾತಿಯ ಮಹಿಳೆಯರನ್ನು ಲೈಂಗಿಕವಾಗಿ ನಿಯಂತ್ರಿಸಿತು. ಲೈಂಗಿಕ ಪಾವಿತ್ರ್ಯವೇ ಹೆಣ್ಣಿನ ಆತ್ಯಂತಿಕ ಗುಣಧರ್ಮ ಎಂಬ ತತ್ವವನ್ನು ರೂಪಿಸಿತು. ಹಾಗಾಗಿ ರಾಮಾಯಣದ ಸೀತೆಯು ಇಂದಿಗೂ ಆದರ್ಶ ಪತಿವ್ರತೆಯ ಉತ್ಕೃಷ್ಟ ಮಾದರಿಯಾಗಿದ್ದಾಳೆ. ಇವೆಲ್ಲವೂ ಮಹಿಳೆಯನ್ನು ಪುರುಷಾಧಿಕಾರಕ್ಕೆ ಕಟ್ಟಿ ಹಾಕಿದವು. - ಇವು ಉಮಾ ಅವರ ವಾದ-ವಾಗ್ವಾದಗಳ ಒಂದು ಸ್ಥೂಲ ವಿವರಣೆಯೆಂದು ಗುರುತಿಸಬಹುದಾಗಿದೆ.

ಉಮಾ ಅವರ ಈ ಇಂಗ್ಲಿಷ್ ಕೃತಿಯು 2003ರಲ್ಲಿ ಪ್ರಕಟವಾಯಿತು. ಇದರ ಪರಿಷ್ಕೃತ ಆವೃತ್ತಿಯು 2018ರಲ್ಲಿ ಹೊರಬಂದಿದೆ. ಸಮಕಾಲೀನ ಸಂದರ್ಭದಲ್ಲಿ ಜಾತಿಪ್ರಜ್ಞೆ ಎಂಬುದು ಯುವ ಪೀಳಿಗೆಯಲ್ಲಿ ಬೇರೆ ಬೇರೆ ರೂಪಗಳಲ್ಲಿ ಜೀವಂತವಾಗಿರುವುದನ್ನು ತೆರೆದಿಟ್ಟಿದೆ. ಇಂತಹ ಪಲ್ಲಟಗಳನ್ನು ಬಹು ವಿನ್ಯಾಸಗಳಲ್ಲಿ ಹಿಡಿದಿಟ್ಟಿದೆ. ಅವರು ತಮ್ಮ ಅಧ್ಯಯನಕ್ಕೆ ಬಳಸಿರುವ ಆಕರಗಳ ವ್ಯಾಪ್ತಿ ಕೂಡ ದೊಡ್ಡದು. ಕೆಲವು ಕಡೆಯಲ್ಲಿ ದೀರ್ಘವಾದ ಉಲ್ಲೇಖಗಳಿವೆ. ಕಡಿಮೆ ಸ್ಪೇಸ್‌ನಲ್ಲಿ ಹೆಚ್ಚು ವಿಷಯಗಳನ್ನು ಮಂಡಿಸುವುದರಿಂದ ಓದಲು ಕೊಂಚ ಭಾರ ಅನ್ನಿಸಬಹುದು. ಆದರೆ, ಅವಸರದ ಓದಿಗೆ ಈ ಪುಸ್ತಕವಲ್ಲ; ಇದು ಸಾವಧಾನದ ಓದನ್ನು ಅಪೇಕ್ಷಿಸುವ ಗಂಭೀರ ಕೃತಿ. ಕೆಲವು ಕಡೆಯಲ್ಲಿ ನಮ್ಮ ನಿಲುವುಗಳನ್ನು ಬುಡಮೇಲು ಮಾಡುತ್ತದೆ.

ಭಾರತದಲ್ಲಿ ಉಮಾ ಚಕ್ರವರ್ತಿ, ಶರ್ಮಿಳಾ ರೇಗೆ, ಅನುಪಮಾ ರಾವ್ - ಇವರು ಸ್ತ್ರೀವಾದಿ ಚಿಂತನೆಗಳನ್ನು ಅಂಬೇಡ್ಕರರ ಮೂಲಕ ವ್ಯಾಪಕವಾಗಿ ವಿಸ್ತರಿಸಿದ್ದಾರೆ. ಕನ್ನಡ ಸ್ತ್ರೀವಾದವು ಅಂಬೇಡ್ಕರರ ಮಹಿಳಾ ಕೇಂದ್ರಿತ ವಿಚಾರ ಧಾರೆಗಳನ್ನು ಇಂದಿಗೂ ಅಧ್ಯಯನದ ತೆಕ್ಕೆಗೆ ತೆರೆದುಕೊಂಡಿಲ್ಲದಿರುವುದು ಸೋಜಿಗವೇ ಆಗಿದೆ. ಆದ್ದರಿಂದ ಈ ಕೃತಿಯು ಕನ್ನಡದಲ್ಲಿ ಲಿಂಗತ್ವ ಅಧ್ಯಯನಕ್ಕೆ ಖಂಡಿತವಾಗಿಯೂ ಹೊಸ ಹಾದಿಗಳನ್ನು ತೆರೆಯಲಿದೆ.



ಜಾತಿ-ಲಿಂಗತ್ವದ ಒಳನೇಯ್ಗೆ
ಲೇ: ಉಮಾ ಚಕ್ರವರ್ತಿ
ಅನು: ಎನ್. ಗಾಯತ್ರಿ ಮತ್ತು ಆರ್. ಪೂರ್ಣಿಮಾ
ಪ್ರ: ಹಿತೈಷಿಣಿ
ಸಂ: 9449612792
ಪು: 280
₹250

ಕಾಡತಾವ ನೆನಪು!

12ನೇ ಪುಟದಿಂದ...

ಅವರೆಲ್ಲ ಈ ಪ್ರದೇಶ ಸುತ್ತಾಡಿ ಪುರಾಣ ಕಥೆ ಹೇಳುವಾಗ ಗಾಂಧಿ ಹೂಡಿರುವ ಅಸಹಕಾರ ಚಳವಳಿ, ಕರನಿರಾಕರಣೆ ಮುಂತಾದ ಚಳವಳಿಗಳ ಮಹತ್ವವನ್ನೂ ಹೇಳುವಂತೆ ವಿನಂತಿಸಿದರು. ಹೋರಾಟ ಜಾಗೃತಿಗೆ ಇವರನ್ನು ಉತ್ತೇಜಿಸಿದರು.

ಕ್ರಿ.ಶ. 1917-18ರಲ್ಲಿ ಸಿದ್ದಾಪುರದ ಗುಡ್ಡಗಾಡಿನ ಊರು ದೊಡ್ಮನೆಗೆ ಹಿರಿಯ ಅಧಿಕಾರಿಯೊಬ್ಬರು ಬಂದಿದ್ದರು. ವರ್ಷಕ್ಕೆ ಒಂದು ಸಾವಿರದಿಂದ 5 ಸಾವಿರ ರೂಪಾಯಿವರೆಗೆ ಭೂಕಂದಾಯ ನೀಡುವ ಮನೆತನಗಳು ಆ ಊರಿನಲ್ಲಿದ್ದವು. ಹೀಗಾಗಿ ವರ್ಷಕ್ಕೆ ಒಮ್ಮೆ ಕಲೆಕ್ಟರ್ ಸಾಹೇಬರು ಬಂದು ಬಿಡಾರ ಹೂಡುವುದು ಸಹಜವಾಗಿತ್ತು. ಅವರ ಜೊತೆಗೆ ಸಹಾಯಕರು, ಇನ್ನುಳಿದ ಅಧಿಕಾರಿಗಳು ಬಂದಿದ್ದರು. ಸಾಹೇಬರು ಕಾರಿನಲ್ಲಿ ಬಂದಿದ್ದರು. ಆದರೆ, ಸಹಾಯಕರು ಬಿಡಾರ ಸಾಮಗ್ರಿ ತುಂಬಿಕೊಂಡು ಎತ್ತಿನ ಗಾಡಿಯಲ್ಲಿ ತಲುಪಿದ್ದರು. ಹಸಿದ ಎತ್ತುಗಳನ್ನು ಆಳುಗಳು ಅಲ್ಲಿಯೇ ಮೇವಿಗೆ ಬಿಟ್ಟಿದ್ದರು. ಅವು ದೊಡ್ಮನೆ ನಾರಾಯಣ ಹೆಗಡೆಯವರ ಜಮೀನಿಗೆ ನುಗ್ಗಿ ಬೆಳೆ ಹಾಳು ಮಾಡಿದವು. ಎತ್ತು ಯಾರದ್ದಾದರೇನು? ಬೆಳೆ ಹಾಳು ಮಾಡಿದ್ದು ತಪ್ಪೆಂದು ಎತ್ತುಗಳನ್ನು ಕಟ್ಟಿ ಹಾಕಿದರು. ಇದು ಬ್ರಿಟಿಷ್ ಅಧಿಕಾರಿಯನ್ನು ಕೆರಳಿಸಿತು. ಹಳ್ಳಿಯ ಒಬ್ಬ ಸಾಮಾನ್ಯ ರೈತ ಜಿಲ್ಲಾಧಿಕಾರಿಗಳ ಬಿಡಾರ ಹೊತ್ತು ತಂದ ಎತ್ತುಗಳನ್ನು ಕಟ್ಟಿ ಹಾಕುವುದು ಮಹಾ ಪ್ರಮಾದವಲ್ಲವೇ? ತಕ್ಷಣ ಜಿಲ್ಲಾಧಿಕಾರಿಗಳು ನಾರಾಯಣ ಹೆಗಡೆಯವರಿಗೆ ಬಂಧನದ ವಾರಂಟ್ ಹೊರಡಿಸಿದರು.

ಸುದ್ದಿ ಸುತ್ತೆಲ್ಲ ಹಬ್ಬಿ ಹಲವರನ್ನು ತಲುಪಿತು. ಶಿರಳಗಿ ಸುಬ್ರಾಯ ಭಟ್ಟರು, ಹೊಬಾಳಿ ಗಣಪ ಭಟ್ಟರು, ಅಡವಿತೋಟದ ಗಣೇಶ ಭಟ್ಟರು ಇದರ ವಿರುದ್ಧ ಪ್ರತಿಭಟನೆಯ ತಯಾರಿ ನಡೆಸಿದರು. ಮೊದಲ ಹಂತವಾಗಿ ಪಟೇಲರು ರಾಜೀನಾಮೆ ನೀಡಿದರು! ತಕ್ಷಣ ಕಂಗಾಲಾದ ಅಧಿಕಾರಿ, ನಾರಾಯಣ ಹೆಗಡೆ ಅವರ ಜಮೀನಿಗೆ ಎತ್ತು ಮೇಯಲು ಬಿಟ್ಟಿದ್ದು ತಮ್ಮ ಸಿಬ್ಬಂದಿ ತಪ್ಪೆಂದು ಪ್ರಕರಣ ಅಲ್ಲಿಗೇ ತಣ್ಣಗಾಗಿಸಿದರು. ಆ ಕಾಲದ ಜನಸಂಖ್ಯೆಯಲ್ಲಿ ಶೇ 10-15ರಷ್ಟೂ ಸಾಕ್ಷರರಿರಲಿಲ್ಲ. ಆದರೆ, ಆಗಲೇ ಪುಣೆಯ ಫರ್ಗ್ಯೂಸನ್ ರಾಷ್ಟ್ರೀಯ ಕಾಲೇಜಿನಲ್ಲಿ ಓದಿದ್ದ ನಾರಾಯಣ ಹೆಗಡೆ, ಗೋಖಲೆ ಹಾಗೂ ತಿಲಕರ ಭಾಷಣ ಕೇಳಿ ಬೆಳೆದವರು. ಉನ್ನತ ಶಿಕ್ಷಣದಿಂದಾಗಿ ಸ್ವಾತಂತ್ರ್ಯ ಹೋರಾಟಗಾರರ ನಿರಂತರ ಒಡನಾಟದಿಂದ ಪ್ರಭುತ್ವಕ್ಕೆ ಸವಾಲು ಹಾಕುವ ಶಕ್ತಿ ಅವರಲ್ಲಿ ಬಂದಿತ್ತೆಂದು ಪ್ರಸ್ತುತ ಅಮೆರಿಕದಲ್ಲಿ ನೆಲೆಸಿರುವ ಅವರ ಮೊಮ್ಮಗ ನಾರಾಯಣ ಹೆಗಡೆ ದೊಡ್ಮನೆ ನೆನಪಿಸಿಕೊಳ್ಳುತ್ತಾರೆ. ಈ ಕಗ್ಗಾಡಿನ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಮೊದಲ ಸಾಲಿನಲ್ಲಿ ನಿಲ್ಲುವವರು ಆ ಚಳವಳಿಗಾರ.

ಶಿರಸಿಗೆ ದಕ್ಷಿಣ ವಿಭಾಗದ ಕಮಿಷನರ್ ಕೆಡೆಲ್ ಬಂದಾಗಿನ ಘಟನೆ ನೋಡಿ. ಇಲ್ಲಿನ ಆಡಳಿತ ಕಾರ್ಯ ಮುಗಿಸಿ ಅವರು ಕುಮಟಾಕ್ಕೆ ಪ್ರಯಾಣದ ಸಿದ್ಧತೆ ನಡೆಸಿದ್ದರು. ಅಧಿಕಾರಿಗಳೇನೋ ಕಾರಿನಲ್ಲಿ ಹೋಗುತ್ತಿದ್ದರು. ಅವರ ಸಹಚರರ ವಸ್ತು ಸಾಗಾಟಕ್ಕೆ ಎತ್ತಿನ ಗಾಡಿ ಬೇಕಿತ್ತು. ಮೇಲಧಿಕಾರಿಗಳು ಬಂದಾಗೆಲ್ಲ ಪೊಲೀಸರು ರೈತರ ಎತ್ತಿನ ಗಾಡಿಗಳನ್ನು ಹಿಡಿದು ಅವುಗಳಲ್ಲಿ ಪುಕ್ಕಟೆಯಾಗಿ ವಸ್ತುಗಳನ್ನು ಕರಾವಳಿಗೆ ಸಾಗಿಸುತ್ತಿದ್ದರು. 'ಬಿಟ್ಟೀಗಾಡಿ' ಎಂದು ಕರೆಯಲ್ಪಡುವ ಈ ಸೇವೆಯನ್ನು ಮನಸೋಇಚ್ಛೆ ಬಳಸುತ್ತಿದ್ದರು. ಕೆಡಲ್ ಬಂದ ದಿನವೂ ಹಲವು ಎತ್ತಿನ ಗಾಡಿಗಳನ್ನು ಹಿಡಿದು ಬಂಗ್ಲೆಯತ್ತ ಕಳಿಸಿದರು.

ಶಿರಸಿಯ ಮುಂಡಗೇಸರದ ಹೆಗಡೆಯವರೊಬ್ಬರು ಮನೆಯಲ್ಲಿ ಯಾರಿಗೋ ತೀವ್ರ ಅನಾರೋಗ್ಯವೆಂದು ಪೇಟೆಗೆ ಬಂದವರು ಗಾಡಿ ಹೊಡೆದುಕೊಂಡು ಬೇಗ ಬೇಗ ಹೊರಟಿದ್ದರು. ಪೊಲೀಸರು ಅವರನ್ನು ತಡೆದರು, ಹೆಗಡೆಯವರು ತಮ್ಮ ಮನೆಯ ಅನಾರೋಗ್ಯದ ವಿಚಾರ ಪ್ರಸ್ತಾಪಿಸಿದರು. ಪೊಲೀಸರು ಕೇಳಲಿಲ್ಲ. ವಿಷಯ ತಿಳಿದು ಕಮಿಷನರ್ ಸ್ಥಳಕ್ಕೆ ಬಂದರು. ಅಷ್ಟರಲ್ಲಿ ಅಕದಾಸ ಗಣಪತಿ ಭಟ್, ಅಡಿಕೆ ವ್ಯಾಪಾರಿ ನಾರಾಯಣ ಹೆಗಡೆ ಹೂಡ್ಲಮನೆ, ವಾಸುದೇವ ಕೊಲ್ಲಾಳಿ ಮೊದಲಾದವರು ಘಟನಾ ಸ್ಥಳಕ್ಕೆ ಬಂದು ಪ್ರತಿಭಟನೆ ನಡೆಸಿದರು. ಬಿಟ್ಟೀಗಾಡಿ ನೀಡಲು ಪ್ರತಿಭಟಿಸುವುದು ರಾಜದ್ರೋಹವೆಂದು ಆಗ ಪ್ರಕರಣ ದಾಖಲಾಯ್ತು. ಪ್ರಕರಣವನ್ನು ಹೋರಾಟಗಾರರು ನ್ಯಾಯಾಲಯಕ್ಕೆ ಒಯ್ದರು. ವಿಚಾರಣೆ ಬಳಿಕ 'ಬಿಟ್ಟೀಗಾಡಿ' ವಿರುದ್ಧದ ಹೋರಾಟಕ್ಕೆ ಜಯ ದೊರೆಯಿತು. ಕಲೆಕ್ಟರ್ ಉಪಟಳದಿಂದ ತೊಂದರೆ ಅನುಭವಿಸುತ್ತಿದ್ದ ರೈತರು ತೀರ್ಪಿನಿಂದ ಖುಷಿಪಟ್ಟರು. ಬಯಲುಸೀಮೆಯ ಜನಗಳಂತೂ ಬಿಟ್ಟೀಗಾಡಿ ರದ್ದುಪಡಿಸಿದ ಅಕದಾಸ ಗಣಪತಿ ಭಟ್ಟರ ಸಾಹಸವನ್ನು ಮೆಚ್ಚಿ ಆ ಕಾಲಕ್ಕೆ ಲಾವಣಿ ಕಟ್ಟಿ ಹಾಡಿದರಂತೆ!

ನೆಲದ ಹೋರಾಟದ ಘಟನೆಗಳನ್ನು ಓದುತ್ತ ಹೋದರೆ ಮಣ್ಣಿನ ಮಹಾತ್ಮೆ ಅಚ್ಚರಿ ಮೂಡಿಸುತ್ತದೆ. ಸಿದ್ದಾಪುರ ಮಾವಿನಗುಂಡಿಯಲ್ಲಿ ತ್ಯಾಗಲಿಯ ಭುವನೇಶ್ವರಮ್ಮ 31 ದಿನ ಹಾಗೂ ಕಲ್ಲಾಳ ಲಕ್ಷ್ಮಮ್ಮ ಸತತ 21 ದಿನ ಉಪವಾಸ ಸತ್ಯಾಗ್ರಹ ನಡೆಸಿದ ಸಾಹಸಿ ಮಹಿಳೆಯರು. ಇಂಥ ಅದ್ಭುತ ಹೋರಾಟ 'ಹಿಂದೂ' ಪತ್ರಿಕೆಯ ಇಡೀ ಪುಟದಲ್ಲಿ ಕ್ರಿ.ಶ. 1932ರ ಜೂನ್ 3ರಂದು ಪ್ರಕಟವಾಯಿತು. ಅಲ್ಲಿಂದ ಕರನಿರಾಕರಣೆಯ ಕಗ್ಗಾಡಿನ ಹೋರಾಟ ದೇಶದ ನಾಯಕರನ್ನು ಸೆಳೆಯಿತು.

(ಸ್ವಾತಂತ್ರ್ಯ ಚಳವಳಿಯ ವಿವಿಧ ದಾಖಲೆ ಆಧರಿಸಿ ಈ ಲೇಖನ ಬರೆಯಲಾಗಿದೆ)

ಮಣ್ಣು ಬಣ್ಣಗಳ ಘಮ

ಎಸ್. ಸುಕೃತ

ಹಂಪಿಯಲ್ಲಿ ಕಂಡ ಬಸವಣ್ಣ

ಕಲೆ

ಅವು ಮರಗಳೇ ಹೌದೇ? ಗೊತ್ತಿಲ್ಲ. ಏಕೆಂದರೆ, ಅವುಗಳಿಗೆ ಎಲೆಯೇ ಇಲ್ಲ. ಆ ಆಕೃತಿಗಳು ನೀರಿನ ಧಾರೆಗಳೂ ಇರಬಹುದು ಅಥವಾ ನೀಲಿ ಬಣ್ಣದ ಇನ್ನೇನಾದರೂ ಆಗಿರಬಹುದು. ಭೂಮಿ-ಆಕಾಶದ ನಡುವೆ ನಂಟು ಬೆಸೆವ ರೇಖೆಗಳು; ವಿಧ ವಿಧ ಬಣ್ಣಗಳು. ಮಳೆಬಿದ್ದ ಭೂಮಿ ಹಸಿರಾದಂತೆ ಕ್ಯಾನ್ವಾಸ್ ತುಂಬಾ ಬಣ್ಣದ ಮೆರುಗು...

ಚಿತ್ರಕಲಾವಿದ ಗಣೇಶ್ ಪಿ. ದೊಡ್ಡಮನಿ ಅವರ ಇಂಥ ಅಮೂರ್ತ ಚಿತ್ರಗಳ ಪ್ರದರ್ಶನವು ಬೆಂಗಳೂರಿನಲ್ಲಿ ನಡೆಯುತ್ತಿದೆ. ಎಂಕೆಎಫ್ ಮ್ಯೂಸಿಯಂ ಆಫ್ ಆರ್ಟ್ (ಮಂಜುಶ್ರೀ ಕೈತಾನ್ ಫೌಂಡೇಶನ್) ಈ ಪ್ರದರ್ಶನ ಏರ್ಪಡಿಸಿದ್ದು, ಆಗಸ್ಟ್ 30ರವರೆಗೂ ನಡೆಯಲಿದೆ. 'ನೆಲದ ಪ್ರಜ್ಞೆ' (A Sense of the Land) ಎನ್ನುವುದು ಈ ಪ್ರದರ್ಶನದ ವಿಷಯ.

ಅಮೂರ್ತ ಕಲೆ... ಅವರವರ ಭಾವಕ್ಕೆ ಅವರವರ ಭಕುತಿಗೆ

'ಮಳೆ ಬಿದ್ದಾಗ ಭೂಮಿಯಿಂದ ಏಳುವ ಮಣ್ಣಿನ ವಾಸನೆ ಮತ್ತು ಪ್ರಕೃತಿಯ ಸಂಭ್ರಮ ಎಂತಹ ಕಲಾವಿದನನ್ನೂ ಸೆಳೆಯುತ್ತದೆ. ಹಾಗೆಯೇ ನನ್ನನ್ನೂ ಸೆಳೆದಿದೆ; ಬೆರಗು ಮೂಡಿಸಿದೆ. ಈ ಕುರಿತು ಕಳೆದ ನಾಲ್ಕು ವರ್ಷಗಳಿಂದ ನಾನು ಕೆಲಸ ಮಾಡುತ್ತಿದ್ದೇನೆ' ಎನ್ನುತ್ತಾರೆ ಗಣೇಶ್. ತೈಲವರ್ಣ ಚಿತ್ರದಲ್ಲಿ ಹೆಚ್ಚು ಕೆಲಸ ಮಾಡಿರುವ ಈ ಕಲಾವಿದ, ಕಲಾಕೃತಿಗಳು ನೋಡುಗನನ್ನು ಆಕರ್ಷಿಸುವಂತಿರಬೇಕು ಎಂದು ಬಯಸುತ್ತಾರೆ. 'ಇವು ಅಮೂರ್ತ ಚಿತ್ರಗಳು ಎನಿಸಿದರೂ ನನ್ನ ಸುತ್ತಮುತ್ತ ಇರುವ ವಸ್ತುಗಳೇ ಈ ಚಿತ್ರಗಳ ಮೂಲ ದ್ರವ್ಯಗಳು. ಮಣ್ಣಿನ ಘಮವನ್ನು ಬಣ್ಣಗಳ ಮೂಲಕ ಅನುಭವಿಸುವಂತೆ ಮಾಡುವ ಪ್ರಯತ್ನವಿದು' ಎನ್ನುತ್ತಾರೆ ಅವರು.

ಗಣೇಶ್ ದೊಡ್ಡಮನಿ

ಗಣೇಶ್ ಪಿ. ದೊಡ್ಡಮನಿ ಅವರು ಬೆಳಗಾವಿ ಜಿಲ್ಲೆಯ ರಾಮದುರ್ಗದವರು. ಈ ಅಮೂರ್ತ ಚಿತ್ರಕಲಾವಿದ ದಾವಣಗೆರೆಯಲ್ಲಿ ಚಿತ್ರಕಲೆಯ ಆರಂಭಿಕ ಪಾಠ ಕಲಿತವರು. ನಂತರ ಕಲಬುರ್ಗಿಯಲ್ಲಿ ಬಿಎಫ್ಎ ಹಾಗೂ ಶಾಂತಿನಿಕೇತನದ ವಿಶ್ವಭಾರತಿ ವಿಶ್ವವಿದ್ಯಾಲಯದಲ್ಲಿ ಎಂಎಫ್ಎ ಪದವಿ ಪಡೆದಿದ್ದಾರೆ. ಬೆಂಗಳೂರು ಸದ್ಯಕ್ಕೆ ಅವರ ಕಾರ್ಯಸ್ಥಾನ.

'ಚಿತ್ರಗಳು ಮನುಷ್ಯನಿಗೆ ಅನಿವಾರ್ಯವಲ್ಲ' ಎನ್ನುವುದು ಗಣೇಶ್ ಅವರ ಖಡಕ್ ಮಾತು. 'ಊಟಕ್ಕೆ, ಬಟ್ಟೆಗೆ ಕೊರತೆ ಇಲ್ಲದೆ ಉತ್ತಮ ಸ್ಥಿತಿಯಲ್ಲಿ ಬದುಕು ಸಾಗಿಸುತ್ತಿರುವವರು ನಮ್ಮ ಚಿತ್ರಗಳ ಗ್ರಾಹಕರು. ಕಲೆಗಳಲ್ಲಿ ಆಸಕ್ತಿ ಇರುವ ಸ್ಥಿತಿವಂತರು, ತಮ್ಮ ಗೋಡೆಗಳನ್ನು ನೋಡಿದಾಗ ಖಾಲಿ ಎನಿಸಿ, ಪೇಂಟಿಂಗ್ಸ್ ತಂದು ಇಡಬೇಕು ಎಂದು ಯೋಚಿಸಿ ಪ್ರದರ್ಶನಗಳಿಗೆ ಬಂದು ಸಾವಿರ, ಲಕ್ಷ ರೂಪಾಯಿ ಕೊಟ್ಟು ಕೊಂಡು ಹೋಗುತ್ತಾರೆ. ಆದರೆ, ಈಗ ದುಡಿಮೆ ಇಲ್ಲದೆ ಕಳೆದ ಒಂದೂವರೆ ವರ್ಷದಿಂದ ಕಲಾವಿದರ ಬದುಕು ದುಸ್ತರವಾಗಿದೆ' ಎಂದು ಸದ್ಯದ ಸ್ಥಿತಿಯನ್ನು ವಿಶ್ಲೇಷಿಸುತ್ತಾರೆ. ಈಗ ಆಯೋಜನೆಗೊಂಡಿರುವ ಪ್ರದರ್ಶನದಲ್ಲಿಯೂ ಗಣೇಶ್ ಅವರಿಗೆ ದೊಡ್ಡ ಮೊತ್ತದ ಆದಾಯ ಬರುವ ನಿರೀಕ್ಷೆಯೇನೂ ಇಲ್ಲ.

> 'ಕೊರೊನಾ ಸಾಂಕ್ರಾಮಿಕವು ನಮ್ಮೆಲ್ಲರ ಬದುಕನ್ನು ಕಷ್ಟವಾಗಿಸಿದೆ. ಎಂತಹ ಕಷ್ಟದ ಸಮಯದಲ್ಲೂ ತಮ್ಮ ಕಲೆಗಳ ಮೂಲಕ ಸಾಂತ್ವನ ಹೇಳುತ್ತಿದ್ದ ಕಲಾವಿದರ ಸ್ಥಿತಿ ಹೇಳತೀರದಂತಾಗಿದೆ. ಚಿತ್ರಕಲೆಯೂ ಇದಕ್ಕೆ ಹೊರತಲ್ಲ. ನನಗೆ ಗೊತ್ತಿದ್ದ ಎಷ್ಟೋ ಕಲಾವಿದರು ತುತ್ತು ಅನ್ನಕ್ಕಾಗಿ ದಿನಸಿ ಅಂಗಡಿಗಳಲ್ಲಿ ಪೊಟ್ಟಣ ಕಟ್ಟುವ ಕೆಲಸಕ್ಕೆ ಸೇರಿಕೊಂಡಿದ್ದನ್ನು, ಕೂಲಿ ಕೆಲಸಕ್ಕೆ ಹೋಗಿದ್ದನ್ನು ನಾನು ನೋಡಿದ್ದೇನೆ. ಹಾಗಾಗಿ, ಈ ಪ್ರದರ್ಶನದಿಂದ ಬರುವ ಆದಾಯದಲ್ಲಿ ಶೇ 50ರಷ್ಟನ್ನು ಇಂಥ ಕಲಾವಿದರ ನೆರವಿಗೆ ನೀಡುತ್ತೇನೆ' ಎಂದು ಗಣೇಶ್ ಹೇಳುತ್ತಾರೆ.

'ರಾಷ್ಟ್ರದಾದ್ಯಂತ ಹಲವು ಆರ್ಟ್ ಗ್ಯಾಲರಿಗಳು ಬಾಡಿಗೆ ಕಟ್ಟಲಾಗದೆ ಮುಚ್ಚಿಹೋಗಿವೆ. ಅಂಥ ಗ್ಯಾಲರಿಗಳಲ್ಲಿ ಕಲಾಕೃತಿಗಳನ್ನು ಪ್ರದರ್ಶನ ಮಾಡುತ್ತಿದ್ದ ಕಲಾವಿದರ ಬದುಕು ಕಷ್ಟಕ್ಕೆ ಬಿದ್ದಿದೆ. ಬಣ್ಣ ಖರೀದಿಸಲು ಸಾಮರ್ಥ್ಯವಿರುವ ಕಲಾವಿದರು ಮಾರಾಟವಾಗದಿದ್ದರೂ ಪರವಾಗಿಲ್ಲ ಎಂದು ಚಿತ್ರಗಳನ್ನು ರಚಿಸುತ್ತಿದ್ದಾರೆ. ಅಂಥವರ ಬದುಕು ಹೇಗೋ ನಡೆಯುತ್ತಿದೆ. ನನ್ನ ಉದಾಹರಣೆಯನ್ನೇ ತೆಗೆದುಕೊಳ್ಳಿ, ಸರ್ಕಾರಿ ನೌಕರಿಯಲ್ಲಿದ್ದೆ. ಪೂರ್ತಿ ಸಮಯ ಚಿತ್ರಗಳಿಗೇ ಕೊಡಬೇಕು ಎನ್ನುವ ದೃಷ್ಟಿಯಿಂದ ಕೆಲಸ ಬಿಟ್ಟೆ. ಚಿತ್ರಗಳ ದುಡಿಮೆಯಿಂದಲೇ ಸುಖ ಇತ್ತು. ಆದರೆ, ಕೊರೊನಾ ನೆಮ್ಮದಿ ಕಿತ್ತುಕೊಂಡಿತು. ಅನಿಮೇಷನ್ ಗೊತ್ತಿದ್ದರಿಂದ ನನಗೆ ಒಂದು ಕಂಪನಿಯಲ್ಲಿ ಕಲಾ ನಿರ್ದೇಶಕನಾಗಿ ಕೆಲಸ ಸಿಕ್ಕಿತು, ಬದುಕಿದೆ. ಬಡ ಕಲಾವಿದರ ಪಾಡೇನು ಎಂಬ ಪ್ರಶ್ನೆಯನ್ನು ಅವರು ಮುಂದಿಡುತ್ತಾರೆ.

ಕಲಾವಿದರ ಸಂಕಷ್ಟವನ್ನು ಬಿಚ್ಚಿಡಲು ಅವರು ಮತ್ತೊಂದು ಉದಾಹರಣೆಯನ್ನು ಕೊಡುತ್ತಾರೆ. 'ಇಂಥ ಕಷ್ಟದ ಸಮಯದಲ್ಲೂ ಕೆಲವರು ಹಣ ಮಾಡಲು ಮುಂದಾದರು. ಕಲಾವಿದರಿಂದ ಕಡಿಮೆ ಬೆಲೆಗೆ ಚಿತ್ರಗಳನ್ನು ಖರೀದಿಸುವುದು. ನಂತರ ಸಮಯ ನೋಡಿ ಅದನ್ನು ಹೆಚ್ಚಿನ ಬೆಲೆಗೆ ಮಾರುವುದು. ದುಡ್ಡಿನ ತುರ್ತು ಅಗತ್ಯ ಇದ್ದ ಹಲವರು ಬಹಳ ಕಡಿಮೆ ಬೆಲೆಗೆ ತಮ್ಮ ಕಲಾಕೃತಿಗಳನ್ನು ಇಂಥ ಮಧ್ಯವರ್ತಿಗಳಿಗೆ ಮಾರಿದರು' ಎಂದು ವಾಸ್ತವ ಚಿತ್ರಣಕ್ಕೆ ಕನ್ನಡಿ ಹಿಡಿಯುತ್ತಾರೆ.

ಈ ಎಲ್ಲದರ ಮಧ್ಯೆ ಲಾಕ್‌ಡೌನ್ ಕೆಲವರಿಗೆ ವರವೂ ಆಯಿತು ಎನ್ನುತ್ತಾರೆ ಗಣೇಶ್. 'ಚಿತ್ರಕಲೆಯ ಕಲಿಕೆಯ ಹಂತದಲ್ಲಿದ್ದವರಿಗೆ ಇದೊಂದು ಅವಕಾಶವಾಗಿ ಪರಿಣಮಿಸಿತು. ಚಿತ್ರಕಲೆ ಕುರಿತ ವೆಬಿನಾರ್‌ಗಳು, ಅಂತರರಾಷ್ಟ್ರೀಯ ಮಟ್ಟದ ಕಲಾವಿದರ ಭಾಷಣಗಳನ್ನು ಲೈವ್ ಆಗಿ ಕೇಳುವ ಮತ್ತು ಭಾಗವಹಿಸುವ ಅವಕಾಶ ಸಿಕ್ಕಿತು. ವಿದ್ಯಾರ್ಥಿಗಳಿಗೆ ಚಿತ್ರ ಕಲಿಕೆಗೆ ಬೇಕಾದ ಧ್ಯಾನ ಮತ್ತು ಅಭ್ಯಾಸ ಎರಡಕ್ಕೂ ಬಹಳಷ್ಟು ಸಮಯ ಸಿಕ್ಕಿದೆ' ಎನ್ನುವುದು ಅವರ ವಿವರಣೆ.

'ಕೊರೊನಾ ಅಲೆಗಳು ಬರುತ್ತಲೇ ಇರುತ್ತವೆ. ಇದರಿಂದ ಕಲಾವಿದರಿಗೆ ಆಗಿರುವ ತೊಂದರೆ ಬಗ್ಗೆಯೂ ಗಮನಹರಿಸಬೇಕಿದೆ. ಲಾಕ್‌ಡೌನ್ ಸಮಯದಲ್ಲೂ ಆನ್‌ಲೈನ್ ಮೂಲಕ ಕಲಾಕೃತಿಗಳ ಮಾರಾಟ ನಡೆದಿದೆ. ಚದುರಿದಂತೆ ಇದ್ದ ನಾವು, ಚಿತ್ರಕಲಾವಿದರೆಲ್ಲ ಸಾಮಾಜಿಕ ಮಾಧ್ಯಮದ ಮೂಲಕ ಒಂದಾಗಿದ್ದೇವೆ, ಹೆಚ್ಚು ಹತ್ತಿರವಾಗಿದ್ದೇವೆ. ಕಲಾವಿದರಿಂದ ನೇರವಾಗಿ ಖರೀದಿ ಮಾಡಲು ಆನ್‌ಲೈನ್ ವೇದಿಕೆ ಗ್ರಾಹಕರಿಗೆ ಸಹಾಯ ಮಾಡಿದೆ. ಲಾಕ್‌ಡೌನ್‌ಗಿಂತ ಮೊದಲು ಇದ್ದ ಸ್ಥಿತಿಗೆ ಎಲ್ಲವೂ ಮರಳಬಹುದು ಎನ್ನುವುದು ಕಷ್ಟ. ಆದರೆ, ಹೊಸ ಹೊಸ ಸಾಧ್ಯತೆಗಳು ತೆರೆದುಕೊಳ್ಳುವುದಂತೂ ಖಚಿತ. ಅವುಗಳನ್ನು ನಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳುವ ಜಾಣ್ಮೆಯನ್ನು ತೋರಬೇಕು' ಎನ್ನುತ್ತಾರೆ ಗಣೇಶ್. ❖

ಚಳವಳಿ ಹಿಂದಿನ 'ಸ್ತ್ರೀಶಕ್ತಿ'

12ನೇ ಪುಟದಿಂದ...

ಬಳ್ಳಾರಿ ಸಿದ್ಧಮ್ಮ ಮತ್ತು ನಾಗರತ್ನಮ್ಮ ಹಿರೇಮಠ ಅವರ ಹಿರಿತನದಲ್ಲಿ ಚಿತ್ರದುರ್ಗ, ದಾವಣಗೆರೆ, ತುಮಕೂರು, ಶಿರಾ ಭಾಗಗಳಲ್ಲಿ ಈಚಲು ಮರ ಕಡಿಯುವ ಯಜ್ಞ ಒಳ್ಳೆಯ ಪ್ರತಿಕ್ರಿಯೆಯನ್ನು ತಂದಿತ್ತಿತ್ತು.

1938ರ ಶಿವಪುರ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಪುರುಷ ನಾಯಕರ ದಸ್ತಗಿರಿಯಾದಾಗ ಮಹಿಳಾ ತಂಡ ತೋರಿದ ಧೈರ್ಯ ಸ್ಮರಣೀಯವಾದದ್ದು. ಈ ಸಮಾವೇಶವೇ ಮೈಸೂರು ಭಾಗದಲ್ಲಿ ಮಹಿಳಾ ಚಳವಳಿಯ ತೀವ್ರ ಚಟುವಟಿಕೆಗೆ ನಾಂದಿಯಾಯಿತು. ವಿದುರಾಶ್ವತ್ಥದಲ್ಲಿ ನಿಯೋಜಿತವಾದ ಮೈಸೂರು ಕಾಂಗ್ರೆಸ್ ಸಮಾವೇಶದಲ್ಲಿ ಭಾಷಣ ಮಾಡದಂತೆ ತಮ್ಮ ಮೇಲೆ ಹೇರಿದ ನಿಷೇಧವನ್ನು ಕಮಲಾದೇವಿ ಚಟ್ಟೋಪಾಧ್ಯಾಯ ಧಿಕ್ಕರಿಸಿದರು. 'ಧ್ವಜವನ್ನು ಗೌರವಿಸುವುದೆಂದರೆ ರಾಷ್ಟ್ರವನ್ನು ಗೌರವಿಸುವುದು ಮತ್ತು ರಾಷ್ಟ್ರವನ್ನು ಗೌರವಿಸುವುದೆಂದರೆ ಅದರ ರಕ್ಷಣೆಗಾಗಿ ಹೋರಾಡುವುದು ಅನಿವಾರ್ಯ' ಎಂದು ಉದ್ಘೋಷಿಸಿ, ಮಹಿಳೆಯರು ರಾಜಕೀಯ ಹಾಗೂ ಸಾಮಾಜಿಕ ಚಳವಳಿಯಲ್ಲಿ ಭಾಗವಹಿಸಬೇಕಾದ ಅಗತ್ಯವನ್ನು ತಿಳಿಸಿದರು. ವಿದುರಾಶ್ವತ್ಥದಲ್ಲಿ ಗರ್ಭಿಣಿ ಗೌರಮ್ಮನನ್ನು ಕೊಂದ ಪ್ರಕರಣ ಮಹಿಳಾ ಚಳವಳಿಗೆ ಬೆಂಕಿ-ಗಾಳಿಯ ತೀವ್ರತೆಯನ್ನು ತಂದುಕೊಟ್ಟಿತು. ಈಸೂರು ಘಟನೆಯಲ್ಲಿ ಬ್ರಿಟಿಷರ ಕ್ರೌರ್ಯಕ್ಕೆ ಸಿಲುಕಿ ಜೀವಾವಧಿ ಶಿಕ್ಷೆಗೆ ಒಳಗಾಗಿ ದೇಶಕ್ಕಾಗಿ ಬಲಿಯಾದವರು ಹಾಲಮ್ಮ ಮತ್ತು ಪಾರ್ವತಮ್ಮ.

ಗಾಂಧೀಜಿಯವರ ವೈಯಕ್ತಿಕ ಸತ್ಯಾಗ್ರಹದ ಮಾದರಿಯು ಕರ್ನಾಟಕದ ಮಹಿಳೆಯರನ್ನು ತೀವ್ರವಾಗಿ ಸೆಳೆಯಿತು. ಯುದ್ಧ ವಿರೋಧಿ ಘೋಷಣೆ, ಪಿಕೆಟಿಂಗ್, ಸರ್ಕಾರಿ ಕಚೇರಿಗಳ ಮೇಲೆ ದಾಳಿ ಮಾಡಿದ ಪಡೆಗಳಲ್ಲಿ ಕಾರ್ಮಿಕ ಹಾಗೂ ಕೆಳ ಹಂತದ ಮಹಿಳೆಯರು ಅಪಾರ ಸಂಖ್ಯೆಯಲ್ಲಿ ಸೇರಿಕೊಂಡರು. ಕರಾವಳಿ ಪರಿಸರದಲ್ಲಿ ಕಮಲಾದೇವಿ, ಕಮಲಾ ಅಧಿಕಾರಿ, ಉತ್ತರ ಕರ್ನಾಟಕದ ಪ್ರೆಸಿಡೆನ್ಸಿ ಪ್ರದೇಶದಲ್ಲಿ ರಮಾಬಾಯಿ ಯಾಳಗಿ, ಶಕುಂತಲಾ ದಬಾಡೆ, ಪದ್ಮಾವತಿ ಬಿದರಿ, ಸತ್ಯಭಾಮಾಬಾಯಿ ಪ್ರಭು ಈ ಸತ್ಯಾಗ್ರಹದ ಕ್ರಿಯಾಶಕ್ತಿಯಾಗಿ ದುಡಿದರು. ತಂಗೆವ್ವ ಹೊಳೆಯಾಚೆ, ತಂಗೆವ್ವ ಬಡಿಗೇರ, ಬಾಳವ್ವ, ಕಾಶವ್ವ ಹೊಸಮನಿ, ಸರಸ್ವತಿಬಾಯಿ ಚೌಗುಲೆ, ನಿಂಗವ್ವ ಚಿಕ್ಕೋಡಿಯವರ ಮಹಿಳಾ ತಂಡವು ಗೋಕಾವಿ, ಸವದತ್ತಿಗಳಲ್ಲಿ ಪೊಲೀಸ್ ಬಂದೋಬಸ್ತಿನ ನಡುವೆಯೇ ಸರ್ಕಾರಿ ಕಚೇರಿಗಳಿಗೆ ನುಗ್ಗಿ ದಾಖಲೆ ಪತ್ರಗಳನ್ನು ನಾಶ ಮಾಡಿತು. ಹೇಮಲತಾ ಶಿರ್ನೋಲಿಕರರ ತಂಡ ಧಾರವಾಡ ಜಿಲ್ಲಾ ಮ್ಯಾಜಿಸ್ಟ್ರೇಟರ ನ್ಯಾಯಾಲಯ ಹೊಕ್ಕು ಪಿಕೆಟಿಂಗ್ ನಡೆಸಿತು.

ಕ್ವಿಟ್ ಇಂಡಿಯಾ ಚಳವಳಿಯ ಕಾಲಕ್ಕೆ, ಗಾಂಧೀಜಿ ಹಾಗೂ ಅನೇಕ ಪ್ರಮುಖ ರಾಷ್ಟ್ರ ನಾಯಕರ ದಸ್ತಗಿರಿಯಾಗುತ್ತಿದ್ದಂತೆ ಕರ್ನಾಟಕದಲ್ಲಿ ಚಳವಳಿ ಬಿರುಸಾಯಿತು. ದೂರವಾಣಿ, ತಾರು ತಂತಿಗಳನ್ನು ಕತ್ತರಿಸುವುದು, ರೈಲು ಹಳಿಯ ನಾಶ, ಸರ್ಕಾರಿ ಕಚೇರಿಗಳಿಗೆ ಬೆಂಕಿ, ಕೈಬಾಂಬು ಸಿಡಿಸುವುದು, ಖಜಾನೆ ಲೂಟಿಯಂತಹ ಗುಪ್ತ ಕಾರ್ಯಾಚರಣೆಗಳಲ್ಲಿ ಮಹಿಳೆಯರು ಸಕ್ರಿಯರಾಗಿದ್ದರು.

ಈ ರೀತಿಯ ರಾಜಕೀಯ ಚಳವಳಿ ಒಂದು ಬಗೆಯದಾದರೆ, ಗಾಂಧಿ ಚಳವಳಿಯನ್ನು ಯಶಸ್ವಿಗೊಳಿಸುವಲ್ಲಿ ಅವರ ವಿಧಾಯಕ ಕಾರ್ಯಕ್ರಮಗಳು ಚಳವಳಿಯ ವ್ಯಾಪಕತೆಯನ್ನು ಪಡೆದುಕೊಂಡುದು ಇನ್ನೊಂದು ಬಗೆಯದು. ನನ್ನ ದೃಷ್ಟಿಯಲ್ಲಿ ಎರಡನೆಯ ಅಂಶದ ದೇಣಿಗೆಯೇ ಹೆಚ್ಚಿನದು. ಈ ಚಳವಳಿಯಲ್ಲಿ ಬಹುಸಂಖ್ಯೆಯಲ್ಲಿ ಮಹಿಳೆಯರು ಮುಂಚೂಣಿಯಲ್ಲಿ ಕಾಣಿಸಿಕೊಂಡರು. ಸ್ವದೇಶಿ ಚಳವಳಿಯಲ್ಲಿ ಮನೆಮನೆಗೆ ಹೋಗಿ ವಿದೇಶಿ ವಸ್ತುಗಳನ್ನು ಸಂಗ್ರಹಿಸಿ ಸುಟ್ಟರು. ವಿದೇಶಿ ವಸ್ತುಗಳ ಅಂಗಡಿಗಳ ಮುಂದೆ ಪಿಕೆಟಿಂಗ್ ನಡೆಸಿದರು. ಸ್ವದೇಶಿ ವಸ್ತ್ರಗಳತ್ತ ಜನರನ್ನು ಪ್ರೇರೇಪಿಸಿದರು. ಸ್ವರಾಜ್ಯ ನಿಧಿಗಾಗಿ ಸಾವಿರಾರು ಮಹಿಳೆಯರು ತಮ್ಮ ಆಭರಣಗಳನ್ನು ಕೊಟ್ಟರು. ಸೂತ್ರಯಜ್ಞ, ಖಾದಿ ತಯಾರಿ, ಹಿಂದಿ ಪ್ರಚಾರ ಕಾರ್ಯಕ್ರಮ, ಅಸ್ಪೃಶ್ಯತಾ ನಿವಾರಣೆ, ಹರಿಜನೋದ್ಧಾರ ಹಾಗೂ ಪಾನ ನಿಷೇಧ ಚಳವಳಿಗಳಲ್ಲಿ ಮಹಿಳೆಯರು ನಿರ್ವಹಿಸಿದ ಕಾರ್ಯಭಾರವನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡಬೇಕಾದ ಅಗತ್ಯವಿದೆ.

ಪುರುಷರ ಭೂಗತ ಚಟುವಟಿಕೆಯ ಚಾಲನಾ ಶಕ್ತಿಯಾಗಿದ್ದವರು ಮಹಿಳೆಯರು. ಅನೇಕ ಭೂಗತರಿಗೆ, ಸ್ವಯಂ ಸೇವಕರಿಗೆ ಆಶ್ರಯ ನೀಡಿದವರು, ಅವರ ಗುಪ್ತ ಸಂದೇಶಗಳನ್ನು, ಕರಪತ್ರಗಳನ್ನು ತಮ್ಮ ಕಟ್ಟಿಗೆ ಹೊರೆ, ಹುಲ್ಲು ಹೊರೆಗಳ ಮಧ್ಯೆ ಇಟ್ಟು ಮುಟ್ಟಿಸುತ್ತಿದ್ದವರು ಗ್ರಾಮೀಣ ಮಹಿಳೆಯರು. ಪ್ರತಿಬಂಧಕಾಜ್ಞೆ ಇರುವ ಪತ್ರಿಕೆಗಳನ್ನು, ಸ್ಫೋಟಕ ವಸ್ತುಗಳನ್ನು ರಕ್ಷಿಸಿ ವಿತರಿಸುವುದು, ಆಂದೋಲನಕ್ಕೆ, ಚಳವಳಿಗಾರರ ಕುಟುಂಬಗಳ ನಿರ್ವಹಣೆಗೆ ಮನೆಮನೆಗೆ ಹೋಗಿ ಧನ, ಧಾನ್ಯ ಸಂಗ್ರಹಿಸುವ ಮತ್ತು ಹಂಚುವ ಕಾರ್ಯವನ್ನು ಕೈಗೊಂಡರು.

ಮನೆಮನೆಗಳಲ್ಲಿ ತಮ್ಮ ಗಂಡ, ಮಕ್ಕಳನ್ನು ಸ್ವಾತಂತ್ರ್ಯ ಚಳವಳಿಗೆ ಇತ್ತು ಮಾನ, ಅಪಮಾನ, ಸಂಕಷ್ಟಗಳನ್ನು ಎದುರಿಸಿದರು. ತಮ್ಮ ಕುಟುಂಬದ ಗಂಡಸರನ್ನು ನೇಣುಗಂಬದ ಮುಂದೆ ನಿಲ್ಲಿಸಿದಾಗ, ಆ ಬಲಿದಾನವನ್ನು ಜೈಕಾರ ಹಾಕಿ ಸ್ವೀಕರಿಸಿದ ಅವರ ರಾಷ್ಟ್ರಪ್ರೇಮ, ಬದುಕನ್ನು ದೇಶಕ್ಕೆ ಇತ್ತ ಅವರ ತ್ಯಾಗ, ಛಲ ಇಡಿಯ ಸ್ವಾತಂತ್ರ್ಯ ಚಳವಳಿಯಲ್ಲಿ ಅತ್ಯಂತ ಮಹತ್ವದ್ದು. ಇಂತಹ 'ಮನೆಯೊಳಗಿನ ಹೆಣ್ಣು'ಗಳ ಹೋರಾಟದ ಸ್ಮೃತಿಗಳು, ವಿವರಗಳು ದಾಖಲಾಗಬೇಕಾಗಿದೆ. ಹಾಗಾದಾಗ ನಮ್ಮ ಸ್ವಾತಂತ್ರ್ಯ ಹೋರಾಟಕ್ಕೆ, ಮಹಿಳಾ ಚಳವಳಿಯ ಇತಿಹಾಸಕ್ಕೆ ನಿಜವಾದ ವ್ಯಾಪ್ತಿ, ಅರ್ಥ ಸಿಗುತ್ತದೆ.

ದುರಂತ ಎಂದರೆ, ನಮ್ಮ ಸ್ವಾತಂತ್ರ್ಯ ಚಳವಳಿಯ ಹೋರಾಟದ ಪರಿಕಲ್ಪನೆ ಪುರುಷ ನೆಲೆಯ ಸಾರ್ವಜನಿಕ ಜಗತ್ತನ್ನಷ್ಟೇ ಚಳವಳಿಯ ಚೌಕಟ್ಟಿನಲ್ಲಿ ಸ್ವೀಕರಿಸಿದೆ, 'ಮನೆಯೊಳಗಿನ ಹೆಣ್ಣು'ಗಳ ಎಲ್ಲ ಹೋರಾಟವನ್ನು ಚಳವಳಿಯ ಚೌಕಟ್ಟಿನಿಂದ ಹೊರಗಿಟ್ಟಿದೆ. ಹೀಗಾಗಿ, ಸ್ವಾತಂತ್ರ್ಯ ಚಳವಳಿಯ ಪರಿಕಲ್ಪನೆಯನ್ನು ಮರುರಚಿಸಬೇಕಾಗಿದೆ. ಆಗ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳಾಶಕ್ತಿಯ ನಿಜದ ಇತಿಹಾಸ ಅನಾವರಣಗೊಳ್ಳುತ್ತದೆ. ❖

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಗಣಿತದಲ್ಲಿ ಗರ್ದಿ ಗಮ್ಮತ್ತು

ಆಡೂ ಆಟ ಆಡು...

A.

1371739369
x9
12345654321

- ಮೇಲಿನ ಗುಣಾಕಾರದಲ್ಲಿನ ಗುಣಲಬ್ಧವನ್ನು ಗಮನಿಸಿ. ಅದನ್ನು ಎಡದಿಂದ ಓದಿದರೂ ಹಾಗೂ ಬಲದಿಂದ ಓದಿದರೂ ಅದೇ ಸಂಖ್ಯೆಯಾಗಿರುತ್ತದೆ. ಇಂಥ ಸಂಖ್ಯೆಗಳಿಗೆ ಮಾಲಾ ಸಂಖ್ಯೆಗಳೆಂದು ಹೆಸರು. ಇಂಥ ಮಾಲಾ ಸಂಖ್ಯೆಗಳನ್ನು ಪಡೆಯುವ ಆಟವಿದು. 9ರಿಂದ ಉಂಟಾದ ಗುಣ್ಯ ಸಂಖ್ಯೆಯನ್ನು ಬರೆದುಕೊಂಡು (ಉದಾ: 9, 99, 999, ... ಇಂಥ ಸಂಖ್ಯೆಗಳು) ಅದನ್ನು ಗುಣಕದಲ್ಲಿನ ಅಂಕಿಗಳ ಮೊತ್ತ 10 ಆಗುವಂಥ (19, 28, 37, 46, 55, 64, 73, 82, 91) ಸಂಖ್ಯೆಗಳಿಂದ ಗುಣಿಸಿದರೆ ಗುಣಲಬ್ಧದಲ್ಲಿ ಸಿಗುವ ಸಂಖ್ಯೆ ಅದು ಮಾಲಾ ಸಂಖ್ಯೆಯಾಗಿರುತ್ತದೆ.

ಉದಾ:

1) 99
x73
7227

2) 999
x28
27972

B. ಗುಣಿಸಿ ಇಂದಿನ ದಿನಾಂಕ ನೋಡಿ*

226003
x7

ಪದ ಹಿಗ್ಗು

- ಇಲ್ಲಿ ಕೊಟ್ಟಿರುವ ಮಧ್ಯದ ಅಕ್ಷರಕ್ಕೆ ಮೇಲಿನ ಪಟ್ಟಿಯ ಪದವನ್ನು ಹಿಗ್ಗಿಸಿ ಆಚೀಚೆ ತುಂಬಿದರೆ ಮೂರು ಅಕ್ಷರದ ಪದವಾಗುತ್ತದೆ ಹೊಂದಿಸಿ.

1. ಗುಣಿ 2. ಮಡಿ 3. ಮಾತೆ 4. ಗುರಿ
5. ಹಿತ 6. ಸಲ 7. ಗಾನ 8. ಮುರಿ

1.		ಕ		5.		ಜ	
2.		ನ್ಯ		6.		ರಾ	
3.		ರಾ		7.		ಯ	
4.		ಡಿ		8.		ಹ	

ಟ್ವೆಂಟಿ – 20 ಮ್ಯಾಚ್

- ಎಡಭಾಗದ ಗುಂಪಿಗೆ ಸೇರುವ ಪದಗಳಿಗೆ ಬಲ ಭಾಗದ ಪದ ಹೊಂದಿಸಿ.

1.	ಚಿರತೆ, ಹುಲಿ	A	ಕನ್ನಡ
2.	ಆಕಳು, ಹಾಡು	B	ಜನ್ಮರಹಸ್ಯ
3.	ಮೆಂತೆ, ಕೊತ್ತಂಬರಿ	C	ರಾಗಿ
4.	ಬದನೆ, ಬೆಂಡಿ	D	ಬೆಳಕು
5.	ಕಡಲೆ, ಉದ್ದು	E	ಹೂವು
6.	ಗೋಧಿ, ಜೋಳ	F	ಕುಂಬಳ
7.	ಶಿವರಾಮ ಕಾರಂತ, ಬೇಂದ್ರೆ	G	ಉಡ
8.	ಚನ್ನವೀರ ಕಣವಿ, ಜಿ.ಎಸ್.ಶಿವರುದ್ರಪ್ಪ	H	ಎಮ್ಮೆ
9.	ಕಣ್ಣು, ಕಿವಿ	I	ಭೂತಯ್ಯನ ಮಗ ಅಯ್ಯು
10.	ಕೈ, ಕಾಲು	J	ಮೂಗು
11.	ಮೀನು, ಏಡಿ	K	5
12.	ಹಾವು, ಓತಿಕಾಟ	L	ಸಬ್ಬಸ್ಸಿಗೆ
13.	ಗಾಳಿ, ನೀರು	M	ಹೊಟ್ಟೆ
14.	ಗಿಡ, ಬಳ್ಳಿ	N	ಕಪ್ಪೆ
15.	ಕಸ್ತೂರಿ ನಿವಾಸ, ಗುರಿ	O	ಸಿಂಹ
16.	ಬಂಧನ, ಕಳ್ಳ-ಕುಳ್ಳ	P	ಕುವೆಂಪು
17.	1, 3	Q	ವಿಜ್ಞಾನ
18.	9, 11	R	ಹೆಸರು
19.	ಗಣಿತ, ಸಮಾಜ	S	ಕೆ.ಎಸ್.ನಿಸಾರ್ ಅಹಮದ್
20.	ಇಂಗ್ಲಿಷ್, ಹಿಂದಿ	T	13

ದಶ್ಶಗ್ಗ ಚಿಕ್ಕ ಕೌತ್ರಶ್ಶ ಕಥೆಯ

ದೇಶಭಕ್ತ ಭಗತ್ ಸಿಂಗ್

• ಕಲೆ–ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ

1919ರ ಏಪ್ರಿಲ್ 13ರಂದು ಜಲಿಯನ್ ವಾಲಾಬಾಗ್‌ನಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಶಾಂತಿಯುತ ಸಭೆಯ ಮೇಲೆ ಬ್ರಿಟಿಷ್ ಅಧಿಕಾರಿ ಜನರಲ್ ಡಯರ್ ಗುಂಡು ಹಾರಿಸಿ ನರಮೇಧ ನಡೆಸುತ್ತಾನೆ.

ಈ ಘಟನೆಯನ್ನು ನೋಡಿದ ಬಾಲಕ ಭಗತ್‌ಸಿಂಗ್ ಬ್ರಿಟಿಷರ ವಿರುದ್ಧ ಸೇಡು ತೀರಿಸಿಕೊಳ್ಳುವ ಶಪಥ ಮಾಡಿ ದುರಂತ ನಡೆದ ಸ್ಥಳದಲ್ಲಿ ರಕ್ತದಿಂದ ಒದ್ದೆಯಾದ ಒಂದು ಹಿಡಿ ಮಣ್ಣನ್ನು ಮನೆಗೆ ಒಯ್ಯುತ್ತಾನೆ


ದುರಂತ ನಡೆದ ಸ್ಥಳದ ಮಣ್ಣನ್ನು ಮನೆಗೆ ತಂದ ಭಗತ್‌ಸಿಂಗ್ ಜಲಿಯನ್ ವಾಲಾಬಾಗ್ ಘಟನೆಯ ಬಗ್ಗೆ ತನ್ನ ಅಕ್ಕನಿಗೆ ವಿಷಯ ತಿಳಿಸುತ್ತಾನೆ. ಮುಂದೆ ಅಪ್ರತಿಮ ದೇಶಭಕ್ತನಾಗಿ ರೂಪುಗೊಳ್ಳುತ್ತಾನೆ

ಬ್ರಿಟಿಷರ ವಿರುದ್ಧ ಸೇಡು ತೀರಿಸಿಕೊಳ್ಳಲು ಹೊಲದಲ್ಲಿ ಬಂದೂಕು ಬೆಳೆಯುವ ಕನಸು ಕಾಣುತ್ತಾನೆ. ಅಷ್ಟು ರೋಷ ಅವನಲ್ಲಿ ಮಡುಗಟ್ಟಿರುತ್ತದೆ. ಗೆಳೆಯರೊಂದಿಗೆ ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕುತ್ತಾನೆ

ಬ್ರಿಟಿಷರಿಂದ ಬಂಧನಕ್ಕೊಳಗಾಗಿ ಜೈಲು ಸೇರಿದರೂ ಸಾಕಷ್ಟು ಪುಸ್ತಕಗಳನ್ನು ಅಧ್ಯಯನ ಮಾಡುತ್ತಾನೆ. ಜೈಲು ಶಿಕ್ಷೆಯ ಅವಧಿಯನ್ನು ತನ್ನ ಜ್ಞಾನವೃದ್ಧಿಗಾಗಿ ಬಳಸಿಕೊಳ್ಳುತ್ತಾನೆ

ಬ್ರಿಟಿಷರ ಪ್ರಕಾರ ತಪ್ಪಿತಸ್ಥ ಭಗತ್‌ಸಿಂಗ್‌ನನ್ನು ಹುಸಿ ವಿಚಾರಣೆ ನಡೆಸಿ 1931ರ ಮಾರ್ಚ್ 23ರಂದು ಭಗತ್‌ಸಿಂಗ್, ಅವರ ಸ್ನೇಹಿತರಾದ ಸುಖದೇವ್ ಮತ್ತು ರಾಜಗುರು ಅವರನ್ನು ಗಲ್ಲಿಗೇರಿಸಲಾಯಿತು. ಇತಿಹಾಸದಲ್ಲಿ ಭಗತ್‌ಸಿಂಗ್ ಅಮರನಾದ

ಅದಲು ಬದಲು ಕಂಚೀ ಕದಲು...

ಇಲ್ಲಿ ಕೊಟ್ಟಿರುವ ಪದಗಳ ಅಕ್ಷರಗಳನ್ನೇ ಪುನಃ ಬಳಸಿಕೊಂಡು ಬೇರೆ ಪದಗಳನ್ನು ರಚಿಸಿ

1. ರಾಜ ವಿಮಾನ = __________
2. ಹತ್ತಿರ ಅಳೆ = __________
3. ಅವು, ಹಕ್ಕಿ, ನರಿ = __________
4. ವರದಿಗಾರ = __________

ಜಾಣಪದ ಆಟ

1) ಇಲ್ಲಿ ಕೊಟ್ಟಿರುವ ಎರಡು ಪ್ರಾಸ ಪದಗಳಿಗೆ ಮೂರನೇ ಪ್ರಾಸಪದ ತುಂಬಿ

1. ಗರಡಿ, ಪರಡಿ __________
2. ತಕ್ಕಡಿ, ಅಕ್ಕಡಿ __________
3. ಆರತಿ, ಗರತಿ __________
4. ನಕುಲ, ಬಕುಲ __________
5. ಕವನ, ಭವನ __________

2) ಸಮಾನಾರ್ಥಕ ಪದ ಗುರುತಿಸಿ ಇಲ್ಲಿ ಕೊಟ್ಟಿರುವ ಅಕ್ಷರಕ್ಕೆ ಕೆಲವು ಅಕ್ಷರ ಸೇರಿಸಿ, ತಾವರೆ- ಪದಕ್ಕೆ ಸಮಾನಾರ್ಥಕ 6 ಪದಗಳನ್ನು ಗುರುತಿಸಬಲ್ಲಿರಾ?

1. ನೀ = __________
2. ಸ = __________
3. ಪಂ = __________
4. ಕ = __________
5. ಅ = __________
6. ಪ = __________

ಮಜ ಮಜ ಮಜಕೂರದ ಆಗಸ್ಟ್ 8ರ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದ ಹಿಗ್ಗು: 1. ಗರಡಿ, 2. ಬಳಲು, 3. ಗಣಿತ, 4. ಕಾವಲು, 5. ಆಕಳು, 6. ಕಾಯಕ 7. ಸರಳ, 8. ಉರುಳು

ಜಾಣಪದ ಆಟ: 1. ತಳಹದಿ, 2. ತರಗತಿ, 3. ಭರವಸೆ, 4. ದನಕರು 5. ಡಮರುಗ, 6. ಗುಡಿಸಲು, 7. ಅರಮನೆ, 8. ಚಾಮರಸ, 9. ವಿನಿಮಯ, 10. ಮಾದರಸ

ಪ್ರಾಸ ಪದಗಳು: 1. ಬಾರಿಕಾಯಿ, 2. ನಾಚು, 3. ತೆಗಿತೆಗಿ, 4. ಕೀಲಿಕಾಯಿ, 5. ಸಪ್ಪಳ

ಅದಲು ಬದಲು ಕಂಚಿ ಕದಲು...
1. ನೀಲಿಕಡಲು, 2. ರಮಾಕುಮಾರ, 3. ಜನಮನ್ನಣೆ, 4. ಪಾಕಸಂಪುಟ

ಟ್ವೆಂಟಿ-20 ಮ್ಯಾಚ್
ಅ. 1- B 2 -D 3- E 4 - C 5- A
ಬ. 1- B 2 - D 3 - E 4- C 5- A
ಕ. 1- C 2- D 3 - E 4- B 5- A
ಡ. 1- D 2- C 3 - E 4 - A 5- B

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ–20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇಮೇಲ್ ವಿಳಾಸ:
majakoora@prajavani.co.in

ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು

ಸುರೇಶ ಗೌರೆ
ನವನಿಹಾಳ, ಕಲಬುರ್ಗಿ

ಗ್ರೀಷ್ಮ ತಟ್ಟಿ
ತಾಂಡವಪುರ (ಮೈಸೂರು)

ಪ್ರತೀಕ್ಷಾ ಜೋಯಿಸ್
ಆನಂದಪುರ (ಶಿವಮೊಗ್ಗ)